ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 20 ಮಂಗಳವಾರ 2022

ಸಂಪುಟ: 43 | ಸಂಚಿಕೆ: 155 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಪೌರ ಕಾರ್ಮಿಕರ ಸೇವೆ ಖಾಯಂಗೆ ಸಂಪುಟ ಒಪ್ಪಿಗೆ



ಬೆಂಗಳೂರು: ರಾಜ್ಯದ ವಿವಿಧ ನಗರ ಸ್ಥಳೀಯ ಸಂಸ್ಥೆಗಳಲ್ಲಿ ನೇರ ಪಾವತಿ ಪದ್ಧತಿಯಡಿ ವೇತನ ಪಡೆಯುತ್ತಿರುವ 11,133 ಪೌರ ಕಾರ್ಮಿಕರ ಸೇವೆಯನ್ನು ಖಾಯಂಗೊಳಿಸುವ ಮಹತ್ವದ ತೀರ್ಮಾನವನ್ನು ರಾಜ್ಯ ಸಚಿವ ಸಂಪುಟ ತೆಗೆದುಕೊಂಡಿದೆ. ಇದರಿಂದ 302 ನಗರ ಸ್ಥಳೀಯ ಸಂಸ್ಥೆಗಳಾದ ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿನ 5533, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿನ 3673 ಹಾಗೂ ರಾಜ್ಯದ ಇತರ 10 ಮಹಾ ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿನ 1927 ಪೌರ ಕಾರ್ಮಿಕರ ಸೇವೆ ಕಾಯಂ ಆಗಲಿದೆ. ವಿಶೇಷ ನೇಮಕಾತಿ ನಿಯಮಗಳಲ್ಲಿನ ಷರತ್ತುಗಳು ಹಾಗೂ ಆರ್ಥಿಕ ಇಲಾಖೆಯ ಷರತ್ತುಗಳ ಅನ್ವಯ ಪೌರ ಕಾರ್ಮಿಕರ ಸೇವೆ ಖಾಯಂ ಆಗಲಿದ್ದು, ಆಕ್ಷೇಪಣೆಗಳನ್ನು ಆಹ್ವಾನಿಸಿ ಬಂದ ಆಕ್ಷೇಪಣೆಗಳನ್ನು ಪರಿಶೀಲಿಸಿ ಅಂತಿಮ ನಿಯಮಗಳನ್ನು ಗೆಜೆಟ್‌ನಲ್ಲಿ ಪ್ರಕಟಿಸುವಂತೆ ಸಚಿವ ಸಂಪುಟ ಸೂಚಿಸಿದೆ.



ಮೈಸೂರು ಮಹಾನಗರ ಪಾಲಿಕೆಯಿಂದ ಅದ್ಧೂರಿ ಮನೆ ಮನೆ ದಸರಾ

● ಪ್ರತಿ ವಾರ್ಡ್‌ಗೆ 2 ಲಕ್ಷ ಅನುದಾನ ● ರಾಜಮಾರ್ಗದಲ್ಲಿ ಫುಟ್‌ಪಾತ್ ಅತಿಕ್ರಮಣ ತೆರವು ● ಮೈಸೂರಲ್ಲಿ ಗುಂಡಿಗಳ ಮುಚ್ಚಲು ಕ್ರಮ
● ದಸರಾ ಯಶಸ್ಸಿಗೆ ಸಹಕರಿಸುವ ಭರವಸೆ ● ಪಾಲಿಕೆ ವಿಶೇಷ ಕೌನ್ಸಿಲ್ ಸಭೆಯಲ್ಲಿ ದಸರಾ, ನಗರದ ಸಮಸ್ಯೆ ಸಂಬಂಧ ವಿಸ್ತೃತ ಚರ್ಚೆ

ಮೈಸೂರು, ಸೆ.19(ಎಸ್‌ಬಿಡಿ)– ಮೈಸೂರು ದಸರಾ ಮಹೋತ್ಸವದ ಅಂಗವಾಗಿ 'ಮನೆ ಮನೆ ದಸರಾ' ಆಯೋಜನೆಗೆ ಪ್ರತಿ ವಾರ್ಡ್‌ಗೆ 2 ಲಕ್ಷ ರೂ. ಅನುದಾನ ನೀಡುವುದಾಗಿ ನಗರ ಪಾಲಿಕೆ ವಿಶೇಷ ಕೌನ್ಸಿಲ್ ಸಭೆಯಲ್ಲಿ ಮೇಯರ್ ಶಿವಕುಮಾರ್ ಘೋಷಿಸಿದರು.

ಮೈಸೂರು ದಸರಾ ಮಹೋತ್ಸವ ಸಂಬಂಧ ಚರ್ಚೆ ನಡೆಸಲು ಪಾಲಿಕೆಯ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ಸೋಮವಾರ ನಿಗದಿಪಡಿಸಿದ್ದ ವಿಶೇಷ ಕೌನ್ಸಿಲ್ ಸಭೆಯಲ್ಲಿ ಬಹುತೇಕ ಸದಸ್ಯರು, ಮನೆ ಮನೆ ದಸರಾ ನಡೆಸಲು ಪ್ರತಿ ವಾರ್ಡ್‌ಗೆ 5 ಲಕ್ಷ ರೂ., ರಸ್ತೆ ಗುಂಡಿ ಮುಚ್ಚುವುದು, ಪಾರ್ಕ್‌ಗಳ ಸೌಂದರ್ಯೀಕರಣ ಸೇರಿದಂತೆ ವಿವಿಧ ಕಾಮಗಾರಿಗಳಿಗಾಗಿ ತಲಾ 25 ಲಕ್ಷ ರೂ. ಅನುದಾನ ನೀಡಬೇಕು, ವಾರ್ಡ್‌ಗಳ ಪ್ರಮುಖ ವೃತ್ತ ಹಾಗೂ ರಸ್ತೆಗಳಿಗೆ ವಿದ್ಯುತ್ ದೀಪಾಲಂಕಾರ ಮಾಡಬೇಕೆಂದು ಆಗ್ರಹಿಸಿದರು.

ದಸರಾ ವಿಶೇಷ ಹಾಗೂ ತಮ್ಮ ಮೊದಲ ಕೌನ್ಸಿಲ್ ಸಭೆಯಲ್ಲಿ ಸದಸ್ಯರ ಸಲಹೆ



ಸ್ವೀಕರಿಸಿದ ಮೇಯರ್ ಶಿವಕುಮಾರ್, 2 ವರ್ಷಗಳ ಹಿಂದೆ ಮನೆ ಮನೆ ದಸರಾಗಾಗಿ ವಾರ್ಡ್‌ಗೆ 1 ಲಕ್ಷ ರೂ. ನೀಡಲಾಗಿತ್ತು. ಈ ಬಾರಿಯೂ ಅಷ್ಟೇ ಅನುದಾನ ನೀಡಬಹುದೆಂಬುದು ಪಾಲಿಕೆ ಆಯುಕ್ತರ ಅಭಿಪ್ರಾಯ. ಆದರೆ 1 ಲಕ್ಷ ರೂ. ಹಣ ಖಂಡಿತವಾಗಿ ಸಾಕಾಗುವುದಿಲ್ಲ ಎಂದು 2 ಲಕ್ಷ ರೂ. ಅನುದಾನ ನೀಡಲು ತೀರ್ಮಾನಿಸಲಾಗಿದೆ. ಹಾಗಾಗಿ ಮನೆ ಮನೆ ದಸರಾ ಆಯೋಜನೆಗೆ ಪ್ರತಿ ವಾರ್ಡ್‌ಗೆ ಜಿಎಸ್‌ಟಿ ಹೊರತುಪಡಿಸಿ

▶ 9ನೇ ಪುಟಕ್ಕೆ

ಸದಸ್ಯೆ ಚಿಕಿತ್ಸೆಗೆ ನೆರವು

ತೀವ್ರ ಅನಾರೋಗ್ಯದಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಸದಸ್ಯೆ ಡಾ.ಅಶ್ವಿನಿ ಶರತ್ ಅವರ ಚಿಕಿತ್ಸೆ ನೆರವು ನೀಡಲು ತೀರ್ಮಾನಿಸಲಾಯಿತು. ಅಶ್ವಿನಿ ಅವರ ಆರೋಗ್ಯ ಪರಿಸ್ಥಿತಿ ತುಂಬಾ ಹದಗೆಟ್ಟಿದ್ದು, ಇನ್ನೂ ಹಲವು ದಿನಗಳ ಕಾಲ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಬೇಕಿದೆ. ಅವರಿಗೆ ಪಾಲಿಕೆ ವತಿಯಿಂದ ಆರ್ಥಿಕ ಸಹಾಯ ಮಾಡಬೇಕಿದೆ. ಇವರಂತೆ ಅನೇಕ ಸದಸ್ಯರು ಆರ್ಥಿಕವಾಗಿ ದುರ್ಬಲವಾಗಿದ್ದಾರೆ. ಹಾಗಾಗಿ ಎಲ್ಲರಿಗೂ ಆರೋಗ್ಯ ಸೇವೆಗೆ ಕ್ರಮ ಕೈಗೊಳ್ಳಬೇಕೆಂದು ಸದಸ್ಯ ಎಂ.ಸಿ. ರಮೇಶ್ ಹೇಳಿದರು. ಇದಕ್ಕೆ ಪಕ್ಷಾತೀತವಾಗಿ ಹಲವು ಸದಸ್ಯರು ಧ್ವನಿ ಗೂಡಿಸಿದರು. ಸಭೆ ಕೊನೆಯಲ್ಲಿ ಮೇಯರ್ ಶಿವಕುಮಾರ್ ಪ್ರತಿಕ್ರಿಯಿಸಿ, ಆರ್ಥಿಕ ನೆರವು ಸಂಬಂಧ ಘೋಷಣೆ ಮಾಡಿದರೂ ಕಾನೂನಾತ್ಮಕವಾಗಿ ಸಾಧ್ಯಾಧ್ಯತೆಯನ್ನು ತಿಳಿದು

▶ 9ನೇ ಪುಟಕ್ಕೆ

ಪಾಲಿಕೆ ಒಂದು ನಿರ್ವಹಣಾ ಸಂಸ್ಥೆ; 24 ಗಂಟೆ ಕಾರ್ಯ ನಿರ್ವಹಿಸಲು ಸಿದ್ಧರಿದ್ದರೆ ಇಲ್ಲಿರಿ ಇಲ್ಲ ಹೊರಟುಬಿಡಿ...

● ಅಧಿಕಾರಿಗಳಿಗೆ ಮೇಯರ್ ಶಿವಕುಮಾರ್ ಖಡಕ್ ವಾರ್ನಿಂಗ್ ● ಜನಪ್ರತಿನಿಧಿಗಳ ದೂರಿನ ಹಿನ್ನೆಲೆಯಲ್ಲಿ ಒನ್‌ಟೈಂ ಎಚ್ಚರಿಕೆ ● ಪುನರಾವರ್ತನೆ ಆದರೆ ಕೌನ್ಸಿಲ್ ಮೂಲಕವೇ ಬಿಡುಗಡೆಯ ಅನಿವಾರ್ಯತೆ ಮನವರಿಕೆ

ಮೈಸೂರು, ಸೆ.19(ಎಸ್‌ಬಿಡಿ)–ನಗರ ಪಾಲಿಕೆ ಒಂದು ನಿರ್ವಹಣಾ ಸಂಸ್ಥೆಯಾಗಿದ್ದು, 24 ಗಂಟೆ ಕಾರ್ಯ ನಿರ್ವಹಿಸುವ ಬದ್ಧತೆಯಿಲ್ಲದವರು ಕೌನ್ಸಿಲ್ ನಿರ್ಣಯದ ಮೂಲಕ ಬಿಡುಗಡೆ(ರಿಲೀವ್) ಮಾಡುವ ಮುನ್ನವೇ ಇಲ್ಲಿಂದ ಹೊರಟುಬಿಡಿ ಎಂದು ಅಧಿಕಾರಿಗಳಿಗೆ ಮೇಯರ್ ಶಿವಕುಮಾರ್ ಖಡಕ್ ಎಚ್ಚರಿಕೆ ನೀಡಿದರು.

ದಸರಾ ವಿಶೇಷ ಕೌನ್ಸಿಲ್‌ನಲ್ಲಿ ಸದಸ್ಯೆ ಕೆ.ಚಂಪಕ, ಅಧಿಕಾರಿಗಳು ನಮ್ಮ ಕರೆ ಸ್ವೀಕರಿಸುವುದಿಲ್ಲ, ಹೀಗಾದರೆ ಸಾರ್ವಜನಿಕ ಸಮಸ್ಯೆಗಳನ್ನು ಬಗೆಹರಿಸುವುದು ಹೇಗೆ? ಎಂದು ಪ್ರಶ್ನಿಸಿದರು. ಪಲ್ಲವಿ ಬೇಗಂ ಸೇರಿದಂತೆ ಹಲವು ಸದಸ್ಯರೂ ಹೀಗೆಯೇ ದೂರಿದರು. ಇದರಿಂದ ಸಿಟ್ಟಿಗೆದ್ದ

▶ 9ನೇ ಪುಟಕ್ಕೆ

'ಲಕ್ಷ್ಮಿ' ಮರಿಗೆ ಜನ್ಮ ವಿಚಾರ; ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಆಗ್ರಹ

ದಸರಾ ಗಜಪಡೆಯ 'ಲಕ್ಷ್ಮಿ' ಆನೆ ಅರಮನೆ ಆವರಣದಲ್ಲಿ ಮರಿಗೆ ಜನ್ಮ ನೀಡಿದ ವಿಷಯ ಪ್ರಸ್ತಾಪಿಸಿದ ಸದಸ್ಯೆ ಶೋಭಾ ಸುನಿಲ್, ಏನಾದರೂ ಜಂಬೂಸವಾರಿ ವೇಳೆ ಮರಿಗೆ ಜನ್ಮ ನೀಡಿದ್ದರೆ ಪರಿಸ್ಥಿತಿ ಏನಾಗುತ್ತಿತ್ತು. ಒಬ್ಬ



ತಾಯಿಯಾಗಿ ಹೀಗೆ ಕೇಳುತ್ತಿದ್ದೇನೆ. ದಯವಿಟ್ಟು ಮೈಸೂರಿಗೆ ಕರೆತರುವ ಮುನ್ನ ವೈದ್ಯಕೀಯ ಪರೀಕ್ಷೆ ನಡೆಸಿದವರು ಹಾಗೂ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಆಗ್ರಹಿಸಬೇಕೆಂದು ಹೇಳಿದರು. ಈ ವೇಳೆ ಮ.ವಿ.ರಾಂಪ್ರಸಾದ್, ಸದ್ಯ ಬಾಣಂತಿಯನ್ನಾದರೂ ಚೆನ್ನಾಗಿ ನೋಡಿಕೊಳ್ಳಲಿ ಎಂದು ಹಾಸ್ಯಭರಿತವಾಗಿ ಹೇಳಿದರು.

ರಾಷ್ಟ್ರಪತಿಗಳಿಂದ ದಸರಾ ಉದ್ಘಾಟನೆ: ಕನ್ನಡಿಗರಿಗೆ ಹೆಮ್ಮೆ

ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಸಂತಸ



ಮೈಸೂರು,ಸೆ.19(ಎಂಟಿವೈ)– ದಸರಾ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ರಾಷ್ಟ್ರಪತಿಗಳು ನಾಡಹಬ್ಬ ಉದ್ಘಾಟನೆಗೆ ಬರುತ್ತಿರುವುದು ಸಂಭ್ರಮದ ಸಂಕೇತವಾಗಿದೆ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಹರ್ಷ ವ್ಯಕ್ತಪಡಿಸಿದ್ದಾರೆ. ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಮಹಾ ದೈವಭಕ್ತರಾಗಿರುವ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನಾಡದೇವಿ ಚಾಮುಂಡೇಶ್ವರಿ ಮೂರ್ತಿಗೆ ಪುಷ್ಪಾರ್ಚನೆ ಮಾಡುವ ಮೂಲಕ ದಸರಾ ಮಹೋತ್ಸವವನ್ನು ಉದ್ಘಾಟಿಸಲು ಆಗಮಿಸುತ್ತಿರುವುದು ಅತ್ಯಂತ ಸಂತೋಷದ ಸಂಗತಿ. ಇದು ಕನ್ನಡಿಗರು ಹೆಮ್ಮೆಪಡುವ ವಿಚಾರ. ಸೆ.26ರಂದು ಹುಬ್ಬಳ್ಳಿಯಲ್ಲಿ ಪೌರಸನ್ಮಾನ ಆಯೋಜಿಸಲಾಗಿದ್ದು, ಹುಬ್ಬಳ್ಳಿ ಜನತೆಯ ಪರವಾಗಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಆತ್ಮೀಯವಾಗಿ ಗೌರವಿಸಲಾಗುತ್ತಿದೆ ಎಂದರು.

ಹೆಚ್.ಡಿ.ದೇವೇಗೌಡರ ಭೇಟಿಯಾದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ

ಬೆಂಗಳೂರು: ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಮನೆಗೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭೇಟಿ ನೀಡಿ, ಆರೋಗ್ಯ ವಿಚಾರಿಸಿದರು. ಬೆಂಗಳೂರಿನ ಪದ್ಮನಾಭನಗರದಲ್ಲಿರುವ ಗೌಡರ ನಿವಾಸಕ್ಕೆ ತೆರಳಿದ ಸಿದ್ದ ರಾಮಯ್ಯಗೆ ಶಾಸಕರಾದ ಜಮೀರ್, ಭೈರತಿ ಸುರೇಶ್ ಸಾಥ್ ನೀಡಿದರು. ಒಂದೂವರೆ ದಶಕದ ಬಳಿಕ ದೇವೇಗೌಡರ ನಿವಾಸಕ್ಕೆ ಸಿದ್ದರಾಮಯ್ಯ ಭೇಟಿ ನೀಡು ತ್ತಿದ್ದು, ಹಲವು ಕುತೂಹಲಗಳಿಗೆ ಕಾರಣ ವಾಗಿದೆ. ಇಂದಿನ ವಿಧಾನ ಮಂಡಲ ಕಲಾಪ ಮುಗಿದ ಬಳಿಕ ಸಿದ್ದರಾಮಯ್ಯ, ದೇವೇ ಗೌಡರ ನಿವಾಸಕ್ಕೆ ಭೇಟಿ ನೀಡಿದರು. ಇತ್ತೀಚೆಗಷ್ಟೇ ದೇವೇಗೌಡರನ್ನು ಆರ್. ಅಶೋಕ್ ಭೇಟಿಯಾಗಿದ್ದರು. ಸಿದ್ದರಾಮಯ್ಯ ನಡೆ ಸಾಕಷ್ಟು ಕುತೂಹಲ ಮೂಡಿಸಿದೆ.



ಖಾಸಗಿ ದರ್ಬಾರ್‌ಗೆ ಅಂದಗೊಳ್ಳುತ್ತಿದೆ ಅರಮನೆ

ಇಂದಿನಿಂದ ಐತಿಹಾಸಿಕ ಸಿಂಹಾಸನ ಜೋಡಣೆ





ಮೈಸೂರು,ಸೆ.19(ಎಂಟಿವೈ)– ನಾಡಹಬ್ಬ ದಸರಾದ ಪ್ರಮುಖ ಆಚರಣೆಗಳಲ್ಲಿ ಒಂದಾಗಿರುವ ಖಾಸಗಿ ದರ್ಬಾರ್ ಸೆ.26ರಿಂದ ಆರಂಭವಾಗಲಿರುವ ಹಿನ್ನೆಲೆಯಲ್ಲಿ ನಾಳೆ(ಸೆ.20) ಬೆಳಗ್ಗೆ 7ರಿಂದ ಮಧ್ಯಾಹ್ನ 1 ಗಂಟೆಯೊಳಗೆ ದರ್ಬಾರ್ ಹಾಲ್‌ನಲ್ಲಿ ರತ್ನ ಖಚಿತ ಸಿಂಹಾಸನವನ್ನು ಜೋಡಿಸಲಾಗುತ್ತದೆ. ನವರಾತ್ರಿಯ ವೇಳೆ ಯದುವಂಶದಲ್ಲಿ ಖಾಸಗಿ ದರ್ಬಾರ್ ಒಂದು ಸಂಪ್ರದಾಯವಾಗಿದ್ದು, ಹಲವು ಕಟ್ಟುಪಾಡುಗಳೊಂದಿಗೆ ಒಂಭತ್ತು ದಿನವೂ ರಾಜಪರಂಪರೆಯಂತೆ ಧಾರ್ಮಿಕ ವಿಧಿ ವಿಧಾನಗಳು ನಡೆಯಲಿವೆ. ಶತಮಾನಗಳ ಇತಿಹಾಸವಿರುವ ರತ್ನ ಖಚಿತ ಸಿಂಹಾಸನದ ಮೇಲೆ ರಾಜರು ಆಸೀನರಾಗಿ ವಿವಿಧ ಧಾರ್ಮಿಕ ವಿಧಿ ವಿಧಾನಗಳನ್ನು ಪೂರೈಸಲಿದ್ದಾರೆ. ಈ ಹಿನ್ನೆಲೆಯಲ್ಲಿ ದರ್ಬಾರ್ ಹಾಲ್‌ನಲ್ಲಿ ಸಿಂಹಾಸನದ ಜೋಡಣಾ ಪ್ರಕ್ರಿಯೆ ನಡೆಸಲಾಗುತ್ತದೆ.

ಬಿಗಿ ಭದ್ರತೆ: ಅರಮನೆಯ ಸ್ಟ್ರಾಂಗ್ ರೂಂನಲ್ಲಿರುವ ಚಿನ್ನದ ಸಿಂಹಾಸನ ಹಾಗೂ ಬೆಳ್ಳಿಯ ಭದ್ರಾಸನದ ಬಿಡಿಭಾಗ ವನ್ನು ಬಿಗಿ ಭದ್ರತೆಯಲ್ಲಿ ತಂದು ಜೋಡಣೆ


▶ 2ನೇ ಪುಟಕ್ಕೆ

ಎಫ್‌ಡಿಎ ನೇಮಕಾತಿ ಅಕ್ರಮದಲ್ಲಿ ಭಾಗಿ ಆರೋಪ

ಮೈಸೂರಿನ ಎನ್‌ಆರ್ ಸಂಚಾರ ಠಾಣೆ ಸಬ್ ಇನ್ಸ್‌ಪೆಕ್ಟರ್ ಅಶ್ವಿನಿ ಅಮಾನತು

ಮೈಸೂರು, ಸೆ. 19(ಆರ್‌ಕೆ)– ಪ್ರಥಮ ದರ್ಜೆ ಸಹಾಯಕರ ಹುದ್ದೆ ನೇಮಕಾತಿ ಅಕ್ರಮದಲ್ಲಿ ಭಾಗಿಯಾಗಿದ್ದಾರೆಂಬ ಆರೋಪದ ಹಿನ್ನೆಲೆಯಲ್ಲಿ ಮೈಸೂರಿನ ಎನ್‌ಆರ್ ಸಂಚಾರ ಠಾಣೆ ಸಬ್ ಇನ್ಸ್‌ಪೆಕ್ಟರ್ ಅಶ್ವಿನಿ ಅನಂತಪೂರ ಅವರನ್ನು ಇಂದು ಸೇವೆಯಿಂದ ಅಮಾನತುಗೊಳಿಸಲಾಗಿದೆ.

ಮೈಸೂರು ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ಈ ಸಂಬಂಧ ಇಂದು ಆದೇಶ ಹೊರಡಿಸಿದ್ದಾರೆ. ಇತ್ತೀಚೆಗೆ ಕೆಪಿಎಸ್‌ಸಿಯವರು ನಡೆಸಿದ ಪ್ರಥಮ ದರ್ಜೆ ಸಹಾಯಕರ ಹುದ್ದೆ ನೇಮಕಾತಿ ಪ್ರಕ್ರಿಯೆಯಲ್ಲಿ ಬಸವರಾಜು ಎಂಬುವರಿಗೆ ಕೆಲಸ ಕೊಡಿಸುವುದಾಗಿ ಅಶ್ವಿನಿ ಅವರು ಬಾಗಲಕೋಟೆ ಜಿಲ್ಲೆಯ ಸಂಗಮೇಶ ಝುಳಕಿ ಎಂಬುವರೊಂದಿಗೆ ಹಣದ ವಹಿವಾಟು ನಡೆಸಿರುವ ಬಗ್ಗೆ ಆಡಿಯೋ ವಾಟ್ಸಾಪ್ ಸಂಭಾಷಣೆ, ವಿದ್ಯುನ್ಮಾನ ಮಾಧ್ಯಮ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ ಎಂದು ಮೈಸೂರು ನಗರ ಸಂಚಾರ ವಿಭಾಗದ ಎಸಿಪಿ ಪರಶುರಾಮಪ್ಪ ವರದಿ ನೀಡಿದ್ದರು. ಅಷ್ಟೇ ಅಲ್ಲದೆ, ಹಣ



▶ 2ನೇ ಪುಟಕ್ಕೆ

ಕೊಡಗಿನ ಪ್ರತಿಷ್ಠಿತ ಕಾಲೇಜುಗಳಲ್ಲಿ ಕ್ಯಾಂಟೀನ್ ನಡೆಸುವ ಒಡಿಸ್ಸಾ ವ್ಯಕ್ತಿಯಿಂದ ಭಾರೀ ಪ್ರಮಾಣದ ಗಾಂಜಾ ವಶ

ಕೇರಳಗೆ ಮಾಲು ಸಾಗಿಸುವಾಗ ಕಾರು ಸಮೇತ ಬಂಧನ

ವಿರಾಜಪೇಟೆ, ಸೆ.19– ಬೃಹತ್ ಗಾಂಜಾ ಮಾರಾಟ ಜಾಲವನ್ನು ಪತ್ತೆ ಮಾಡಿರುವ ವಿರಾಜಪೇಟೆ ಪೊಲೀಸರು ಒಡಿಸ್ಸಾ ಮೂಲದ ಕ್ಯಾಂಟೀನ್ ಮಾಲೀಕನೋರ್ವನನ್ನು ಬಂಧಿಸಿ 6.5 ಕೆ.ಜಿ. ಗಾಂಜಾ ವಶಪಡಿಸಿಕೊಂಡಿದ್ದಾರೆ.

ಒಡಿಸ್ಸಾ ಕೂರಪೂತ್ ಜಿಲ್ಲೆ ಲಕ್ಷ್ಮೀಪುರ ಗ್ರಾಮದವನಾದ, ಕಳೆದ 18 ವರ್ಷದಿಂದ ವಿರಾಜಪೇಟೆಯಲ್ಲಿ ವಾಸವಿರುವ ಸೂರ್ಯಕಾಂತ ಮೊಹಂತಿ (36) ಬಂಧಿತನಾಗಿದ್ದು, ಈತನಿಂದ 6.5 ಕೆ.ಜಿ. ಗಾಂಜಾ ಹಾಗೂ ಅದನ್ನು ಸಾಗಿಸುತ್ತಿದ್ದ ಹ್ಯೂಂಡಾಯ್ ಐ–10 ಕಾರನ್ನು (ಕೆಎ–12, ಎಂಎ3709) ವಶಪಡಿಸಿಕೊಳ್ಳಲಾಗಿದೆ. ವಿರಾಜಪೇಟೆಯಿಂದ ಕೇರಳಗೆ ಗಾಂಜಾ ಸಾಗಿಸಲಾಗುತ್ತಿದೆ ಎಂಬ ಖಚಿತ ಮಾಹಿತಿ ಡಿವೈಎಸ್‌ಪಿ ನಿರಂಜನ್‌ರಾಜೇ ಅರಸ್ ಅವರಿಗೆ ಬಂದಿದ್ದು, ಅವರ ಮಾರ್ಗದರ್ಶನದಲ್ಲಿ ವಿರಾಜಪೇಟೆ ಸರ್ಕಲ್ ಇನ್ಸ್‌ಪೆಕ್ಟರ್ ಶಿವರುದ್ರ ನೇತೃತ್ವದಲ್ಲಿ ವಿರಾಜಪೇಟೆ

▶ 2ನೇ ಪುಟಕ್ಕೆ

ಡಾ.ಜೆ.ಕಮಲಾ ರಾಮನ್ ಇನ್ನಿಲ್ಲ

ಮೈಸೂರು, ಸೆ. 19(ಆರ್‌ಕೆ)– ಮೈಸೂರಿನ ಪ್ರಸಿದ್ಧ ಸ್ತ್ರೀರೋಗ ತಜ್ಞ ವೈದ್ಯರು, ರಾಮನ್ ಮೆಮೋರಿಯಲ್ ಆಸ್ಪತ್ರೆ ಸಂಸ್ಥಾಪಕಿ ಡಾ.ಜೆ.ಕಮಲಾ ರಾಮನ್(88) ಇಂದು ಬೆಳಗ್ಗೆ ಕೃಷ್ಣಮೂರ್ತಿಪುರಂನ ತಮ್ಮ ಆಸ್ಪತ್ರೆಯಲ್ಲಿ ನಿಧನರಾದರು.

ದಿವಂಗತ ಡಾ. ಜೆ.ಎಸ್. ರಾಮನ್ ಅವರ ಪತ್ನಿಯಾದ ಡಾ. ಕಮಲಾ ರಾಮನ್, ಪುತ್ರಿ ಡಾ.ಜಯಶ್ರೀ ರಂಗನಾಥ್, ಪುತ್ರರಾದ ಜೆ.ವಿ.ರಾಮನ್, ಡಾ. ಅಪ್ರಮೇಯ ರಾಮನ್, ಅಳಿಯ ಡಾ. ಎಂ.ಎಸ್. ರಂಗನಾಥ್, ಸೊಸೆಯಂದಿರಾದ ಡಾ. ಅನುರಾಧ ರಾಮನ್, ಮೈಥಿಲಿ ರಾಮನ್, ಮೊಮ್ಮಕ್ಕಳು, ಮುಮ್ಮಕ್ಕಳು, ಹಿತೈಷಿಗಳು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅವರ ಅಂತ್ಯಕ್ರಿಯೆ ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಇಂದು ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಡಾ.ಜೆ.ಕಮಲಾ ರಾಮನ್

▶ 2ನೇ ಪುಟಕ್ಕೆ

ಪ್ರಕೃತಿ ವಿಕೋಪದಿಂದ ಬೆಳೆ ಹಾನಿಗೆ ತಿಂಗಳಲ್ಲೇ ಪರಿಹಾರ



ಬೆಂಗಳೂರು, ಸೆ.19(ಕೆಎಂಶಿ)–ಪ್ರಕೃತಿ ವಿಕೋಪದಿಂದ ಬೆಳೆ ಕಳೆದುಕೊಂಡ ರೈತರಿಗೆ ಒಂದೇ ತಿಂಗಳಲ್ಲಿ ಪರಿಹಾರ ನೀಡುವುದಾಗಿ ಕಂದಾಯ ಸಚಿವ ಆರ್. ಅಶೋಕ್ ವಿಧಾನಸಭೆಯಲ್ಲಿಂದು ಪ್ರಕಟಿಸಿದ್ದಾರೆ. ಅತಿವೃಷ್ಟಿಯ ಮೇಲಿನ ಚರ್ಚೆಗೆ ಉತ್ತರ ನೀಡಿದ ಅವರು ಈ ವಿಷಯ ತಿಳಿಸಿದರಲ್ಲದೆ ಈ ಹಿಂದೆ ಪ್ರಕೃತಿ ವಿಕೋಪದಿಂದ ಬೆಳೆ ಹಾನಿಯಾದಾಗ ರೈತರಿಗೆ ಹತ್ತು ಹನ್ನೊಂದು ತಿಂಗಳ ನಂತರ ಪರಿಹಾರ ಸಿಗುತ್ತಿತ್ತು. ಆದರೆ ಅದು ಇನ್ನು ಮುಂದೆ ಒಂದೇ ತಿಂಗಳಲ್ಲಿ ಲಭ್ಯವಾಗಲಿದೆ ಎಂದರು. ಪರಿಹಾರಕ್ಕಾಗಿ ರೈತರು ಅಲೆದಾಡಬೇಕಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಸರ್ಕಾರಕ್ಕೆ ವರದಿ ನೀಡುತ್ತಿದ್ದಂತೆಯೇ ರೈತರ ಖಾತೆಗಳಿಗೆ ನೇರವಾಗಿ ಪರಿಹಾರ



ಜಮಾ ಮಾಡಲಾಗುವುದು ಎಂದು ಅವರು ವಿವರ ನೀಡಿದರು.

ಮಧ್ಯವರ್ತಿಗಳ ಹಾವಳಿ ಇಲ್ಲದೆ ರೈತರಿಗೆ ಪರಿಹಾರ ಸಿಗುತ್ತದೆ. ಮತ್ತು ಪರಿಹಾರದ ಮೊತ್ತವನ್ನು ಎರಡರಿಂದ ಮೂರು ಪಟ್ಟು ಹೆಚ್ಚಳ ಮಾಡಲಾಗಿದೆ ಎಂದರು.

ಕೇಂದ್ರ ಸರ್ಕಾರದ ಅನುದಾನಕ್ಕೂ ಕಾಯದೆ ನಮ್ಮ ಬೊಕ್ಕಸದಿಂದಲೇ ಪರಿಹಾರ ನೀಡಿ ಆನಂತರ ಈ ಮೊತ್ತವನ್ನು ನಾವು ಕೇಂದ್ರ ಸರ್ಕಾರದಿಂದ ಪಡೆಯುತ್ತೇವೆ ಎಂದರು. ಕಳೆದ ಎರಡು ಮೂರು ದಶಕಗಳ ನಂತರ ರಾಜ್ಯದಲ್ಲಿ ಭಾರೀ ಮಳೆ ಬಿದ್ದು ಒಂಭತ್ತು ಲಕ್ಷ ಹೆಕ್ಟೇರ್‌ಗೂ ಅಧಿಕ ಭೂಮಿಯಲ್ಲಿ ಬೆಳೆ ನಷ್ಟವಾಗಿದೆ. ಇದರ ಪ್ರಮಾಣ ಮತ್ತಷ್ಟು ಹೆಚ್ಚಬಹುದು ಎಂದು ಆತಂಕ ವ್ಯಕ್ತಪಡಿಸಿದರು. ಮಳೆ ಮತ್ತು ಪ್ರವಾಹವಲ್ಲದೆ ಕಾವೇರಿ ಮತ್ತು ಕೃಷ್ಣ ಕೊಳ್ಳದ ಪಾತ್ರದಲ್ಲಿ ತೇವಾಂಶ ಹೆಚ್ಚಾಗಿ ಈ ಪ್ರಮಾಣದ ಬೆಳೆ ನಷ್ಟವಾಗಿದೆ ಎಂದು ಅಂಕಿ ಅಂಶ ಒದಗಿಸಿದರು. ಭಾರೀ ಮಳೆ ಮತ್ತು ನೆರೆಯಿಂದ ರಾಜ್ಯದಲ್ಲಿ ಅಪಾರ ಪ್ರಮಾಣದ ಆಸ್ತಿ ಪಾಸ್ತಿ ನಷ್ಟ ಉಂಟಾಗಿದೆ. 127 ಮಂದಿ ಅಸುನೀಗಿದ್ದಾರೆ. 1289 ಜಾನುವಾರುಗಳು ಸಾವಿಗೀಡಾಗಿವೆ. ನಲವತ್ತೈದು ಸಾವಿರದಷ್ಟು

▶ 9ನೇ ಪುಟಕ್ಕೆ

ಈ ಬಾರಿ ತಮಿಳುನಾಡಿಗೆ 425 ಟಿಎಂಸಿ ನೀರು ಹರಿದೋಯ್ತು...

ವಿಧಾನಸಭೆಯಲ್ಲಿ ಕಂದಾಯ ಸಚಿವ ಆರ್.ಅಶೋಕ್ ಮಾಹಿತಿ

ಬೆಂಗಳೂರು: ಕಾವೇರಿ ಜಲಾನಯನ ಪ್ರದೇಶದಲ್ಲಿ ಬಿದ್ದ ಭಾರೀ ಮಳೆಯಿಂದ ಕಳೆದ ಮೂರು ತಿಂಗಳಲ್ಲೇ ತಮಿಳುನಾಡಿಗೆ 425 ಟಿಎಂಸಿ ನೀರು ಹರಿದು ಹೋಗಿದೆ. ಕಂದಾಯ ಸಚಿವ ಆರ್.ಅಶೋಕ್ ವಿಧಾನಸಭೆಯಲ್ಲಿಂದು ಈ ವಿಷಯವನ್ನು ಬಹಿರಂಗಪಡಿಸಿದ್ದಲ್ಲದೆ, ಕಾವೇರಿ ನದಿ ನೀರಿಗಾಗಿ ಉಭಯ ರಾಜ್ಯಗಳ ನಡುವೆ ನಡೆಯುತ್ತಿರುವ ಕಚ್ಚಾಟ ಈ ವರ್ಷ ಇರುವುದಿಲ್ಲ. ಇದರಲ್ಲಿ 200ಕ್ಕೂ ಹೆಚ್ಚು ಟಿಎಂಸಿ ನೀರು ಸಮುದ್ರದ ಪಾಲಾಗಿದೆ. ಇದನ್ನು ಮನಗಂಡು ಹೆಚ್ಚು ಮಳೆ ಬಿದ್ದ ಸಂದರ್ಭದಲ್ಲಿ ನೀರನ್ನು ಹಿಡಿದಿರುವ ಉದ್ದೇಶಕ್ಕಾಗಿ ಕೆಆರ್‌ಎಸ್‌ಗೆ ಸಮನಾಂತರವಾಗಿ ಮೇಕೆದಾಟು ಸಮೀಪ ಅಣೆಕಟ್ಟು ನಿರ್ಮಿಸಲು ಮುಂದಾದರೆ ತಮಿಳುನಾಡು ವಿರೋಧ ಮಾಡುತ್ತಿದೆ.

ಗಾಂಜಾ ಮಾರಾಟ ಮಾಡುತ್ತಿದ್ದ ಇಬ್ಬರು ಬಂಧನ

ಮೈಸೂರು, ಸೆ.19(ಎಸ್‌ಪಿಎನ್)– ಗಾಂಜಾ ಮಾರಾಟ ಮಾಡುತ್ತಿದ್ದ ಇಬ್ಬರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದು, ಇವರಿಂದ 5 ಕೆಜಿ 300 ಗ್ರಾಂ ಗಾಂಜಾ, 9,500 ರೂ. ನಗದು ಹಾಗೂ ಸ್ಕೂಟರ್ ವಶಕ್ಕೆ ಪಡೆದಿದ್ದಾರೆ. ಮೈಸೂರಿನ ಉದಯಗಿರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸೆ.17ರಂದು ಗೌಸಿಯಾನಗರದ ಸುಲ್ತಾನ್ ರಸ್ತೆಯಲ್ಲಿರುವ ಖದೀರ್ ಕೇರಂ ಕ್ಲಬ್ ಸಮೀಪ ಖಚಿತ ಮಾಹಿತಿ ಮೇರೆಗೆ ಸಿಸಿಬಿ ಪೊಲೀಸರು ಕಾರ್ಯಾಚರಣೆ ನಡೆಸಿ, ಗಾಂಜಾ ಮಾರಾಟ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ವಶಕ್ಕೆ ಪಡೆದಿದ್ದಾರೆ. ಈ ಪತ್ತೆ ಕಾರ್ಯದಲ್ಲಿ ಮೈಸೂರು ನಗರ ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಎಂ.ಎಸ್.ಗೀತಾ ಪ್ರಸನ್ನ, ಸಿಸಿಬಿ ಘಟಕದ ಎಸಿಪಿ ಸಿ.ಕೆ. ಅಶ್ವಥನಾರಾಯಣ ಮಾರ್ಗದರ್ಶನದಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಎ.ಮಲ್ಲೇಶ್, ಸಿಬ್ಬಂದಿಗಳಾದ ಎಂ.ಅನಿಲ್, ಸುಬಾನಲ್ಲಾ ಬಾಲ್‌ದಾರ್ ಪಾಲ್ಗೊಂಡಿದ್ದರು.

ನಿಧನ



ಸುಂದರಮ್ಮ

ಮೈಸೂರು, ಸೆ.19– ಹುಣಸೂರು ತಾಲೂಕಿನ ಚಿಕ್ಕಕಾಡನಹಳ್ಳಿ ಗ್ರಾಮದ ನಿವಾಸಿ ಪಟೇಲ್ ಸೋಮಣ್ಣನವರ ಪತ್ನಿ ಸುಂದರಮ್ಮ(74) ಸೋಮವಾರ ನಿಧನರಾದರು. ಮೃತರು ಪತಿ, ಪ್ರಥಮ ದರ್ಜೆ ಗುತ್ತಿಗೆದಾರ ಲೋಕೇಶ್ ಸೇರಿದಂತೆ ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಅಪಾರ ಬಂಧು–ವರ್ಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ಸೋಮವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕಾಂತಮಣಿ



ಮೈಸೂರಿನ ಅಡುಗೆ ಕಂಟ್ರಾಕ್ಟರ್ ಪ್ರಶಾಂತ್ ತಾತಾಚಾರ್ (ಕಣ್ಣ) ಅವರ ತಾಯಿ ಕಾಂತಮಣಿ (72) ಅವರು ಸೋಮವಾರ ಮಧ್ಯಾಹ್ನ ಹೃದಯಾಘಾತದಿಂದ ನಿಧನರಾದರು. ದಿವಂಗತರು ಪುತ್ರ ಪ್ರಶಾಂತ್ ತಾತಾಚಾರ್, ಪುತ್ರಿ ರಂಗಮಣಿ ಸೇರಿದಂತೆ ಅಪಾರ ಬಂಧು–ವರ್ಗ ಅಗಲಿದ್ದಾರೆ. ಮೃತರು ಖಿಲ್ಲೆ ಮೊಹಲ್ಲಾದ ಉತ್ತರಾಧಿ ಮಠದ ರಸ್ತೆಯಲ್ಲಿ ವಾಸವಾಗಿದ್ದರು. ಮಂಗಳವಾರ ಬೆಳಗ್ಗೆ 10.30ಕ್ಕೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು.

ಒಂದನೇ ಪುಟದಿಂದ

ಡಾ.ಜೆ.ಕಮಲಾ ರಾಮನ್ ಇನ್ನಿಲ್ಲ

1943ರ ಜುಲೈ 1ರಂದು ಜನಿಸಿದ ಡಾ. ಕಮಲಾ ರಾಮನ್, ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿ ಸರ್ಜಿಕಲ್ ನರ್ಸಿಂಗ್ ಮತ್ತು ಮೆಟರ್ನಿಟಿ ಹೋಂ ಹಾಗೂ ಪೆಥಾಲಜಿಕಲ್ ಆಸ್ಪತ್ರೆ ನಡೆಸು ತ್ತಿದ್ದ ಮೊದಲ ಫಿಜಿಷಿಯನ್. ಕರ್ನಾಟಕ ಪ್ರದೇಶ ಮಹಿಳಾ ಕಾಂಗ್ರೆಸ್ ಸಮಿತಿ ಉಪಾಧ್ಯಕ್ಷರಾಗಿ, 1958 ರಿಂದ 1962 ಮತ್ತು 1966 ರಿಂದ 1970 ರವರೆಗೆ ಎರಡು ಬಾರಿ ಮೈಸೂರು ನಗರಪಾಲಿಕೆ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು.

ನಗರ ಅಭಿವೃದ್ಧಿ ವಿಶ್ವಸ್ಥ ಮಂಡಳಿ (ಸಿಐಟಿಬಿ) ಟ್ರಸ್ಟಿಯಾಗಿ, 6 ವರ್ಷಗಳ ಕಾಲ ಮೈಸೂರು ನಗರ ಮಹಿಳಾ ಕಾಂಗ್ರೆಸ್ ಅಧ್ಯಕ್ಷರಾಗಿ, ದಿ ಮೈಸೂರು ತಾಲೂಕು ಮಹಿಳೆಯರ ವಿವಿಧೋದ್ದೇಶ ಸಹಕಾರ ಸಂಘ ನಿಯಮಿತದ ಸಂಸ್ಥಾಪಕ ಅಧ್ಯಕ್ಷ ರಾಗಿ, ಗೊಧೆಯ ಬಳಗ (ಮಹಿಳೆಯರ ಸಾಂಸ್ಕೃತಿಕ ಸಂಘ), ಕೃಷ್ಣಮೂರ್ತಿಪುರಂ ಶ್ರೀರಾಮ ಮಂದಿರಂ ಅಧ್ಯಕ್ಷರಾಗಿ, ವನಿತಾ ಸದನ ಶಿಕ್ಷಣ ಸಂಸ್ಥೆ ಅಧ್ಯಕ್ಷರು ಹಾಗೂ ಟ್ರಸ್ಟಿಯಾಗಿ ಡಾ. ಕಮಲಾ ರಾಮನ್ ಸೇವೆ ಸಲ್ಲಿಸಿದ್ದರು. ಮೈಸೂರು ವಿಶ್ವವಿದ್ಯಾನಿಲಯದ ಮಾಜಿ ಸೆನೆಟ್ ಸದಸ್ಯರು, ಬೊಡೆನ್ ಪೊವೆಲ್ ಎಜುಕೇಷನ್ ಸೊಸೈಟಿ ಟ್ರಸ್ಟಿಯಾಗಿದ್ದ ಅವರು, ಭಾರತ ಸ್ಕೌಟ್ಸ್ ಅಂಡ್ ಗೈಡ್ಸ್ ಅಸೋಸಿಯೇಷನ್ ಗೈಡ್ಸ್ ಕಮಿಷ್ನರ್ ಮತ್ತು ಉಪಾಧ್ಯಕ್ಷರಾಗಿ, ಶಕ್ತಿಧಾಮದ ಟ್ರಸ್ಟಿಯಾಗಿ ಹಾಗೂ ಮೈಸೂರು ಜಿಲ್ಲಾ ರೆಡ್ ಕ್ರಾಸ್ ಸೊಸೈಟಿ ಅಧ್ಯಕ್ಷರಾಗಿದ್ದರು.

ಭಾರೀ ಪ್ರಮಾಣದ ಗಾಂಜಾ ವಶ

ನಗರ ಠಾಣೆ ಸಬ್ ಇನ್‌ಸ್ಪೆಕ್ಟರ್ ಸಿ.ವಿ.ಶ್ರೀಧರ್, ಅಪರಾಧ ವಿಭಾಗದ ಸಬ್‌ಇನ್‌ಸ್ಪೆಕ್ಟರ್ ಎಂ.ಸಿ.ಮುತ್ತಣ್ಣ, ಪ್ರೊಬೇಷನರಿ ಸಬ್‌ಇನ್‌ಸ್ಪೆಕ್ಟರ್ ಮಂಜುನಾಥ್, ಸಿಬ್ಬಂದಿಗಳಾದ ಗಿರೀಶ್, ಮುಸ್ತಫಾ, ಸತೀಶ್, ಶೆಟ್ಟಪ್ಪ ಅವರನ್ನೊಳಗೊಂಡ ತಂಡ ವಿರಾಜಪೇಟೆಯ 2ನೇ ಪೆರಂಬಾಡಿ ಗ್ರಾಮದ ಕೇರಳ– ಮಾಕುಟ್ಟ ರಸ್ತೆಯಲ್ಲಿ ಸೂರ್ಯಕಾಂತ ಮೊಹಂತಿ ಚಾಲನೆ ಮಾಡುತ್ತಿದ್ದ ಹ್ಯೂಂಡಾಯ್ ಐ–10 ಕಾರನ್ನು ಅಡ್ಡಗಟ್ಟಿ ತಪಾಸಣೆಗೆ ಒಳಪಡಿಸಿದ ವೇಳೆ 3.100 ಕೆ.ಜಿ ಗಾಂಜಾ ಪತ್ತೆಯಾಗಿದೆ. ತಕ್ಷಣ ಆತನನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದ ನಂತರ ಆತ ವಾಸವಿದ್ದ ಮನೆ ಮೇಲೆ ದಾಳಿ ನಡೆಸಿದಾಗ 3.400 ಕೆ.ಜಿ. ಗಾಂಜಾ ಸಿಕ್ಕಿದೆ. ಒಟ್ಟಾರೆ ಮೊಹಂತಿಯಿಂದ 6.500 ಕೆ.ಜಿ. ಗಾಂಜಾ, 1200 ನಗದು, 2 ಮೊಬೈಲ್ ಹಾಗೂ ಕಾರನ್ನು ವಶಪಡಿಸಿಕೊಳ್ಳಲಾಗಿದ್ದು, ವಿಚಾರಣೆ ಮುಂದುವರೆದಿದೆ. ಮೊಹಂತಿ ಪ್ರಾರಂಭದಲ್ಲಿ ಗೋಬಿಮಂಚೂರಿ ಮಾರಾಟ ಮಾಡುತ್ತಿದ್ದ. ನಂತರ ತನ್ನ ವ್ಯಾಪಾರ ವಹಿವಾಟು ವಿಸ್ತರಿಸಿಕೊಂಡು ಹಾಲಿ ದಕ್ಷಿಣ ಕೊಡಗಿನ ಕೆಲ ಪ್ರತಿಷ್ಠಿತ ಕಾಲೇಜುಗಳಲ್ಲಿ ಕ್ಯಾಂಟಿನ್ ನಡೆಸುತ್ತಿದ್ದಾನೆ. ಪದೇ ಪದೆ ಓಡಿಸ್ಸಾಗೆ ಹೋಗುವ ಈತ ಅಲ್ಲಿಂದಲೇ ಕೆ.ಜಿ.ಗಟ್ಟಲೆ ಗಾಂಜಾವನ್ನು ಕೊಡಗಿಗೆ ತರುತ್ತಿದ್ದ. ಅದನ್ನು ಗ್ರಾಂ ಲೆಕ್ಕದಲ್ಲಿ ಪ್ಯಾಕ್ ಮಾಡಿ ಕೇರಳಗೆ ಕೊಂಡೊಯ್ದು ಮಾರಾಟ ಮಾಡುತ್ತಿದ್ದ ಎಂಬುದು ಪ್ರಾಥಮಿಕ ವಿಚಾರಣೆ ವೇಳೆ ತಿಳಿದು ಬಂದಿದೆ. ಪ್ರತಿಷ್ಠಿತ ಕಾಲೇಜುಗಳ ವಿದ್ಯಾರ್ಥಿಗಳಿಗೂ ಗಾಂಜಾ ಮಾರಾಟ ಮಾಡುತ್ತಿದ್ದನೇ ಎಂಬುದರ ಬಗ್ಗೆ ಸದ್ಯಕ್ಕೆ ಯಾವುದೇ ಮಾಹಿತಿ ಲಭ್ಯವಾಗಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ. ಬಾರೀ ಪ್ರಮಾಣದಲ್ಲಿ ಈತನ ಬಳಿ ಗಾಂಜಾ ಪತ್ತೆಯಾಗಿದ್ದು, ಗಾಂಜಾ ಮಾರಾಟ ವ್ಯವಹಾರವನ್ನು ಈತ ಮಾತ್ರ ಮಾಡುತ್ತಿದ್ದಾನೆಯೇ ಅಥವಾ ಈತನೊಂದಿಗೆ ಬೇರೆ ಯಾರಾದರೂ ಸೇರಿದ್ದಾರೆಯೇ ಎಂಬುದು ಮುಂದಿನ ವಿಚಾರಣೆಯಲ್ಲಿ ತಿಳಿಯಬೇಕಾಗಿದೆ.

ಅಂದಗೊಳ್ಳುತ್ತಿದೆ ಅರಮನೆ

ಮಾಡಲಾಗುತ್ತದೆ ಬೆಳಗ್ಗೆ 7 ಗಂಟೆಯಿಂದ ಖಾಸಗಿ ದರ್ಬಾರ್ ಹಾಲ್‌ನಲ್ಲಿ ಹೋಮ ನಡೆಸಲಾಗುತ್ತದೆ. ಅರಮನೆಯ ದರ್ಬಾರ್ ಹಾಲ್‌ನಲ್ಲಿ ಸಿಂಹಾಸನ ಹಾಗೂ ಕನ್ನಡಿತೊಟ್ಟಿಯಲ್ಲಿ ಬೆಳ್ಳಿಯ ಭದ್ರಾಸನ ಜೋಡಿಸಲಾಗುತ್ತದೆ. ಅರಮನೆಯ ಒಳಾಂಗಣದಲ್ಲಿರುವ ಎಲ್ಲಾ ಸಿಸಿ ಕ್ಯಾಮರಾಗಳಿಗೆ ಪರದೆ ಮುಚ್ಚಲು ನಿರ್ಧರಿಸಲಾಗಿದೆ. ಬಿಡಿಭಾಗಗಳನ್ನು ತರುವ ಸಿಬ್ಬಂದಿ ಮೇಲೆ ಹದ್ದಿನ ಕಣ್ಣಿಟ್ಟು, ಶಸ್ತ್ರಸಜ್ಜಿತ ಸಿಬ್ಬಂದಿ ಯನ್ನು ಬೆಂಗಾವಲಿಗೆ ನಿಯೋಜಿಸಲು ಉದ್ದೇಶಿಸಲಾಗಿದೆ.

ಹೋಮ ಹವನಗಳು: ದರ್ಬಾರ್ ಹಾಲ್‌ನಲ್ಲಿ ಸಿಂಹಾಸನ ಜೋಡಣೆಯ ಹಿನ್ನೆಲೆಯಲ್ಲಿ ಬೆಳಗ್ಗೆ 7 ಗಂಟೆಯಿಂದ ವಿವಿಧ ಪೂಜಾ ಕೈಂಕರ್ಯಗಳು ಜರುಗಲಿವೆ. ಅರಮನೆಯ ಪುರೋಹಿತರ ಸಮ್ಮುಖ ದಲ್ಲಿ ಗಣಪತಿ ಹೋಮ, ಚಾಮುಂಡಿ ಪೂಜೆ, ಶಾಂತಿ ಹೋಮ ಸೇರಿದಂತೆ ವಿವಿಧ ಪೂಜಾ ವಿಧಾನಗಳು ನಡೆಯಲಿವೆ. ನಂತರ ಪೂರ್ಣಾಹುತಿ ಬಳಿಕ ಧಾರ್ಮಿಕ ಕಾರ್ಯಗಳು ಕೊನೆಗೊಳ್ಳಲಿವೆ.

ಪ್ರವೇಶ ನಿರ್ಬಂಧ: ಸಿಂಹಾಸನ ಜೋಡಣೆಯ ಹಿನ್ನೆಲೆ ಯಲ್ಲಿ ಅರಮನೆಗೆ ಪ್ರವಾಸಿಗರಿಗೆ ಪ್ರವೇಶ ನಿರ್ಬಂಧಿಸಲಾ ಗಿದೆ. ಅರಮನೆಯ ಎಲ್ಲಾ ದ್ವಾರಗಳಲ್ಲಿಯೂ ಪ್ರವೇಶ ನಿರ್ಬಂಧಿಸಿರುವ ಬಗ್ಗೆ ಫಲಕ ಹಾಕಲಾಗಿದೆ. ಬೆಳಗ್ಗೆಯಿಂದ ಮಧ್ಯಾಹ್ನ 1 ಗಂಟೆವರೆಗೆ ಅರಮನೆಗೆ ಪ್ರವಾಸಿಗರು ಹಾಗೂ ಸಾರ್ವಜನಿಕರ ಪ್ರವೇಶ ನಿರ್ಬಂಧಿಸಲಾಗಿದೆ.

ನವರಾತ್ರಿಗೆ ಅರಮನೆ ಒಳಾಂಗಣದಲ್ಲಿ ಸಿದ್ಧತೆ: ಸೆ.26ರಿಂದ ಖಾಸಗಿ ದರ್ಬಾರ್ ನಡೆಯುವುದರಿಂದ ಅರಮನೆಯ ಒಳಾಂಗಣದಲ್ಲಿ ಅಂತಿಮ ಸಿದ್ಧತೆ ಭರದಿಂದ ಸಾಗುತ್ತಿದೆ. ದರ್ಬಾರ್ ಹಾಲ್‌ನಲ್ಲಿ ಸಿಂಹಾಸನ ಜೋಡಣೆಯಿಂದಾಗಿ ಕಾರ್ಪೆಟ್ ಹಾಸಲಾಗುತ್ತಿದೆ. ಅಲ್ಲದೆ, ದರ್ಬಾರ್ ಹಾಲ್ ಹಾಗೂ ಕನ್ನಡಿ ತೊಟ್ಟಿ, ಕಲ್ಯಾಣ ಮಂಟಪ ಸೇರಿದಂತೆ ಅರಮನೆ ಒಳಾಂಗಣದಲ್ಲಿ ದೀಪದ ಗೊಂಚಲು ಸರಿಮಾಡುವ, ಧೂಳನ್ನು ಹೊಡೆಯುವ ಕೆಲಸ ಪೂರ್ಣಗೊಂಡಿದೆ.

ಸಜ್ಜಾಗುತ್ತಿದೆ ಅರಮನೆ: ಅರಮನೆಗೆ ಅಳವಡಿಸಿದ್ದ ಬಲ್ಬ್‌ಗಳಲ್ಲಿ ಸುಮಾರು 25 ಸಾವಿರ ಬಲ್ಬ್‌ಗಳು ಹಾಳಾಗಿದ್ದು, ಅವುಗಳನ್ನು ಬದಲಿಸುವ ಕೆಲಸವೂ ಬಿರುಸಾಗಿ ಸಾಗುತ್ತಿದೆ. ಅರಮನೆ ದೀಪಾಲಂಕಾರಕ್ಕೆ ಸಾಮಾನ್ಯ ಬಲ್ಬ್‌ಗಳನ್ನೇ ಬಳಸಲಾಗುತ್ತಿದೆ. ಅರಮನೆಯಲ್ಲದೆ ದಸರಾ ವಸ್ತು ಪ್ರದರ್ಶನ ಮುಖ್ಯ ದ್ವಾರಕ್ಕೂ ಈ ಸಾಮಾನ್ಯ (ಇನ್‌ಕ್ಯಾಂಡಿಲೇಟ್) ಬಲ್ಬ್‌ಗಳನ್ನೇ ಅಳವಡಿಸಲಾಗುತ್ತಿದ್ದು, ಇವು 15 ವೋಲ್ಟ್ ಸಾಮರ್ಥ್ಯದ್ದಾಗಿದೆ. ಸ್ವರ್ಣಾಕಾರದಲ್ಲಿ ಬೆಳಗಲಿರುವ ಈ ಬಲ್ಬ್‌ಗಳು ಅರಮನೆ ಅಂದಕ್ಕೆ ಮತ್ತಷ್ಟು ಮೆರಗು ನೀಡಲಿವೆ. ಈ ಹಿನ್ನೆಲೆಯಲ್ಲಿ ಎಲ್‌ಇಡಿ ಬಲ್ಬ್ ಬದಲು ಪಾರಂಪರಿಕತೆ ಕಾಯ್ದುಕೊಳ್ಳಲಾಗಿದೆ.

ಪ್ರತಿವರ್ಷವೂ ಬದಲಿಸಲಾಗುತ್ತದೆ: 'ಅರಮನೆ ಆಡಳಿತ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಪ್ರತಿ ವರ್ಷ ಕೆಟ್ಟಿರುವ ಬಲ್ಬ್‌ಗಳ ಬದಲಿಸುವುದು ಸಾಮಾನ್ಯ ಪ್ರಕ್ರಿಯೆ. ಅರಮನೆ ಮಂಡಳಿ ವತಿಯಿಂದ ಇ–ಪ್ರಕ್ಯೂರ್‌ಮೆಂಟ್ ಮೂಲಕ ಗುತ್ತಿಗೆ ನೀಡಿ, ಬಲ್ಬ್‌ಗಳ ಬದಲಾವಣೆ ಪ್ರಕ್ರಿಯೆ ನಡೆಸಲಾಗುತ್ತಿದೆ. ಇನ್ನೆರಡು ದಿನಗಳಲ್ಲಿ ಎಲ್ಲಾ ಕೆಟ್ಟಿರುವ ಬಲ್ಬ್‌ಗಳನ್ನು ಬದಲಿಸಲಾಗುತ್ತದೆ. ಕ್ರೇನ್ ಮೂಲಕ ಅರಮನೆಯ ಡೂಮ್ ಹಾಗೂ ಎತ್ತರದ ಗೋಡೆಗಳಲ್ಲಿ ಅಳವಡಿಸಿರುವ ಬಲ್ಬ್‌ಗಳನ್ನು ಅಳವಡಿಸಲಾಗುತ್ತಿದೆ. ದಸರಾ ಮಹೋತ್ಸವಕ್ಕೆ ಅರಮನೆ ಹೊರ ಹಾಗೂ ಒಳಾಂಗಣ ಸಜ್ಜಾಗಿದೆ ಎಂದರು.

ಸಬ್ ಇನ್‌ಸ್ಪೆಕ್ಟರ್ ಅಶ್ವಿನಿ ಅಮಾನತು

ವರ್ಗಾವಣೆಯಾಗಿದೆ ಎನ್ನಲಾದ ಬಗ್ಗೆ ಬ್ಯಾಂಕ್ ಸ್ಟೇಟ್‌ಮೆಂಟ್ ಸಹ ಬಿತ್ತರವಾಗಿದ್ದು, ಆಡಿಯೋ ಸಂಭಾಷಣೆಯನ್ನು ಪರಿಶೀಲಿಸಿದಾಗ ಸಬ್ ಇನ್ಸ್‌ಪೆಕ್ಟರ್ ಅಶ್ವಿನಿ ಅನಂತಪೂರ ಅವರು ಪ್ರಥಮ ದರ್ಜೆ ಸಹಾಯಕರ ಹುದ್ದೆ ನೇಮಕಾತಿ ಅಕ್ರಮದಲ್ಲಿ ಭಾಗಿಯಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ ಎಂದು ಎಸಿಪಿಯವರು ದಾಖಲಾತಿಗಳೊಂದಿಗೆ ವರದಿ ಸಲ್ಲಿಸಿದ್ದರು. ಆ ಹಿನ್ನೆಲೆಯಲ್ಲಿ ನೇಮಕಾತಿ ಅಕ್ರಮದಲ್ಲಿ ಭಾಗಿಯಾಗಿರುವುದು ಕಂಡುಬಂದಿರುವ ಕಾರಣ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡಾವಳಿಗಳು) ನಿಯಮಗಳು–1965/1989ರ ನಿಯಮ–5ರನ್ವಯ ಅಶ್ವಿನಿ ಅನಂತಪೂರ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಇಲಾಖಾ ವಿಚಾರಣೆ ಬಾಕಿ ಇರಿಸಿ ಅಮಾನತುಗೊಳಿಸಿ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ಇಂದು ಆದೇಶ ಹೊರಡಿಸಿದ್ದಾರೆ. ಕಾಂಗ್ರೆಸ್ ವಕ್ತಾರ ಎಂ. ಲಕ್ಷ್ಮಣ್ ಇತ್ತೀಚೆಗಷ್ಟೇ ಸುದ್ದಿಗೋಷ್ಠಿ ನಡೆಸಿ ಅಶ್ವಿನಿ ಅನಂತಪೂರ ಅವರ ಸಂಭಾಷಣೆಯ ಆಡಿಯೋ ಹಾಗೂ ದಾಖಲೆಗಳನ್ನು ಬಿಡುಗಡೆ ಮಾಡಿದ್ದರು.

ಮೈಸೂರು ರಾಮಸ್ವಾಮಿ ವೃತ್ತದಲ್ಲಿ ಗಜಮುಖ ಸೌಂದರ್ಯ!

ದಸರಾ ಪ್ರಯುಕ್ತ ವೃತ್ತದ ಅಲಂಕಾರ



ಮೈಸೂರಿನ ರಾಮಸ್ವಾಮಿ ವೃತ್ತದಲ್ಲಿ ಅನಾವರಣಗೊಂಡಿರುವ ಗಜಮುಖಗಳು.



ಮೈಸೂರಿನ ರಾಮಸ್ವಾಮಿ ವೃತ್ತದ ಒಂದು ಮಗ್ಗಲಲ್ಲಿ ತಲೆ ಎತ್ತುತ್ತಿರುವ ಚಾಮುಂಡಿ ದೇವಾಲಯದ ಕಲಾಕೃತಿ.

ಎಂ.ಬಿ.ಪವನ್‌ಮೂರ್ತಿ

ಮೈಸೂರು,ಸೆ.19– ದಸರಾ ಗಜಪಡೆಯ ನಾಲ್ಕು ಆನೆಗಳು ಮೈಸೂರಿನ ರಾಮಸ್ವಾಮಿ ವೃತ್ತಕ್ಕೆ ಲಗ್ಗೆ ಇಟ್ಟಿವೆ! ವೃತ್ತದಲ್ಲಿ ನಾಲ್ಕು ದಿಕ್ಕಿಗೂ ಒಂದೊಂದು ಆನೆ ಮುಖ ಮಾಡಿದ್ದು, ಈ ಗಜಮುಖಗಳ ಗಾಂಭಿರ್ಯ ಆಕರ್ಷಿಸುತ್ತಿದೆ!!

ದಸರಾ ಮಹೋತ್ಸವ ಅಂಗವಾಗಿ ರಾಮಸ್ವಾಮಿ ವೃತ್ತದ ಸೌಂದರೀಕರಣದ ಕೆಲಸ–ಕಾರ್ಯಗಳು ಭರದಿಂದ ಸಾಗಿವೆ. ವೃತ್ತವೀಗ ದೀಪಾಲಂಕಾರದೊಂದಿಗೆ ಶೃಂಗಾರಗೊಳ್ಳುತ್ತಿದ್ದು, ವೃತ್ತದಲ್ಲಿರುವ ಕಂಬಕ್ಕೆ ಇದೀಗ ಗಜ ಮುಖಗಳ ಗಾಂಭೀರ್ಯದ ಸ್ಪರ್ಶ ದೊರೆತಿದೆ. ಇಲ್ಲಿ ನಾಲ್ಕು ಗಜಮುಖಗಳನ್ನು ಫೈಬರ್‌ನಲ್ಲಿ ಮಾಡಿದ್ದು, ಹೈವೆ ವೃತ್ತದಲ್ಲಿರುವ ಗಜ ಮುಖಗಳನ್ನು (ಎಲಿಫೆಂಟ್ ಹೆಡ್ ಫೌಂಟೇನ್ ಸರ್ಕಲ್) ಮಾಡಿರುವ ಕಲಾವಿದ ಮಹದೇವ ಸುತ್ತೂರು, ಅವರೇ ಇಲ್ಲಿಯೂ ತಮ್ಮ ಕಲೆಯ ಕೈಚಳಕ ತೋರಿದ್ದಾರೆ. ಒಂದೊಂದು ಆನೆ ಮುಖವೂ 4 ಅಡಿ ಎತ್ತರವಿದ್ದು, 3 ಅಡಿ ಅಗಲ ಹೊಂದಿವೆ. 2 ಅಡಿವರೆಗೆ ಉಬ್ಬುವ ಕೆತ್ತನೆಯ ಮೂಲಕ ಆನೆಗಳ ಸೊಂಡಿಲು ಚಾಚಿವೆ.

ಮಹದೇವ್ ಸುತ್ತೂರು ಅವರೊಂದಿಗೆ ಕಿಶೋರ್ ರಾಚಯ್ಯ ತಂಡ ಈ ಗಜಮುಖದ ಕಲಾಕೃತಿ ನಿರ್ಮಾಣ ಮಾಡಿದೆ. ಇದೀಗ ಇದು ಪ್ರಮುಖ ಆಕರ್ಷಣೆಯಾಗಿದ್ದು, ವೃತ್ತದ ಮೂಲಕ ಹಾದು ಹೋಗುವವರು ಈ ಗಜಮುಖಳತ್ತ ನೋಡುತ್ತಾ ಸಾಗುವಂತಾಗಿದೆ. ಇದಲ್ಲದೆ, ವೃತ್ತದ ಒಂದು ಮಗ್ಗಲಲ್ಲಿ ದೇವಾಲಯದ ಕಲಾಕೃತಿ ತಲೆ ಎತ್ತುತ್ತಿದೆ. ಒಟ್ಟು 20 ಅಡಿ ಎತ್ತರದಲ್ಲಿ ಈ ದೇವಸ್ಥಾನದ ಕಲಾಕೃತಿ ಮಾಡಲಾಗುತ್ತಿದೆ. ಈ ಪೈಕಿ ಮೇಲ್ಭಾಗದಲ್ಲಿರುವ ಗೋಪುರ 12 ಅಡಿ ಎತ್ತರ ಹೊಂದಿದೆ. ಮಂಟಪ ಎರಡೂವರೆ ಅಡಿ ಇದ್ದರೆ, 30 ಅಡಿ ಅಗಲದಲ್ಲಿ ಈ ದೇವಾಲಯದ ಕಲಾ ಕೃತಿ ಅನಾವರಣಗೊಳ್ಳುತ್ತಿದೆ. ಹೆಚ್ಚು ಕಡಿಮೆ ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಾಲಯ ಹೋಲುವಂತೆ ಈ ದೇವಾಲಯದ ಕಲಾಕೃತಿ ನಿರ್ಮಾಣ ಮಾಡಲು ಮಹದೇವ ಸುತ್ತೂರು ಮತ್ತು ಕಿಶೋರ್ ರಾಚಯ್ಯ ನೇತೃತ್ವದ ಕಲಾವಿದರ ತಂಡ ಶ್ರಮಿಸುತ್ತಿದೆ.

ಹೈವೆ ವೃತ್ತದ ಗಜಮುಖಗಳ ಮಾದರಿಯೇ ಇಲ್ಲೂ ಬಳಕೆ...



"ಹೈವೆ ವೃತ್ತದಲ್ಲಿರುವ ಗಜಮುಖಗಳನ್ನು ಮಾಡಿದ ಮಾದರಿಯನ್ನೇ ಇಲ್ಲಿಯೂ ಬಳಸಲಾಗಿದೆ. ಈ ಎರಡೂ ಕಡೆಯ ಗಜಮುಖಗಳನ್ನೂ ಫೈಬರ್‌ನಲ್ಲೇ ಮಾಡಿದ್ದು, ನೋಡಿದರೆ ಕಲ್ಲಿನಂತೆ ಕಾಣುವ ರೀತಿಯಲ್ಲಿ ಬಣ್ಣ ಮಾಡಲಾಗಿದೆ. ಫೈಬರ್‌ನಲ್ಲಿ ಮಾಡಿದ ಕಲಾಕೃತಿಗಳು 60ರಿಂದ 70 ವರ್ಷಗಳವರೆಗೆ ಬಿಸಿಲು–ಮಳೆ ನಡುವೆಯೂ ಬಾಳಿಕೆ ಬರಲಿವೆ. –ಕಲಾವಿದ ಮಹದೇವ ಸುತ್ತೂರು

ಥರ್ಮಾಕೋಲ್ ಹಾಗೂ ಕಬ್ಬಿಣ ಫ್ರೇಮ್ ದೇವಾಲಯ ಕಲಾಕೃತಿ ನಿರ್ಮಾಣಕ್ಕೆ ಬಳಸುತ್ತಿರುವ ಪ್ರಮುಖ ಸಾಮಗ್ರಿಗಳಾಗಿವೆ. ಇಲ್ಲಿ ಚಾಮುಂಡಿ ದೇವಿ ಫೋಟೋ ಅಥವಾ ವಿಗ್ರಹ ಇಡುವ ಉದ್ದೇಶ ಹೊಂದಲಾಗಿದೆ. ದಸರಾ ಉದ್ಘಾಟನೆಯ ಮುನ್ನ ದಿನವಾದ ಸೆ.25ರ ವೇಳೆಗೆ ರಾಮಸ್ವಾಮಿ ವೃತ್ತ ವಿದ್ಯುತ್ ದೀಪಾಲಂಕಾರದ ಜೊತೆಗೆ ಈ ಎರಡು ವಿಶಿಷ್ಟ ಕಲಾಕೃತಿಗಳ ಮೂಲಕ ಝುಗಮುಗಿಸಲಿದೆ.

ಪ್ರಾಯೋಜಕತ್ವ: ಪ್ರತಿವರ್ಷದಂತೆ ಕಲ್ಯಾಣಿ ಗ್ರೂಪ್ ಮತ್ತು ಮೆರಿಟರ್‌ನ ಜಂಟಿ ಉದ್ಯಮವಾದ ಆಟೋಮೋಟಿವ್ ಆಕ್ಸಲ್ಸ್ ಪ್ರಾಯೋಜಕತ್ವದಲ್ಲಿ ಈ ಬಾರಿಯೂ ರಾಮಸ್ವಾಮಿ ವೃತ್ತವು ದಸರೆಗೆ ಶೃಂಗಾರಗೊಳ್ಳುತ್ತಿದೆ. ಅಂದಾಜು 5 ಲಕ್ಷ ರೂ. ವೆಚ್ಚದಲ್ಲಿ ಇಲ್ಲಿನ ಅಲಂಕಾರಿಕ ಕೆಲಸಗಳು ನಡೆಯುತ್ತಿವೆ.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಆಟೋಮೋಟಿವ್ ಆಕ್ಸಲ್ಸ್‌ನ ಉಪ ವ್ಯವಸ್ಥಾಪಕ ಕಿರಣ್ ಕುಮಾರ್, ವೃತ್ತದ ಮಧ್ಯ ದಲ್ಲಿರುವ ಗಜಮುಖಗಳು ಹಾಗೂ ಇಲ್ಲಿನ ದೇವಾಲಯದ ಕಲಾಕೃತಿ ನಿರ್ಮಾಣಕ್ಕೆ ವಿಶೇಷ ಒತ್ತು ಕೊಡಲಾಗಿದೆ. ಹಾಗಾಗಿ ಇವು ಇಲ್ಲಿನ ಪ್ರಮುಖ ಆಕರ್ಷಣೆ. ಇಲ್ಲಿನ ಮತ್ತೊಂದು ಮಗ್ಗಲಲ್ಲಿ ಪ್ರತಿವರ್ಷ ದೀಪಾಲಂಕಾರದಲ್ಲಿ ಮೈಸೂರು ಅರಮನೆಯ ಪ್ರತಿಕೃತಿ ಮೂಡಿಸಲಾಗುತ್ತಿತ್ತು. ಆದರೆ ಈ ಬಾರಿ ಬೇರೆ ಏನಾದರೂ ಮಾಡಲು ಉದ್ದೇಶಿಸಲಾಗಿದೆ. ಒಟ್ಟಾರೆ ವಿಶಿಷ್ಟವಾದ ಪ್ರತಿರೂಪ ವಿದ್ಯುತ್ ದೀಪಗಳಲ್ಲಿ ಇಲ್ಲಿ ಕಂಗೊಳಿಸಲಿದೆ ಎಂದು ತಿಳಿಸಿದರು.

ಕಲಾವಿದ ಮಹದೇವ ಸುತ್ತೂರು 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಫೈಬರ್‌ನಲ್ಲಿ ಕಲಾಕೃತಿ ಮಾಡುವ ಮೊದಲ ಪ್ರಕ್ರಿಯೆ ಎಂದರೆ ಮಣ್ಣಿನಲ್ಲಿ ಉದ್ದೇಶಿತ ಕಲಾಕೃತಿ ಮಾಡಿಕೊಳ್ಳಬೇಕು. ಅನಂತರ ಪಿಓಪಿಯಲ್ಲಿ ಅಚ್ಚು ಮಾಡಿಕೊಳ್ಳಬೇಕು. ಪಿಓಪಿ ಅಚ್ಚಿನೊಳಗೆ ಫೈಬರ್ ಅನ್ನು ಹಾಕಿ ಕೆಲ ರಾಸಾಯನಿಕಗಳನ್ನು ಬಳಸಿದಾಗ ಅಂತಿಮವಾಗಿ ಫೈಬರ್‌ನಲ್ಲಿ ಕಲಾಕೃತಿ ಸಿದ್ಧಗೊಳ್ಳಲಿದೆ. ಹೈವೆ ವೃತ್ತದಲ್ಲಿನ ಗಜಮುಖಗಳ ಮಾದರಿ ಹಾಗೂ ಅಲ್ಲಿಯ ವಿಧಾನದಲ್ಲೇ ರಾಮಸ್ವಾಮಿ ವೃತ್ತದಲ್ಲೂ ಗಜಮುಖಗಳನ್ನು ಮಾಡಿದ್ದು, ದಸರಾ ಬಳಿಕವೂ ಗಜ ಮುಖಗಳ ಕಲಾಕೃತಿಗಳನ್ನು ಹಾಗೆಯೇ ಉಳಿಸಿಕೊಳ್ಳಬಹುದು ಎಂದು ಹೇಳಿದರು.

ಮೈ ರಿಯಾಲ್ಟಿ ಪ್ರಾಪರ್ಟಿ ಎಕ್ಸ್‌ಪೋಗೆ ಯಶಸ್ವಿ ತೆರೆ



ಮೈಸೂರು, ಸೆ.19– ಮೈಸೂರಿನ ಕಾಸ್ಮೋಪಾಲಿಟನ್ ಕ್ಲಬ್‌ನಲ್ಲಿ ಆಯೋಜಿಸಲಾಗಿದ್ದ ನಾಲ್ಕು ದಿನಗಳ 'ಮೈ ರಿಯಾಲಿಟಿ ಪ್ರಾಪರ್ಟಿ ಎಕ್ಸ್‌ಪೋ'ಗೆ ಸೋಮವಾರ ಯಶಸ್ವಿ ತೆರೆಬಿದ್ದಿತು.

ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ(ಬಿಎಐ) ಮೈಸೂರು ಸೆಂಟರ್ ಮತ್ತು ಕ್ರೆಡಾಯ್ ಸಂಸ್ಥೆಗಳು, ಮೈಸೂರು ಬಿಲ್ಡರ್ಸ್ ಚಾರಿಟಬಲ್ ಟ್ರಸ್ಟ್ ಸಹಯೋಗದಲ್ಲಿ ನಡೆದ ಎಕ್ಸ್‌ಪೋ ಮೈಸೂರಿನ ಬಿಲ್ಡರ್ಸ್, ಡೆವಲರ್ಸ್‌ಗಳಿಗೆ ಉತ್ತಮ ವೇದಿಕೆ ಕಲ್ಪಿಸಿತ್ತು. ತಾವು ವಿವಿಧ ಯೋಜನೆಗಳಡಿ ಅಭಿವೃದ್ಧಿಪಡಿಸಿದ್ದ ಲೇಔಟ್‌ಗಳು, ಫ್ಲಾಟ್‌ಗಳು, ಅಪಾರ್ಟ್ ಮೆಂಟ್‌ಗಳು, ಗುಂಪು ಮನೆಗಳು, ವಿಲ್ಲಾಗಳ ಬಗ್ಗೆ ಜನರಿಗೆ ಮಾಹಿತಿ ನೀಡಿದರು. ಇದೇ ವೇಳೆ ಹೆಚ್‌ಡಿಎಫ್‌ಸಿ, ಐಸಿಐಸಿಐ, ಎಸ್‌ಬಿಐ ಬ್ಯಾಂಕ್‌ಗಳ ಹೋಮ್‌ಲೋನ್ ಬಗ್ಗೆಯೂ ಗ್ರಾಹಕರಿಗೆ ಮಾಹಿತಿ ಒದಗಿಸಲಾಯಿತು.

'ಬ್ರಿಗೇಡ್ ಎಂಟರ್‌ಪ್ರೈಸೆಸ್', 'ನಮ್ ಮನೆ' ಪ್ಲಾಟಿನಂ ಸ್ಟಾಲ್‌ನಲ್ಲಿದ್ದರೆ, ಗೋಲ್ಡ್ ಸ್ಟಾಲ್‌ನಲ್ಲಿ 'ರೈ ಎಸ್ಟೇಟ್', 'ಈಗಲ್ ಬರ್ಗ್', 'ಸ್ಕಿಲ್ ಟೆಕ್', ಸಿಲ್ವರ್ ಸ್ಟಾಲ್‌ನಲ್ಲಿ 'ಜಿ9 ಪ್ರಾಜೆಕ್ಟ್', 'ಭೀಮಾ ಪ್ರಾಪರ್ಟೀಸ್', 'ಜಿಎಸ್‌ಎಸ್ ಪ್ರಾಜೆಕ್ಟ್ಸ್', 'ಅಹದ್ ಬಿಲ್ಡರ್ಸ್' ಇದ್ದವು. ಜೊತೆಗೆ ಸಾಮಾನ್ಯ ಸ್ಟಾಲ್‌ಗಳಲ್ಲೂ ಪ್ರಸಿದ್ಧ ಬಿಲ್ಡರ್ಸ್ ಹಾಗೂ ಡೆವಲಪರ್‌ಗಳು ತಮ್ಮ ಯೋಜನೆಗಳ ಬಗ್ಗೆ ಮಾಹಿತಿ ನೀಡಿದರು. ಗ್ರಾಹಕರು ಪ್ರಾಜೆಕ್ಟ್ಸ್‌ಗಳ ಬಗ್ಗೆ ವಿವರಣೆ ಕೇಳಿ ಸೈಟ್ ವಿಸಿಟ್ ಮಾಡಿದರು. ಕೆಲವರು ನಿವೇಶನ ಬುಕ್ಕಿಂಗ್ ಮಾಡಿದರು.

ಹೊಸ ಪ್ರಾಜೆಕ್ಟ್ಸ್ ಹಾಗೂ ಡೆವಲರ್ಸ್‌ಗಳ ಬಗ್ಗೆ ಮೈ ರಿಯಾಲಿಟಿ ಎಕ್ಸ್‌ಪೋ ಸದವಕಾಶ ಕಲ್ಪಿಸಿತ್ತು. ಒಂದೇ ಸೂರಿನಡಿ ವಿವಿಧ ಸೂರುಗಳ ಬಗ್ಗೆ ಮಾಹಿತಿ ದೊರಕಿತು. ತಮ್ಮ ಆಸಕ್ತಿ, ಇಚ್ಛೆಗೆ ಅನುಗುಣವಾಗಿ ಪ್ರಾಜೆಕ್ಟ್ ಆಯ್ಕೆ ಮಾಡಿಕೊಳ್ಳುವುದರ ಜೊತೆಗೆ ಹೋಮ್ ಲೋನ್ ಬಗ್ಗೆಯೂ ತಿಳಿದುಕೊಂಡರು. ನಾಲ್ಕು ದಿನಗಳ ಎಕ್ಸ್‌ಪೋಗೆ ಗ್ರಾಹಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತಲ್ಲದೆ, ಸುಮಾರು 7–8 ಸಾವಿರ ಜನ ಭೇಟಿ ನೀಡಿ ಪ್ರಯೋಜನ ಪಡೆದರು ಎಂದು ಮೈ ರಿಯಾಲಿಟಿ–2022ರ ಚೇರ್ಮನ್ ಡಿ.ಶ್ರೀಹರಿ ತಿಳಿಸಿದ್ದಾರೆ.

ವಿಪ್ರ ಜಾಗೃತಿ ವೇದಿಕೆ ವಾರ್ಷಿಕೋತ್ಸವ, ಪ್ರತಿಭಾ ಪುರಸ್ಕಾರ



ಮೈಸೂರು, ಸೆ. 19– ವಿಪ್ರ ಜಾಗೃತಿ ವೇದಿಕೆಯ 8ನೇ ವರ್ಷದ ವಾರ್ಷಿಕೋತ್ಸವ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭ ಕಾರ್ಯಕ್ರಮ ವಿಶ್ವೇಶ್ವರನಗರದಲ್ಲಿರುವ ಮಹರ್ಷಿ ಪಬ್ಲಿಕ್ ಶಾಲೆಯ ರಂಗಶಂಕರ ಸಭಾಂಗಣದಲ್ಲಿ ಆವರಣದಲ್ಲಿ ನಡೆಯಿತು.

2021–2022ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಶೇ.80ಕ್ಕಿಂತ ಹೆಚ್ಚು ಅಂಕ ಪಡೆದ 55 ಜನ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಆನಂತರ ವಿಪ್ರ ಜ್ಯೋತಿ ಸ್ಮರಣ ಸಂಚಿಕೆಯನ್ನು ಬಿಡುಗಡೆಗೊಳಿಸಿದರು. ವಿಪ್ರಜ್ಯೋತಿ ಸ್ಮರಣ ಸಂಚಿಕೆಯಲ್ಲಿನ ಲೇಖನಗಳ ಬಗ್ಗೆ ಮಾ.ವಿ ರಾಂಪ್ರಸಾದ್ ಮೆಚ್ಚುಗೆ ವ್ಯಕ್ತಪಡಿಸಿದರು. ಈ ಸ್ಮರಣ ಸಂಚಿಕೆಯ ಲೇಖನಗಳು ನೂರಾರು ವರ್ಷದಿಂದ ಸಮಾಜಕ್ಕೆ ಹಾಗೂ ದೇಶಕ್ಕೆ ಅಮೂಲ್ಯವಾದ ಕೊಡುಗೆಯನ್ನು ಬ್ರಾಹ್ಮಣರು ಹಾಗೂ ಸಮಾಜ ನೀಡಿರುವುದನ್ನು ನೆನಪಿಸುತ್ತದೆ ಎಂದು ಹೇಳಿದರು.

ನಗರಪಾಲಿಕೆ ಸದಸ್ಯ ಎಂ.ಸಿ.ರಮೇಶ್, ವಿಪ್ರ ಮುಖಂಡ ಶ್ರೀಕಂಠಕುಮಾರ್, ಸಮಾಜ ಸೇವಕ ರಘುರಾಮ್ ವಾಜಪೇಯಿ, ಆದರ್ಶ ಸೇವಾ ಸಂಘದ ಅಧ್ಯಕ್ಷ ಜಿ.ಆರ್.ನಾಗರಾಜ್, ಹೋಟೆಲ್ ಏಟ್ರಿಯಂ ಮಾಲೀಕರಾದ ಪುರಾಣಿಕ್, ವಿಪ್ರ ಜಾಗೃತಿ ವೇದಿಕೆ ಅಧ್ಯಕ್ಷ ರಮೇಶ್, ವಿಪ್ರ ಜಾಗೃತಿ ವೇದಿಕೆ ಕಾರ್ಯದರ್ಶಿಗಳಾದ ಸುರೇಶ್ ಮುಳ್ಳೂರು, ವಿಪ್ರ ಜಾಗೃತಿ ವೇದಿಕೆ ಉಪಾಧ್ಯಕ್ಷರಾದ ನಾಗರಾಜ್, ಮುರುಗೇಶ್, ಎಂ.ವಿ.ಮಂಜುನಾಥ್, ವಿಪ್ರ ಜಾಗೃತಿ ವೇದಿಕೆ ನಿರ್ದೇಶಕ ಸುಚೀಂದ್ರ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

20.09.2022 ಮಂಗಳವಾರ, ಮಳೆ ನಕ್ಷತ್ರ: ಉತ್ತರ 14.09.2022 ರಿಂದ 26.09.2022
ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಕೃಷ್ಣ ಪಕ್ಷ,
ತಿಥಿ : ದಶಮಿ, ನಕ್ಷತ್ರ : ಪುನರ್ವಸು, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

■ **ಅಖಿಲ ಭಾರತ ವೀರಶೈವ ಮಹಾಸಭಾ ಯುವ ಘಟಕ :** ಉದ್ಯೋಗ ಮೇಳ, ಉದ್ಘಾಟನೆ : ರೊಟರಿ ಜಿಲ್ಲಾಧ್ಯಕ್ಷ ಕೇಶವ ಹೆಚ್.ಆರ್., ಮುಖ್ಯ ಅತಿಥಿಗಳು : ಯುವ ಘಟಕದ ಅಧ್ಯಕ್ಷ ಮೂರ್ತಿ, ನಿರ್ಮಲ ಆಸ್ಪತ್ರೆ ನಿರ್ದೇಶಕ ಬಸವರಾಜ್, ಉದ್ಯಮಿ ಚೆನ್ನಪ್ಪಾಜಿ, ಅನಗ ಆಸ್ಪತ್ರೆ ನಿರ್ದೇಶಕ ಮಹೇಶ್, ರೋಟರಿ ಮೈಸೂರು ಅಧ್ಯಕ್ಷ ಜಗದೀಶ್, ಲಯನ್ಸ್ ಕ್ಲಬ್ ಬಾಂಧವ್ಯ ಅಧ್ಯಕ್ಷ ಲಯನ್ ಎನ್.ಎಸ್. ನಂಜುಂಡಸ್ವಾಮಿ, ಸ್ಥಳ: ಆರಾಧ್ಯ ಮಹಾಸಭಾ, ಜೆಎಲ್‌ಬಿ ರಸ್ತೆ, ಬೆಳಗ್ಗೆ 9.30 ರಿಂದ.

■ **ರಾಮ್‌ಸನ್ಸ್ ಕಲಾ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.

■ **ಜೆಎಸ್‌ಎಸ್ ಅರ್ಬನ್ ಹಾತ್ :** ಗಾಂಧಿ ಶಿಲ್ಪ ಬಜಾರ್, ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10 ರಿಂದ.

■ **ಪರಿವರ್ತನ ರಂಗ ಸಮಾಜ, ಜಿಲ್ಲಾ ಪತ್ರಕರ್ತರ ಸಂಘ :** ಪತ್ರಕರ್ತ ರಾಮಚಂದ್ರ ಗಂಗಾ ಅವರು ರಚಿಸಿರುವ 'ಒಡಲ ಒಗಟು' ಪುಸ್ತಕ ಬಿಡುಗಡೆ ಸಮಾರಂಭ, ಪುಸ್ತಕ ಬಿಡುಗಡೆ : ಹಿರಿಯ ಪತ್ರಕರ್ತ ಮಳಲಿ ನಟರಾಜ್‌ಕುಮಾರ್, ಮುಖ್ಯ ಅತಿಥಿಗಳು : ರಂಗ ಸಂಘಟಕ ಮಾಧವ ಖರೆ, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಸ್ಥಳ: ಪತ್ರಕರ್ತರ ಭವನ, ತ್ಯಾಗರಾಜ ರಸ್ತೆ, ಬೆಳಗ್ಗೆ 11ಕ್ಕೆ.

■ **ಮೈಸೂರು ಜಿಲ್ಲಾ ತೋಟದ ಬೆಳೆಗಾರರ ಮಾರಾಟ ಮತ್ತು ಸಂಸ್ಕರಣ ಸಹಕಾರ ಸಂಘ :** ಸರ್ವ ಸದಸ್ಯರ ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಎಂ.ಟಿ. ಅಣ್ಣೇಗೌಡ, ಸ್ಥಳ: ಮೈಸೂರು ಮೆಡಿಕಲ್ ಕಾಲೇಜು ಅಮೃತ ಮಹೋತ್ಸವ ಭವನ, ಬೆಳಗ್ಗೆ 11ಕ್ಕೆ.

■ **ಜೀವಧಾರ ರಕ್ತನಿಧಿ ಕೇಂದ್ರ, ದೇವರಾಜ ಮೊಹಲ್ಲಾ ನಾಗರಿಕ ವೇದಿಕೆ:** ವಿಶ್ವಕರ್ಮ ದಿನಾಚರಣೆ ಅಂಗವಾಗಿ ಹಿರಿಯ ಶಿಲ್ಪಿಗಳಿಗೆ ಸನ್ಮಾನ, ಮುಖ್ಯ ಅತಿಥಿಗಳು: ಶಾಸಕ ಎಲ್. ನಾಗೇಂದ್ರ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ಪಾಲಿಕೆ ಸದಸ್ಯೆ ರಮಣಿ, ರಿಷಿ ವಿಶ್ವಕರ್ಮ, ಅರ್ಚಕರ ಸಂಘದ ಅಧ್ಯಕ್ಷ ಕೃಷ್ಣಮೂರ್ತಿ, ಕಾಂಗ್ರೆಸ್ ಮುಖಂಡ ಎನ್.ಎಂ. ನವೀನ್ ಕುಮಾರ್, ಸ್ಥಳ: ಪಂಚಮುಖಿ ಆಂಜನೇಯ ದೇವಸ್ಥಾನದ ಆವರಣ, ಇರ್ವಿನ್ ರಸ್ತೆ, ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.35 ಶ್ರದ್ಧೆಯ ಶಿಲ್ಪ–ಮೈಸೂರು ಸುತ್ತಲಿನ ದೇಗುಲಗಳ ಪರಿಚಯ, ಪ್ರಸ್ತುತಿ– ಡಾ.ಟಿ.ಎಸ್.ಗೋಪಾಲ್, 6.40 ಅರಿವಿನ ಶಿಖರ, ಗಾಯನ– ನಿತಿನ್ ರಾಜಾರಾಂಶಾಸ್ತ್ರಿ, ಕೆ.ಬಿ. ಸುನೀತಾ ಆಚಾರ್ಯ, ವ್ಯಾಖ್ಯಾನ– ಡಾ. ಲತಾ ಮೈಸೂರು, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ– ದೂರ ಸರಿದರು ಕಾದಂಬರಿಯ ಪ್ರಸ್ತುತಿ– ಉಮೇಶ್.ಎಸ್., 9.00 ವೃತ್ತಿ ಮಾರ್ಗದರ್ಶನ –ಬ್ಯಾಚುಲರ್ ಆಫ್ ವೊಕೇಶನಲ್ ಕೋರ್ಸ್ ಇನ್ ಮೀಡಿಯಾ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ರವಿರಾಜ್ ಐ.ವಡಿಗೇರಿ ಅವರೊಂದಿಗೆ ಮಾತುಕತೆ, 10.00 ಗಾನರಸೋತ್ತುಂಗ ಶ್ರೀ ಶ್ಯಾಮಕೃಷ್ಣ–ಶ್ಯಾಮಾಶಾಸ್ತ್ರಿಗಳ ರಚನೆಗಳನ್ನಾಧರಿಸಿದ ಕಾರ್ಯಕ್ರಮ ಸರಣಿ

ಮಧ್ಯಾಹ್ನ: 12.05 ವನಿತಾವಿಹಾರ–ಸ್ತ್ರೀ ಚೇತನ, ಲೇಖಕಿ ಹಾಗೂ ಸಸ್ಯಶಾಸ್ತ್ರಜ್ಞೆ ಪದ್ಮಾ ಶ್ರೀರಾಂ ಅವರೊಂದಿಗೆ ಮಾತುಕತೆ, 12.30 ದೇವರನಾಮ–ಎಂ. ವೆಂಕಟೇಶ್ ಕುಮಾರ್, ರೂಪ ಮತ್ತು ದೀಪ, 12.45 ಗ್ರಾಮೀಣ ಆರೋಗ್ಯ–ನರ್ಸಿಂಗ್ ಕೌಶಲ ಕುರಿತು ಡಾ.ಎಂ.ಆರ್. ಸೀತಾರಾಂ ಅವರೊಂದಿಗೆ ಸಂದರ್ಶನ. ಸಂದರ್ಶಕರು– ದಿವಾಕರ ಹೆಗಡೆ, 1.20 ಭಾವಗೀತೆ, 3.00 ಬಿ. ದೇವೇಂದ್ರಪ್ಪ–ಜಲತರಂಗ ವಾದನ, 4.00 ಕಥಾ ಕಾಲಕ್ಷೇಪ 'ಭಕ್ತ ಭೀಷ್ಮ', ಪ್ರಸ್ತುತಿ– ವಿದ್ವಾನ್ ಭದ್ರಗಿರಿ ಅಚ್ಯುತದಾಸರು, 6.50ಕೃಷಿರಂಗ–ಕಿಸಾನ್ ವಾಣಿ– ಹೈನುರಾಸುಗಳಲ್ಲಿ ಆಹಾರ ನಿರ್ವಹಣೆ ಕುರಿತು ಡಾ.ಕೆ.ಎ. ದರ್ಶನ್ ಅವರೊಂದಿಗೆ ಸಂದರ್ಶನ, 9.30 ಶ್ರೀ ವಿದ್ಯ ಮತ್ತು ವಿಜಯಶ್ರೀ ವೈದ್ಯನಾಥನ್ –ಯುಗಳ ಗಾಯನ, 10.00 ಕಾವ್ಯವಾಚನ

■ **ಮೈಸೂರು ವಿಶ್ವವಿದ್ಯಾನಿಲಯ, ದೈಹಿಕ ಶಿಕ್ಷಣ ವಿಭಾಗ :** ಅಖಿಲ ಭಾರತ ಅಂತರ ವಿಶ್ವವಿದ್ಯಾನಿಲಯ ಕ್ರೀಡಾ ಸ್ಪರ್ಧೆ ಮತ್ತು 2ನೇ ಖೇಲೋ ಇಂಡಿಯಾ ವಿಶ್ವವಿದ್ಯಾನಿಲಯ ಕ್ರೀಡಾಸ್ಪರ್ಧೆಗಳಲ್ಲಿ ಪದಕ ಗಳಿಸಿದವರಿಗೆ ಸನ್ಮಾನ ಮತ್ತು ವಿಶ್ವವಿದ್ಯಾನಿಲಯ ಅಂತರ ಕಾಲೇಜು ಕ್ರೀಡಾ ಸ್ಪರ್ಧೆಗಳಲ್ಲಿ ಬಹುಮಾನ ಗಳಿಸಿದವರಿಗೆ ನಗದು ಬಹುಮಾನ ವಿತರಣಾ ಸಮಾರಂಭ, ಬಹುಮಾನ ವಿತರಣೆ : ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಜಿ.ಹೇಮಂತ್‌ಕುಮಾರ್, ಮುಖ್ಯ ಅತಿಥಿಗಳು : ಕುಲಸಚಿವ ಪ್ರೊ. ಶಿವಪ್ಪ ಆರ್., ಹಣಕಾಸು ಅಧಿಕಾರಿ ಡಾ. ಸಂಗೀತ ಗಜಾನನ ಭಟ್, ಸ್ಥಳ: ದೈಹಿಕ ಶಿಕ್ಷಣ ವಿಭಾಗ, ಸಂಜೆ 4ಕ್ಕೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಪಂಡಿತ್ ಶ್ರೀ ವ್ಯಾಸತೀರ್ಥಾಚಾರ್ ಅವರಿಂದ ಜಗನ್ನಾಥ ದಾಸರ ವಿರಚಿತ ಕೃತಿ 'ಫಲವಿದು ಬಾಳ್ವುದಕೆ' ಕುರಿತು ಪ್ರವಚನ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿಗಳ ಮಠ, ಜಯಲಕ್ಷ್ಮಿಪುರಂ, ಸಂಜೆ 5 ರಿಂದ.

■ **ರಂಗಾಯಣ, ಮೈಸೂರು :** ಭಾರತೀಯ ರಂಗ ಸಂಗೀತೋತ್ಸವ, ಸಂಗೀತ ನಿರ್ದೇಶಕ ಶ್ರೀನಿವಾಸ ಭಟ್ (ಚೀನಿ) ಅವರಿಂದ ರಂಗ ಸಂಗೀತ ಮತ್ತು ರಂಗಗೀತೆಗಳು ಸ್ಥಳ: ಭೂಮಿಗೀತ, ಸಂಜೆ 6.30 ಗಂಟೆಗೆ.

■ **ಗಾನಭಾರತಿ, ಕರ್ನಾಟಕ ಸಂಗೀತ ಅಕಾಡೆಮಿ :** ಸಂಜೆ 6 ರಿಂದ ವಿದುಷಿ ಶಾರದಾಂಬ ಅವರ ಶಿಷ್ಯ ವೃಂದದವರಿಂದ ಗಾಯನ, ವಿದ್ವಾನ್ ಸ್ಕಂದ ಪಿ. ಕುಮಾರ್ –ಪಿಟೀಲು, ಎಂ.ಸಿ. ಸುಮುಖಶೇಷ–ಮೃದಂಗ, ಸಂಜೆ 7 ರಿಂದ ವಿದ್ವಾನ್ ಎಂ.ಎಸ್.ತ್ಯಾಗರಾಜನ್ –ಪಿಟೀಲು, ವಿದ್ವಾನ್ ವಿ.ಎಸ್. ರಮೇಶ್ –ಮೃದಂಗ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ.

■ **ಚಿನ್ಮಯ ಮಿಷನ್ :** ಜ್ಞಾನ ಯಜ್ಞ, ಸಂಜೆ 6 ರಿಂದ ಸಾಮೂಹಿಕ ವಿಷ್ಣು ಸಹಸ್ರನಾಮ, ಸಂಜೆ 6.30 ರಿಂದ ಸ್ವಾಮಿ ಗಹನಾನಂದಜೀ ಅವರಿಂದ ಶ್ರೀ ಆದಿಶಂಕರಾಚಾರ್ಯರ ಸಾಧನಾ ಪಂಚಕ ಕುರಿತು ಉಪನ್ಯಾಸ, ಸ್ಥಳ: ಶ್ರೀ ಗುರುದೇವ ದತ್ತ ಸನ್ನಿಧಿ, 148, 6ನೇ ಮುಖ್ಯ ರಸ್ತೆ, ಗೋಕುಲಂ 3ನೇ ಹಂತ.

ನಾಳೆ, ನಾಡಿದ್ದು ಶಾಲಾ ಮಕ್ಕಳಿಗೆ ವಾಲಿಬಾಲ್ ಪಂದ್ಯಾವಳಿ

ಮೈಸೂರು, ಸೆ.19– ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಉತ್ತರ ವಲಯದ ವತಿಯಿಂದ 14 ರಿಂದ 17 ವರ್ಷದೊಳಗಿನ ಜಿಲ್ಲಾ ಮಟ್ಟದ ಪ್ರಾಥಮಿಕ ಹಾಗೂ ಪ್ರೌಢಶಾಲಾ ವಾಲಿಬಾಲ್ ಪಂದ್ಯಾವಳಿಯನ್ನು ಆಯೋಜಿಸಲಾಗಿದೆ.

ನಗರದ ಬೃಂದಾವನ ಬಡಾವಣೆಯ ಕುವೆಂಪು ಬೃಂದಾವನ ಪ್ರೌಢಶಾಲೆ ಆವರಣದಲ್ಲಿ ಸೆ.21ರಂದು ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಯ ಬಾಲಕಿಯರಿಗೆ ಹಾಗೂ ಸೆ.22ರಂದು ಬಾಲಕರಿಗೆ ವಾಲಿಬಾಲ್ ಪಂದ್ಯಾವಳಿ ನಡೆಯಲಿದ್ದು, ಜಿಲ್ಲೆಯ ವಿವಿಧ ತಾಲೂಕು ಮಟ್ಟದಲ್ಲಿ ಪ್ರಥಮ ಸ್ಥಾನ ಗಳಿಸಿದ ತಂಡಗಳು ಮಾತ್ರ ಭಾಗವಹಿಸಬಹುದು.. ಈ ಸಂಬಂಧ ವಿಜೇತ ತಂಡಗಳು ಪಂದ್ಯಾವಳಿಯ ದಿನದಂದು ಬೆಳಗ್ಗೆ 9 ಗಂಟೆಗೆ ಉತ್ತರ ವಲಯದ ದೈಹಿಕ ಪರಿವೀಕ್ಷಕರಲ್ಲಿ ವರದಿ ಮಾಡಿಕೊಳ್ಳುವಂತೆ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ರಾಜಮನೆತನದ ಸಂಪ್ರದಾಯದಂತೆ 2ನೇ ಎಲಿಜಬೆತ್ ಅಂತ್ಯಕ್ರಿಯೆ

ಲಂಡನ್: ಸುದೀರ್ಘ ಅವಧಿಗೆ ಬ್ರಿಟನ್‌ನ ರಾಣಿಯಾಗಿದ್ದ 2ನೇ ಎಲಿಜಬೆತ್ ಅವರ ಅಂತ್ಯಕ್ರಿಯೆ ವಿಧಿ ವಿಧಾನಗಳು ಸೋಮವಾರ ರಾಜಮನೆತನದ ಸಂಪ್ರದಾಯ, ಸರ್ಕಾರಿ ಗೌರವದೊಂದಿಗೆ ಇಲ್ಲಿನ ವೆಸ್ಟ್‌ಮಿನಿಸ್ಟರ್ ಅಬೆಯಲ್ಲಿ ನಡೆಯಿತು.

ಬ್ರಿಟನ್ ಪ್ರಜೆಗಳ ಗೌರವ ನಮನ, ದುಃಖದೊಂದಿಗೆ ರಾಣಿಗೆ ವಿದಾಯ ಹೇಳಿದರು. ರಾಷ್ಟ್ರಪತಿ ದ್ರೌಪದಿ ಮುರ್ಮು, ಅಮೆರಿಕ ಅಧ್ಯಕ್ಷ ಜೋ ಬೈಡನ್ ಸೇರಿ ವಿವಿಧ ರಾಷ್ಟ್ರಗಳ 500ಕ್ಕೂ ಹೆಚ್ಚು ನಾಯಕರು ರಾಣಿಯ ಅಂತಿಮಯಾತ್ರೆಗೆ ಸಾಕ್ಷಿಯಾದರು.

ಸುಮಾರು 70 ವರ್ಷ ಬ್ರಿಟನ್‌ನ ರಾಣಿಯಾಗಿದ್ದ 96 ವರ್ಷದ 2ನೇ ಎಲಿಜಬೆತ್ ಅವರು ಈ ಮೂಲಕ ಇತಿಹಾಸದ ಪುಟ ಸೇರಿದರು. ಅಲ್ಪಕಾಲದ ಅಸ್ವಸ್ಥತೆಯ ನಂತರ ಸೆ. 8ರಂದು ತಮ್ಮ ಬಲ್‌ಮೋಹರ್ ಕ್ಯಾಸ್ಟಲ್ ನಿವಾಸದಲ್ಲಿ ಮೃತಪಟ್ಟಿದ್ದರು. ಸೋಮವಾರ ಬೆಳಿಗ್ಗೆ 6.30 ಗಂಟೆಗೆ ಅಂತ್ಯಕ್ರಿಯೆ ವಿಧಿವಿಧಾನಗಳು ಆರಂಭವಾದವು. ಸರ್ಕಾರಿ ಗೌರವದೊಂದಿಗೆ ಭಾರತೀಯ ಕಾಲಮಾನ ಮಧ್ಯಾಹ್ನ 3.30ಕ್ಕೆ ಅಂತ್ಯಕ್ರಿಯೆ ನಡೆಯಿತು.



ನೇರ ಪ್ರಸಾರ: ಅಂತ್ಯಕ್ರಿಯೆ ವಿಧಿವಿಧಾನಗಳನ್ನು ಸುಮಾರು 125 ಸಿನಿಮಾ ಮಂದಿರಗಳು, ಹಲವು ಕ್ಯಾಥೆಡ್ರಲ್‌ಗಳಲ್ಲಿ ನೇರ ಪ್ರಸಾರ ಮಾಡಲಾಯಿತು. ಹಾಲಿರೂಡ್ ಪಾರ್ಕ್‌ನಲ್ಲಿ ವಿಶಾಲ ಪರದೆ ಅಳವಡಿಸಲಾಗಿತ್ತು. ಅಂತ್ಯಕ್ರಿಯೆಗೆ ಸ್ವಲ್ಪ ಮೊದಲು ರಾಜಮನೆತನದವರು ರಾಣಿ 2ನೇ ಎಲಿಜಬೆತ್ ಅವರ ಕೊನೆಯ ಭಾವಚಿತ್ರವನ್ನು ಬಿಡುಗಡೆ ಮಾಡಿದರು. ತಿಳಿ ನೀಲಿ ಉಡುಪಿನಲ್ಲಿ ಹಸನ್ಮುಖಿ ಭಾವದಲ್ಲಿದ್ದ ರಾಣಿಯ ಚಿತ್ರ ಅದಾಗಿತ್ತು. ಬ್ರಿಟನ್ ಪ್ರಧಾನಿ ಲಿಜ್ ಟ್ರಸ್, ಕಾಮನ್‌ವೆಲ್ತ್‌ನ ಪ್ರಧಾನ ಕಾರ್ಯದರ್ಶಿ ಬರೊನೆಸ್ ಪ್ಯಾಟ್ರಿಕಾ ಅವರು ರಾಣಿಯ ಸೇವೆಯನ್ನು ಸ್ಮರಿಸುವ ಅಧ್ಯಾಯಗಳನ್ನು ಓದಿದರು.

ಸಾಂಪ್ರದಾಯಿಕ ಗೌರವ ಸಲ್ಲಿಸುವ ಕಾರ್ಯದಲ್ಲಿ ಸುಮಾರು 4,000 ಸೇನಾ ಯೋಧರು ಭಾಗವಹಿಸಿದ್ದರು. ಈ ಹಿಂದೆ ಇಂತಹದೇ ಸರ್ಕಾರಿ ಗೌರವವನ್ನು 1965ರಲ್ಲಿ ನಿಧನರಾಗಿದ್ದ ಮಾಜಿ ಪ್ರಧಾನಿ ವಿನ್‌ಸ್ಟನ್ ಚರ್ಚಿಲ್ ಅವರಿಗೆ ನೀಡಲಾಗಿತ್ತು. ಸೇಂಟ್ ಜಾರ್ಜ್ ಚಾಪಲ್‌ನಲ್ಲಿ, ರಾಣಿಯ ಪತಿ ರಾಜ ಫಿಲಿಪ್‌ರ ಅಂತ್ಯಕ್ರಿಯೆ ನಡೆಸಿದ್ದ ಸ್ಥಳದ ಪಕ್ಕದಲ್ಲೇ ರಾಣಿ 2ನೇ ಎಲಿಜಬೆತ್ ಅವರ ಶರೀರವನ್ನು ಸಮಾಧಿ ಮಾಡಲಾಯಿತು. ರಾಜ ಫಿಲಿಪ್ 99ನೇ ವಯಸ್ಸಿನಲ್ಲಿ ಏ.9, 2021ರಂದು ಮೃತಪಟ್ಟಿದ್ದರು.

ಅಂತ್ಯಕ್ರಿಯೆ ವಿಧಿವಿಧಾನ ಅಂತ್ಯಗೊಂಡ ಸೂಚನೆಯಾಗಿ ಇಂಗ್ಲೆಂಡ್‌ನ ರಾಷ್ಟ್ರಗೀತೆಯನ್ನು ನುಡಿಸಲಾಯಿತು. ರಾಣಿಯ ಗೌರವಾರ್ಥ ದೇಶದಾದ್ಯಂತ ಎರಡು ನಿಮಿಷ ಮೌನ ವಹಿಸಲಾಗಿತ್ತು.



ದಶಕದ ಹಿಂದೆಯೇ ಸಿದ್ಧವಾಗಿದ್ದ ಶವಪೆಟ್ಟಿಗೆ: ರಾಣಿ 2ನೇ ಎಲಿಜಬೆತ್ ಅವರ ಪಾರ್ಥಿವ ಶರೀರ ಇಡಲಾಗಿದ್ದ ಶವಪೆಟ್ಟಿಗೆಯನ್ನು, ರಾಜಮನೆತನದ ಸ್ಯಾಂಡ್ರಿಂಗ್ ಹ್ಯಾಮ್ ಎಸ್ಟೇಟ್‌ನಲ್ಲಿ ಬೆಳೆದಿದ್ದ ಓಕ್ ಮರ ಬಳಸಿ ನಿರ್ಮಿಸಿದ್ದು, ಅಂಚುಗಳಲ್ಲಿ ಲೆಡ್‌ನ ಹಾಳೆ ಅಳವಡಿಸಲಾಗಿತ್ತು.

ಹೆನ್ರಿ ಸ್ಮಿತ್ ಅವರು ದಶಕದ ಹಿಂದೆಯೇ ಶವಪೆಟ್ಟಿಗೆ ನಿರ್ಮಿಸಿದ್ದರು. ಅಂತ್ಯಕ್ರಿಯೆ ವಿಧಿ ಉಸ್ತುವಾರಿ ವಹಿಸುವ ಎರಡು ಸಂಸ್ಥೆಗಳ ಉಸ್ತುವಾರಿಯಲ್ಲಿ ಇದನ್ನು ಇರಿಸಲಾಗಿತ್ತು. ಬಾಹ್ಯ ಕವಚ ಓಕ್ ಮರದ್ದಾಗಿದ್ದರೆ, ಒಳಗಿನ ಆವರಣ ಲೆಡ್ ಹಾಳೆಗಳನ್ನು ಆವರಿಸಿತ್ತು. ಸಹಜವಾಗಿಯೇ ಶವಪೆಟ್ಟಿಗೆಯ ತೂಕ ಸಾಮಾನ್ಯ ದಕ್ಕಿಂತಲೂ ಹೆಚ್ಚಿತ್ತು. ಹೀಗಾಗಿ, ಆರು ಜನರ ಬದಲಿಗೆ ಸೇನಾಪಡೆಗಳ ಎಂಟು ಯೋಧರನ್ನು ಇದನ್ನು ಹೊರಲು ನಿಯೋಜಿಸಲಾಗಿತ್ತು. ಈ ಹಿಂದೆ ಮಾಜಿ ಪ್ರಧಾನಿ ವಿನ್‌ಸ್ಟನ್ ಚರ್ಚಿಲ್, ರಾಜ ಫಿಲಿಪ್, ರಾಣಿ ಡಯಾನಾ ಅವರ ಪಾರ್ಥಿವ ಶರೀರ ಸಾಗಣೆಗೆ ಇಂತಹುದೇ ಶವಪೆಟ್ಟಿಗೆ ರಚಿಸಲಾಗಿತ್ತು. ಶವವು ತ್ವರಿತವಾಗಿ ಕೊಳೆಯದೇ ಎಷ್ಟು ಸಾಧ್ಯವೋ ಅಷ್ಟು ದಿನ ಹಾಗೆಯೇ ಇರಬೇಕು ಎಂಬುದು ಇಂತಹ ಶವಪೆಟ್ಟಿಗೆಯನ್ನು ನಿರ್ಮಿಸುವುದರ ಉದ್ದೇಶವಾಗಿದೆ.



ಕಳೆದ 20 ವರ್ಷಗಳಿಂದ ರಜೆಯನ್ನೇ ತೆಗೆದುಕೊಳ್ಳದೆ ನಿರಂತರವಾಗಿ ಸ್ವಯಂ ಕಾರ್ಯ ನಿರ್ವಹಿಸುತ್ತಾ ಬಂದಿರುವ ಮೈಸೂರಿನ ಸಂದೇಶ್ ದಿ ಪ್ರಿನ್ಸ್ ಸಿಬ್ಬಂದಿ ಎಮ್.ಎಲ್. ಶಿವಪ್ರಕಾಶ್ ಅವರನ್ನು ಹೋಟೆಲ್ ಎಂಡಿ ಎಂ. ಸಂದೇಶ್ ಹಾಗೂ ಕನ್ನಡದ ಖ್ಯಾತ ಹಾಸ್ಯ ನಟ ಸಾಧುಕೋಕಿಲ ಆತ್ಮೀಯವಾಗಿ ಅಭಿನಂದಿಸಿ, ನೆನಪಿನ ಕಾಣಿಕೆ ನೀಡಿದರು. ಈ ಸಂದರ್ಭದಲ್ಲಿ ಹೋಟೆಲ್ ಇನ್ನಿತರ ಸಿಬ್ಬಂದಿ ಉಪಸ್ಥಿತರಿದ್ದಾರೆ. ಈಗಾಗಲೇ ಶಿವಪ್ರಕಾಶ್ ಅವರನ್ನು ಹಲವು ಸಂಘಸಂಸ್ಥೆಗಳು ಸನ್ಮಾನಿಸಿವೆ.

ಸ್ಪಂದನ ಸಂಸ್ಥೆ ನೇತೃತ್ವದಲ್ಲಿ ವೈದ್ಯರಿಂದ ಮೇಯರ್ ಶಿವಕುಮಾರ್‌ಗೆ ಸನ್ಮಾನ



ಮೈಸೂರು, ಸೆ.19(ಪಿಎಂ)– ಕುವೆಂಪು ನಗರದ ಸ್ಪಂದನಾ ಸಂಸ್ಥೆ ವತಿಯಿಂದ ಮೇಯರ್ ಶಿವಕುಮಾರ್ ಅವರನ್ನು ಸೋಮವಾರ ಸನ್ಮಾನಿಸಲಾಯಿತು.

ಸಂಸ್ಥೆ ಅಧ್ಯಕ್ಷ ಎಂ.ಜಯಶಂಕರ್, ಮಕ್ಕಳ ತಜ್ಞ ಡಾ.ಪ್ರಭುಲಿಂಗಸ್ವಾಮಿ, ಕ್ಷ–ಕಿರಣ ನುರಿತ ತಜ್ಞ ಡಾ.ಕೆ.ಆರ್.ಕುಮಾರಸ್ವಾಮಿ, ಮೂಳೆ ತಜ್ಞರಾದ ಡಾ.ಮರುಳಸಿದ್ದಪ್ಪ, ಡಾ.ಕೃಷ್ಣಮೂರ್ತಿ, ಪ್ರೊ.ರತ್ನಾಶೇಖರ್, ನಿವೃತ್ತ ಹಿರಿಯ ಅಧಿಕಾರಿ ಪುಟ್ಟರಾಜು, ಇಂಜನಿಯರ್ ಶ್ರೀಧರಮೂರ್ತಿ ಮತ್ತು ಪ್ರಕಾಶ್ ಅವರು ಕುವೆಂಪುನಗರದಲ್ಲಿರುವ ಮೇಯರ್ ಅವರ ನಿವಾಸಕ್ಕೆ ಭೇಟಿ ನೀಡಿ, ಸನ್ಮಾನಿಸಿದರು.

ಶಿವಕುಮಾರ್ ಅವರು ಇತ್ತೀಚೆಗಷ್ಟೇ ಮೇಯರ್ ಆಗಿ ಆಯ್ಕೆಯಾದ ಹಿನ್ನೆಲೆಯಲ್ಲಿ ಇಂದು ಈ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ದಸರಾ ಹಿನ್ನೆಲೆಯಲ್ಲಿ ರಸ್ತೆಗಳ ದುರಸ್ತಿ, ನಗರದ ಸಮಗ್ರ ಅಭಿವೃದ್ಧಿಗೆ ಮುಂದಿನ ಯೋಜನೆಗಳು ಮೊದಲಾದ ವಿಚಾರಗಳನ್ನು ಮೇಯರ್ ಇದೇ ವೇಳೆ ಹಂಚಿಕೊಂಡರು.

ಇದೇ ಸಂದರ್ಭದಲ್ಲಿ ಸ್ಪಂದನ ಸಂಸ್ಥೆ ಅಧ್ಯಕ್ಷ ಜಯಶಂಕರ್ ಮಾತನಾಡಿ, ಕುವೆಂಪುನಗರದ ನಿವಾಸಿಗಳೆಲ್ಲಾ ಮೇಯರ್ ಶಿವಕುಮಾರ್ ಅವರ ಬಗ್ಗೆ ಮೆಚ್ಚುಗೆ ಮಾತುಗಳನ್ನು ಆಡಿರುವುದನ್ನು ಸ್ವತಃ ಕೇಳಿದ್ದೇನೆ. ಇವರು ಬಸವಣ್ಣ, ಅಂಬೇಡ್ಕರ್ ಮತ್ತು ಕುವೆಂಪು ಅವರ ಆದರ್ಶಗಳನ್ನು ಅಳವಡಿಸಿಕೊಂಡು ಮುನ್ನಡೆಯುತ್ತಿದ್ದಾರೆ ಎಂದು ಅಭಿಮಾನ ವ್ಯಕ್ತಪಡಿಸಿದರಲ್ಲದೆ, ದೂರವಾಣಿ ಕರೆ ಮಾಡಿದರೆ ತಕ್ಷಣ ಸ್ಪಂದಿಸುತ್ತಾರೆ. ಇವರು ಮೇಯರ್ ಆಗಿರುವುದು ಮೈಸೂರಿನ ಅಭಿವೃದ್ಧಿಗೆ ಪೂರಕವಾಗಲಿದೆ ಎಂದರು.

ಲಂಚ ಪಡೆದ ಆರೋಪದಲ್ಲಿ ಎಫ್ಐಆರ್ ದಾಖಲು

ಸಚಿವ ಎಸ್.ಟಿ.ಸೋಮಶೇಖರ್ ರಾಜೀನಾಮೆಗೆ ಪಕ್ಷದಲ್ಲೇ ಒತ್ತಡ

ಬೆಂಗಳೂರು, ಸೆ.19(ಕೆಎಂಶಿ)–ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಕಟ್ಟಡ ನಿರ್ಮಾಣ ಕಾರ್ಯವನ್ನು ಗುತ್ತಿಗೆಗೆ ನೀಡುವಾಗ ಲಂಚ ಪಡೆದಿದ್ದಾರೆ ಎಂಬ ಆರೋಪಕ್ಕೆ ಗುರಿಯಾಗಿರುವ ಮೈಸೂರು ಜಿಲ್ಲಾ ಉಸ್ತುವಾರಿ, ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಅವರ ರಾಜೀನಾಮೆ ಪಡೆಯುವಂತೆ ಸ್ವಪಕ್ಷೀಯರೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಮೇಲೆ ಒತ್ತಡ ಹೇರಿದ್ದಾರೆ.



ಕಟ್ಟಡ ನಿರ್ಮಾಣ ಕಾರ್ಯವೊಂದನ್ನು ಗುತ್ತಿಗೆ ನೀಡುವಾಗ ಲಂಚ ಪಡೆದರು ಎಂಬ ಆರೋಪಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸುವಂತೆ ಜನಪ್ರತಿನಿಧಿಗಳ ನ್ಯಾಯಾಲಯ ಲೋಕಾಯುಕ್ತಕ್ಕೆ ಆದೇಶ ನೀಡಿತ್ತು. ನ್ಯಾಯಾಲಯದ ಸೂಚನೆಯ ಹಿನ್ನೆಲೆಯಲ್ಲಿ ಲೋಕಾಯುಕ್ತ ಇದೀಗ ಸಚಿವ ಎಸ್.ಟಿ.ಸೋಮಶೇಖರ್ ಅವರ ವಿರುದ್ಧ ಎಫ್ಐಆರ್ ದಾಖಲಿಸಿದ್ದು, ಈ ಹಿನ್ನೆಲೆಯಲ್ಲಿ ಅವರನ್ನು ಸಂಪುಟದಿಂದ ಕೈ ಬಿಡುವಂತೆ ಒತ್ತಡ ಹೆಚ್ಚಿದೆ.

ಈ ಹಿಂದೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾಗಿದ್ದ ಕೆ.ಎಸ್.ಈಶ್ವರಪ್ಪ ಅವರ ವಿರುದ್ಧ ಆರೋಪ ಹೊರಿಸಿ ಗುತ್ತಿಗೆದಾರ ಸಂತೋಷ್ ಆತ್ಮಹತ್ಯೆ ಮಾಡಿಕೊಂಡ ಪ್ರಕರಣದ ಹಿನ್ನೆಲೆಯಲ್ಲಿ ಎಫ್ಐಆರ್ ದಾಖಲಾದಾಗ ಅವರು ಮಂತ್ರಿ ಪದವಿಗೆ ರಾಜೀನಾಮೆ ನೀಡಿದ್ದರು. ಕೆ.ಎಸ್.ಈಶ್ವರಪ್ಪ ಅವರು ತಮ್ಮ ವಿರುದ್ಧದ ಆರೋಪವನ್ನು ನಿರಾಕರಿಸಿ ಮಂತ್ರಿ ಪದವಿಗೆ ರಾಜೀನಾಮೆ ನೀಡಲು ನಿರಾಕರಿಸಿದ್ದರಾದರೂ, ಮುಖ್ಯಮಂತ್ರಿಗಳು ಬಲವಂತವಾಗಿ ಅವರ ರಾಜೀನಾಮೆ ಪಡೆದಿದ್ದರು. ಅವರಿಂದ ರಾಜೀನಾಮೆ ಪಡೆಯುವಂತೆ ವರಿಷ್ಠರು ನೀಡಿದ ಸೂಚನೆಯ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳು ಈ ಕೆಲಸ ಮಾಡಿದ್ದರು. ಈಶ್ವರಪ್ಪ ಅವರಿಗೆ ಅನ್ವಯವಾದ ಮಾನದಂಡ ಸೋಮಶೇಖರ್ ಅವರಿಗೂ ಅನ್ವಯವಾಗಬೇಕು ಎಂಬುದು ಬಿಜೆಪಿಯ ಹಲವು ಶಾಸಕರ ವಾದ.

ಜಲಸಂಪನ್ಮೂಲ ಸಚಿವ ರಮೇಶ್ ಜಾರಕಿಹೊಳಿ ಕೂಡ ಹೀಗೆಯೇ ಮಂತ್ರಿ ಪದವಿಗೆ ರಾಜೀನಾಮೆ ನೀಡಿದ್ದರು. ಇದೇ ರೀತಿ ವಿವಿಧ ಆರೋಪಗಳ ಹಿನ್ನೆಲೆಯಲ್ಲಿ ಹಿಂದೆ ಮಂತ್ರಿಗಳಾಗಿದ್ದ ಹರತಾಳು ಹಾಲಪ್ಪ ಕೂಡ ಮಂತ್ರಿ ಪದವಿಗೆ ರಾಜೀನಾಮೆ ನೀಡಿದ್ದರು. ಹೀಗಾಗಿ ನೈತಿಕ ಹೊಣೆ ಹೊತ್ತು ಕೂಡಲೇ ಅಂತಹವರು ರಾಜೀನಾಮೆ ನೀಡುವುದು ಸತ್ಸಂಪ್ರದಾಯ. ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಪ್ರಕರಣ ಇದಕ್ಕೆ ಹೊರತಾಗಿರಬಾರದು ಎಂದು ಸ್ವಪಕ್ಷೀಯರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಮೇಲೆ ಒತ್ತಡ ಹೇರಿದ್ದಾರೆ ಎಂದು ಉನ್ನತ ಮೂಲಗಳು ಸ್ಪಷ್ಟಪಡಿಸಿವೆ.

ವಿದುಷಿ ಹೆಚ್.ಎಸ್. ಶ್ರೀರಂಜನಿಯವರ ಗಾಯನ


ಮೈಸೂರು,ಸೆ.19–ಮೈಸೂರಿನ ಶ್ರೀರಾಂಪೇಟೆಯಲ್ಲಿರುವ ಶ್ರೀ ರಾಮಾಭ್ಯುದಯ ಚಾರಿಟಬಲ್ ಟ್ರಸ್ಟ್ ವತಿಯಿಂದ ನಾಳೆ (ಸೆ.20) ಸಂಜೆ 6.30ಕ್ಕೆ ವಿದುಷಿ ಹೆಚ್.ಎಸ್. ಶ್ರೀರಂಜನಿಯವರಿಂದ ಗಾಯನ ಏರ್ಪಡಿಸಲಾಗಿದೆ. ಪಕ್ಕವಾದ್ಯದಲ್ಲಿ ಪೃಥ್ವಿ ಭಾಸ್ಕರ್–ವಯೋಲಿನ್ ಮತ್ತು ವಿದ್ವಾನ್ ನಂದನ್ ಕಶ್ಯಪ್ ಮೃದಂಗದಲ್ಲಿ ಸಹಕಾರ ನೀಡಲಿದ್ದಾರೆ. ಹೆಚ್.ಎಸ್.ಶ್ರೀರಂಜನಿಯವರು ಕರ್ನಾಟಕ ಶಾಸ್ತ್ರೀಯ ಸಂಗೀತ ಕ್ಷೇತ್ರದಲ್ಲಿ ಓರ್ವ ಉದಯೋನ್ಮುಖ ಕಲಾವಿದೆಯಾಗಿದ್ದಾರೆ. ಶ್ರೀ ಲಕ್ಷ್ಮಿ ಮತ್ತು ಎಸ್.ವಿ. ಶ್ರೀನಾಥ ಅವರ ಪುತ್ರಿಯಾದ ಇವರು ತಮ್ಮ ಸಂಗೀತದ ಪಯಣವನ್ನು 7 ವರ್ಷ ವಯಸ್ಸಿನವರಾಗಿದ್ದಾಗಲೇ ಆರಂಭಿಸಿದರು. ಕಳೆದ 22 ವರ್ಷಗಳಿಂದಲೂ ಕರ್ನಾಟಕ ಸಂಗೀತದ ಪ್ರಬುದ್ಧ ಹಾಗೂ ನಿಷ್ಠಾವಂತ ವಿದ್ಯಾರ್ಥಿಯಾಗಿದ್ದು, ಸ್ವರ ಪ್ರಸಾರ ಕಲೆಯಲ್ಲಿ ನಿಪುಣೆಯಾಗಿದ್ದಾರೆ.

ಶ್ರೀರಂಜನಿಯವರು ವಿದುಷಿ ವೀಣೆ ಜಯಮ್ಮ ಅವರಲ್ಲಿ ಸಂಗೀತ ತರಬೇತಿ ಆರಂಭಿಸಿ, 12ನೇ ವಯಸ್ಸಿಗೆ ಪ್ರಾಥಮಿಕವನ್ನು ಪೂರ್ಣಗೊಳಿಸಿದರು. 16 ವರ್ಷಗಳಿಂದ ವಿದುಷಿ ಗಾಯತ್ರಿ ಸತ್ಯನಾರಾಯಣ್ ಅವರ ಬಳಿ ಕರ್ನಾಟಕ ಸಂಗೀತ ಅಭ್ಯಾಸ ಮಾಡುತ್ತಿದ್ದಾರೆ. 2013–14ರಲ್ಲಿ ನಡೆದ ವಿದ್ವತ್ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದರು. ಮೈಸೂರು, ಮೈಸೂರು ಅರಮನೆ, ನಾದ ಬ್ರಹ್ಮ ಸಂಗೀತ ಸಭಾ, ಚಾಮುಂಡಿಬೆಟ್ಟ, ವೀಣೆ ಶೇಷಣ್ಣ ಭವನ, ಭಗಿನಿ ಸೇವಾ ಸಮಾಜ, ಲಯ ಅಕಾಡೆಮಿ, ರಾಗಿ ಗುಡ್ಡ ದೇವಸ್ಥಾನ, ಬೆಂಗಳೂರು ಮತ್ತು ಚೆನ್ನೈ ಕನ್ನಡ ಸಂಘ ಸೇರಿದಂತೆ ಇನ್ನಿತರ ಪ್ರತಿಷ್ಠಿತ ವೇದಿಕೆಗಳಲ್ಲಿ ತಮ್ಮ ಪ್ರದರ್ಶನ ನೀಡಿದ್ದಾರೆ.

ಕೆರೆ ಒತ್ತುವರಿ: ನ್ಯಾಯಾಂಗ ತನಿಖೆ

- ನ್ಯಾಯಮೂರ್ತಿಗಳ ನೇತೃತ್ವದಲ್ಲಿ ಮೂವರನ್ನೊಳಗೊಂಡ ಉನ್ನತ ಮಟ್ಟದ ಸಮಿತಿ ರಚನೆ: ಸಿಎಂ ಬೊಮ್ಮಾಯಿ
- ಒತ್ತುವರಿ ಹಿಂದೆ ಪ್ರಭಾವಿ ರಾಜಕಾರಣಿಗಳ ಕೈವಾಡ ಶಂಕೆ

ಬೆಂಗಳೂರು,ಸೆ.19(ಕೆಎಂಶಿ)–ಸರ್ಕಾರಿ ಭೂಮಿ, ಕೆರೆ ಹಾಗೂ ರಾಜಕಾಲುವೆ ಒತ್ತುವರಿ ಮಾಡಿರುವ ಭೂಕಬಳಿಕೆದಾರರನ್ನು ಪತ್ತೆ ಹಚ್ಚಿ ಕಠಿಣ ಕ್ರಮ ಕೈಗೊಳ್ಳಲು ಸರ್ಕಾರ ಮುಂದಾಗಿದೆ.



ರಾಜ್ಯದಲ್ಲಿ ಉಂಟಾಗಿರುವ ಅತಿವೃಷ್ಟಿಯ ಚರ್ಚೆಗೆ ಕಂದಾಯ ಸಚಿವ ಆರ್.ಅಶೋಕ್ ಉತ್ತರ ನೀಡುವ ಸಂದರ್ಭದಲ್ಲಿ ಮಧ್ಯೆ ಪ್ರವೇಶಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ನ್ಯಾಯಮೂರ್ತಿಗಳ ನೇತೃತ್ವದಲ್ಲಿ ಮೂವರ ಒಳಗೊಂಡ ಉನ್ನತ ಮಟ್ಟದ ಸಮಿತಿ ನೇಮಿಸಿ, ತನಿಖೆ ನಡೆಸಿ, ಅವರಿಂದ ವರದಿ ಪಡೆದು, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಕೆರೆ, ಸರ್ಕಾರಿ ಭೂಮಿ, ರಾಜಕಾಲುವೆ ಒತ್ತುವರಿಯಾಗಿರುವುದು ಸತ್ಯ ಎಂದ ಅವರು, ಯಾವ ಕಾಲದಲ್ಲಿ ಯಾರ್ಯಾರು ಈ ಕಬಳಿಕೆ ಮಾಡಿದ್ದಾರೆ ಇದರಲ್ಲಿ ಯಾವ್ಯಾವ ಅಧಿಕಾರಿಗಳು ಶಾಮೀಲಾಗಿದ್ದಾರೆ ಎಂಬುದು ಬಹಿರಂಗಗೊಳ್ಳಲಿ ಎಂದರು.

ರಾಜಕಾಲುವೆ, ಭೂ ಒತ್ತುವರಿ ಮಾಡಿಕೊಂಡವರು ಎಷ್ಟೇ ಪ್ರಭಾವಿಗಳಾಗಿರಲಿ, ರಾಜಕಾರಣಿಗಳೇ ಇರಲಿ, ಮಾಫಿಯಾಗಳೇ ಇರಲಿ, ಅಂತಹವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳುವುದಾಗಿ ಬೊಮ್ಮಾಯಿ ಸ್ಪಷ್ಟಪಡಿಸಿದರು.

ಕಾಲ ಕಾಲಕ್ಕೆ ಅಭಿವೃದ್ಧಿಯಾದಂತೆ ಬಿಬಿಎಂಪಿ ವ್ಯಾಪ್ತಿಯಲ್ಲಿ ಕೆರೆಗಳನ್ನು ಮುಚ್ಚಲಾಗಿದೆ. ಸುಧಾರಣೆ ಹೆಸರಿನಲ್ಲಿ ಹಿಂದೆ ಆಗಿರುವ ತಪ್ಪುಗಳನ್ನು ಮುಂದೆ ಆಗದಂತೆ ನೋಡಿಕೊಳ್ಳ ಬೇಕಾಗಿದೆ. ಅದಕ್ಕಾಗಿ ಯಾವ ಯಾವ ಕಾಲದಲ್ಲಿ ಯಾವ ಯಾವ ಸಂದರ್ಭದಲ್ಲಿ ಕೆರೆಗಳನ್ನು ಮುಚ್ಚಲಾಗಿದೆ ಎಂಬುದನ್ನು ತನಿಖೆ ಮಾಡಿಸಿ, ಇದರ ಜೊತೆಗೆ ಒತ್ತುವರಿ ಬಗ್ಗೆಯು ತನಿಖೆ ನಡೆಸುವುದಾಗಿ ಹೇಳಿದರು. ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿ ಬೇನಾಮಿಯಾಗಿ ಬಡಾವಣೆಗಳನ್ನು ಮಾಡುವುದು, ಭೂ ಒತ್ತುವರಿ ಮಾಡುವ ಕೆಲಸ ಪ್ರಭಾವಿಗಳಿಂದಾಗಿದೆ. 2007ರಲ್ಲಿ ಹಸಿರು ಪೀಠ ನೀಡಿದ ಆದೇಶದ ನಂತರ ಬಫರ್ ಜೋನ್‌ನಲ್ಲಿ ಆಗಿರುವ ಒತ್ತುವರಿ ಬಗ್ಗೆಯೂ ತನಿಖೆ ನಡೆಸುವುದಾಗಿ ಪ್ರಕಟಿಸಿದರು.

ಈ ತನಿಖೆ ಯಾವ ಸ್ವರೂಪದಲ್ಲಿರುತ್ತದೆ ಎಂಬ ಬಗ್ಗೆ ವಿವರಗಳನ್ನು ಬಹಿರಂಗಪಡಿಸುತ್ತೇನೆ. ಕೆರೆ ಒತ್ತುವರಿಯ ಬಗ್ಗೆ ತನಿಖೆ ನಡೆಸುವುದಾಗಿ ಈ ಹಿಂದೆಯೇ ನಾನು ಭರವಸೆ ನೀಡಿದ್ದೆ. ಹೀಗಾಗಿ ಇವತ್ತು ಸದನದಲ್ಲಿ ಸರ್ಕಾರದ ಈ ನಿರ್ಧಾರವನ್ನು ಪ್ರಕಟಿಸುತ್ತಿದ್ದೇನೆ ಎಂದರು. ಪ್ರಭಾವಿಗಳು ಮಾಡಿರುವ ಈ ದಂಧೆಯಿಂದ ಮಳೆಗಾಲದಲ್ಲಿ ನಗರಗಳು ಜಲಾವೃತಗೊಂಡು ಜನ ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ. ಇವರು ಮಾಡಿರುವ ತಪ್ಪುಗಳಿಗೆ ಸರ್ಕಾರ ಉತ್ತರ ನೀಡಬೇಕಾಗಿದೆ ಎಂದು ವಿಷಾದ ವ್ಯಕ್ತಪಡಿಸಿದರು. ಇಂತಹ ಸ್ಥಿತಿಗೆ ಕಾರಣರಾದವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕಠಿಣ ಕ್ರಮ ಜರುಗಿಸುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ತಿಳಿಸಿದರು.

ಸಿದ್ದರಾಮಯ್ಯ ನೇತೃತ್ವದ ಸರ್ಕಾರ 2017 ಸ್ವರೂಪ ಕಳೆದುಕೊಂಡ ಕೆರೆಗಳನ್ನು ಕೆರೆ ನಕ್ಷೆಯಿಂದ ಹೊರಗಿಡುವ ಮೂಲಕ ಇವುಗಳನ್ನು ನುಂಗುವ ಹುನ್ನಾರ ನಡೆಸಿತ್ತು ಎಂದು ಬಸವರಾಜ ಬೊಮ್ಮಾಯಿ ಗಂಭೀರ ಆರೋಪ ಮಾಡಿದರು. ಆದರೆ ಈ ಕೆಲಸಕ್ಕೆ ಸಾರ್ವಜನಿಕರಿಂದ ತೀವ್ರ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಎಚ್ಚೆತ್ತುಕೊಂಡ ಸರ್ಕಾರ ಅದನ್ನು ಕೈ ಬಿಟ್ಟಿತ್ತು ಎಂದರು. ಈ ಸಂದರ್ಭದಲ್ಲಿ ಮಧ್ಯೆ ಪ್ರವೇಶಿಸಿದ ಕಂದಾಯ ಸಚಿವ ಆರ್.ಅಶೋಕ್,ಈ ಹಿಂದೆ ಕಾಂಗ್ರೆಸ್ ಆಡಳಿತವಿದ್ದ ಕಾಲದಲ್ಲಿ ನಗರದ ನಲವತ್ತೆರಡು ಕೆರೆಗಳನ್ನು ಸಾರ್ವಜನಿಕ ಉದ್ದೇಶಗಳಿಗೆ ಬಳಕೆ ಮಾಡಿದೆ. ಏಳು ಕೆರೆಗಳನ್ನು ಕೆಲ ಪ್ರಭಾವಿಗಳು ಒತ್ತುವರಿ ಮಾಡಿಕೊಂಡಿದ್ದಾರೆ ಎಂಬ ಅಂಕಿ ಅಂಶಗಳನ್ನು ನೀಡಿದರು.

ಕಂದಾಯ ಸಚಿವ ಅಶೋಕ್ ಅವರ ಹೇಳಿಕೆ ಆಡಳಿತಾರೂಢ ಬಿಜೆಪಿ ಮತ್ತು ಪ್ರತಿಪಕ್ಷ ಕಾಂಗ್ರೆಸ್ ನಡುವೆ ಭಾರೀ ವಾಗ್ವಾದಕ್ಕೆ ಕಾರಣವಾಗಿ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಸದನವನ್ನು ಮುಂದೂಡಿದರು. ಸದನ ಸಮಾವೇಶಗೊಳ್ಳುವ ಮುನ್ನ ಅಶೋಕ್ ಅವರು, ಭೂ ಒತ್ತುವರಿಗೆ ಉತ್ತರ ಭಾರತದಿಂದ ಬಂದ ಐಎಎಸ್, ಐಪಿಎಸ್ ಅಧಿಕಾರಿಗಳೇ ನೇರ ಕಾರಣ ಎಂದು ಗಂಭೀರ ಆರೋಪ ಮಾಡಿದರು. ಆ ಅಧಿಕಾರಿಗಳು ಸೇವೆಯ ಮೇಲೆ ಕರ್ನಾಟಕಕ್ಕೆ ಬಂದವರು ಹಿಂತಿರುಗಲಿಲ್ಲ. ಆದರೆ ಕರ್ನಾಟಕದ ಅಧಿಕಾರಿಗಳು ಹೊರ ರಾಜ್ಯಕ್ಕೆ ಹೋದರೆ ಬೇಗ ರಾಜ್ಯಕ್ಕೆ ವಾಪಸ್ ಆಗಲು ಬಯಸುತ್ತಾರೆ ಎಂದು ನುಡಿದರು. ಒತ್ತುವರಿಯಾದ ಕೆರೆಗಳ ಪೈಕಿ 18 ಕೆರೆಗಳಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ 28 ಕೆರೆಗಳಲ್ಲಿ ಬಡಾವಣೆಗಳನ್ನು ನಿರ್ಮಿಸಿದೆ. ಈ ಕೆರೆಗಳ ಒತ್ತುವರಿ ಮಾಡದೆ ಇದ್ದರೆ ಕೇವಲ ರಾಜಧಾನಿಯ ಕೆರೆಗಳಲ್ಲಿ ನಾಲ್ಕು ಟಿಎಂಸಿಯಷ್ಟು ನೀರು ಸಂಗ್ರಹವಾಗುತ್ತಿತ್ತು. ಇಷ್ಟೇ ಪ್ರಮಾಣದ ನೀರು ಆವಿಯಾಗುತ್ತಿತ್ತು ಎಂದರು. ಕೆರೆಗಳಲ್ಲಿ ನೀರು ಸಂಗ್ರಹವಾಗಿದ್ದರೆ ರಾಜಧಾನಿಯಲ್ಲಿ ಮಳೆಯಿಂದ ಈ ಪ್ರಮಾಣದ ಹಾನಿಯಾಗುತ್ತಿರಲಿಲ್ಲ. ಎಲ್ಲೆಡೆ ನೀರು ನಿಲ್ಲುವ ಪರಿಸ್ಥಿತಿ ಸೃಷ್ಟಿಯಾಗುತ್ತಿರಲಿಲ್ಲ ಎಂದು ಅಶೋಕ್ ಹೇಳಿದರು.

ನಕ್ಕರೆ ಅದೇ ಸ್ವರ್ಗ

ಬ್ಯಾತ : (ಕುಡಿದು ಅಮಲೇರಿದ್ದ ಇಬ್ಬರ ಸಂಭಾಷಣೆಯಲ್ಲಿ) ಲೇಯ್ ಅದು ಸೂರ್ಯ
ಮತ್ತೊಬ್ಬ : ಲೇಯ್, ಸೂರ್ಯ ಅಲ್ಲ, ಚಂದ್ರ
ಆತ : (ದಾರಿಹೋಕನನ್ನು ನಿಲ್ಲಿಸಿ) ಸ್ವಾಮಿ ನೀವೇ ಹೇಳಿ. ಅದು ಸೂರ್ಯನೋ ಚಂದ್ರನೋ ಸ'ೂರ್ಯನೋ ಚಂದ್ರನೋ
ದಾರಿಹೋಕ : "ಎರಡೂ ಅಲ್ಲ, ಅದು ಪರಸ್ಥಳ!"

ಮೈಸೂರು ಮಿತ್ರ
ಮಂಗಳವಾರ, 20 ಸೆಪ್ಟೆಂಬರ್ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಸವಾಲುಗಳು ಎದುರಾದಾಗಲೇ ನೀವೇ ಕಂಡಿರದ ಯೋಗ್ಯತೆ ನಿಮ್ಮಲ್ಲಿರುವುದನ್ನು ತಿಳಿಯುವಿರಿ. – ಡೋರಾ ಅಲ್ಬರ್ಟ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಧಾನ್ಯ ಹೆಚ್ಚಿದವನಿಗೆ ಮಾನ್ಯವೂ ಹೆಚ್ಚು

ನಿಮ್ಮ ಪತ್ರಗಳು

ನಿರ್ವಹಣೆಯಿಲ್ಲದ ವಿಜಯನಗರ 3ನೇ ಹಂತದ ಉದ್ಯಾನವನ




ಮಾನ್ಯರೆ,

ಮೈಸೂರಿನ ವಿಜಯನಗರದ ಮೂರನೇ ಹಂತ, 15 ಮತ್ತು 16ನೇ ಮುಖ್ಯರಸ್ತೆಯ ನಡುವೆ 20 ವರ್ಷಗಳ ಹಿಂದೆಯೇ ಉದ್ಯಾನ ನಿರ್ಮಿಸಲಾಗಿದೆ. ಆದರೆ ನಿರ್ವಹಣೆಯಿಲ್ಲದ ಕಾರಣ ಸಾರ್ವಜನಿಕರ ಬಳಕೆಗೆ ಯೋಗ್ಯವಾಗಿಲ್ಲ. ಉದ್ಯಾನದ ಸ್ವಚ್ಛತೆ ಹಾಗೂ ಅಭಿವೃದ್ಧಿಗೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ನಗರ ಪಾಲಿಕೆ ಅಧಿಕಾರಿಗಳು ಗಮನಹರಿಸಿಲ್ಲ. ಪಾರ್ಕ್ ತುಂಬೆಲ್ಲಾ ಗಿಡಗಂಟಿಗಳು ಆಳೆತ್ತರಕ್ಕೆ ಬೆಳೆದು, ಪಾಳು ಬಿದ್ದಂತಾಗಿದೆ. ಹಾವು, ಚೇಳು ಇನ್ನಿತರ ವಿಷಜಂತುಗಳ ಉಪಟಳ ವಿಪರೀತವಾಗಿದೆ. ವಾಕಿಂಗ್ ಪಾಥ್‌ನಲ್ಲಿ ಮರದಿಂದ ಉದುರಿಬಿದ್ದಿರುವ ಎಲೆಗಳ ರಾಶಿಯನ್ನು ತೆರವು ಮಾಡಿಲ್ಲ. ಮಳೆಯಿಂದಾಗಿ ಎಲೆಗಳೆಲ್ಲಾ ಕೊಳೆತು ನಾರುತ್ತಿವೆ. ಅನಿವಾರ್ಯವಾಗಿ ವಾಕಿಂಗ್ ಮಾಡಲು ಹೋದವರಲ್ಲಿ ಹಲವರು ಎಲೆಗಳಿಂದ ಜಾರಿಬಿದ್ದು ಪೆಟ್ಟು ಮಾಡಿಕೊಂಡಿದ್ದಾರೆ. ಪಾರ್ಕ್‌ನಲ್ಲಿರುವ ವಿದ್ಯುತ್ ದೀಪಗಳೂ ಹಾಳಾಗಿ ಹೋಗಿವೆ. ರಾತ್ರಿ ವೇಳೆ ಉದ್ಯಾನದ ಬಳಿ ಓಡಾಡುವುದಕ್ಕೂ ಭಯವಾಗುತ್ತದೆ. ಪೋಲಿ–ಪುಂಡರು ಉದ್ಯಾನವನ್ನು ಅಡ್ಡೆ ಮಾಡಿಕೊಂಡಿದ್ದಾರೆ. ಕಲ್ಲು ಬೆಂಚುಗಳ ಮೇಲೆ ಕುಳಿತುಕೊಂಡು ಧೂಮಪಾನ, ಮದ್ಯಪಾನ ಮಾಡಿ ಅನುಚಿತವಾಗಿ ವರ್ತಿಸುತ್ತಾರೆ. ಬೀಡಿ–ಸಿಗರೇಟು ತುಂಡುಗಳು, ಮದ್ಯದ ಬಾಟಲಿಗಳನ್ನು ಎಲ್ಲೆಂದರಲ್ಲಿ ಬಿಸಾಡಿ ಹೋಗುತ್ತಾರೆ. ಹಗಲಲ್ಲೂ ಅಲ್ಲಿಯೇ ಠಿಕಾಣಿ ಹೂಡಿ ಮೊಬೈಲ್‌ನಲ್ಲಿ ಗೇಮ್ ಆಡುವುದು, ಹರಟೆ ಹೊಡೆಯುವುದು ಮಾಮೂಲಿಯಾಗಿದೆ. ಇದರಿಂದ ಸಾರ್ವಜನಿಕರಿಗೆ ತುಂಬಾ ಕಿರಿಕಿರಿಯುಂಟಾಗುತ್ತಿದೆ. ಈ ಬಗ್ಗೆ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ. ಈಗಲಾದರೂ ಜನಪ್ರತಿನಿಧಿಗಳು ಉದ್ಯಾನ ಅಭಿವೃದ್ಧಿಗೆ ಕ್ರಮ ಕೈಗೊಂಡು ಜನರ ಋಣ ತೀರಿಸಬೇಕೆಂದು ಒತ್ತಾಯಿಸುತ್ತೇನೆ.

–ಎನ್.ನಂಜೇಗೌಡ, ವಕೀಲರು, ವಿಜಯನಗರ, 3ನೇ ಹಂತ

ಯುಜಿಡಿ ಪೈಪ್‌ಲೈನ್ ಸರಿಪಡಿಸಿ



ಮಾನ್ಯರೆ,

ಮೈಸೂರಿನ ಗಾಯತ್ರಿಪುರಂ 2ನೇ ಹಂತದಲ್ಲಿರುವ ಚರ್ಚ್ ಸಮೀಪದ ಮ್ಯಾನ್ ಹೋಲ್ ತುಂಬಿ ಹರಿಯುತ್ತಿದ್ದು ನಿವಾಸಿಗಳಿಗೆ ತುಂಬಾ ತೊಂದರೆಯಾಗಿದೆ. ಸಮೀಪದಲ್ಲೇ ಭಾಗ್ಯ ಜ್ಯೋತಿ ಪದವಿ ಪೂರ್ವ ಕಾಲೇಜು ಇರುವುದರಿಂದ ವಿದ್ಯಾರ್ಥಿಗಳು ಅನೈರ್ಮಲ್ಯ ನೀರನ್ನು ತುಳಿದುಕೊಂಡೇ ಹೋಗಬೇಕಾಗಿದೆ. ವಾಹನ ಸವಾರರು ಓಡಾಡುವುದರಿಂದ ಈ ಅನೈರ್ಮಲ್ಯ ನೀರು ಪಾದಚಾರಿಗಳಿಗೆ ಎರಚುವುದುಂಟು. ಇದರಿಂದ ಹೊರಸೂಸುವ ದುರ್ವಾಸನೆಗೆ ನಿವಾಸಿಗಳು ಮತ್ತು ಪಾದಚಾರಿಗಳು ಮೂಗು ಮುಚ್ಚಿಕೊಂಡು ಓಡಾಡು ವಂತಾಗಿದೆ. ಹಾಗೂ ರೋಗರುಜಿನ ಹರಡುವ ಆಂತಕವಿದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಯುಜಿಡಿ ಲೈನ್ ಸರಿಪಡಿಸಿ ನಿವಾಸಿಗಳ ನೆಮ್ಮದಿಯ ಜೀವನಕ್ಕೆ ಅನುವು ಮಾಡಿಕೊಡಬೇಕೆಂದು ಮನವಿ.

– ನವೀನ್ ಜೆ. ನಾಯ್ಡು, ಗಾಯತ್ರಿಪುರಂ, ಮೈಸೂರು.

ರಸ್ತೆ ಅವ್ಯವಸ್ಥೆ; ಗ್ರಾಮಸ್ಥರ ಪರದಾಟ

ಮಾನ್ಯರೆ,

ಪಿರಿಯಾಪಟ್ಟಣ ತಾಲೂಕಿನ ಆವರ್ತಿ ಗ್ರಾಪಂ ವ್ಯಾಪ್ತಿಯ ಮರಡಿಯೂರು ಗ್ರಾಮದಲ್ಲಿ ರಸ್ತೆ ಅವ್ಯವಸ್ಥೆಯಿಂದ ಗ್ರಾಮಸ್ಥರು ಸಂಕಷ್ಟ ಅನುಭವಿಸುವಂತಾಗಿದೆ. ರೈತರ ಜಮೀನಿಗೆ ಸಂಪರ್ಕ ಕಲ್ಪಿಸುವ 1 ಕಿಮಿ ರಸ್ತೆ ಒತ್ತುವರಿಯಾಗಿರುವುದು ಒಂದೆಡೆಯಾದರೆ, ಈಗಿರುವ ಕಿರಿದಾದ ರಸ್ತೆ ಸಂಪೂರ್ಣ ಹದಗೆಟ್ಟಿದ್ದು ಸಂಚಾರಕ್ಕೆ ಯೋಗ್ಯವಲ್ಲದ ಸ್ಥಿತಿಯಲ್ಲಿದೆ. ಬರೀ ಗುಂಡಿಗಳಿಂದ ತುಂಬಿರುವ ರಸ್ತೆ ಕೆಸರುಮಯವಾಗಿ ಕಾಲ್ನಡಿಗೆಯಲ್ಲಿ ಸಂಚರಿಸಲು ಅಸಾಧ್ಯವಾದ ಸ್ಥಿತಿಯಲ್ಲಿದೆ. ಕಾರು, ಜೀಪ್, ಟ್ರಾಕ್ಟರ್, ಆಟೋಗಳು ಈ ಮಾರ್ಗದಲ್ಲಿ ಸಂಚಾರ ಅಸಾಧ್ಯ ಎಚ್ಚರ ತಪ್ಪಿದರೆ ಕೆಸರಿನಲ್ಲಿ ಸಿಲುಕುವ ವಾಹನಗಳನ್ನು ಮೇಲೆತ್ತಲು ಕ್ರೇನ್ ತರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ದ್ವಿಚಕ್ರ ವಾಹನ ಮಾತ್ರ ಬಳಸಿ ಸರ್ಕಸ್ ಮಾಡುತ್ತ ಈ ರಸ್ತೆ ದಾಟಬೇಕಿದೆ. ಆಯತಪ್ಪಿದರೆ ಬಿದ್ದು ಕೈಕಾಲು ಮುರಿದುಕೊಳ್ಳಬೇಕು. ಈಗಾಗಲೇ ಹಲವರು ಬಿದ್ದು ಗಾಯಗೊಂಡಿದ್ದಾರೆ. 33 ಅಡಿ ರಸ್ತೆಯನ್ನು ಎರಡೂ ಭಾಗದಲ್ಲಿ ಒತ್ತುವರಿ ಮಾಡಿಕೊಂಡಿದ್ದು, ಇದೀಗ 12 ಅಡಿ ಮಾತ್ರ ರಸ್ತೆಯಾಗಿ ಉಳಿದುಕೊಂಡಿದೆ. ಕಳೆದ 25 ವರ್ಷಗಳಿಂದ ಇದೇ ದುಸ್ಥಿತಿಯಲ್ಲಿರುವ ರಸ್ತೆ ಸಮಸ್ಯೆಗೆ ತಾಲೂಕು ಆಡಳಿತ ಮುಕ್ತಿ ಕಲ್ಪಿಸುವಂತೆ ಈ ಮೂಲಕ ಮನವಿ.

– ಸುಮ, ಸ್ಟೆನ್ಸನ್, ರಾಕೇಶ್, ರವಿ, ಮಣಿಕಂಠ, ಬೈಲುಕುಪ್ಪೆ ಗ್ರಾಮಸ್ಥರು



ಡಾ. ಗುಬ್ಬಿಗೂಡು ರಮೇಶ್
ಮೊ : 9742934512

ದೀಪ ಸಾಲು

ನಮ್ಮ ಸಾಂಸ್ಕೃತಿಕ ವಿದ್ಯಮಾನ

ತನ್ನ ಬಡತನದಲ್ಲೇ ಒಬ್ಬ ಬಡವ ಕೂಡ ಅವಕಾಶ ಸಿಕ್ಕಾಗ ತನ್ನಂತೆಯೇ ಕಷ್ಟದಲ್ಲಿದ್ದವರಿಗೆ ಏನಾದರೊಂದು ಸಹಾಯ ಮಾಡುವ ತವಕದಲ್ಲಿಯೇ ಇರುತ್ತಾನೆ. ಸಿರಿವಂತ ಕೂಡ ತನ್ನಲ್ಲಿರುವ ಸಂಪತ್ತಿನ ಸದ್ಬಳಕೆಗಾಗಿ ತನ್ನಲ್ಲಿರುವ ಸಂಪತ್ತಿನಲ್ಲಿ ಕುಟುಂಬ ಪರಿವಾರದವರಿಗೆ ಮೀಸಲಿಟ್ಟು, ಯಥೇಚ್ಛವಾಗಿ ಹೆಚ್ಚುವರಿಯಾದುದ್ದನ್ನು ಸಮಾಜಕ್ಕೆ ಬೇರೆ ಬೇರೆ ಆಯಾಮಗಳಲ್ಲಿ ಸೇವೆ ಸಲ್ಲಿಸಿ ಕೃತಾರ್ಥಭಾವ ಅನುಭವಿಸುತ್ತಾನೆ. ಕೆಲವರು ಮಾತ್ರ ಸಮಾಜದ ಸಂಪತ್ತನ್ನೆ ಸಮಾಜಕರ್ಪಿಸಿ ನಾನು ಕೊಟ್ಟೆ, ನಾನು ಕೊಟ್ಟೆ, ಎನ್ನುತ್ತಿರುತ್ತಾರೆ. ಒಟ್ಟಾರೆ ಎಲ್ಲರಿಗೂ ಒಂದಲ್ಲ ಒಂದು ರೀತಿಯಲ್ಲಿ ಸ್ವಂತಕ್ಕೆ ಸರ್ವಸ್ವ ಸಮಾಜಕ್ಕೆ ಸ್ವಲ್ಪವಾದರು ಏನಾದರೊಂದು ರೀತಿಯಲ್ಲಿ ತನ್ನಲ್ಲಿದ್ದುದನ್ನು ಹಂಚಿ ಕತಾರ್ಥಭಾವ ಅನುಭವಿಸುವ ತವಕದಲ್ಲಿರುತ್ತಾರೆ.

ಕೆಲವರು ಸಮಾಜಕ್ಕೆ ಸರ್ವಸ್ವವನ್ನರ್ಪಿಸಿ, ಸ್ವಂತಕ್ಕೆ, ಸ್ವಲ್ಪ ಮಾಡಿಕೊಂಡು ಕೀರ್ತಿವಂತರಾಗಿ ಆಳಿ, ಬಾಳಿ, ತಾವು ಅಳಿದ ಮೇಲು ಜನರ ಭಾವ ಮಂದಿರದಲ್ಲಿ ಅಚ್ಚಳಿಯದೆ ಉಳಿದವರು ಅನೇಕರಿದ್ದಾರೆ. ಹಾಗೆಂದ ಮೇಲೆ ಹಂಚಿಕೊಳ್ಳುವುದರಲ್ಲಿ ಏನೋ ಒಂದು ಸುಖವಿದೆ, ಒಂದು ಸಮಾಧಾನವಿದೆ. ಇದನ್ನೆ ಸಾಮಾಜಿಕ ವಿದ್ಯಮಾನ ಎಂತಲೂ ಕರೆಯುತ್ತೇವೆ. ಇದು 2+2=4 ಎನ್ನುವ ರೀತಿಯ ಮ್ಯಾಥಮಿಟಿಕಲ್ ಕ್ಯಾಲುಕ್ಯೂಲೇಷನ್ ಅಲ್ಲ, ನಮ್ಮೊಳಗೆ ಸಂಚಯನಗೊಂಡ ಸಮಾಜಮುಖಿ ತುಡಿತಗಳ ಒತ್ತಡಗಳ ಬಿಡುಗಡೆ ಅಷ್ಟೆ, ಇದು ಲೆಕ್ಕಾಚಾರವಲ್ಲ, ಮನೋಮಂದಿರದ ಸದಾಚಾರ! ಇಡೀ ದೇಶವೇ ಕೊರೊನಾ ಸಂಬಂಧಿ ಲಾಕ್‌ಡೌನ್‌ನಿಂದ ತ್ತತರಿಸಿದ್ದಾಗ ಸಮಾಜಕ್ಕೆ ಈ ಲೆಕ್ಕಾಚಾರ ಮತ್ತು ಸದಾಚಾರಗಳೆರಡು ಸಮಯಕ್ಕೆ ಸರಿಯಾಗಿ ಕ್ರಿಯೆ–ಪ್ರತಿಕ್ರಿಯೆಗಳ ರೀತಿಯಲ್ಲಿ ಒದಗಿ ಬಂದಿವೆ.

ಇಂಥ ಕಾಲಘಟ್ಟದಲ್ಲಿ ದುಡ್ಡು–ದುಗ್ಗಾಣಿಗಳ ಮುಖೇನ ಸಮಾಜಕ್ಕೆ ಸಮಾಜದ ಉಗ್ರಾಣ ತುಂಬಿಸಲಾಗದ ಕಲಾ ಕ್ಷೇತ್ರ ಕೂಡ ಹಿಂದೆ ಬೀಳಲಿಲ್ಲ. ಸಾಹಿತ್ಯ, ಸಂಸ್ಕೃತಿ, ಕಲೆ, ಸಂಗೀತ ಮುಂತಾದ ಸಾಂಸ್ಕೃತಿಕ ವಲಯದಲ್ಲಿ ತೊಡಗಿಸಿಕೊಂಡು ಕೆಲಸ ಮಾಡುತ್ತಿರುವ ಕವಿ, ಕಲಾವಿದರು ಕೂಡ ತಮ್ಮ ತಮ್ಮ ಕಲಾ ಸಾಧನೆಯ ಕುಶಲತೆಯ ಸಂಪತ್ತನ್ನು ತಮ್ಮ ಮಾತು, ಕವಿತೆ, ಹಾಡು, ತಮ್ಮ ಬರಹ, ನಟನೆ, ನಾಟ್ಯ, ಚಿತ್ರ, ಶಿಲ್ಪ ಮುಂತಾದವುಗಳ ಮುಖೇನ ಆತಂಕದಲ್ಲಿದ್ದ ಜನರ ಅಂತರಂಗಕ್ಕೆ ರಮಣೀಯತೆಯನ್ನು ತುಂಬಿ ಕೊರೊನಾ ಕಾಲದಲ್ಲಿ ಮನದಲ್ಲಿ ಮನೆ ಮಾಡಿದ್ದ ಆತಂಕದ ಜಾಗ ತುಂಬಿ ಸಮಾಜಮುಖಿ ಕೃತಾರ್ಥತೆಯನ್ನು ಅನುಭವಿಸಿದ್ದಾರೆ. ಹಾಗೆಂದ ಮೇಲೆ ಆರ್ಥಿಕ ಶ್ರೀಮಂತಿಕೆಗೆ ಸರಿಸಮನಾದ ಮತ್ತೊಂದು ಶ್ರೀಮಂತಿಕೆ ಇದೆ ಎಂದಾಯಿತಲ್ಲ. ಅದೇ ಕಲಾ ಶ್ರೀಮಂತಿಕೆ!

ಹೀಗೆ ಅಭಿವ್ಯಕ್ತಿ ಸಾಮರ್ಥ್ಯವಿರುವ, ಕಲಾ ಶ್ರೀಮಂತಿಕೆಯಲ್ಲಿ ಕೆಲಸ ಮಾಡುವ, ಪ್ರತಿಯೊಬ್ಬ ಕವಿ–ಕಲೆಗಾರ, ನಟ ಒಟ್ಟಾರೆ ಸೃಷ್ಟಿಶೀಲತೆಯ ವಲಯದಲ್ಲಿ ಯಾರೆಲ್ಲರ ಉದ್ದೇಶ ಮಾತ್ರ ಒಂದೇ ಇರುತ್ತದೆ. ತಾವು ಸೃಷ್ಟಿಸಿದ ಅದು ಏನೇ ಇರಲಿ, ಅದು ಯಾವುದೇ ಇರಲಿ, ಅದು ಮಾತ್ರ ಸಮಾಜಮುಖಿಯಾಗಿರಬೇಕು ಹಾಗೂ ಸಮಾಜಕ್ಕೆ ಅಂತರಂಗದ ಅನಿರ್ವಚನೀಯ ಸುಖ ಕೊಡಬೇಕು, ಆನಂದ ಕೊಡಬೇಕು. ಕೆಲವೊಮ್ಮೆ Knowledge bank ಆಗಿ ಚಿಂತನೆಗಳನ್ನು ಧಾರೆಯೆರೆಯಬೇಕು ಎಂಬುದೆ ಅದರ ಹಿಂದಿರುವ ಉದ್ದೇಶ. ವ್ಯಾಸ–ವಾಲ್ಮೀಕಿಗಳಾಗಲೀ, ಪಂಪ–ಕಾಳಿದಾಸರಾಗಲೀ, ಭಾಸಭವಭೂತಿಗಳಾಗಲೀ, ಬಾಣಾ–ಕಲ್ಹಣರಾಗಲೀ, ಆ ಕಾಲದಿಂದ ಈ ಕಾಲದವರೆಗೆ ಉಳಿದು ಬಂದಿದ್ದಾರೆಂದರೆ ಸಮಾಜದ ಸುಖಕ್ಕಾಗಿ ತಾವು ಸೃಷ್ಟಿಸಿ ಸಮಾಜಕ್ಕೆ ಅರ್ಪಿಸಿದ ಈ ಅಂತರಂಗದ ಆಸ್ತಿಯಿಂದ! ಪ್ರಭುಗಳು ಕಟ್ಟಿಸಿದ ಕೋಟೆ–ಕೊತ್ತಲುಗಳು, ಸಿರಿವಂತರು ಕಟ್ಟಿಸಿದ ಛತ್ರ–ಅರವಟ್ಟಿಗೆಗಳು ಬಸದಿ–ದೇವಾಲಯಗಳು, ಮಂದಿರ–ಮಸೀದಿಗಳು ಉಳಿದ ಹಾಗೆಯೇ ಅಕ್ಷರದ ಆಸ್ತಿ ಕೂಡ ಇವುಗಳ ಪಕ್ಕದಲ್ಲೆ ಪರ್ಯಾಯ ಮಾರ್ಗದಲ್ಲಿ ತಮ್ಮ ಆಸ್ತಿತ್ವ ಉಳಿಸಿಕೊಂಡಿವೆ.

ಕಾಲ ಗರ್ಭವೆಂಬುದು ಅಗಸ್ತ್ಯನ ಜೀರ್ಣಾಗ್ನಿಯಿದ್ದಂತೆ. ಇಲ್ಲಿ ಎಲ್ಲದರ ಆಸ್ತಿತ್ವವು ಜೀರ್ಣವಾಗಿ ಹೋಗುತ್ತದೆ. ಮನುಷ್ಯ ಮಾತ್ರ ತಾನು ಕಟ್ಟಿದ ಮಹಲು, ತಾನು ಸೃಷ್ಟಿಸಿದ ಸಾಂಸ್ಕೃತಿಕ ಸುಖದ ಅಮಲು ಎರಡನ್ನು ಈ ಅಗಸ್ತ್ಯನ ಜೀರ್ಣಾಗ್ನಿಯಿಂದ ಪಾರು ಮಾಡಿ, ತನ್ನ ನಂತರವು ಉಳಿಸಿ ಹೋಗುವ ನಿಟ್ಟಿನಲ್ಲಿ ತನ್ನ ಶ್ರಮ ಮತ್ತು ಅಭಿವ್ಯಕ್ತಿಗಳನ್ನು ಕಾಲಗರ್ಭದ ಈ ಕಾಲ ಪ್ರವಾಹದಲ್ಲಿ ಕೊಚ್ಚಿ ಹೋಗದಂತೆ ಸಂರಕ್ಷಿಸಿ ಇಟ್ಟು ಹೋಗುವ ಕುಶಲಕರ್ಮಿಯಾಗಿಯೇ ಯೋಚಿಸುತ್ತಾನೆ. ಪರಿಣಾಮ ನಮ್ಮ ಸಂಸ್ಕೃತಿ, ನಮ್ಮ ಕಲೆ, ನಮ್ಮ ನಾಗರಿಕತೆಗಳು ಇಂದಿಗೂ ನಮ್ಮ ಅಸ್ಮಿತೆಯನ್ನು ಉಳಿಸುವ ಪರಂಪರೆಯಾಗಿಯೇ ಉಳಿದು ಬಂದಿವೆ. ಕಾಲ ಪ್ರವಾಹದಲ್ಲಿ ಕೊಚ್ಚಿ ಹೋಗದಂತೆ ಉಳಿಸಿಟ್ಟ ಈ ಎಲ್ಲವೂ 'ಹಳೆಯ ಚಿನ್ನ'ಗಳಂತೆ, ಬೆಲೆ ಬಾಳುವ ಸ್ಮಾರಕಗಳಂತೆ, ನಮ್ಮ ಕಾಲದಲ್ಲಿ ಕಂಗೊಳಿಸಿವೆ. ಇಂಥಹ ಕಲಾತ್ಮಕ ಅಭಿವ್ಯಕ್ತಿಗಳು ಕಾಲಾತೀತವಾಗಿ ಉಳಿಯಬೇಕಾದರೆ ಕಲಾಕಾರನಿಗೆ ಅವಶ್ಯವಾಗಿ ಬೇಕಾದುದು ಮಾತ್ರ Involvment ಅಂದರೆ ಯಾವ ಕಲಾಕಾರ ಸಂತೆಗೆ ಮೂರು ಮೊಳ ಹೆಣೆಯುತ್ತಾನೋ ಆತ ಕಾಲಪ್ರವಾಹದಲ್ಲಿ ಕೊಚಿ ಹೋಗುತ್ತಾನೆ. ಯಾವ ಕಲಾಕಾರ ತನ್ನ ಕಲಾಸೃಷ್ಟಿಯ ಮೂಲಸೆಲೆಯೊಂದಿಗೆ ತಾನೂ ಮಿಳಿತವಾಗಿ ತನ್ನ ಇರುವಿಕೆಯನ್ನು ಸಂಪೂರ್ಣವಾಗಿ ತನ್ನ ಸೃಷ್ಟಿ ಕ್ರಿಯೆಗೆ ವಿನಿಯೋಗಿಸುತ್ತಾನೋ ಆ ಕಲಾಸೃಷ್ಟಿ ಮತ್ತು ಆ ಕಲಾಕಾರ ಇಬ್ಬರೂ ಸಮಾಜದ ಜೀರ್ಣಾಗ್ನಿಯಲ್ಲಿ ಜೀರ್ಣವಾಗದೆ ಕಾಲ ಪ್ರವಾಹದಲ್ಲಿ ಕೊಚಿ ಹೋಗದೆ ಉಳಿದು ಬಿಡುತ್ತಾರೆ. ತಂತ್ರಜ್ಞಾನದ ಈ ಯುಗದಲ್ಲೂ ನಮ್ಮೆಲ್ಲಾ ಸಾಧನೆಗಳನ್ನು ಸಂರಕ್ಷಿಸಿ ಇಟ್ಟುಕೊಂಡರು, ಪಕ್ಕದಲ್ಲೇ ಡಿಲೀಷನ್ ಅಪ್ಷನ್ ಇರುತ್ತದೆ. ಯಾರಿಗೆ ಗೊತ್ತು! ಯಾವ ಸಂದರ್ಭದಲ್ಲೋ ಅದು ಹೇಗೋ ಎಲ್ಲವೂ ಡಿಲೀಟ್–ಆಗಿ ಹೋಗಿಬಿಡಬಹುದು. ಆದರೆ ಅದು ಪ್ರಾತಿಪರವೋ, ಸಾಂಪ್ರದಾಯಕವೋ ಅದು ಯಾವುದೇ ಇರಲಿ ಇಬ್ಬರ ಉದ್ದೇಶವು ಒಂದೇ. ಅದು ಸಾಮಾಜಿಕ ಸುಖಕ್ಕಾಗಿ, ಸಮಾಜಮುಖಿಯಾಗಿ ನಿರ್ಮಾಣಗೊಂಡಿದ್ದು! ಆದರೆ Involvment ಇಲ್ಲದೆ ಸೃಷ್ಟಿಸಿದ ಯಾವುದು ಕೂಡ ತನ್ನ ಕಾಲಗರ್ಭದಲ್ಲಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವುದಿಲ್ಲ. ಇದಕ್ಕೊಂದು ಉದಾರಣೆಯನ್ನು ಇಲ್ಲಿ ಉಲ್ಲೇಖಿಸಬೇಕು.



> **ಕೆಲಸ ಅದು ಚಿಕ್ಕದಿರಲಿ ದೊಡ್ಡದೇ ಇರಲಿ ಅನ್ನ ಆಹಾರ, ಛತ್ರ–ಛಾಮರ, ಅರವಟ್ಟಿಗೆಗಳು ಸಮಾಜಕ್ಕೆ ಹೊಟ್ಟೆ ತುಂಬಿಸಿವೆ. ಆ ಕೈಂಕರ್ಯ ಕೈಗೊಂಡವರು ಕೃತಾರ್ಥತೆಗೆ ಸಂದಂತೆ, ಕಲೆ ಸಾಹಿತ್ಯ, ಸಂಗೀತ, ಶಿಲ್ಪ ನೃತ್ಯ, ಚಿತ್ರ, ಅಭಿನಯ, ಜನಪದರು. ಹೀಗೆ ಒಟ್ಟಾರೆ ಎಲ್ಲಾ ಕಲಾಕಾರರು ಎಲ್ಲ ಕಾಲದಲ್ಲೂ ತಾವು ಕೂಡ ಈ ಸಮಾಜವನ್ನು ರಂಜಿಸಿ ಅಂತರಂಗಕ್ಕೊಂದು ಸುಖಕೊಟ್ಟು ಸಾಮಾಜಿಕ ವಿದ್ಯಮಾನ ಸೃಷ್ಟಿಸಿದ್ದಾರೆ. ಹಾಗೆಯೇ ಕಲಾಕಾರರಲ್ಲಿ ಆಗ ವಿದ್ಯೆಯು ಇತ್ತು, ಮಾನವು ಇತ್ತು, ಹಾಗಾಗಿ ಅದು ಕಲಾಕಾರನ ಸಾಮಾಜಿಕ ವಿದ್ಯಮಾನವಾಗಿ ಪರಿವರ್ತನೆಯಾಯಿತು. ಅಂದರೆ ಕಲೆಯ ಚಟುವಟಿಕೆಗಳು ಕಾಲಾನುಕಾಲದಿಂದ ಉಳಿಯುತ್ತಲೆ ಬಂದಿತು. ಈ ದೃಷ್ಟಿಯಿಂದಲೇ ಇಂದಿಗೂ ಪಂಪನಿಂದ ಕುವೆಂಪುವರೆಗೆ ಎಂದು ನಾವು ಭಾವಿಸಲು, ಬರೆದುಕೊಳ್ಳಲು ಸಾಧ್ಯವಾಗಿದೆ. ಈ ಕಲಾ ವಿದ್ಯಮಾನವೇ ಯುಗಸಾಕ್ಷಿ.**

1258ರಲ್ಲಿ ಶಿಲ್ಪಕಲಾ ವೈಭವ ಪೂರ್ಣಗೊಳ್ಳುತ್ತಿದ್ದ ಕಾಲ. ಮೂರನೇ ನರಸಿಂಹ ಪ್ರಭು, ಸೋಮನಾಥ ದಂಡನಾಯಕ ಸೋಮನಾಥನ ನೇತೃತ್ವದಲ್ಲಿ ಆವತ್ತಿನ ಕಾಲಕ್ಕೆ ಸೆಲೆಬ್ರಿಟಿ ವರ್ಚಸ್ಸಿನಲ್ಲಿ ಕೆಲಸ ಮಾಡುತ್ತಿದ್ದ ಶಿಲ್ಪಿ ಮಲ್ಲಿತಮ. ಆಗ ನಿರ್ಮಾಣಗೊಂಡ ಶಿಲ್ಪ ವೈಭವವೇ ಇವತ್ತಿನ ಮೈಸೂರು ಜಿಲ್ಲೆಯ ಸೋಮನಾಥಪುರ. ಸೋಮನಾಥಪುರದಲ್ಲಿ ಶಿಲ್ಪಿಗಳು ಪ್ರಾಂಗಣದ ಕೆಲಸ ಮಾಡುತ್ತಿರುತ್ತಾರೆ. ಶಿಲ್ಪ ಕಲಾ ವೈಭವಕ್ಕಾಗಿ ಹತ್ತಾರು ಶಿಲ್ಪಿಗಳು ಹೀಗೆ ಹಗಲಿರುಳೆನ್ನದೆ ಕೆಲಸ ಮಾಡುತ್ತಿದ್ದ ಪರಿಯನ್ನು ಕಂಡು ವಿದೇಶಿ ಯಾತ್ರಿಕನೊಬ್ಬ ಆನಂದಭರಿತನಾಗುತ್ತಾನೆ. ತನ್ನ ಟಿಪ್ಪಣಿ ಪುಸ್ತಕದಲ್ಲಿ ಕರ್ನಾಟಕದಲ್ಲಿ ಶಿಲ್ಪಕಲಾ ವೈಭವದ ಪ್ರಸ್ತುತಿಗಾಗಿ ಶಿಲ್ಪಿಗಳ ಕಾರ್ಯವೈಖರಿಯನ್ನು ಗಮನಿಸಿ ತನ್ನ ಪ್ರವಾಸಕಥನಕ್ಕಾಗಿ ಗುರುತು ಹಾಕಿಕೊಳ್ಳುತ್ತಿರುತ್ತಾನೆ. ಹಾಗೆ ಗುರುತು ಹಾಕಿಕೊಳ್ಳುತ್ತಿರುವ ಸಂದರ್ಭದಲ್ಲಿ ಮೂರು ಜನ ಪ್ರಧಾನ ಶಿಲ್ಪಿಗಳು ತಮ್ಮ ತಮ್ಮ ಸಹಾಯಕರ ನೆರವಿನಿಂದ ತಾವು ಒಪ್ಪಿಕೊಂಡ ಕೆತ್ತನೆಯ ಕೆಲಸದಲ್ಲಿ ತಲ್ಲಿನರಾಗಿರುತ್ತಾರೆ. ಅವರ ಕಾರ್ಯವೈಖರಿಯ ತಲ್ಲೀನತೆಗೆ ಮನ ಸೋತ ಯಾತ್ರಿಕ, ಅಲ್ಲಿ ಕೆತ್ತನೆಯ ಕೆಲಸದಲ್ಲಿ ನಿರತರಾಗಿದ್ದ ಮೂವರು ಪ್ರಧಾನ ಶಿಲ್ಪಿಗಳನ್ನು ಮಾತನಾಡಿಸುತ್ತಾನೆ. ಪ್ರಾಂಗಣದ ಕಂಬ ಕೆತ್ತುವ ಕೆಲಸದಲ್ಲಿ ನಿರತನಾಗಿದ್ದ ಶಿಲ್ಪಿಯೊಬ್ಬರನ್ನು ಆತ ಮಾತಾಡಿಸುತ್ತಾನೆ ಏನು ಮಾಡುತ್ತಿದ್ದೀರಿ ಎಂದು ಯಾತ್ರಿ ಲೋಕಾಭಿರಾಮವಾಗಿ ಮಾತು ಆರಂಭಿಸಿ ಆತನನ್ನು ಮಾತಿಗೆಳೆಯುತ್ತಾನೆ. ಕೆಲಸದಲ್ಲಿ ಮಗ್ನನಾಗಿದ್ದ ಶಿಲ್ಪಿ ಕೂಡಲೇ ಹಿಂದಿರುಗಿ ಏಕೆ 'ಕಣ್ಣಿಗೆ ಕಾಣುತ್ತಿಲ್ಲವೆ ಕೆಲಸ ಕೊಟ್ಟಿದ್ದಾರೆ ಕೆಲಸ ಮಾಡುತ್ತಿದ್ದೇನೆ' ಎಂದು ಸ್ವಲ್ಪ ಒರಟಾಗಿಯೇ ಉತ್ತರಿಸುತ್ತಾನೆ. ಆ ಶಿಲ್ಪಿಯಿಂದ ಈ ಉತ್ತರವನ್ನು ನಿರೀಕ್ಷಿಸಿರದ ಆ ಯಾತ್ರಿಕ ಕ್ಷಣ ಮಾತ್ರವು ಅಲ್ಲಿ ನಿಲ್ಲದೆ ಮುಂದೆ ಹೋಗುತ್ತಾನೆ.

ಎರಡನೆಯ ಶಿಲ್ಪಿಯ ಬಳಿ ಬಂದ ಯಾತ್ರಿಕ ಕೆತ್ತನೆಯ ಕೆಲಸದಲ್ಲಿ ಮುಳುಗಿದ್ದ ಆ ಶಿಲ್ಪಿಯನ್ನು ಮತ್ತದೇ ಪ್ರಶ್ನೆ ಕೇಳಿ ಮಾತನಾಡಿಸುತ್ತಾನೆ. ಏನು ಮಾಡುತ್ತಿದ್ದೀರಿ! ಎನ್ನುತ್ತಾನೆ. ಯಾತ್ರಿಕನ ಪ್ರಶ್ನೆಗೆ ಹಿಂತಿರುಗಿ ಉತ್ತರಿಸಿದ ಆ ಶಿಲ್ಪಿ "ಪ್ರಭುಗಳು ಪಗಾರ ನಿಗದಿಗೊಳಿಸಿ ಕೆತ್ತನೆ ಕೆಲಸ ಮುಗಿಸಲು ಹೇಳಿದ್ದಾರೆ. ಹಾಗಾಗಿ, ಕೆತ್ತನೆಯ ಕೆಲಸ ಮಾಡುತ್ತಿದ್ದೇನೆ" ಎನ್ನುತ್ತಾನೆ. ಮೊದಲನೆಯ ಶಿಲ್ಪಿಯ ಮಾತಿನಷ್ಟು ಈತ ಒರಟನಲ್ಲದಿದ್ದರೂ ಮಾತಿನಲ್ಲೊಂದು ಸೌಜನ್ಯವಿತ್ತು ಆದರೆ ಪಗಾರಕ್ಕಾಗಿ ಕೆಲಸ, ಕೆಲಸಕ್ಕಾಗಿ ಪಗಾರ, ಅದಕ್ಕಾಗಿ ಈ ಕಾರ್ಯತತ್ಪರತೆ ಎಂಬ ವಸ್ತುನಿಷ್ಠ ಮಾತುಗಾರಿಕೆ ಅವನ ಅಭಿವ್ಯಕ್ತಿಯಲ್ಲಿ ವ್ಯಕ್ತವಾಗುತ್ತಿತ್ತು. ಯಾತ್ರಿಕ ತನ್ನ ಟಿಪ್ಪಣಿಯಲ್ಲಿ ಅದನ್ನು ಬರೆದುಕೊಂಡು ಯಾವ ಭಾವನೆಯೂ ಇಲ್ಲದೆ ಮುಂದುವರಿಯುತ್ತಾನೆ. ಮೂರನೆಯ ಶಿಲ್ಪಿಯ ಬಳಿ ಬಂದ ಯಾತ್ರಿಕ ಈತ ಇನ್ಯಾವ ಥರದಲ್ಲಿ ಉತ್ತರ ಕೊಡುತ್ತಾನೋ ಎಂಬ ಆತಂಕದಿಂದಲೇ ಮತ್ತದೇ ಪ್ರಶ್ನೆಯಿಂದ ಆ ಮೂರನೇ ಶಿಲ್ಪಿಯನ್ನು ಮಾತನಾಡಿಸುತ್ತಾನೆ. 'ಏನು ಮಾಡುತ್ತಿದ್ದೀರಿ'–ಎಂದು ಕೇಳುತ್ತಾನೆ. ಆದರೆ ಯಾತ್ರಿಕನಿಗೆ ಈ ಮೂರನೇ ಶಿಲ್ಪಿಯ ಬಳಿ ಆಶ್ಚರ್ಯ ಕಾದಿರುತ್ತದೆ. ಕಾರಣ ಮೊದಲ ಇಬ್ಬರೂ ಶಿಲ್ಪಿಗಳು ಉತ್ತರಿಸಿದಂತೆ ಆತ ಉತ್ತರಿಸುವು ದಿರಲಿ, ಯಾತ್ರಿಕನ ಕಡೆಗೆ ತಿರುಗಿಯೂ ನೋಡುವುದಿಲ್ಲ. ಪ್ರಾಯಶಃ ತಾನು ಕೂಗಿದ್ದು ಆ ಶಿಲ್ಪಿಗೆ ಕೇಳಿಲ್ಲವೆಂದು ಭಾವಿಸಿದ ಆ ಯಾತ್ರಿಕ ಮತ್ತೆ ಮತ್ತೆ ಜೋರಾಗಿ ಕೂಗಿ ಆ ಶಿಲ್ಪಿಯ ಕಿವಿ ಮುಟ್ಟುವಂತೆ ಕೂಗಿ ಕೂಗಿ ಮಾತನಾಡಿಸುವ ಪ್ರಯತ್ನ ಮಾಡುತ್ತಾನೆ. ಆದರೆ ಆ ಶಿಲ್ಪಿಗೆ ಆ ಯಾತ್ರಿಕನ ಮಾತಾಗಲಿ, ಅವನು ಕೇಳಿದ ಪ್ರಶ್ನೆಯಾಗಲಿ ಎರಡು ತಲೆಗೆ ಹೋಗುವುದಿಲ್ಲ, ಆತ ಮಾತ್ರ ನಿರುಮ್ಮಳವಾಗಿ ತನ್ನ ಕೆತ್ತನೆಯ ಕೆಲಸದಲ್ಲಿ ಮಗ್ನನಾಗಿರುತ್ತಾನೆ. ಇದನ್ನೇ ಹೇಳುವುದು ಕಲಾಕಾರಣದ ತಲ್ಲಿನತೆ Involvment ಅಂತ. ಆತನ ಯಾವ ಕೂಡಗಿಗೂ ತಲೆಯೆತ್ತದ ಆ ಶಿಲ್ಪಿಯನ್ನು ಮಾತಾಡಿಸಲೇಬೇಕೆಂಬ ಹಕ್ಕೆ ಬಿದ್ದು ಆ ಯಾತ್ರಿಕ ಆ ಶಿಲ್ಪಿಯ ಮೈ ಮುಟ್ಟಿ ಅಲುಗಾಡಿಸಿ ಆತನ ಕೆಲಸದ ತಲ್ಲೀನತೆಗೆ ಅಡ್ಡಿಪಡಿಸಿ ಮಾತನಾಡಿಸುತ್ತಾನೆ. ಆಗ ಯಾತ್ರಿಕನ ಕಡೆ ತಲೆಯೆತ್ತಿದ ಆ ಶಿಲ್ಪಿ ಏನು ಎಂಬಂತೆ ಕಣ್ಣಲ್ಲೇ ಸನ್ನೆ ಮಾಡಿ ತಲೆಯಾಡಿಸುತ್ತಾನೆ. ಆ ಯಾತ್ರಿಕ ಮತ್ತದೆ ಪ್ರಶ್ನೆ ಕೇಳುತ್ತಾನೆ. 'ಏನು ಮಾಡುತ್ತಿದ್ದೀರಿ' ಎಂದು. ಎಲೆ ಅಡಿಕೆ ತಾಂಬೂಲ ಜಗಿಯುತ್ತಾ ಹಣೆಯ ಮೇಲಿನ ಬೆವರನ್ನು ಒರೆಸಿಕೊಳ್ಳುತ್ತಾ ಆ ಯಾತ್ರಿಕನನ್ನು ಕುರಿತು ಮಾತನಾಡುವ ಆ ಶಿಲ್ಪಿ ನಾನು ದೇವಾಲಯದ ಕೆಲಸ ಮಾಡುತ್ತಿದ್ದೇನೆ ಎನ್ನುತ್ತಾನೆ.

ಹಾಗೆಂದರೆ! ಎನ್ನುವ ಯಾತ್ರಿಕನ ಮಾತಿಗೆ ಮಾತು ಮುಂದುವರೆಸುವ ಆ ಶಿಲ್ಪಿ ಹೇಳುತ್ತಾನೆ ಇದು ಕೇಶವ ದೇವಾಲಯದ ಕೆತ್ತನೆಯ ಕೆಲಸ. ಪ್ರಾಂಗಣವನ್ನು ದಾಟಿ ಒಳಬರುವ ಜನಕ್ಕೆ ರಸ ರೋಮಾಂಚನವಾಗುವಂತೆ ಮಾಡುವ ಜವಾಬ್ದಾರಿಯನ್ನು ಹೊತ್ತಿದ್ದೇನೆ. ನಾನು ಇಲ್ಲಿ ಕೆತ್ತುತ್ತಿರುವ ಪ್ರತಿಯೊಂದು ಮೂರ್ತಿಶಿಲ್ಪವು ಜನರ ಮನಸ್ಸಿಗೆ ಸುಖ ಕೊಡಬೇಕು, ಸಮಾದಾನ ಕೊಡಬೇಕು. ಆ ಮೂರ್ತಿ ಜನ ಸಮೂಹದಲ್ಲಿ ರಸೂತ್ಪತ್ತಿಯನ್ನುಂಟು ಮಾಡಬೇಕು. ಹಾಗಾಗಿ ಕೆಲಸದಲ್ಲಿ ಸ್ವಲ್ಪ ತಲ್ಲೀನನಾಗಿ ಬಿಟ್ಟೆ. ನಿಮ್ಮ ಮಾತು ಕೇಳಿಸಲ್ಲಿಲ್ಲ, ಕ್ಷಮೆ ಇರಲಿ ಎಂದನಂತೆ. ಆತ ಮತ್ತಾರು ಅಲ್ಲ ಆ ಕಾಲದ ಪ್ರಸಿದ್ಧ ಶಿಲ್ಪಿ ಮಲ್ಲಿತಮ, ಯಾತ್ರಿಕ ಆತನ ನಂಯ, ವಿನಯ, ಕಾರ್ಯತತ್ಪರತೆಯಲ್ಲಿನ ತಲ್ಲೀನತೆಗೆ ಮನಸೋತು ಆತನ ಗುರಿ ದಿಕ್ಕು ದೆಸೆಗಳನ್ನು ತನ್ನ ಟಿಪ್ಪಣಿ ಪುಸ್ತಕದಲ್ಲಿ ಗುರುತು ಹಾಕಿಕೊಳ್ಳುತ್ತಾನೆ. ಒಬ್ಬ ಕಲಾಕಾರ ತನ್ನ ನಂತರವು ಉಳಿಯುವ ಆತನ ಕಲಾಸೃಷ್ಟಿಯ ಬಗೆಗೆ ಜವಾಬ್ದಾರಿ ಹೊತ್ತಿದ್ದೇನೆ ಎನ್ನುವ ಆತನ ಮಾತು ಅದ್ಭುತ. ಅದು ಶಾಶ್ವತ 'ಸರ್ಕಾರದ ಕೆಲಸ ದೇವರ ಕೆಲಸ' ಎಂದು ಬರೆದುಕೊಂಡ ಮೇಲೆ ನಾವು ಪಗಾರಕ್ಕಾಗಿ ಕೆಲಸ ಕೆಲಸಕ್ಕಾಗಿ ಪಗಾರ ಎಂದರೆ ಎರಡನೇ ಶಿಲ್ಪಿಯ ಗುಂಪಿಗೆ ಸೇರುತ್ತೇವೆ. ಇದು ಸರ್ಕಾರದ ಕೆಲಸಕ್ಕೆ ಮಾತ್ರ ಅನ್ವಯಿಸುವುದಿಲ್ಲ. ತಲ್ಲೀನತೆಯಿಲ್ಲದೆ ಅಡಿಗೆ ಮಾಡುವ ಮಾಮೂಲಿ ಗೃಹಿಣಿಯಿಂದ ಹಿಡಿದು, ಬಾಹ್ಯಾಕಾಶದ ನಿರಂತರ ಸಂಶೋಧನೆಯಲ್ಲಿ ಮುಳುಗಿರುವ ವಿಜ್ಞಾನಿಯತನಕ ಎಲ್ಲರಿಗೂ ಇದು ಪಾಠವೇ! ಇನ್ನು ಕಣ್ಣು ಕಿವಿ ಮನಸ್ಸು ಇದಾವುದರ ತಲ್ಲೀನತೆಯೇ ಇಲ್ಲದೇ ಯಾಂತ್ರಿಕವಾಗಿ ಕೈ ಕಾಲುಗಳು ಮಾತ್ರ ದುಡಿಮೆಯಲ್ಲಿ ತೊಡಗಿಸಿಕೊಂಡರೆ ಮೊದಲ ಶಿಲ್ಪಿಯ ಗುಂಪಿಗೆ ಸೇರುತ್ತೇವೆ. ಮೈ ಮನಸ್ಸುಗಳು ಕೈ ಕಾಲುಗಳ ಸಂಯೋಜನೆ ತಪ್ಪಿದರೆ ಅಪಘಾತವೇ ಹೊರತು ಆಶಾವಾದಿತನ ಆಗುವುದಿಲ್ಲ. ಮನಸ್ಸು ನಿದ್ರೆಗೆ ಜಾರುವ ಮುಂಜಾನೆಯ ಹೊತ್ತಿನಲ್ಲಿ ಡ್ರೈವಿಂಗ್ ಸೀಟಿನಲ್ಲಿ ಕುಳಿತ ಡ್ರೈವರ್‌ನ ಹಾಗೆ! ಮೂರನೇ ಶಿಲ್ಪಿಯ ಜಾಗದಲ್ಲಿ ನಾವಿದ್ದರೆ ಅದು ದೇವರ ಕೆಲಸ, ಕಾಲಪ್ರವಾಹಕ್ಕೆ ಸಿಕ್ಕಿದರೂ ಅಗಸ್ತ್ಯನ ಜೀರ್ಣಾಗ್ನಿಗೆ ಸಿಕ್ಕಿದರೂ ಅಳಿಯದೆ ಉಳಿಯುವ ಸಮಾಜಮುಖಿ ವಿದ್ಯಮಾನ. ಅಲ್ಲಿ ನಾವು ಕಲಿತ ಕೆಲಸ, ಕಲಾಕಾರ ಸೃಷ್ಟಿಸಿದ ಆದಮ್ಯವಾದ ಕ್ರಿಯಾಶೀಲತೆ ವಸ್ತುವಿನ ರೂಪದಲ್ಲಿ, ಅಕ್ಷರದ ರೂಪದಲ್ಲಿ, ಅಭಿನಯದ ರೂಪದಲ್ಲಿ, ಅಂತರಂಗದಲ್ಲಿ ಬಹಿರಂಗದಲ್ಲಿ ಶಾಶ್ವತ. ಆಯಾ ಕ್ಷೇತ್ರಗಳ ಕಲಾಕಾರರು ಸೃಜಿಸಿದ ಅದ್ಭುತಗಳು ಆ ಕಾಲದ ವಿದ್ಯಮಾನಗಳಾಗಿ ಉಳಿಯುತ್ತವೆ. ಹಾಗೆಯೇ ಉಳಿದಿವೆ. ಇಂದಿಗೂ ಸರ್. ಎಂವಿ ಮತ್ತು ಕೃಷ್ಣರಾಜ ಒಡೆಯರು ಕಟ್ಟಿದ ಅಣೆಕಟ್ಟೆ, ಚೌಡಯ್ಯನವರ ಪಿಟೀಲು, ಡಾ. ರಾಜಕುಮಾರರ ಅಭಿನಯ, ಚಾರ್ಲಿಚಾಪ್ಲಿನ್ನರ ಹಾಸ್ಯ, ಹೀಗೆ ಪಟ್ಟಿ ಮಾಡುತ್ತಾ ಹೋದರೆ ನಮ್ಮ ತಲ್ಲಿನತೆಯ ವಿದ್ಯಮಾನದ ಪ್ರತೀಕಗಳು. ಹೀಗೆ ಪಟ್ಟಿ ಮಾಡುತ್ತಾ ಹೋದರೆ ಲೆಕ್ಕ ಅಸಂಖ್ಯಾತವಾಗಬಹುದು.

ಕೆಲಸ ಅದು ಚಿಕ್ಕದಿರಲಿ ದೊಡ್ಡದೇ ಇರಲಿ ಅನ್ನ ಆಹಾರ, ಛತ್ರ–ಛಾಮರ, ಅರವಟ್ಟಿಗೆಗಳು ಸಮಾಜಕ್ಕೆ ಹೊಟ್ಟೆ ತುಂಬಿಸಿವೆ. ಆ ಕೈಂಕರ್ಯ ಕೈಗೊಂಡವರು ಕೃತಾರ್ಥತೆಗೆ ಸಂದಂತೆ, ಕಲೆ ಸಾಹಿತ್ಯ, ಸಂಗೀತ, ಶಿಲ್ಪ ನೃತ್ಯ, ಚಿತ್ರ, ಅಭಿನಯ, ಜನಪದರು. ಹೀಗೆ ಒಟ್ಟಾರೆ ಎಲ್ಲಾ ಕಲಾಕಾರರು ಎಲ್ಲ ಕಾಲದಲ್ಲೂ ತಾವು ಕೂಡ ಈ ಸಮಾಜವನ್ನು ರಂಜಿಸಿ ಅಂತರಂಗಕ್ಕೊಂದು ಸುಖಕೊಟ್ಟು ಸಾಮಾಜಿಕ ವಿದ್ಯಮಾನ ಸೃಷ್ಟಿಸಿದ್ದಾರೆ. ಹಾಗೆಯೇ ಕಲಾಕಾರರಲ್ಲಿ ಆಗ ವಿದ್ಯೆಯು ಇತ್ತು, ಮಾನವು ಇತ್ತು, ಹಾಗಾಗಿ ಅದು ಕಲಾಕಾರನ ಸಾಮಾಜಿಕ ವಿದ್ಯಮಾನವಾಗಿ ಪರಿವರ್ತನೆಯಾಯಿತು. ಅಂದರೆ ಕಲೆಯ ಚಟುವಟಿಕೆಗಳು ಕಾಲಾನು ಕಾಲದಿಂದ ಉಳಿಯುತ್ತಲೆ ಬಂದಿತು. ಈ ದೃಷ್ಟಿಯಿಂದಲೇ ಇಂದಿಗೂ ಪಂಪನಿಂದ ಕುವೆಂಪುವರೆಗೆ ಎಂದು ನಾವು ಭಾವಿಸಲು, ಬರೆದುಕೊಳ್ಳಲು ಸಾಧ್ಯವಾಗಿದೆ. ಈ ಕಲಾ ವಿದ್ಯಮಾನವೇ ಯುಗಸಾಕ್ಷಿ. ಹಾಗಾಗಿ ತಲ್ಲೀನತೆ (Involvment) ಯಿಂದ ಸೃಷ್ಟಿಸಿದ ಅದು ಯಾವುದೇ ಇರಲಿ ಅದಕ್ಕೆ ಆಯಸ್ಸು ಜಾಸ್ತಿ ಅಜಂತ ಎಲ್ಲೋರಗಳು, ಭಾರತದ ಹಳೆಯ ವಿಶ್ವವಿದ್ಯಾನಿಲಯಗಳಾದ ತಕ್ಷಶಿಲ, ನಳಂದದಂತಹ ವಿಶ್ವವಿದ್ಯಾಲಯಗಳು, ಭಾರತದ ಕಂಠಸ್ತ ಗಾನಕೋಗಿಲೆಗಳು, ವಾದ್ಯಪರಿಕರಗಳು, ಕಲಾ ಸಾಮ್ರಾಟರು, ಅಕ್ಷರ ಪ್ರತಿಭೆಗಳು ಇಂದಿಗೂ ಭಾರತೀಯರ ಮನೋ ಮಂದಿರದಲ್ಲಿ ಅಚ್ಚಳಿಯದೆ ಉಳಿದಿರುವುದೇ ನಮ್ಮ ಸಾಂಸ್ಕೃತಿಕ ವಿದ್ಯಮಾನ, ಇದುವೇ ಆಯುಷ್ಯಾಮಾನ್ ಭಾರತ. ಏನಂತೀರಿ?

ಲೋಕಾಯುಕ್ತದಲ್ಲಿ ಎಫ್‌ಐಆರ್ ದಾಖಲಾಗಿರುವ ಹಿನ್ನೆಲೆ

ಮೈಸೂರು ದಸರಾದಿಂದ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ದೂರವಿಡಿ



ಮೈಸೂರು,ಸೆ.19(ಪಿಎಂ)– ಭ್ರಷ್ಟಾಚಾರ ಆರೋಪದಡಿ ಸಹಕಾರ ಮತ್ತು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ವಿರುದ್ಧ ಲೋಕಾಯುಕ್ತ ಪೊಲೀಸರು ಎಫ್‌ಐಆರ್ ದಾಖಲಿಸಿದ್ದು, ಈ ಹಿನ್ನೆಲೆಯಲ್ಲಿ ಎಸ್.ಟಿ.ಸೋಮಶೇಖರ್ ಅವರನ್ನು ಸರ್ಕಾರ ಮತ್ತು ಜಿಲ್ಲಾಡಳಿತ ದಸರಾ ಕಾರ್ಯಕ್ರಮಗಳಿಂದ ಹೊರಗಿಡಬೇಕು ಎಂದು ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು ಆಗ್ರಹಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ತಮ್ಮ ವಿರುದ್ಧ ಎಫ್‌ಐಆರ್ ದಾಖಲಾದ ಮೇಲೂ ಎಸ್.ಟಿ. ಸೋಮಶೇಖರ್ ನಿನ್ನೆ ದಸರಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಇದು ಕಾನೂನುಬಾಹಿರ. ಸಚಿವರೇ ನೆಲದ ಕಾನೂನು ಉಲ್ಲಂಘಿಸಿದ್ದು, ಜನಸಾಮಾನ್ಯರು ಮತ್ತು ಜನಸಾಮಾನ್ಯರಿಗೆ ಪ್ರತ್ಯೇಕ ಕಾನೂನುಗಳಿವೆಯೇ? ಎಂಬ ಪ್ರಶ್ನೆ ಜನಸಾಮಾನ್ಯರನ್ನು ಕಾಡುವಂತಾಗಿದೆ ಎಂದರು. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ರಾಮಲಿಂಗಂ ಕನ್‌ಸ್ಟ್ರಕ್ಷನ್ ಕಂಪನಿಗೆ ತಮ್ಮ ಪ್ರಭಾವ ಬಳಸಿ 666.22 ಕೋಟಿ ರೂ. ಮೊತ್ತದ ವಸತಿ ಸಮುಚ್ಛಯದ ಟೆಂಡರ್ ಅನ್ನು ಅಂತಿಮಗೊಳಿಸಿ ಕಾರ್ಯಾದೇಶ ನೀಡಿರುವ ಆರೋಪ ಎಸ್.ಟಿ.ಸೋಮಶೇಖರ್ ಅವರ ಮೇಲಿದ್ದು, ಇಲ್ಲಿ 12 ಕೋಟಿ ರೂ. ಭ್ರಷ್ಟಾಚಾರ ನಡೆದಿರುವ ಆರೋಪ ಕೇಳಿ ಬಂದಿದೆ ಹೈಕೋರ್ಟ್ ಆದೇಶದ ಮೇರೆಗೆ ಎಸ್.ಟಿ.ಸೋಮಶೇಖರ್ ಹಾಗೂ ಅಂದಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಸೇರಿದಂತೆ ಇತರರ ವಿರುದ್ಧ ಲೋಕಾಯುಕ್ತ ಪೊಲೀಸರು ಎಫ್‌ಐಆರ್ ದಾಖಲಿ ಸಿದ್ದಾರೆ ಎಂದು ವಿವರಿಸಿದರು.

ಎಸ್.ಟಿ.ಸೋಮಶೇಖರ್ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಹಾಗೂ ಭಾರತೀಯ ದಂಡ ಸಂಹಿತೆ ಕಲಂಗಳಡಿ ಪ್ರಕರಣ ದಾಖಲಾಗಿದೆ. ಜೊತೆಗೆ ಪ್ರಕರಣ ಸಂಬಂಧ ಇವರಿಗೆ ಜಾಮೀನು ಸಹ ಈವರೆಗೆ ದೊರಕಿಲ್ಲ. ಹೀಗಾಗಿ ಅವರು ದಸರಾ ಕಾರ್ಯಕ್ರಮಗಳಿಂದ ದೂರ ವಿರಬೇಕು. ವಾಸ್ತವವಾಗಿ ಎಫ್‌ಐಆರ್ ದಾಖಲಾದ ಕೂಡಲೇ ಸಚಿವರು ರಾಜೀನಾಮೆ ನೀಡಬೇಕಾಗಿತ್ತು. ಅವರು ದಸರಾ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದನ್ನು ಜಿಲ್ಲಾಧಿಕಾರಿಗಳು ನಿರ್ಬಂಧಿಸಬೇಕು. ಇಲ್ಲವಾದರೆ ಹೋರಾಟ ಅನಿವಾರ್ಯವಾಗಲಿದೆ ಎಂದು ಎಚ್ಚರಿಸಿದರು. ಈ ಬಾರಿ ರಾಷ್ಟ್ರಪತಿಗಳು ದಸರಾ ಮಹೋತ್ಸವ ಉದ್ಘಾಟಿಸಲಿದ್ದಾರೆ. ಆರೋಪ ಹೊತ್ತಿರುವ ಸಚಿವರು ಅವರೊಂದಿಗೆ ಪಾಲ್ಗೊಳ್ಳುವುದು ಸೂಕ್ತವಲ್ಲ. ಇದರಿಂದ ಮೈಸೂರು ದಸರಾಗೆ ಅಪಖ್ಯಾತಿ ಬರುತ್ತದೆ. ಎಸ್.ಟಿ.ಸೋಮಶೇಖರ್ ಅವರು ನೈತಿಕತೆಯಿಂದ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿ ಆರೋಪ ಮುಕ್ತರಾದ ಮೇಲೆ ಸಚಿವರಾಗಿ ಮುಂದುರೆಯುವುದು ಸೂಕ್ತ ಎಂದು ಹೇಳಿದರು. ರಾಜ್ಯ ಅತಿ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಜಿಲ್ಲಾಧ್ಯಕ್ಷ ಡಿ.ನಾಗಭೂಷಣ್, ಮುಖಂಡರಾದ ಮೈಸೂರು ಬಸವಣ್ಣ, ಆರ್.ಕೆ.ರವಿ, ಸತ್ಯನಾರಾಯಣ, ಸಂಜಯ್, ಮಂಜು, ಲೋಕೇಶ್‌ಕುಮಾರ್ ಮಾದಾಪುರ ಮತ್ತಿತರರು ಸುದ್ದಿಗೋಷ್ಠಿಯಲ್ಲಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ ಮಂಗಳವಾರ 20 ಸೆಪ್ಟೆಂಬರ್ 2022

ನಮ್ಮ ಕ್ಲಿನಿಕ್ ಕೈಬಿಡಿ, ಪ್ರಾಥಮಿಕ ಆರೋಗ್ಯ ಕೇಂದ್ರ ಮೇಲ್ದರ್ಜೆಗೇರಿಸಿ

ಎಂಎಲ್‌ಸಿ ಸಿ.ಎನ್.ಮಂಜೇಗೌಡ ಆಗ್ರಹ

ಬೆಂಗಳೂರು,ಸೆ.19–ರಾಜ್ಯಸರ್ಕಾರ ನೂತನವಾಗಿ 15ನೇ ಹಣಕಾಸು ಯೋಜನೆಯಡಿ 103.73 ಕೋಟಿ ಖರ್ಚು ಮಾಡಿ ರಾಜ್ಯದಲ್ಲಿ 438 'ನಮ್ಮ ಕ್ಲಿನಿಕ್'ಗಳನ್ನು ತೆರೆಯುವ ಬದಲು ರಾಜ್ಯದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನೇ ಮೇಲ್ದರ್ಜೆಗೇರಿಸಿ ವೈದ್ಯರು, ನರ್ಸ್‌ಗಳು, ಟೆಕ್ನಿಷಿಯನ್‌ಗಳನ್ನು ನೇಮಕ ಮಾಡಿಕೊಳ್ಳಬೇಕೆಂದು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಸರ್ಕಾರವನ್ನು ಒತ್ತಾಯಿಸಿದರು.



ಸಿ.ಎನ್.ಮಂಜೇಗೌಡ

ವಿಧಾನಪರಿಷತ್‌ನಲ್ಲಿ ಮಾತನಾಡಿದ ಅವರು, ರಾಜ್ಯದ ಗ್ರಾಮ ಪಂಚಾಯಿತಿ, ಪಟ್ಟಣಪಂಚಾಯಿತಿ, ಪುರಸಭೆ, ನಗರಸಭೆ, ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಈಗಾಗಲೇ ವಾರ್ಡ್‌ಗೆ ಒಂದರಂತೆ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇವೆ. ಆದರೆ ಕಳೆದ ನಾಲ್ಕು ವರ್ಷಗಳಿಂದ ಆರೋಗ್ಯ ಇಲಾಖೆಯಲ್ಲಿ ಯಾವುದೇ ಸುಧಾರಣೆ ತರಲು ಪ್ರಯತ್ನಿಸದ ಸರ್ಕಾರ ಇದ್ದಕ್ಕಿದ್ದಂತೆ. ನಮ್ಮ ಕ್ಲಿನಿಕ್ ತೆರೆಯಲು ಹೊರಟಿರುವುದು ಎಷ್ಟು ಸರಿ, ಇದು ಚುನಾವಣಾ ಗಿಮಿಕ್ ಅಲ್ಲವೆ ಎಂದು ಪ್ರಶ್ನಿಸಿದ ಅವರು, ಸರ್ಕಾರಕ್ಕೆ ನೈಜ ಕಾಳಜಿ ಇದ್ದರೆ ಕಳೆದ 40–50 ವರ್ಷಗಳಿಂದ ನಗರ ಹಾಗೂ ಗ್ರಾಮೀಣ ಭಾಗಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರಿಲ್ಲ. ನರ್ಸ್‌ಗಳಿಲ್ಲ, ಲ್ಯಾಬ್ ಟೆಕ್ನಿಷಿಯನ್‌ಗಳಿಲ್ಲ, ಎಕ್ಸ್‌ರೇ ಟೆಕ್ನಿಷಿಯನ್, ಡಿ ಗ್ರೂಪ್ ನೌಕರರಿಲ್ಲ. ಸುಸಜ್ಜಿತವಾದ ಕಟ್ಟಡಗಳಿಲ್ಲ, ಯಂತ್ರಗಳಿಲ್ಲ ಹೀಗೆ ಯಾವುದೇ ಮೂಲಭೂತ ಸೌಲಭ್ಯಗಳನ್ನು ನೀಡದೆ, ಅದೇ ಜಾಗದಲ್ಲಿ ನೂರಾರು ಕೋಟಿ ರೂ.ಗಳನ್ನು ಖರ್ಚು ಮಾಡಿ ಈ ನಮ್ಮ ಕ್ಲಿನಿಕ್‌ಗಳನ್ನು ತೆರೆಯುವ ಯೋಜನೆ ಕೈಬಿಡುವ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕು ಎಂದು ಆಗ್ರಹಿಸಿದರು.



ಜೆಡಿಎಸ್ ರಾಜ್ಯ ಕಾರ್ಯದರ್ಶಿಯಾಗಿ ನೇಮಕಗೊಂಡಿರುವ ಅಬ್ದುಲ್ ಅಜೀಜ್ (ಅಬ್ದುಲ್ಲಾ) ಅವರನ್ನು ನಗರಪಾಲಿಕೆ ಸದಸ್ಯರಾದ ಶಫಿ ಅಹಮದ್, ರಫೀಕ್, ಸವೂದ್ ಖಾನ್, ಸಮೀವುಲ್ಲಾ, ಎನ್‌ಆರ್ ಕ್ಷೇತ್ರದ ಅಧ್ಯಕ್ಷ ರಾಮು, ಕಿರಣ್, ಸೌಭಾಗ್ಯ, ರಿಜ್ವಾನ್ ಇನ್ನಿತರರು ಅಭಿನಂದಿಸಿದರು.

ಬಲಮುರಿಯಲ್ಲಿ ಮುಳುಗಿ ಯುವಕ ಸಾವು

ಮೈಸೂರು,ಸೆ.19(ಆರ್‌ಕೆ)–ಸ್ನೇಹಿತರೊಂದಿಗೆ ಈಜಲು ಹೋದ ಯುವಕ ನೋರ್ವ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾನೆ. ಈ ಘಟನೆ ಶ್ರೀರಂಗಪಟ್ಟಣ ತಾಲೂಕು, ಬಲಮುರಿಯಲ್ಲಿ ಭಾನುವಾರ ಮಧ್ಯಾಹ್ನ ಸಂಭವಿಸಿದೆ. ಮೈಸೂರಿನ ವಿದ್ಯಾರಣ್ಯಪುರಂ ನಿವಾಸಿ ಸೋಮಶೇಖರ್ ಅವರ ಮಗ ಎಂ.ಎಸ್.ಯೋಗೇಶ್(23) ದುರಂತ ಸಾವಿಗೀಡಾದವರು. ಸ್ನಾತಕೋತ್ತರ ಪದವೀಧರನಾದ ಆತ, ಭಾನುವಾರ ಮಧ್ಯಾಹ್ನ ಮೂವರು ಸ್ನೇಹಿತರೊಂದಿಗೆ ಶ್ರೀರಂಗಪಟ್ಟಣ ತಾಲೂಕು, ಬೆಳಗೊಳ ಸಮೀಪದ ಕಾವೇರಿ ನದಿಯ ಬಲಮುರಿಯಲ್ಲಿ ಈಜುತ್ತಿದ್ದಾಗ 3.30ರ ವೇಳೆಗೆ ನೀರಿನಲ್ಲಿ ಮುಳುಗಿದ್ದ. ಮಾಹಿತಿ ತಿಳಿಯುತ್ತಿದ್ದಂತೆಯೇ ಸ್ಥಳಕ್ಕಾಗಮಿಸಿದ ಕೆಆರ್‌ಎಸ್ ಠಾಣೆ ಪೊಲೀಸರು, ಅಗ್ನಿಶಾಮಕ ಠಾಣೆ ಸಿಬ್ಬಂದಿ ಹಾಗೂ ತಜ್ಞ ಈಜುಗಾರರ ನೆರವಿನಿಂದ ಶೋಧ ನಡೆಸಿದರು. ರಾತ್ರಿ 10.30 ಗಂಟೆ ವೇಳೆಗೆ ನದಿಯಲ್ಲಿ ಯೋಗೇಶ್ ದೇಹ ಪತ್ತೆಯಾಯಿತು. ಪ್ರಕರಣ ದಾಖಲಿಸಿಕೊಂಡ ಪೊಲೀಸರು ಮಹಜರು ನಡೆಸಿ ಪ್ರಾಣಾಪಾಯದಿಂದ ಪಾರಾಗಿರುವ ಮೂವರು ಯುವಕರನ್ನು ವಿಚಾರಣೆ ನಡೆಸಿದ ನಂತರ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಂತರ ವಾರಸುದಾರರಿಗೆ ಇಂದು ಬೆಳಗ್ಗೆ ದೇಹವನ್ನು ಹಸ್ತಾಂತರಿಸಿದರು.



ಎಂ.ಎಸ್.ಯೋಗೇಶ್

ಕ್ರೈಂ ಬಾಕ್ಸ್

ಕಾಂಕ್ರೀಟ್ ಕೆಲಸ ಮಾಡುತ್ತಿದ್ದ ಕಾರ್ಮಿಕ ಸಾವು

ಮೈಸೂರು, ಸೆ.19(ಆರ್‌ಕೆ)– ಕಟ್ಟಡವೊಂದರಲ್ಲಿ ಕಾಂಕ್ರೀಟ್ ಕೆಲಸ ಮಾಡುತ್ತಿದ್ದ ಕಾರ್ಮಿಕ ಸಾವನ್ನಪ್ಪಿರುವ ಘಟನೆ ನಂಜನಗೂಡು ತಾಲೂಕು, ಮುದ್ದನಹಳ್ಳಿ ಗ್ರಾಮದಲ್ಲಿ ಭಾನುವಾರ ಸಂಭವಿಸಿದೆ. ನಂಜನಗೂಡು ತಾಲೂಕು ಕೂಡ್ಲಾಪುರ ಗ್ರಾಮದ ನಿವಾಸಿ ಬಸವರಾಜು(55) ಸಾವನ್ನಪ್ಪಿದವರು. ಮುದ್ದನಹಳ್ಳಿಯಲ್ಲಿ ಕಟ್ಟಡ ನಿರ್ಮಾಣ ಕಾಮಗಾರಿ ವೇಳೆ ಕಾಂಕ್ರೀಟ್ ಯಂತ್ರದ ಸಲಾಕೆ ಎದೆಗೆ ತಗುಲಿ ಅಸ್ವಸ್ಥರಾಗಿದ್ದ ಅವರನ್ನು ನಂಜನಗೂಡಿಗೆ ಕರೆತಂದು ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದ ಮಾಲೀಕ, ಊರಿಗೆ ಹೋಗುವಂತೆ ಹೇಳಿ ಬಸವರಾಜು ಅವರನ್ನು ಕಳಿಸಿದ್ದರು. ನಂತರ ಬಸ್‌ಸ್ಟ್ಯಾಂಡ್‌ಗೆ ಹೋಗಿ ಬಸ್ಸಿಗಾಗಿ ಕಾಯುತ್ತಿದ್ದ ಬಸವರಾಜು, ಮಧ್ಯಾಹ್ನ 1 ಗಂಟೆ ವೇಳೆಗೆ ಕುಸಿದು ಸ್ಥಳದಲ್ಲೇ ಸಾವನ್ನಪ್ಪಿದ್ದರು ಎಂದು ನಂಜನಗೂಡು ಪಟ್ಟಣ ಠಾಣೆ ಪೊಲೀಸರು ತಿಳಿಸಿದ್ದಾರೆ.

ವಿಷಯ ತಿಳಿಯುತ್ತಿದ್ದಂತೆಯೇ ನಾವು ಹೋದಾಗ ಬಸವರಾಜು ಮೃತಪಟ್ಟಿರುವುದು ತಿಳಿಯಿತು. ಪ್ರಕರಣ ದಾಖಲಿಸಿಕೊಂಡು ವೈದ್ಯರು ದೃಢಪಡಿಸಿದ ಬಳಿಕ ಮೃತದೇಹವನ್ನು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರಕ್ಕೆ ಸ್ಥಳಾಂತರಿಸಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ. ಇಂದು ಬೆಳಗ್ಗೆ ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ದೇಹವನ್ನು ಒಪ್ಪಿಸಲಾಯಿತು.

ವರುಣಾ ನಾಲೆಯಲ್ಲಿ ಮುಳುಗಿ ಯುವಕ ಸಾವು

ಮೈಸೂರು, ಸೆ.19(ಆರ್‌ಕೆ)– ಗೆಳೆಯರೊಂದಿಗೆ ಈಜಲು ಹೋದ ಯುವಕನೋರ್ವ ವಾಜಮಂಗಲ ಬಳಿ ವರುಣಾ ನಾಲೆಯಲ್ಲಿ ಮುಳುಗಿ ಸಾವನ್ನಪ್ಪಿರುವ ಘಟನೆ ಶನಿವಾರ ಮಧ್ಯಾಹ್ನ ಸಂಭವಿಸಿದೆ.

ಮೈಸೂರಿನ ವೀರನಗೆರೆ ನಿವಾಸಿ ಅರಸು ನಾಯಕ ಅವರ ಮಗ ಅಭಿಷೇಕ್ ನಾಯಕ(24) ಸಾವನ್ನಪ್ಪಿದವರು. 6 ಮಂದಿ ಸ್ನೇಹಿತರೊಡಗೂಡಿ ಶನಿವಾರ ಮಧ್ಯಾಹ್ನ ವಾಜಮಂಗಲ ಬಳಿ ವರುಣಾ ನಾಲೆಯಲ್ಲಿ ಈಜಾಡುತ್ತಿದ್ದಾಗ ಆತ ನೀರಿನಲ್ಲಿ ಕಣ್ಮರೆಯಾಗಿದ್ದ. ಮಾಹಿತಿ ಹಿನ್ನೆಲೆಯಲ್ಲಿ ಸ್ಥಳಕ್ಕೆ ಧಾವಿಸಿದ ಆಲನಹಳ್ಳಿ ಠಾಣೆ ಪೊಲೀಸರು ಶೋಧ ನಡೆಸಿದರಾದರೂ ಅಂದು ಮೃತದೇಹ ಪತ್ತೆಯಾಗಿರಲಿಲ್ಲ.



ಅಭಿಷೇಕ್ ನಾಯಕ

ಅಗ್ನಿಶಾಮಕ ದಳದ ಸಿಬ್ಬಂದಿಗಳೊಂದಿಗೆ ಕಾರ್ಯಾಚರಣೆ ಮುಂದುವರೆಸಿದಾಗ ಭಾನುವಾರ ಸಂಜೆ ಮೈಸೂರು ತಾಲೂಕು, ಚೌಹಳ್ಳಿ ಬಳಿ ವರುಣಾ ನಾಲೆಯಲ್ಲಿ ಅಭಿಷೇಕ್ ಮೃತದೇಹ ಪತ್ತೆಯಾಯಿತು. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ, ದೇಹವನ್ನು ವಾರಸುದಾರರಿಗೆ ಹಸ್ತಾಂತರಿಸಿದರು.

ಸಬ್ ಇನ್‌ಸ್ಪೆಕ್ಟರ್ ಪುತ್ರಿ ನೇಣಿಗೆ ಶರಣು

ಮೈಸೂರು,ಸೆ.19(ಆರ್‌ಕೆ)–ಜೀವನದಲ್ಲಿ ಜಿಗುಪ್ಸೆಗೊಂಡು, ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಪುತ್ರಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮೈಸೂರಿನ ಜಲಪುರಿ ಪೊಲೀಸ್ ಕ್ವಾರ್ಟರ್ಸ್‌ನಲ್ಲಿ ಭಾನುವಾರ ಮಧ್ಯಾಹ್ನ ಸಂಭವಿಸಿದೆ. ಹುಣಸೂರು ಪಟ್ಟಣ ಠಾಣೆ ಸಬ್ ಇನ್‌ಸ್ಪೆಕ್ಟರ್ ಲೋಕೇಶ್ ಅವರ ಪುತ್ರಿ ಎಂ.ಎ.ಲಿಖಿತಾ(22) ನೇಣಿಗೆ ಶರಣಾದವರು. ಮೈಸೂರು ವಿವಿ ಕಾಲೇಜೊಂದರಲ್ಲಿ ಎಂಎಸ್ಸಿ ವ್ಯಾಸಂಗ ಮಾಡುತ್ತಿದ್ದ ಆಕೆ, ಹಲವು ತಿಂಗಳಿಂದ ಹೊಟ್ಟೆ ನೋವಿನಿಂದ ಬಳಲುತ್ತಿದ್ದು, ಚಿಕಿತ್ಸೆ ಪಡೆದರೂ ಪ್ರಯೋಜನವಾಗದ ಕಾರಣ ನೋವು ತಾಳಲಾರದೇ ಭಾನುವಾರ ಮಧ್ಯಾಹ್ನ 3 ಗಂಟೆ ವೇಳೆಗೆ ನಜರ್‌ಬಾದ್‌ನ ಜಲಪುರಿಯ ಪೊಲೀಸ್ ಕ್ವಾರ್ಟರ್ಸ್‌ನಲ್ಲಿ ನೇಣು ಹಾಕಿಕೊಂಡು ಲಿಕಿತಾ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸ್ಥಳಕ್ಕೆ ಧಾವಿಸಿದ ನಜರ್‌ಬಾದ್ ಠಾಣೆ ಇನ್‌ಸ್ಪೆಕ್ಟರ್ ಜೀವನ್, ಸಿಬ್ಬಂದಿ ಮಹಜರು ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಇಂದು ಬೆಳಗ್ಗೆ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ಬಳಿಕ, ದೇಹವನ್ನು ವಾರಸುದಾರರಿಗೆ ಒಪ್ಪಿಸಲಾಯಿತು.

ಗಾಂಧಿನಗರದ ತಮ್ಮಯ್ಯ ನಿಧನ



ಮೈಸೂರು,ಸೆ.19–ಮೈಸೂರು ಗಾಂಧಿನಗರ ನಿವಾಸಿ ತಮ್ಮಯ್ಯ (65) ಅವರು ಭಾನುವಾರ ರಾತ್ರಿ ನಿಧನರಾದರು. ಮೃತರು ಪತ್ನಿ ಶ್ರೀಮತಿ ಚಿಕ್ಕತಾಯಮ್ಮ, ಮಕ್ಕಳಾದ ಶಿವರಾಜ, ಪುಷ್ಪಲತಾ, ಜಯಲಕ್ಷ್ಮಿ, ವನಿತಾ, ಲವಿತ್ ಹಾಗೂ ಅಪಾರ ಬಂಧುವರ್ಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸೋಮವಾರ (ಸೆ.19) ಮಧ್ಯಾಹ್ನ ಗಾಂಧಿನಗರದ ಆದಿಕರ್ನಾಟಕ ರುದ್ರಭೂಮಿಯಲ್ಲಿ ನೆರವೇರಿತು.

ಭಾರತ್ ಜೋಡೋ ಯಶಸ್ಸಿಗೆ ವಿವಿಧ ಸಮಿತಿಗಳ ರಚನೆ

ಮೈಸೂರಿಗೆ ಡಾ.ಹೆಚ್.ಸಿ.ಮಹದೇವಪ್ಪ, ಚಾ.ನಗರಕ್ಕೆ ಆರ್.ಧ್ರುವನಾರಾಯಣ್, ಮಂಡ್ಯಕ್ಕೆ ಎನ್.ಚೆಲುವರಾಯಸ್ವಾಮಿ ನೇತೃತ್ವ

ಪಟ್ಟಿಯಲ್ಲಿ ಹಾಲಿ ಮಾಜಿ ಶಾಸಕರು, ಸಂಸದರು ಪ್ರಮುಖ ಮುಖಂಡರು ಸೇರ್ಪಡೆ: ಡಿ.ಕೆ.ಶಿವಕುಮಾರ್‌ರಿಂದ ಪಟ್ಟಿ ಬಿಡುಗಡೆ

ಮೈಸೂರು, ಸೆ.19(ಆರ್‌ಕೆಬಿ)– ಕರ್ನಾಟಕದಲ್ಲಿ ರಾಹುಲ್‌ಗಾಂಧಿ ಅವರ ಭಾರತ್ ಜೋಡೋ ಯಾತ್ರೆಯ ಯಶಸ್ಸಿಗಾಗಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ವಿವಿಧ ಸಮಿತಿಗಳನ್ನು ರಚಿಸಿದ್ದಾರೆ. ಎಲ್ಲಾ ಸಮಿತಿಗಳ ಅಧ್ಯಕ್ಷರು ಮತ್ತು ಸದಸ್ಯರು ಕೂಡಲೇ ಸಭೆಗಳನ್ನು ನಡೆಸಿ ಯಾತ್ರೆಯನ್ನು ಯಶಸ್ವಿಗೊಳಿಸಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುವಂತೆ ಅವರು ಎಲ್ಲಾ ಸಮಿತಿಗಳಿಗೆ ಸೂಚನೆ ನೀಡಿದ್ದಾರೆ.

ಕೆಪಿಸಿಸಿ ಮಾಜಿ ಅಧ್ಯಕ್ಷ, ಶಾಸಕ ದಿನೇಶ್ ಗುಂಡೂರಾವ್ ನೇತೃತ್ವದಲ್ಲಿ ರಚಿಸಲಾಗಿರುವ ವಸತಿ ಸಮಿತಿಯಲ್ಲಿ ಶಾಸಕ ಮಂಜುನಾಥ್, ಮಾಜಿ ಶಾಸಕ ವಾಸು, ಎಂಎಲ್‌ಸಿ ದಿನೇಶ್ ಗೂಳಿಗೌಡ ಇದ್ದಾರೆ.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರ: ಸಮಿತಿ: ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ನೇತೃತ್ವದಲ್ಲಿ ಶಾಸಕರಾದ ತನ್ವೀರ್‌ಸೇಠ್, ಹೆಚ್.ಪಿ.ಮಂಜುನಾಥ್, ಮಾಜಿ ಸಚಿವರಾದ ಜೀವಿಜಯ, ಎಂ.ಸಿ.ನಾಣಯ್ಯ, ಮಾಜಿ ಶಾಸಕರಾದ ಕೆ.ವೆಂಕಟೇಶ್, ಎಂ.ಕೆ.ಸೋಮಶೇಖರ್, ಕೃಷ್ಣಪ್ಪ, ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಮಾಜಿ ಎಂಎಲ್‌ಸಿಗಳಾದ ವೀಣಾ ಅಚ್ಚಯ್ಯ, ಆರ್.ಧರ್ಮಸೇನಾ, ಕೆಪಿಸಿಸಿ ಲೀಗಲ್ ಸೆಲ್ ಛೇರ್ಮನ್ ಪೊನ್ನಣ್ಣ, ಡಾ.ಮಂದರ್‌ಗೌಡ, ವಕೀಲ ಚಂದ್ರಮೌಳಿ, ಹೆಚ್.ಎ.ವೆಂಕಟೇಶ್ ಇನ್ನಿತರರು.



ಹೆಚ್.ಸಿ.ಮಹದೇವಪ್ಪ

ಚಾಮರಾಜನಗರ ಲೋಕಸಭಾ ಕ್ಷೇತ್ರ ಸಮಿತಿ: ಕೆಪಿಸಿಸಿ ಕಾರ್ಯಾಧ್ಯಕ್ಷ, ಮಾಜಿ ಸಂಸದ ಆರ್.ಧ್ರುವನಾರಾಯಣ್ ನೇತೃತ್ವದಲ್ಲಿ ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಡಾ.ಯತೀಂದ್ರ ಸಿದ್ದರಾಮಯ್ಯ, ಅನಿಲ್‌ಕುಮಾರ್, ಚಾಮರಾಜನಗರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ, ಮಾಜಿ ಶಾಸಕರಾದ ಎಸ್.ಜಯಣ್ಣ, ಎಸ್.ಬಾಲರಾಜು, ಕಳಲೆ ಕೇಶವಮೂರ್ತಿ, ವಾಸು, ಮುಖಂಡ ಗಣೇಶ್ ಮಹದೇವಪ್ರಸಾದ್, ಮಾಜಿ ಸಂಸದರಾದ ಸಿದ್ದರಾಜು, ಕಾಗಲವಾಡಿ ಶಿವಣ್ಣ, ಕೆ.ಆರ್.ನಗರದ ರವಿಶಂಕರ್, ಮಾಜಿ ಅಧ್ಯಕ್ಷ ಎಸ್.ನಂಜಪ್ಪ ಇನ್ನಿತರರು.



ಧ್ರುವನಾರಾಯಣ್

ಮಂಡ್ಯ ಲೋಕಸಭಾ ಕ್ಷೇತ್ರ ಸಮಿತಿ: ಮಾಜಿ ಸಚಿವ ಎನ್.ಚೆಲುವರಾಯಸ್ವಾಮಿ ನೇತೃತ್ವದಲ್ಲಿ ಸಂಸದ ಜಿ.ಸಿ.ಚಂದ್ರಶೇಖರ್, ಎಂಎಲ್‌ಸಿಗಳಾದ ಮಧು ಜಿ.ಮಾದೇಗೌಡ, ದಿನೇಶ್ ಗೂಳಿಗೌಡ, ಮಾಜಿ ಸಚಿವರಾದ ನರೇಂದ್ರಸ್ವಾಮಿ, ಎಂ.ಎಸ್.ಆತ್ಮಾನಂದ, ಮಾಜಿ ಶಾಸಕರಾದ ರಮೇಶ್ ಬಾಬು ಬಂಡಿಸಿದ್ದೇಗೌಡ, ಕೆ.ಬಿ.ಚಂದ್ರಶೇಖರ್, ರಮೇಶ್, ಮಾಜಿ ಎಂಎಲ್‌ಸಿಗಳಾದ ಮಲ್ಲಾಜಮ್ಮ, ರಾಮಕೃಷ್ಣ, ಜಿಪಂ ಮಾಜಿ ಅಧ್ಯಕ್ ವಿಷ್ಣುಮೂರ್ತಿ, ಪಾಂಡವಪುರ ಡಾ.ರವೀಂದ್ರ, ಅಮರಾವತಿ ಚಂದ್ರಶೇಖರ್, ಡಾ. ಕೃಷ್ಣ, ಗುರುಚರಣ್, ತ್ಯಾಗರಾಜ್, ರವಿ ಕುಮಾರ್‌ಗೌಡ, ಮಂಜು, ಸುರೇಶ್, ಕೆಪಿಸಿಸಿ ಕೋ ಆರ್ಡಿನೇಟರ್ ಪಲ್ಲವಿ, ಎಲ್.ಡಿ.ರವಿ ಭೋಜೇಗೌಡ, ಕಡ್ಲೂರು ರಾಮಕೃಷ್ಣ, ಸಿದ್ದರಾಮೇಗೌಡ, ಮುನಾವರ್ ಖಾನ್, ಪುಟ್ಟೇಗೌಡ, ದಿನೇಶ್, ಪಾಲಾಕ್ಷ ಚಂದ್ರಶೇಖರ್, ಚಲುವರಾಜು, ಸತೀಶ್ ಸಿದ್ದಾರೂಢ, ವಿಜಯಕುಮಾರ್, ಶುಭಾ ರಜನಿ, ಜಯಲಕ್ಷ್ಮಿ ಮಳವಳ್ಳಿ ಇನ್ನಿತರರು.





ಚೆಲುವರಾಯಸ್ವಾಮಿ

ಅಲ್ಲದೆ ಕೆಪಿಸಿಸಿ ಮಾಜಿ ಅಧ್ಯಕ್ಷ ಡಾ.ಜಿ.ಪರಮೇಶ್ವರ್ ನೇತೃತ್ವದಲ್ಲಿ ತುಮಕೂರು ಜಿಲ್ಲಾ ಸಮಿತಿ, ಎಂಎಲ್‌ಸಿ ಸಲೀಮ್ ಅಹಮದ್ ನೇತೃತ್ವದಲ್ಲಿ ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲಾ ಸಮಿತಿ, ಕೆಪಿಸಿಸಿ ಕಾರ್ಯಾಧ್ಯಕ್ಷ ಶಾಸಕ ಈಶ್ವರ ಖಂಡ್ರೆ ನೇತೃತ್ವದಲ್ಲಿ ರಾಯಚೂರು ಜಿಲ್ಲಾ ಸಮಿತಿ, ಮಾಜಿ ಸಚಿವ ಹಾಲಿ ಶಾಸಕ ಎಂ.ಬಿ.ಪಾಟೀಲ್ ನೇತೃತ್ವದಲ್ಲಿ ಸಾರ್ವಜನಿಕ ಸಭೆ, ಬಳ್ಳಾರಿ ಕ್ಯಾಂಪೇನ್ ಸಮಿತಿ, ಶಾಸಕ ಹಾಗೂ ಕೆಪಿಸಿಸಿ ಡೇಟಾ ಸೆಲ್ ಛೇರ್ಮನ್ ಪ್ರಿಯಾಂಕ ಖರ್ಗೆ ನೇತೃತ್ವದಲ್ಲಿ ಮಾಧ್ಯಮ ಮತ್ತು ಸಾಮಾಜಿಕ ಜಾಲತಾಣ ಸಮಿತಿ, ಕೆಪಿಸಿಸಿ ಉಪಾಧ್ಯಕ್ಷ ಡಾ.ಬಿ.ಎಲ್.ಶಂಕರ್ ನೇತೃತ್ವದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಗಾಂಧಿ ಜಯಂತಿ ಆಚರಣಾ ಸಮಿತಿ, ಕೆಪಿಸಿಸಿ ಮಾಜಿ ಅಧ್ಯಕ್ಷ ಡಾ.ಜಿ.ಪರಮೇಶ್ವರ ನೇತೃತ್ವದಲ್ಲಿ ಇಂಟರಾಕ್ಷನ್ ಸಮಿತಿ, ಕೆಪಿಸಿಸಿ ಕಾರ್ಯಾಧ್ಯಕ್ಷ ಶಾಸಕ ರಾಮಲಿಂಗಾರೆಡ್ಡಿ ನೇತೃತ್ವದಲ್ಲಿ ಮಾರ್ಗ ಅಲಂಕಾರ ಮತ್ತು ಆಹಾರ ಸಮಿತಿ ರಚಿಸಿ ಡಿ.ಕೆ.ಶಿವಕುಮಾರ್ ಪಟ್ಟಿ ಬಿಡುಗಡೆ ಮಾಡಿದ್ದಾರೆ.

ರಸ್ತೆ ಅಗೆದು ಸಾರ್ವಜನಿಕರ ಸಂಚಾರಕ್ಕೆ ಅಡ್ಡಿ

- ಬಾರ್ ಮಾಲೀಕ, ಜೆಸಿಬಿ ಮಾಲೀಕ ಸೇರಿ ಮೂವರ ವಿರುದ್ಧ ಹೂಟಗಳ್ಳಿ ನಗರಸಭೆಗೆ ದೂರು
- ಕ್ರಮ ಕೈಗೊಳ್ಳದಿದ್ದಲ್ಲಿ ನಾಳೆ ನಗರಸಭೆ ಮುಂದೆ ಪ್ರತಿಭಟನೆ ಎಚ್ಚರಿಕೆ

ಮೈಸೂರು, ಸೆ.19–ಬಾರ್ ಮಾಲೀಕ ಸಾರ್ವಜನಿಕ ರಸ್ತೆಯನ್ನು ಜೆಸಿಬಿ ಮೂಲಕ ಅಗೆದು ಹಾಳುಮಾಡುವ ಮೂಲಕ ಸಾರ್ವಜನಿಕ ಓಡಾಟ ಹಾಗೂ ವಾಹನ ಸಂಚಾರಕ್ಕೆ ಅಡ್ಡಿಯುಂಟು ಮಾಡಿರುವ ಬಗ್ಗೆ ಹೂಟಗಳ್ಳಿ ನಗರಸಭೆಗೆ ದೂರು ನೀಡಲಾಗಿದೆ. ಮೈಸೂರು ತಾಲೂಕು ಹಿನಕಲ್ ಗ್ರಾಮದ ಹಳೆ ಅಂಚೆ ಕಚೇರಿ ರಸ್ತೆಯನ್ನು ಇಪಿಆರ್ ಬಾರ್ ಮಾಲೀಕರಾದ ರಘು ಮತ್ತು ಪುಟ್ಟರಾಜು ಅವರು ಜೆಸಿಬಿ(ಕೆಎ 09 ಎಂಡಿ3761) ಮೂಲಕ ಅಡ್ಡಲಾಗಿ ಅಗೆದಿದ್ದು, ಇದರಿಂದಾಗಿ ಈ ರಸ್ತೆಯಲ್ಲಿ ಸಾರ್ವಜನಿಕರ ಓಡಾಟ ಹಾಗೂ ವಾಹನ ಸಂಚಾರ ಅಸಾಧ್ಯವಾಗಿದೆ ಎಂದು ಹಿನಕಲ್‌ನ ಶ್ರೀ ನನ್ನೇಶ್ವರಸ್ವಾಮಿ ಕಲ್ಯಾಣಿ ಮತ್ತು ಹಿನಕಲ್ ಗ್ರಾಮದ ಅಭಿವೃದ್ಧಿ ಸಮಿತಿ ವತಿಯಿಂದ ನಗರಸಭೆಗೆ ದೂರು ಸಲ್ಲಿಸಲಾಗಿದೆ.

ಸಾರ್ವಜನಿಕ ರಸ್ತೆಯನ್ನು ಕಾನೂನು ಬಾಹಿರವಾಗಿ ಅಗೆದು ಹಾಳು ಮಾಡಿರುವ ರಘು ಮತ್ತು ಪುಟ್ಟರಾಜು ಹಾಗೂ ಜೆಸಿಬಿ ಮಾಲೀಕರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ಕ್ರಮ ಕೈಗೊಳ್ಳದಿದ್ದಲ್ಲಿ ಸೆಪ್ಟೆಂಬರ್ 21ರಂದು ಬೆಳಗ್ಗೆ 10.30ಕ್ಕೆ ನಗರಸಭೆ ಕಚೇರಿ ಮುಂದೆ ಪ್ರತಿಭಟನೆ ನಡೆಸಲಾಗುವುದು ಎಂದು ದೂರಿನಲ್ಲಿ ಎಚ್ಚರಿಕೆ ನೀಡಲಾಗಿದೆ. ಬಾರ್ ಮಾಲೀಕರಾದ ರಘು ಮತ್ತು ಪುಟ್ಟಸ್ವಾಮಿ ಅವರು ದುರುದ್ದೇಶದಿಂದ ರಸ್ತೆಯನ್ನು ಅಗೆದು ಹಾಳು ಮಾಡಿದ್ದಾರೆ. ಲೋಕೋಪಯೋಗಿ ಇಲಾಖೆ ವತಿಯಿಂದ ಸುಮಾರು ಎರಡು ಕೋಟಿ ರೂ. ವೆಚ್ಚ ಮಾಡಿ ಕಳೆದ ಒಂದು ತಿಂಗಳ ಹಿಂದೆಯಷ್ಟೇ ಅಭಿವೃದ್ಧಿಪಡಿಸಿದ್ದ ರಸ್ತೆಯನ್ನು ಇವರುಗಳು ಹಾಳುಗೆಡವಿದ್ದು, ಈಗಾಗಲೇ ನಗರ ಸಭೆಗೆ ದೂರು ಸಲ್ಲಿಸಿದರೂ ಕೂಡ ಸಂಬಂಧಪಟ್ಟವರ ವಿರುದ್ಧ ಯಾವುದೇ ರೀತಿಯ ಕ್ರಮ ಕೈಗೊಂಡಿಲ್ಲ ಎಂದು ದೂರಿನಲ್ಲಿ ಆಕ್ಷೇಪ ವ್ಯಕ್ತಪಡಿಸಲಾಗಿದೆ. ಅಲ್ಲದೇ, ರಸ್ತೆ ಹಾಳು ಮಾಡಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದರ ಜೊತೆಗೆ ರಸ್ತೆಯನ್ನು ದುರಸ್ತಿ ಪಡಿಸಿಕೊಡಬೇಕು ಎಂದು ಆಗ್ರಹಿಸಲಾಗಿದೆ.



ಮೈಸೂರಿನ ಬೋಗಾದಿ 2ನೇ ಹಂತದ ಟೆಲಿಕಾಂ ಬಡಾವಣೆಯಲ್ಲಿರುವ ಉದ್ಯಾನದ ಬಯಲು ರಂಗಮಂಟಪದಲ್ಲಿ ಕರ್ನಾಟಕ ರಾಜ್ಯ ಕಟ್ಟಡ ನಿರ್ಮಾಣ ಮತ್ತು ಕಾಮಗಾರಿ ಮಜ್ದೂರ್ ಸಂಘದ ವತಿಯಿಂದ ವಿಶ್ವಕರ್ಮ ಜಯಂತಿ ಹಾಗೂ ರಾಷ್ಟ್ರೀಯ ಕಾರ್ಮಿಕ ದಿನ ಆಚರಿಸಲಾಯಿತು. ಈ ವೇಳೆ ಜಿಎಸ್‌ಎಸ್ ಸಂಸ್ಥಾಪಕ, ಸಂಘದ ಗೌರವಾಧ್ಯಕ್ಷ ಶ್ರೀಹರಿ, ಜಿಲ್ಲಾಧ್ಯಕ್ಷ ಎನ್.ಚಂದ್ರು, ಜಿಲ್ಲಾ ಕಾರ್ಯದರ್ಶಿ ಚಂದನ್, ತಾಲೂಕು ಅಧ್ಯಕ್ಷ ಜಗದೀಶ್, ಜಿಲ್ಲಾ ಉಪಾಧ್ಯಕ್ಷ ಬಾಬು, ಸಂಚಾಲಕ ಕುಮಾರ್, ಸಹ ಕಾರ್ಯದರ್ಶಿ ಮಂಜುನಾಥಸ್ವಾಮಿ, ತಾಲೂಕು ಸಹ ಕಾರ್ಯದರ್ಶಿ ಹರೀಶ್, ಸಂಘಟನಾ ಕಾರ್ಯದರ್ಶಿ ಮೋಹನ್‌ಕುಮಾರ್ ಹಾಗೂ ಸದಸ್ಯರು ಉಪಸ್ಥಿತರಿದ್ದರು.

ನಾಳೆ ಜನಸಂಪರ್ಕ ಸಭೆ

ಮೈಸೂರು,ಸೆ.19–ಚೆಸ್ಕಾಂನಿಂದ ನ.ರಾ. ಮೊಹಲ್ಲಾ ವಿಭಾಗ ವ್ಯಾಪ್ತಿಯ ಗ್ರಾಹಕರಿಗೆ ಜನಸಂಪರ್ಕ ಸಭೆಯನ್ನು ಸಂಬಂಧಿಸಿದ ಉಪ ವಿಭಾಗ ಕಚೇರಿಗಳಲ್ಲಿ ನಡೆಸಲು ಉದ್ದೇಶಿಸಲಾಗಿದೆ. ಗ್ರಾಹಕರು ವಿದ್ಯುತ್ ಇಲಾಖೆಗೆ ಸಂಬಂಧಿಸಿದ ಸಮಸ್ಯೆಗಳಿದ್ದಲ್ಲಿ ಸೆ.21ರಂದು ಉಪವಿಭಾಗದಲ್ಲಿ ಬೆಳಗ್ಗೆ 11ಕ್ಕೆ, ಮಧ್ಯಾಹ್ನ 3ಕ್ಕೆ ಜ್ಯೋತಿನಗರ, ಸೆ.22ರಂದು ಬೆಳಗ್ಗೆ 11ಕ್ಕೆ ಕೇಂದ್ರ, ಮಧ್ಯಾಹ್ನ 3ಕ್ಕೆ ಚಾಮುಂಡಿಪುರಂ ಉಪ ವಿಭಾಗದಲ್ಲಿ ಹಾಗೂ ಸೆ.23ರಂದು ಬೆಳಗ್ಗೆ 11ಕ್ಕೆ ವರುಣ ಉಪವಿಭಾಗದಲ್ಲಿ ನಡೆಯುವ ಜನ ಸಂಪರ್ಕ ಸಭೆಗೆ ಕಡ್ಡಾಯವಾಗಿ ಕೋವಿಡ್–19ರ ಸುರಕ್ಷಾ ಕ್ರಮಗಳೊಂದಿಗೆ ಹಾಜರಾಗಿ ಸಭೆಯಲ್ಲಿ ಲಿಖಿತ ಅರ್ಜಿಗಳನ್ನು ಸಲ್ಲಿಸಿ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು.

ಶಿಷ್ಯವೇತನಕ್ಕೆ ಅರ್ಜಿ ಆಹ್ವಾನ

ಮೈಸೂರು,ಸೆ.19–ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ವತಿಯಿಂದ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ ಯೋಜನೆಯಡಿ ಡಿ.ಎಸ್.ಟಿ ವಿಜ್ಞಾನ ಮತ್ತು ಇಂಜಿನಿಯರಿಂಗ್‌ನಲ್ಲಿ ಪಿ.ಎಚ್.ಡಿ. ಸಂಶೋಧನೆಗೆ 2022–23 ಸಾಲಿನಲ್ಲಿ ಶಿಷ್ಯವೇತನ ಪಡೆಯಲು ಅರ್ಹ ಸಂಶೋಧನಾ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಅ.12 ರೊಳಗಾಗಿ ಅರ್ಜಿಯನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ http://ksteps.karnataka.gov.in ವೆಬ್‌ಸೈಟ್ ಮೂಲಕ ಮಾಹಿತಿ ಪಡೆಯಬಹುದು.

ಏಕಲವ್ಯನಗರ ನಿವಾಸಿಗಳಿಂದ ತಮಟೆ ಜಾಥಾ



ಮೈಸೂರು,ಸೆ.19(ಪಿಎಂ)– ಏಕಲವ್ಯನಗರದಲ್ಲಿ ತಾವು ವಾಸಿಸುತ್ತಿರುವ ನಿವೇಶನಗಳಿಗೆ ಹಕ್ಕುಪತ್ರ ನೀಡಬೇಕೆಂದು ಒತ್ತಾಯಿಸಿ ಇಲ್ಲಿನ ಅಲೆಮಾರಿ ಸಮುದಾಯದವರು ದಲಿತ ಸಂಘರ್ಷ ಸಮಿತಿ ನೇತೃತ್ವದಲ್ಲಿ ಜಿಲ್ಲಾಧಿಕಾರಿ ಕಚೇರಿ ಎದುರು ಆರಂಭಿಸಿದ ಅನಿರ್ದಿಷ್ಟಾವಧಿ, ಅಹೋರಾತ್ರಿ ಪ್ರತಿಭಟನೆ ಸೋಮವಾರವೂ ಮುಂದುವರೆಯಿತು. ಅಲ್ಲದೆ, ರೈಲ್ವೆ ನಿಲ್ದಾಣದ ಬಳಿ ಬಾಬು ಜಗಜೀವನರಾಮ್ ವೃತ್ತದಿಂದ ತಮಟೆ ಜಾಥಾ (ಪ್ರತಿಭಟನಾ ಮೆರವಣಿಗೆ) ನಡೆಸಿ, ಶೀಘ್ರ ತಮ್ಮ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿದರು. ಜೆಎಲ್‌ಬಿ ರಸ್ತೆ, ಹುಣಸೂರು ರಸ್ತೆ ಮೂಲಕ ಜಾಥಾವು ಜಿಲ್ಲಾಧಿಕಾರಿ ಕಚೇರಿ ತಲುಪಿ ಅಂತ್ಯಗೊಂಡಿತು. ದಸಂಸ ಜಿಲ್ಲಾ ಸಂಚಾಲಕ ಚೋರನಹಳ್ಳಿ ಶಿವಣ್ಣ ನೇತೃತ್ವದಲ್ಲಿ ಹೋರಾಟ ಮುಂದುವರೆದಿದೆ.

ಭವಿಷ್ಯದಲ್ಲಿ ಕಾಣಬಹುದಾದ ಅನಾರೋಗ್ಯ ಸಮಸ್ಯೆ ಗುರುತಿಸುವ ವಿಶೇಷ ಸೌಲಭ್ಯ

ಮೈಸೂರು,ಸೆ.19(ಆರ್‌ಕೆಬಿ)–ದೇಹದ ಪ್ರಭಾವಳಿಯನ್ನು ದಾಖಲಿಸುವ ಕಿರ್ಲಿಯನ್ ಛಾಂಯಾಗ್ರಹಣದ ಮೂಲಕ ದೇಹದಲ್ಲಿ ಸದ್ಯದಲ್ಲಿ ಇದ್ದು ಗಮನಕ್ಕೆ ಬಾರದಿರುವ ಹಾಗೂ ಮುಂದಿನ ದಿನಗಳಲ್ಲಿ ಕಾಣಿಸಿಕೊಳ್ಳಬಹುದಾದ ಅನಾರೋಗ್ಯ ಸಮಸ್ಯೆ ಗುರುತಿಸುವ ವಿಶೇಷ ಸೌಲಭ್ಯ ತಮ್ಮ ಚಿಕಿತ್ಸಾಲಯದಲ್ಲಿ ಲಭ್ಯವಿದೆ. ಹೀಗಾಗಿ ಆಸಕ್ತರು ಪ್ರಯೋಜನ ಪಡೆಯಬೇಕೆಂದು ನಗರದ ಸುಜಾತಾ ಹೀಲಿಂಗ್ ಕೇಂದ್ರದ ಸುಜಾತಾ ಮೋಹನ್‌ಕುಮಾರ್ ತಿಳಿಸಿದರು.



ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಇದು ಜಪಾನಿನ ವೈಜ್ಞಾನಿಕ ವಿಧಾನದ ಯಂತ್ರವಾಗಿದ್ದು, ಹೆಬ್ಬೆಟ್ಟಿನ ಮುದ್ರೆ ಪಡೆದ ಬಳಿಕ ಯಾವುದಾದರೂ ಅನಾರೋಗ್ಯ ಸಮಸ್ಯೆ ಮುಂದೆ ಬರಬಹುದೇ, ಈಗ ಗಮನಕ್ಕೆ ಬಾರದ ಏನಾದರೂ ಸಮಸ್ಯೆ ಇದೆಯೇ? ಎಂಬುದನ್ನು ದಾಖಲಿಸಿಕೊಳ್ಳಬಹುದಾಗಿದೆ ಎಂದರು.

ಈಗಾಗಲೇ ಈ ರೀತಿ ಪರೀಕ್ಷೆಗೆ ಒಳಗಾದವರು ನಂತರ ವೈದ್ಯಕೀಯ ಪರೀಕ್ಷೆಗೆ ಒಳಗಾದ ಬಳಿಕ ಸಕ್ಕರೆ ಕಾಯಿಲೆ ಮೊದಲಾದವು ತಮಗೆ ಅರಿವಿಲ್ಲದಂತೆ ಇರುವುದನ್ನು ಗಮನಿಸಿ ಅಚ್ಚರಿಗೊಂಡಿದ್ದಾರೆ. ಸಾಮಾನ್ಯ ಕ್ಯಾಮರಾ ದೇಹದ ಚಿತ್ರ ತೆಗೆದರೆ, ಈ ವಿಶಿಷ್ಟ ಕ್ಯಾಮರಾ ಕಣ್ಣಿಗೆ ಕಾಣದ ಪ್ರಭಾವಳಿಯ ಗ್ರಾಫ್ ಒದಗಿಸುತ್ತದೆ. ಹೀಗಾಗಿ ಆಸಕ್ತರು ಹೆಚ್ಚಿನ ಮಾಹಿತಿಗೆ ದೂ. 88803–22966 ಅನ್ನು ಸಂಪರ್ಕಿಸಬಹುದಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಕೆ.ಎಸ್.ಮುಕುಂದನ್, ಡಾ.ಗಣೇಶ್‌ರಾವ್ ಉಪಸ್ಥಿತರಿದ್ದರು.

ಎಟಿಎಂ ಕಾರ್ಡ್ ಬದಲಿಸಿ ಎರಡು ಲಕ್ಷ ರೂ. ವಂಚನೆ

ಕುಶಾಲನಗರ, ಸೆ.19– ಎಟಿಎಂನಲ್ಲಿ ಸ್ಟೇಟ್‌ಮೆಂಟ್ ತೆಗೆದುಕೊಡುವುದಾಗಿ ನಂಬಿಸಿ ಕಾರ್ಡ್ ಬದಲಾವಣೆ ಮಾಡಿ 2 ಲಕ್ಷ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ.

ಕುಶಾಲನಗರ ನಾಗೇಗೌಡ ಬಡಾವಣೆ ನಿವಾಸಿ ವೈ.ಸಿ. ಮಾದಪ್ಪ (76) ವಂಚನೆಗೊಳಗಾದವರಾಗಿದ್ದು, ಇವರು ಸೆ.6ರಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಎಟಿಎಂನಲ್ಲಿ 8 ಸಾವಿರ ರೂ. ಡ್ರಾ ಮಾಡಿದ್ದಾರೆ. ನಂತರ ಸ್ಟೇಟ್‌ಮೆಂಟ್ ತೆಗೆಯಲು ಪ್ರಯತ್ನಿಸಿ ವಿಫಲರಾದಾಗ ಅಲ್ಲಿಗೆ ಬಂದ ಅಪರಿಚಿತ ವ್ಯಕ್ತಿ ಸ್ಟೇಟ್‌ಮೆಂಟ್ ತೆಗೆದು ಕೊಡುವುದಾಗಿ ನಂಬಿಸಿ, ಅವರ ಕಾರ್ಡ್ ಪಡೆದು ಪ್ರಯತ್ನಿಸಿದ ನಂತರ ಕಾರ್ಡನ್ನು ಹಿಂದಿರುಗಿಸಿದ್ದಾನೆ. ನಂತರ ಹಂತ ಹಂತವಾಗಿ ಅವರ ಖಾತೆಯಿಂದ 2 ಲಕ್ಷ ರೂ. ಡ್ರಾ ಮಾಡಲಾಗಿದೆ. ಸೆ.14ರಂದು ಆಕಸ್ಮಿಕವಾಗಿ ಮಾದಪ್ಪ ಅವರು ಮೊಬೈಲ್‌ನಲ್ಲಿ ಮೆಸೇಜ್‌ಗಳನ್ನು ನೋಡಿದಾಗ ಖಾತೆಯಿಂದ ಹಣ ಡ್ರಾ ಆಗಿರುವುದು ಗಮನಕ್ಕೆ ಬಂದಿದೆ. ಅಪರಿಚಿತ ವ್ಯಕ್ತಿಯು ಎಟಿಎಂ ಕಾರ್ಡ್ ಬದಲಾಯಿಸಿ, ತನ್ನ ಕಾರ್ಡ್‌ನಿಂದ ಹಣ ಡ್ರಾ ಮಾಡಿದ್ದಾನೆ ಎಂದು ಮಾದಪ್ಪ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಕುಶಾಲನಗರ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಮನೆ ಬಾಗಿಲು ಮೀಟಿ 2.40 ಲಕ್ಷ ಮೌಲ್ಯದ ಚಿನ್ನಾಭರಣ ಕಳವು

ಮೈಸೂರು,ಸೆ.19–ಮನೆ ಬಾಗಿಲು ಮೀಟಿ 2.40 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಿರುವ ಬಗ್ಗೆ ಮೈಸೂರಿನ ಕೃಷ್ಣಮೂರ್ತಿಪುರಂ 5ನೇ ಕ್ರಾಸ್‌ನಿಂದ ವರದಿಯಾಗಿದೆ. ಇಲ್ಲಿನ ನಿವಾಸಿ ಸುಧಾಂಶುನಗರಹಳ್ಳಿ ಅವರು ಬೆಂಗಳೂರಿನ ಜಯತೀರ್ಥ ವಿದ್ಯಾ ಪೀಠದಲ್ಲಿ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದರು. ಅವರು ಏಪ್ರಿಲ್ 18ರಂದು ಮನೆಗೆ ಬೀಗ ಹಾಕಿಕೊಂಡು ಹೋಗಿದ್ದು, ಅವರ ಮನೆಯಲ್ಲಿ ಕಳ್ಳತನವಾಗಿದೆ ಎಂದು ಸ್ನೇಹಿತರು ತಿಳಿಸಿದ ಮಾಹಿತಿ ಮೇರೆಗೆ ಸೆ.16ರಂದು ಹಿಂದಿರುಗಿ ಬಂದು ನೋಡಿದಾಗ ಖದೀಮರು ಮನೆಯ ಬಾಗಿಲು ಮೀಟಿ 2.40 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಿರುವುದು ಗೊತ್ತಾಗಿದೆ. ಲಕ್ಷ್ಮೀಪುರಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಹೆಚ್ಚಿನ ಲಾಭದ ಆಮಿಷ ತೋರಿ 57.85 ಲಕ್ಷ ರೂ. ವಂಚನೆ

ಮೈಸೂರು,ಸೆ.19–ಟ್ರೇಡಿಂಗ್ ವೆಬ್‌ಸೈಟ್‌ನಲ್ಲಿ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭ ದೊರೆಯುತ್ತದೆ ಎಂದು ನಂಬಿಸಿ, ಎರಡು ಪ್ರಕರಣಗಳಲ್ಲಿ ಉದ್ಯಮಿಗೆ ಆನ್‌ಲೈನ್ ಮೂಲಕ ಒಟ್ಟು 57.85 ಲಕ್ಷ ರೂ. ವಂಚನೆ ಮಾಡಿರುವ ಬಗ್ಗೆ ವರದಿಯಾಗಿದೆ. ಮೈಸೂರಿನ ನಜರ್‌ಬಾದ್ ವಸಂತಮಹಲ್ ರಸ್ತೆ ನಿವಾಸಿ ಗಣೇಶ್ ಕೃಷ್ಣ (31) ವಂಚನೆಗೊಳಗಾದವರಾಗಿದ್ದು, ವೆಂಕಟೇಶ್ ಎಂಬ ಹೆಸರಿನಲ್ಲಿ ಆನ್‌ಲೈನ್ ಮೂಲಕ ಇವರಿಗೆ ಪರಿಚಯ ವಾದ ವ್ಯಕ್ತಿ Olestion India Diamond Private Limited ಕಂಪನಿಯಲ್ಲಿ ಹೂಡಿಕೆ ಮಾಡಿದರೆ ದಿನಕ್ಕೆ ಶೇ.2ರಷ್ಟು ಲಾಭವನ್ನು 150 ದಿನಗಳವರೆಗೆ ನೀಡಲಾಗುವುದು ಎಂದು ತಿಳಿಸಿದ್ದಾನೆ. ಅದನ್ನು ನಂಬಿದ ಗಣೇಶ್‌ಕೃಷ್ಣ 5.25 ಲಕ್ಷ ರೂ. ವರ್ಗಾವಣೆ ಮಾಡಿದ್ದು, ಅವರಿಗೆ ಅಸಲು ಹಣವಾಗಲೀ, ಲಾಭವಾಗಲೀ ಬಾರದೆ ವಂಚನೆಗೊಳಗಾಗಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ John, Chief Analyst in UK based ADMC wealth management firm ಎಂದು ಪರಿಚಯಿಸಿಕೊಂಡ ವ್ಯಕ್ತಿ BSQ Trading Website ನಲ್ಲಿ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭ ಗಳಿಸಬಹುದು ಎಂದು ನಂಬಿಸಿದ್ದಾನೆ. ಭಾರತೀಯ ಕರೆನ್ಸಿಯನ್ನು ಯುಎಸ್‌ಡಿಟಿಯಲ್ಲಿ ಬದಲಾಯಿಸಿ, ಟ್ರೇಡಿಂಗ್ ವೆಬ್‌ಸೈಟ್‌ಗೆ ಕ್ರಿಪ್ಟೋ ಕರೆನ್ಸಿ ಮೂಲಕ ವರ್ಗಾಯಿಸುವಂತೆ ತಿಳಿಸಿದ್ದಾನೆ. ಅದನ್ನು ನಂಬಿದ ಗಣೇಶ್‌ಕೃಷ್ಣ 52.60 ಲಕ್ಷ ವರ್ಗಾಯಿಸಿದ್ದಾರೆ. ನಂತರ ತಾವು ಹೂಡಿಕೆ ಮಾಡಿರುವ ಹಣ ಹಿಂದಿರುಗಿಸುವಂತೆ ಕೇಳಿದಾಗ ಆದಾಯ ತೆರಿಗೆ, ಅನಾಲಿಸ್ಟ್ ಕಮಿಷನ್, ಆಡಿಟ್ ಫೇಲ್ಯೂರ್ ಮತ್ತು ವಿತ್‌ಡ್ರಾ ಫೇಲ್ಡ್ ಮುಂತಾದ ನೆಪಗಳನ್ನು ಒಡ್ಡಿ ಹೆಚ್ಚಿನ ಹಣ ಹೂಡಿಕೆ ಮಾಡುವಂತೆ ಒತ್ತಾಯಿಸಲಾಗಿದೆ. ಈ ಸಂಬಂಧ ಮೈಸೂರು ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಿಟ್‌ಫಂಡ್ ವ್ಯವಹಾರದಲ್ಲಿ 2.44 ಕೋಟಿ ಸಂಗ್ರಹಿಸಿ ದಂಪತಿ ಪರಾರಿ

ಮೈಸೂರು, ಸೆ.19– ಕಾನೂನು ಬಾಹಿರವಾಗಿ ಚಿಟ್‌ಫಂಡ್ ವ್ಯವಹಾರ ನಡೆಸಿ, ಹಲವರಿಂದ 2.44 ಕೋಟಿ ರೂ. ವಸೂಲಿ ಮಾಡಿ, ದಂಪತಿ ಹಾಗೂ ಕುಟುಂಬಸ್ಥರು ಪರಾರಿಯಾಗಿರುವ ಬಗ್ಗೆ ಮೈಸೂರಿನ ಬೃಂದಾವನ ಬಡಾವಣೆಯಿಂದ ವರದಿಯಾಗಿದೆ.

ಬೃಂದಾವನ ಬಡಾವಣೆ 1ನೇ ಮೇನ್, 3ನೇ ಕ್ರಾಸ್, ಮನೆ ನಂ. 21ರಲ್ಲಿ ವಾಸವಿದ್ದ ಅನುಪಮಾ, ಅವರ ಪತಿ ಪ್ರಸಾದ್, ಮೈದುನ ಗಣೇಶ್, ಮಗಳು ಧನ್ಯಾ ಕೋಟ್ಯಾಂತರ ರೂ. ಹಣ ವಸೂಲಿ ಮಾಡಿ ಪರಾರಿಯಾಗಿದ್ದಾರೆ ಎಂಬ ಆರೋಪಕ್ಕೆ ಗುರಿಯಾಗಿರುವವರು. ಈ ಸಂಬಂಧ ಪೊಲೀಸರಿಗೆ ದೂರು ನೀಡಿರುವ ವಿಜಯನಗರ ನಿವಾಸಿ ಮಂಜುಳಾ ಅವರು, ಆರೋಪಿ ಅನುಪಮಾ ಚಿಟ್‌ಫಂಡ್ ಮತ್ತು ರಿಯಲ್ ಎಸ್ಟೇಟ್ ವ್ಯವಹಾರ ನಡೆಸುತ್ತಿದ್ದರು. ಅವರ ಪತಿ ಪ್ರಸಾದ್ ಬೃಂದಾವನ ಬಡಾವಣೆಯಲ್ಲಿ ಎಸ್‌ಬಿಐ ಗ್ರಾಹಕರ ಸೇವಾ ಕೇಂದ್ರ ತೆರೆದು ಸರ್ವೀಸ್ ನೀಡುವ ನೆಪದಲ್ಲಿ ಜನರನ್ನು ಪರಿಚಯ ಮಾಡಿಕೊಂಡು ತಮ್ಮ ಬಳಿ ಹೂಡಿಕೆ ಮಾಡಿದರೆ ಅಧಿಕ ಬಡ್ಡಿ ನೀಡುವುದಾಗಿ ಹಾಗೂ ತಮ್ಮ ವ್ಯವಹಾರದಲ್ಲಿ ಹಣ ತೊಡಗಿಸಿಕೊಂಡು ದುಪ್ಪಟ್ಟು ಲಾಭ ನೀಡುವುದಾಗಿ ನಂಬಿಸುತ್ತಿದ್ದರು. ಅನುಪಮಾ ಮೈದುನ ಗಣೇಶ್ 5 ಲಕ್ಷ ರೂ. ಚೀಟಿ ವ್ಯವಹಾರ ನಡೆಸುತ್ತಿದ್ದು, ಪ್ರತಿ ತಿಂಗಳು 12 ಸಾವಿರ ರೂ.ಗಳಂತೆ ವಸೂಲಿ ಮಾಡುತ್ತಿದ್ದರು. ಈ ವ್ಯವಹಾರದಲ್ಲಿ ಅನುಪಮಾ ಪುತ್ರಿ ಧನ್ಯಾ ಕೂಡ ತೊಡಗಿದ್ದರು. ತಾನು ಇವರಿಗೆ 83 ಲಕ್ಷ ರೂ.ಗಳನ್ನು ನೀಡಿದ್ದೇನೆ. ಆರಂಭದಲ್ಲಿ ಹೇಳಿದಂತೆ ಲಾಭಾಂಶದೊಂದಿಗೆ ಹಣ ಹಿಂದಿರುಗಿಸುತ್ತಿದ್ದರಿಂದ ನಂಬಿ ದೊಡ್ಡ ಮೊತ್ತದ ಹಣ ನೀಡಿದ್ದಾಗಿ ದೂರಿನಲ್ಲಿ ತಿಳಿಸಿದ್ದಾರೆ.

ಈ ದಂಪತಿಯು ಬೃಂದಾವನ ಬಡಾವಣೆಯ ಅನಿತಾ ಅವರಿಂದ 46 ಲಕ್ಷ, ಕಿರಣ್ ಎಂಬುವರಿಂದ 1.25 ಲಕ್ಷ, ಮಮತಾ ಎಂಬುವರಿಂದ 2.25 ಲಕ್ಷ, ಪುಷ್ಪಾ ಎಂಬುವರಿಂದ 7.50 ಲಕ್ಷ, ಜೆಎಸ್‌ಎಸ್ ಲೇಔಟ್‌ನ ರೇಣುಕಾ 32 ಲಕ್ಷ, ಮಥುರಾ ನಗರದ ಅಶ್ವಿನಿ 50 ಲಕ್ಷ, ಜನತಾನಗರದ ಸುಮಾಬಾಯ್ ಅವರಿಂದ 12 ಲಕ್ಷ, ವಿಜಯನಗರದ ಬೇಬಿ ಅವರಿಂದ 10 ಲಕ್ಷ ಸೇರಿದಂತೆ ಒಟ್ಟು 2.44 ಕೋಟಿ ರೂ. ವಸೂಲಿ ಮಾಡಿದ್ದಾರೆ. ನಾವೆಲ್ಲರೂ ಹಣ ಹಿಂದಿರುಗಿಸುವಂತೆ ಕೇಳಿದಾಗ ಸಬೂಬು ಹೇಳುತ್ತಿದ್ದವರು ಇದೀಗ ಮನೆ ಬೀಗ ಹಾಕಿಕೊಂಡು ಪರಾರಿಯಾಗಿದ್ದಾರೆ. ಅವರ ಮೊಬೈಲ್ ಸ್ವಿಚ್‌ಆಫ್ ಆಗಿದೆ. ಅಕ್ಕಪಕ್ಕದವರನ್ನು ವಿಚಾರಿಸಿದಾಗ ಮನೆ ಮಾರಾಟ ಮಾಡಲು ಪ್ರಯತ್ನಿಸುತ್ತಿದ್ದಾರೆ ಎಂಬ ಮಾಹಿತಿ ದೊರೆತಿದೆ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಲಾಗಿದೆ. ಈ ಸಂಬಂಧ ವಿವಿ ಪುರಂ ಠಾಣೆ ಪೊಲೀಸರು ಭಾರತೀಯ ದಂಡ ಸಂಹಿತೆ 406, 420, 34ರಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಮಂಡ್ಯ ಕಚೇರಿ : ನಂ. 1204/1, ಮಹಿಳಾ ಸಮಾಜ ರಸ್ತೆ, 3ನೇ ಕ್ರಾಸ್, ಅಶೋಕನಗರ, ಮಂಡ್ಯ–571404 ದೂ: 222026 (ಕ) ಫ್ಯಾಕ್ಸ್: 08232–222026, ಮೊ: 8762960325. E-Mail : mandya@mysurumithra.com

ಪಂಪ್‌ಸೆಟ್‌ಗೆ ಮೀಟರ್ ಅಳವಡಿಸಿದರೆ ಮುಖ್ಯಮಂತ್ರಿ ಕುರ್ಚಿ ಮುರಿಯುತ್ತೇವೆ

ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಗುಡುಗು



ಮಂಡ್ಯ, ಸೆ.19– ರೈತರ ಪಂಪ್ ಸೆಟ್‌ಗಳಿಗೆ ವಿದ್ಯುತ್ ಮೀಟರ್ ಅಳವಡಿಸಲು ಬಂದರೆ, ನಾವು ಮುಖ್ಯಮಂತ್ರಿಗಳ ಕುರ್ಚಿ ಕಾಲನ್ನು ಮುರಿಯಬೇಕಾಗುತ್ತದೆ ಎಂದು ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಗುಡುಗಿದರು.

ನಗರದ ಸಿಲ್ವರ್ ಜ್ಯೂಬಿಲಿ ಪಾರ್ಕ್‌ನಲ್ಲಿ ಆಯೋಜಿಸಿದ್ದ ರೈತರ ಬೃಹತ್ ಸಮಾವೇಶದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಮುಖ್ಯಮಂತ್ರಿಗಳು ಕಳೆದ ಜು.11 ರಂದು ನಾವು ಪ್ರತಿಭಟನೆ ನಡೆಸಿದ ವೇಳೆ, ನೀವು ಮಾತುಕತೆಗೆ ಬನ್ನಿ, ನಿಮ್ಮೆಲ್ಲಾ ಸಮಸ್ಯೆಗಳನ್ನೂ ಬಗೆಹರಿಸುತ್ತೇನೆ ಎಂದು ವಾರದ ಗಡುವು ನೀಡಿದ್ದರು. ನಾವು ನಮ್ಮ ಸಮಸ್ಯೆಗಳನ್ನು ಮನವರಿಕೆ ಮಾಡಿಕೊಟ್ಟಾಗ ಆತ್ಮೀಯತೆಯಿಂದ ಸ್ಪಂದಿಸಿ ಕಳಿಸಿದ್ದರು. ಆದರೆ, ಒಂದೂವರೆ ತಿಂಗಳಾದರೂ, ನಮ್ಮ ಬೇಡಿಕೆ ಈಡೇರಿಸಿಲ್ಲ. ಇದು ಡಬಲ್ ಇಂಜಿನ್ ಸರ್ಕಾರದ ರೈತ ವಿರೋಧಿ ಧೋರಣೆಗೆ ಸಾಕ್ಷಿಯಾಗಿದೆ ಎಂದು ಆರೋಪಿಸಿದರು.

ವಿದ್ಯುತ್ ಉತ್ಪಾದನೆ, ಸಂಪರ್ಕ ಹಾಗೂ ನಿರ್ವಹಣಾ ಹೊಣೆಗಳನ್ನು ಅದಾನಿ, ಅಂಬಾನಿಗೆ ಕೊಡಲು ಮುಂದಾಗಿರುವ ಸರ್ಕಾರದಿಂದ ರೈತರು ಯಾವ ಸೌಲಭ್ಯವನ್ನು ನಿರೀಕ್ಷಿಸಲೂ ಸಾಧ್ಯವಾಗುತ್ತಿಲ್ಲ. 1983ರಲ್ಲಿ ಗೂಂಡೂರಾವ್ ಅವರೊಂದಿಗೆ ರೈತ ಮುಖಂಡರಾದ ಎಂ.ಡಿ.ಸುಂದರೇಷನ್ ಹಾಗೂ ಎಂ.ಡಿ.ನಂಜುಂಡಸ್ವಾಮಿ ಅವರು ಮಾತನಾಡಿದ ಪರಿಣಾಮ 5 ಹೆಚ್.ಪಿ.ವರೆಗೆ ಉಚಿತ ವಿದ್ಯುತ್ ನೀಡಲು ಒಪ್ಪಿದ್ದರು. ಆ ನಂತರದಲ್ಲಿ ಕೆ.ಎಸ್.ಪುಟ್ಟಣ್ಣಯ್ಯನವರ ನೇತೃತ್ವದಲ್ಲಿ ನಡೆದ ಹೋರಾಟದಿಂದ 10 ಹೆಚ್‌ಪಿವರೆಗಿನ ಬಳಕೆಗೆ ಮೀಟರ್ ಇರುವುದಿಲ್ಲ ಎಂದು ಸರ್ಕಾರ ಘೋಷಿಸಿತ್ತು. ಆದರೆ, ಈಗಿನ ಸರ್ಕಾರ ಮೀಟರ್ ಅಳವಡಿಸಿ ರೈತರನ್ನು ಒಕ್ಕಲೆಬ್ಬಿಸುವ ಪ್ರಯತ್ನ ನಡೆಸಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಜಿಲ್ಲೆಯಲ್ಲಿ ಯುವ ಶಕ್ತಿ ಉದಯಿಸುವ ಎಲ್ಲಾ ಲಕ್ಷಣಗಳಿದ್ದು, ರೈತ ಸಂಘದಿಂದ ದರ್ಶನ್ ಪುಟ್ಟಣ್ಣಯ್ಯ, ಎಸ್.ಸಿ.ಮಧುಚಂದನ್, ಪ್ರಸನ್ನ ಎನ್.ಗೌಡರಂತಹ ಯುವ ನಾಯಕತ್ವ ಹೊಸ ನಡೆ, ನುಡಿಯ, ರಾಜಕಾರಣವನ್ನು ಹುಟ್ಟು ಹಾಕಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ರೈತ ಸಂಘದ ರಾಜ್ಯ ಗೌರವಾಧ್ಯಕ್ಷ ಚಾಮರ ಸಮಾಲಿ ಪಾಟೀಲ್ ಮಾತನಾಡಿ, ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಸುವ ಪ್ರಯತ್ನ ಮಾಡಿದರೆ ನಾವು ಮೀಟರ್‌ಗಳನ್ನು ಕಿತ್ತು ಕೆಆರ್‌ಎಸ್‌ಗೆ ಬಿಸಾಡುತ್ತೇವೆ ಎಂದು ಎಚ್ಚರಿಸಿದರು.

ರೈತ ಸಂಘದ ನಾಯಕಿ ಸುನೀತಾ ಪುಟ್ಟಣ್ಣಯ್ಯ ಮಾತನಾಡಿ, ಇಂದಿನ ಸಮಾವೇಶದಲ್ಲಿ ರೈತ ಕಾರ್ಯಕರ್ತರ ಒಗ್ಗಟ್ಟು ನೋಡಿ ನನಗೆ ಮನಃ ತುಂಬಿ ಬಂದಿದೆ. ರೈತರು ಹಸಿರು ಟವಲ್ ಬೀಸುತ್ತಿದ್ದರೆ ನಮ್ಮವರು (ಕೆ.ಎಸ್.ಪುಟ್ಟಣ್ಣಯ್ಯ) ಇಲ್ಲೇ ಎಲ್ಲೋ ಇದ್ದಾರೆಂಬ ಭಾವನೆ ಮೂಡುತ್ತಿದೆ ಎಂದು ಭಾವುಕರಾದರು.

ವೇದಿಕೆಯಲ್ಲಿ ರೈತ ಸಂಘದ ಜಿಲ್ಲಾಧ್ಯಕ್ಷ ಎ.ಎಲ್.ಕೆಂಪೂಗೌಡ, ಮುಖಂಡರಾದ ನಂದಿನಿ ಜಯರಾಂ, ವೀರಸಂಗಯ್ಯ, ಮಲೇನೂರು ಶಂಕರಪ್ಪ, ಲಿಂಗಪ್ಪಾಜಿ, ಪ್ರಸನ್ನ ಎನ್.ಗೌಡ, ಮಹಿಳಾಧ್ಯಕ್ಷೆ ನಾಗರತ್ನ ಪಾಟೀಲ್, ಗೋವಿಂದರಾಜು, ಕೆ.ಆರ್.ರವೀಂದ್ರ, ಕೆ.ಆರ್.ಜಯರಾಂ, ಹೆಬ್ಬಸೂರು ಬಸವಣ್ಣ, ಮಂಜುಳಾ ಅಕ್ಕಿ, ರಘು ಹಿರಿಸಾವೆ, ಚಿಕ್ಕಾಡೆ ಹರೀಶ್, ಮುನಿರಾಜು, ಮಂಜುನಾಥ ಗೌಡ, ಅರಸು, ಸಂಘದ ತಾಲೂಕು ಹಾಗೂ ಹೋಬಳಿ ಅಧ್ಯಕ್ಷರು, ಪದಾಧಿಕಾರಿಗಳು ಇದ್ದರು.

ಸಂಸದರು ನಿಗದಿಗೊಳಿಸಿದ ದಿನ ಆಣೆ–ಪ್ರಮಾಣ ಮಾಡಲು ಬದ್ಧ: ಸಿಎಸ್‌ಪಿ



ಮೇಲುಕೋಟೆ, ಸೆ.19– ಸಂಸದೆ ಸುಮಲತಾ ನಿಗದಿ ಮಾಡಿದ ದಿನ ನಾನು ಮೇಲುಕೋಟೆ ಶ್ರೀ ಚೆಲುವನಾರಾಯಣ ಸ್ವಾಮಿ ಸನ್ನಿಧಿಯಲ್ಲಿ ದಾಖಲೆಗಳೊಂದಿಗೆ ಬಂದು ಆಣೆ–ಪ್ರಮಾಣ ಮಾಡಲು ಬದ್ಧ ಎಂದು ಸಂಸದೆ ಸುಮಲತಾರ ಪಂಥಾಹ್ವಾನವನ್ನು ಶಾಸಕ ಸಿ.ಎಸ್.ಪುಟ್ಟರಾಜು ಸ್ವೀಕರಿಸಿದರು.

ಇಲ್ಲಿನ ಚೆಲುವನಾರಾಯಣಸ್ವಾಮಿ ದೇವಾಲಯಕ್ಕೆ ಸೋಮವಾರ ಭೇಟಿ ನೀಡಿ, ಪೂಜೆ ಸಲ್ಲಿಸಿದ ಶಾಸಕರು ಸುದ್ದಿಗಾರರೊಂದಿಗೆ ಮಾತನಾಡಿ, ಸಂಸದೆ ಸುಮಲತಾ ಅವರು ಚುನಾವಣಾ ದೃಷ್ಟಿಯಲ್ಲಿ ಆಧಾರ ರಹಿತವಾದ ಆರೋಪ ಮಾಡಿ ಚೆಲುವನಾರಾಯಣನ ಕ್ಷೇತ್ರದಲ್ಲಿ ಆಣೆ–ಪ್ರಮಾಣ ಮಾಡಲು ಆಹ್ವಾನಿಸಿದ್ದಾರೆ. ದಾಖಲೆಗಳೊಂದಿಗೆ ಅವರು ಮೇಲುಕೋಟೆಗೆ ಬರಲಿ, ನೇರಾ–ನೇರವಾಗಿ ಚರ್ಚಿಸಿ ಪ್ರಮಾಣ ಮಾಡೋಣ ಎಂದರು.

ನನ್ನದು ಭ್ರಷ್ಟಾಚಾರ ರಹಿತವಾದ ಪಾರದರ್ಶಕ ರಾಜಕಾರಣ. ಮನೆಯಿಂದ ದುಡ್ಡು ತಂದು ಜನಸೇವೆ ಮಾಡುತ್ತಿದ್ದೇನೆ. ನನಗೆ ಯಾವುದೇ ಕೈಗಾರಿಕೆಗಳಿಲ್ಲ. ಜಿಲ್ಲೆಗೆ ದೊಡ್ಡವರು ಸಂಸದರು. ಹಾಗಾಗಿ, ಮೇಲುಕೋಟೆಯಲ್ಲಿ ಆಣೆ– ಪ್ರಮಾಣ ಮಾಡಲು ದಿನಾಂಕ ಅವರೇ ನಿಗದಿ ಮಾಡಲಿ ಎಂದು ಸವಾಲು ಹಾಕಿದರು.

ಅಂಬರೀಶ್ ಮತ್ತು ನನ್ನ ಸಂಬಂಧ ಉತ್ತಮ ವಾಗಿತ್ತು. ಅವರ ಕೊನೆಯ ದಿನಾವಳಿಯಲ್ಲಿ ನಾನು ಭಾಗವಹಿಸಿದ್ದೆ. ನಮ್ಮ ನಡುವಿನ ಸಂಬಂಧ ಹೇಗಿತ್ತು ಎಂಬುದನ್ನು ರಾಕ್‌ಲೈನ್ ವೆಂಕಟೇಶ್ ಅವರನ್ನು ಕೇಳಿ ಸಂಸದರು ತಿಳಿದುಕೊಳ್ಳಬೇಕು. ಅಂಬರೀಶ್ ಗೆಲುವಿಗಾಗಿ ನಮ್ಮ ಮನೆಯ ಹೂ ಹಾಕಿ ಶ್ರಮಿಸಿದ್ದೇನೆ ಎಂದರು.

ಚುನಾವಣೆ ಹತ್ತಿರವಾಗುತ್ತಿದ್ದಂತೆ ಸುಮಲತಾ ಅವರಿಗೆ ಮೂಡ ನಿವೇಶನ ಪ್ರಕರಣ ನೆನಪಾಗುತ್ತದೆ. ಇದೊಂದು ದೊಡ್ಡ ಷಡ್ಯಂತ್ರ ನಿಮ್ಮ ಕುಟುಂಬಕ್ಕೆ ಮಂಜೂರಾದ ಎರಡು ನಿವೇಶನವನ್ನು ನೀವೇನು ಮಾಡಿದ್ದೀರಿ? ಸಂಸದೆ ಮಾರಾಟ ಮಾಡಿಲ್ಲವೆ ಎಂದು ಪ್ರಶ್ನಿಸಿದ ಶಾಸಕರು ಜೆಡಿಎಸ್ ಶಾಸಕರ ಬಗ್ಗೆ ಹಗುರವಾಗಿ ಮಾತನಾಡಿ

> ಸಂಸದೆ ಮಾತು ಮಾತಿಗೂ ಸದನದಲ್ಲಿ ಜಿಲ್ಲೆಯ ಶಾಸಕರು ಏನು ಪ್ರಶ್ನೆ ಮಾಡಿದ್ದೀರಿ? ಎನ್ನುತ್ತಾರೆ ನಮ್ಮ ನಾಯಕ ಹೆಚ್.ಡಿ.ಕುಮಾರಸ್ವಾಮಿ ಎಲ್ಲರ ಪರವಾಗಿ ಸದನದಲ್ಲಿ ಮಾತನಾಡುತ್ತಾರೆ. ಜನಪರವಾಗಿ ನಿಲ್ಲುತ್ತಾರೆ. ಅಧಿವೇಶನದಲ್ಲಿ 224 ಮಂದಿ ಶಾಸಕರೂ ಮಾತನಾಡಲು ಸಾಧ್ಯವಿಲ್ಲ ಎಂಬುದನ್ನು ಅವರು ತಿಳಿದುಕೊಳ್ಳಬೇಕು.
> -ಸಿ.ಎಸ್. ಪುಟ್ಟರಾಜು, ಶಾಸಕ

ದೊಡ್ಡವರಾಗಬೇಕು ಎಂದುಕೊಂಡಿದ್ದರೆ ಈ ಮನಸ್ಥಿತಿಯಿಂದ ಹೊರಬನ್ನಿ ಎಂದು ಕಿಡಿಕಾರಿದರು.

ನಿವೇಶನ ಮರಳಿಸಿದ್ದೇನೆ: ಮೂಡ ನಿವೇಶನ ನನಗೆ ಮಂಜೂರಾದ ತಕ್ಷಣ ಮರಳಿಸಿದ್ದೇನೆ. ಪ್ರಕರಣ ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿರುವಾಗ ಹಾದಿ ಬೀದಿಯಲ್ಲಿ ಚರ್ಚಿಸುವುದು ಒಳ್ಳೆಯ ಬೆಳವಣಿಗೆಯಲ್ಲ. ಈ ಸಂಬಂಧ ನ್ಯಾಯಾಲಯ ನೀಡುವ ತೀರ್ಪಿಗೆ ಎಲ್ಲರೂ ಬದ್ಧರಾಗಿರ ಬೇಕಾಗುತ್ತದೆ ಎಂದು ಶಾಸಕ ಪುಟ್ಟರಾಜು ತಿಳಿಸಿದರು.

ಜಮೀನಿನಲ್ಲಿ ಗಾಂಜಾ ಬೆಳೆ: ವ್ಯಕ್ತಿ ಬಂಧನ



ಶ್ರೀರಂಗಪಟ್ಟಣ, ಸೆ.19– ಜಮೀನಿನಲ್ಲಿ ಗಾಂಜಾ ಬೆಳೆದಿದ್ದ ವ್ಯಕ್ತಿಯೊಬ್ಬನನ್ನು ಅಬಕಾರಿ ಇಲಾಖೆ ಅಧಿಕಾರಿಗಳು ಬಂಧಿಸಿ, ಅಪಾರ ಪ್ರಮಾಣದ ಗಾಂಜಾ ವಶಪಡಿಸಿಕೊಂಡಿರುವ ಘಟನೆ ತಾಲೂಕಿನ ಮೊಗರಹಳ್ಳಿಯಲ್ಲಿ ನಡೆದಿದೆ.

ಮೈಸೂರಿನ ಸುಭಾಷ್ ನಗರದ ನಿವಾಸಿ ಕೃಷ್ಣಮೂರ್ತಿ(57) ಬಂಧಿತ ಆರೋಪಿ. ಈತ ತಾಲೂಕಿನ ಮೊಗರಹಳ್ಳಿ ಗ್ರಾಮದ ಸರ್ವೆ ನಂ.31ರಲ್ಲಿರುವ ತೋಟದ ಮನೆಯಲ್ಲಿ ಅಕ್ರಮವಾಗಿ ಒಣ ಗಾಂಜಾ ಶೇಖರಿಸಿ, ಮಾರಾಟ ಮಾಡುತ್ತಿರುವ ಬಗ್ಗೆ ಬಂದ ಖಚಿತ ಮಾಹಿತಿ ಮೇರೆಗೆ ಅಬಕಾರಿ ಅಧಿಕಾರಿಗಳು ದಾಳಿ ನಡೆಸಿ ಮನೆಯ ಮುಂಭಾಗದಲ್ಲಿ ನಿಂತಿದ್ದ ಸುಜೂಕಿ ಆಕ್ಸೆಸ್–125 ಸ್ಕೂಟರ್‌ನಲ್ಲಿ 1.100 ಕೆಜಿ ಒಣ ಗಾಂಜಾ ವಶಪಡಿಸಿಕೊಂಡಿದ್ದಾರೆ. ಬಳಿಕ ಆತನನ್ನು ತೀವ್ರ ವಿಚಾರಣೆ ನಡೆಸಿದಾಗ ತನ್ನ ಜಮೀನಿನಲ್ಲಿ ಗಾಂಜಾ ಗಿಡ ಬೆಳೆದಿರುವುದಾಗಿ ತಪ್ಪೊಪ್ಪಿಕೊಂಡಿದ್ದಾನೆ. ವಿಷಯ ತಿಳಿದು ಕೃಷ್ಣಮೂರ್ತಿಗೆ ಸೇರಿದ ಜಮೀನನ್ನು ಅಧಿಕಾರಿಗಳು ಪರಿಶೀಲಿಸಿದಾಗ 10 ಅಡಿ ಎತ್ತರದ 10 ಗಿಡ ಹಾಗೂ 9 ಅಡಿ ಎತ್ತರದ 5, 6 ಅಡಿ ಎತ್ತರದ 10, 5 ಅಡಿ ಎತ್ತರದ 5 ಗಿಡ ಸೇರಿ ಒಟ್ಟು 30ಹೂವು, ತೆನೆಯಿಂದ ಕೂಡಿದ ಹಸಿ ಗಾಂಜಾ ಗಿಡಗಳು ಪತ್ತೆಯಾಗಿವೆ. ಆರೋಪಿಯನ್ನು ಬಂಧಿಸಿ, ನ್ಯಾಯಾಧೀಶರ ಮುಂದೆ ಹಾಜರು ಪಡಿಸಲಾಗಿದೆ ಎಂದು ಅಬಕಾರಿ ಅಧಿಕಾರಿಗಳು ತಿಳಿಸಿದ್ದಾರೆ.

ಕಾರ್ಯಾಚರಣೆಯಲ್ಲಿ ಅಬಕಾರಿ ಉಪ ಆಯುಕ್ತ ಡಾ.ಮಹಾದೇವಿಬಾಯಿ, ಉಪ ಅಧೀಕ್ಷಕ ಎನ್.ಟಿ.ಆನಂದಕುಮಾರ್, ನಿರೀಕ್ಷಕ ಹೆಚ್.ಡಿ.ರಮ್ಯಾ, ಬಿ.ಸಿ.ರಮೇಶ್, ಉಪನಿರೀಕ್ಷಕ ಎಂ.ರಾಜಶೇಖರ, ಬಿ.ಶಿವಣ್ಣ, ಕಂದಾಯ ಇಲಾಖೆ ಆರ್‌ಐ ಉಮೇಶ್, ಗ್ರಾಮ ಲೆಕ್ಕಿಗ ಮಹೇಂದ್ರ, ಸಿಬ್ಬಂದಿ ಹೆಚ್.ವಿ.ರಾಮು, ಪಿ.ಜಿ. ದಿಲೀಪ್ ಕುಮಾರ್, ಎಸ್.ರಘು, ಎಂ.ಜಿ. ನಾಗರಾಜು, ಬಿ.ಆರ್.ಸಂದೀಪ ಇದ್ದರು.

ನಾಗಮಂಗಲದ ಚಿಣ್ಯ ಗ್ರಾಮದಲ್ಲಿ ಬೃಹತ್ ಆರೋಗ್ಯ ಮೇಳ



ನಾಗಮಂಗಲ, ಸೆ.19– ತಾಲೂಕಿನ ಹೊಣಕೆರೆ ಹೋಬಳಿ ಚಿಣ್ಯ ಗ್ರಾಮದ ಸರ್ಕಾರಿ ಪದವಿ ಪೂರ್ವ ಕಾಲೇಜು ಆವರಣದಲ್ಲಿ ತಾಲೂಕಿನ ಆದಿಚುಂಚನಗಿರಿ ವೈದ್ಯಕೀಯ ಮಹಾವಿದ್ಯಾಲಯ ಸಂಶೋಧನಾ ಕೇಂದ್ರ ಹಾಗೂ ಸಮಾಜ ಸೇವಕ ಮಲ್ಲಿಕಾರ್ಜುನ (ಫೈಟರ್ ರವಿ) ಸಹಯೋಗದಿಂದ ನಡೆದ ಆರೋಗ್ಯ ತಪಾಸಣಾ ಶಿಬಿರವನ್ನು ಆದಿಚುಂಚನಗಿರಿ ಮಠದ ಸತ್‌ಕೀರ್ತಿನಾಥ ಸ್ವಾಮೀಜಿ ಉದ್ಘಾಟಿಸಿದರು.

ಈ ವೇಳೆ ಸಮಾಜ ಸೇವಕ ಮಲ್ಲಿಕಾರ್ಜುನ (ಫೈಟರ್ ರವಿ) ಮಾತನಾಡಿ, ಸ್ವಗ್ರಾಮ ತಾಲೂಕಿನ ದೇವಲಾಪುರ ಹೋಬಳಿ ಮಲ್ಲ ನಾಯಕರ ಕೊಪ್ಪಲು ಗ್ರಾಮದ ಋಣ ತೀರಿಸಲು ಸರ್ಕಾರಿ ಶಾಲೆಗಳಿಗೆ, ಗ್ರಾಮದಲ್ಲಿ ಶುದ್ಧ ನೀರು ಹಾಗೂ ತಾಲೂಕಿನ ಎಲ್ಲಾ ಜನರಿಗೂ ಆರೋಗ್ಯ ಸೇವೆ ನೀಡುತ್ತಿದ್ದು, ನಿರಂತರವಾಗಿ ಇದನ್ನು ಮುಂದುವರಿ ಸುತ್ತೇನೆ ಎಂದರು.

ಶಿಬಿರದಲ್ಲಿ 450 ಮಂದಿ ಆಯ್ಕೆಯಾಗಿದ್ದು ಅವರಲ್ಲಿ 280 ಮಂದಿ ನೇತ್ರ ಚಿಕಿತ್ಸೆಗೆ ಹಾಗೂ 175 ಮಂದಿ ಗರ್ಭಕೋಶ, ಕಿಡ್ನಿ, ಕಿವುಡು, ಮೂಳೆ ರೋಗ ಸೇರಿದಂತೆ ವಿವಿಧ ಬಗೆಯ ಚಿಕಿತ್ಸೆಗೆ ಆದಿಚುಂಚನಗಿರಿ ವೈದ್ಯಕೀಯ ಮಹಾ ವಿದ್ಯಾಲಯ ಕರೆದುಕೊಂಡು ಹೋಗಿ ಚಿಕಿತ್ಸೆಯ ನಂತರ ಸ್ವಗ್ರಾಮಕ್ಕೆ ಬಿಡುವ ವ್ಯವಸ್ಥೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಎಸ್‌ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಆದಿ ಚುಂಚನಗಿರಿ ವೈದ್ಯಕೀಯ ಮಹಾವಿದ್ಯಾಲದಿಂದ ವೈದ್ಯರು ಹೃದಯ ಸಂಬಂಧಿ, ಸ್ತ್ರೀ ರೋಗ ಸಮಸ್ಯೆ, ಬಿಪಿ, ಡಯಾಬಿಟಿಸ್, ಮೂಳೆ ರೋಗ, ಕ್ಯಾನ್ಸರ್ ಸೇರಿದಂತೆ ಹಲವು ಕಾಯಿಲೆಗಳಿಗೆ ತಪಾಸಣೆ ನಡೆಸಿ, ಸೂಕ್ತ ಚಿಕಿತ್ಸೆ ನೀಡಿದರು. ಶಿಬಿರದಲ್ಲಿ 2500ಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು. 30ಕ್ಕೂ ಹೆಚ್ಚು ಮಂದಿ ರಕ್ತದಾನ ಮಾಡಿದರು.

ಶಿಬಿರದಲ್ಲಿ ಫೈಟರ್ ರವಿ ಅವರ ಪತ್ನಿ ಕವಿತಾ, ಮಗಳು ರಾಘವೇಣಿ, ಚುಂಚನಗಿರಿ ಆಸ್ಪತ್ರೆ ಸಂಪರ್ಕಾಧಿಕಾರಿ ಧರ್ಮೇಂದ್ರ, ಶಿವಕುಮಾರ್ ಹಾಗೂ ಸಿ.ಜೆ.ಕುಮಾರ್, ಪವನ್, ರೂಪೇಶ್, ಅರ್ಜುನ್ ಇದ್ದರು.

ಇಂದಿನಿಂದ ವಿಭಾಗ ಮಟ್ಟದ ದಸರಾ ಕ್ರೀಡಾಕೂಟ

ಮಂಡ್ಯ, ಸೆ.19– ಜಿಲ್ಲಾಡಳಿತ, ಜಿಪಂ, ಮಂಡ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಸೆ. 20 ಮತ್ತು 21ರವರೆಗೆ ವಿಭಾಗ ಮಟ್ಟದ ದಸರಾ ಕ್ರೀಡಾಕೂಟ ಸರ್ ಎಂ. ವಿಶ್ವೇಶ್ವರಯ್ಯ ಕ್ರೀಡಾಂಗಣದಲ್ಲಿ ಬೆಳಗ್ಗೆ 9.30ಕ್ಕೆ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮವನ್ನು ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ ಗೋಪಾಲಯ್ಯ ಉದ್ಘಾಟಿಸಲಿದ್ದಾರೆ. ವಿಧಾನ ಸಭಾ ಕ್ಷೇತ್ರದ ಶಾಸಕ ಎಂ.ಶ್ರೀನಿವಾಸ್ ಅಧ್ಯಕ್ಷತೆ ವಹಿಸಲಿದ್ದಾರೆ. ರೇಷ್ಮೆ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಡಾ.ಕೆ.ಸಿ. ನಾರಾಯಣಗೌಡ ರವರು ಘನ ಉಪಸ್ಥಿತಿ ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಸಹಾಯಧನಕ್ಕೆ ಅರ್ಜಿ ಆಹ್ವಾನ

ಮಂಡ್ಯ, ಸೆ.19– ಜಿಲ್ಲೆಯ ಅಲ್ಪಸಂಖ್ಯಾತರ ಸಮುದಾಯದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬುದ್ಧಿಸ್ಟ್, ಸಿಖ್ ಹಾಗೂ ಪಾರ್ಸಿ ಜನಾಂಗಕ್ಕೆ ಸೇರಿದ ವಿದ್ಯಾರ್ಥಿಗಳು ಮೆಟ್ರಿಕ್ ನಂತರದ ಕೋರ್ಸ್‌ಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದು, ಅಲ್ಪಸಂಖ್ಯಾತರ ವಿದ್ಯಾರ್ಥಿ ನಿಲಯಗಳಲ್ಲಿ ಪ್ರವೇಶ ದೊರಕದೆ ಇರುವ ಹಾಗೂ ಮೆರಿಟ್ ಹೊಂದಿರುವ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ಮುಂದುವರಿಸಲು ಪ್ರಸಕ್ತ ಸಾಲಿನಲ್ಲಿ ವಿದ್ಯಾಸಿರಿ ಯೋಜನೆಯಡಿ ಸಹಾಯಧನ ಮಂಜೂರಾತಿಗಾಗಿ ಆನ್‌ಲೈನ್ ಅರ್ಜಿ ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು ಸೇವಾಸಿಂಧು ಪೋರ್ಟಲ್ https:|| sevasindhu.Karnataka.gov.in ಮೂಲಕ ಅ.20 ರೊಳಗಾಗಿ ಅರ್ಜಿಗಳನ್ನು ಅಗತ್ಯ ದಾಖಲಾತಿಗಳೊಂದಿಗೆ ವಿದ್ಯಾರ್ಥಿ ವ್ಯಾಸಂಗ ಮಾಡುತ್ತಿರುವ ಕಾಲೇಜು ಇರುವ ತಾಲೂಕಿನ ಅಲ್ಪಸಂಖ್ಯಾತರ ಮಾಹಿತಿ ಕೇಂದ್ರಗಳಲ್ಲಿ ಸಲ್ಲಿಸಬೇಕು. ಮಾಹಿತಿಗೆ ಜಿಲ್ಲಾ ಕಚೇರಿ ದೂ. 08232–297240, ಮಂಡ್ಯ ವಿಭಾಗ ತಾಲೂಕು ವಿಸ್ತೀರ್ಣ ಅಧಿಕಾರಿ ಮೊ.9008211484, ಪಾಂಡವಪುರ ವಿಭಾಗ ಮೊ. 7019571032, ಮಂಡ್ಯ ಕೇಂದ್ರ ತಾಲೂಕು ಮಾಹಿತಿ ಮೊ.9880743927, ಮಳವಳ್ಳಿ ಕೇಂದ್ರ ಮೊ. 9986682921, ಪಾಂಡವಪುರ ಕೇಂದ್ರ ಮೊ. 7353860464, ನಾಗಮಂಗಲ ಕೇಂದ್ರ ಮೊ. 9663180791, ಶ್ರೀರಂಗಪಟ್ಟಣ ಕೇಂದ್ರ ಮೊ. 9036485386, ಮದ್ದೂರು ಕೇಂದ್ರ ಮೊ.9886786913, ಕೆ.ಆರ್.ಪೇಟೆ ಕೇಂದ್ರ ಮೊ. 9035251834 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಕಿಕ್ಕೇರಿ ಕೃಷಿ ಪತ್ತಿನ ಸಹಕಾರ ಸಂಘಕ್ಕೆ 42 ಲಕ್ಷ ರೂ. ಲಾಭ



ಕಿಕ್ಕೇರಿ, ಸೆ.19– ಜಿಲ್ಲೆಯಲ್ಲಿ ಮೊದಲನೆ ಸ್ಥಾನದಲ್ಲಿರುವ ಕೃಷಿ ಪತ್ತಿನ ಸಹಕಾರ ಸಂಘ ಕಳೆದ ಸಾಲಿನಲ್ಲಿ 42ಲಕ್ಷ ರೂ. ಲಾಭಾಂಶ ಹೊಂದಿದ್ದು, ಸಂಘದ ಮತ್ತಷ್ಟು ಅಭಿವೃದ್ಧಿಗೆ ಸಕಾಲದಲ್ಲಿ ಸಾಲ ಮರು ಪಾವತಿ ಮಾಡಲು ಶೇರುದಾರರು ಮುಂದಾಗಬೇಕು ಎಂದು ಸಂಘದ ಅಧ್ಯಕ್ಷ ಕೆ.ಬಿ.ಹರೀಶ್ ಹೇಳಿದರು.

ಪಟ್ಟಣದಲ್ಲಿ ಏರ್ಪಡಿಸಿದ್ದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸರ್ವ ಸದಸ್ಯರ ವಾರ್ಷಿಕ ಮಹಾ ಸಭೆಯಲ್ಲಿ ಮಾತನಾಡಿದ ಅವರು, ಸಂಘದ ಬಲವರ್ಧನೆಗೆ ಆಡಳಿತ ಮಂಡಳಿ ಕ್ರಿಯಾಶೀಲವಾಗಿದೆ. ಸಂಘದಲ್ಲಿ 4700 ಶೇರುದಾರರಿದ್ದು, ರೈತರಿಗೆ ಬೆಳೆ ಸಾಲಕ್ಕೆ ಮೊದಲ ಆದ್ಯತೆ ನೀಡಲಾಗಿದ್ದು, ಕಳೆದ ಸಾಲಿನಲ್ಲಿ 7.93 ಕೋಟಿ ರೂ. ನೀಡಲಾಗಿದೆ. ಕಳೆದ ಸಾಲಿನಲ್ಲಿ 73 ಕೋಟಿ ರೂ. ವಾರ್ಷಿಕ ವಹಿವಾಟು ನಡೆದು, 42ಲಕ್ಷ ಲಾಭಾಂಶ ಪಡೆಯಲಾಗಿದೆ ಎಂದರು. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಆರ್.ಪುಟ್ಟರಾಜು ಮಾತನಾಡಿ, ಕಳೆದ ಸಾಲಿನಲ್ಲಿ 18ಕೋಟಿ ರೂ. ನೀಡಿದ್ದು, ಇದರಲ್ಲಿ ಆಭರಣ ಸಾಲ 7.5 ಕೋಟಿ ರೂ. ವ್ಯವಸಾಯೇತರವಾಗಿ 59ಲಕ್ಷ ರೂ. ಹಾಗೂ ಬೆಳೆ ಸಾಲವಾಗಿ 7.93 ಕೋಟಿ ರೂ. ನೀಡಲಾಗಿದೆ. ಸಾಲಗಾರರು ಸಕಾಲದಲ್ಲಿ ಸಾಲ ಮರುಪಾವತಿ ಮಾಡಿ ಸಹಕರಿಸಬೇಕು ಎಂದರು.

ಸಂಘದ ಉಪಾಧ್ಯಕ್ಷ ಎಂ.ಕೆ.ಶ್ರೀನಾಥ್, ನಿರ್ದೇಶಕರಾದ ನಾರಾಯಣಸ್ವಾಮಿ, ಮನೋಜ್‌ಕುಮಾರ್, ಡಿ.ತಾರಾನಾಥ್, ಮುರುಳಿಧರ್, ಸುರೇಶ್, ಪಾಪೇಗೌಡ, ಕೆ.ಎಸ್. ಶಿವರಾಮಯ್ಯ, ರಘು, ಹರೀಶ್‌ನಾಯಕ್, ಕೋಮಲ ಪುಟ್ಟೇಗೌಡ, ಉಪ ವ್ಯವಸ್ಥಾಪಕಿ ಭಾರತಿ, ಸಿಬ್ಬಂದಿಗಳಾದ ಬಾಬು, ನರಸಿಂಹ, ಮಲ್ಲಿಕ, ವೆಂಕಟೇಶ್, ಕೆ.ಆರ್.ಶೋಭಾ, ಮಮತಾ, ಆಶಾ ಸುಮಿತ್ರಾ ಪಾಲ್ಗೊಂಡಿದ್ದರು.

ಒಳಚರಂಡಿ ಕೊಳಚೆ ನೀರು ಹರಿಯಲು ಕಾಲುವೆ ತೋಡಿದ ಅಧಿಕಾರಿಗಳು

ಮದ್ದೂರು, ಸೆ.19– ಪಟ್ಟಣದ ಪುರಸಭಾ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಒಳಚರಂಡಿ ನೀರು ಹರಿದು ಸಾರ್ವಜನಿಕರಿಗೆ ಹಾಗೂ ಪ್ರಯಾಣಿಕರಿಗೆ ಸಮಸ್ಯೆಯಾಗುತ್ತಿದ್ದ ಹಿನ್ನೆಲೆಯಲ್ಲಿ ಪುರಸಭಾ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಆಗಮಿಸಿ ಸಮಸ್ಯೆಯಾಗದಂತೆ ಅಗತ್ಯ ಕ್ರಮ ಕೈಗೊಂಡರು.



ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಕೈಗೆತ್ತಿಕೊಂಡಿರುವ ಕಾಮಗಾರಿ ವಿಳಂಬದಿಂದಾಗಿ ಪಟ್ಟಣದ ಸರ್ಕಾರಿ ಬಸ್ ನಿಲ್ದಾಣದ ಮುಂಭಾಗ ಒಳಚರಂಡಿಯ ಕಲುಷಿತ ನೀರು ರಸ್ತೆಯಲ್ಲಿ ಹರಿಯುತ್ತಿದ್ದು ಇದರಿಂದ ಬಸ್ ನಿಲ್ದಾಣಕ್ಕೆ ಬರುವ ಸಾರ್ವಜನಿಕರು ಈ ನೀರನ್ನು ತುಳಿದುಕೊಂಡು ಹೋಗಬೇಕಾದ ಪರಿಸ್ಥಿತಿ ನಿರ್ಮಾಣವಾಗಿತ್ತು. ಪುರಸಭೆಗೆ ಅನೇಕ ದೂರಗಳು ಸಾರ್ವಜನಿಕರಿಂದ ಬಂದ ಹಿನ್ನೆಲೆಯಲ್ಲಿ ಪುರಸಭೆ ಅಧ್ಯಕ್ಷ ಸುರೇಶ್‌ಕುಮಾರ್ ಹಾಗೂ ಸದಸ್ಯರು ಸ್ಥಳಕ್ಕೆ ಜೆಸಿಬಿ ಕರೆಸಿ ರಸ್ತೆಯಲ್ಲಿ ಹರಿಯುತ್ತಿದ್ದ ಕೊಳಚೆ ನೀರನ್ನು ರಸ್ತೆ ಬದಿಯಲ್ಲಿ ಹೋಗುವಂತೆ ಮಾಡಿ ಸಾರ್ವಜನಿಕರು, ಪ್ರಯಾಣಿಕರಿಗೆ ಅನುಕೂಲ ಕಲ್ಪಿಸಿದರು. ಈ ವೇಳೆ ಪುರಸಭೆ ಅಧ್ಯಕ್ಷ ಸುರೇಶ್‌ಕುಮಾರ್, ಸ್ಥಾಯಿ ಸಮಿತಿ ಅಧ್ಯಕ್ಷ ಪ್ರಸನ್ನ, ಉಪಾಧ್ಯಕ್ಷೆ ಸುಮಿತ್ರಾ ರಮೇಶ್, ಸದಸ್ಯರಾದ ಎಂ.ಐ.ಪ್ರವೀಣ್ ಸಿದ್ದರಾಜು, ಬಸವರಾಜು, ಆದಿಲ್‌ಅಲಿಖಾನ್, ಮನೋಜ್, ಪ್ರಮೀಳಾ ಇದ್ದರು.

ರೈತರಿಗೆ ಅಗತ್ಯ ಸಾಲ ಸೌಲಭ್ಯ ಕಲ್ಪಿಸಲು ಆದ್ಯತೆ



ಚಿನಕುರಳಿ, ಸೆ.19– ರೈತರಿಗೆ ಎಲ್ಲಾ ಸೌಲಭ್ಯಗಳನ್ನು ಸಹಕಾರ ಸಂಘದಿಂದ ಒದಗಿಸಿ ಕೊಡಲಾಗುವುದು. ಎಲ್ಲಾ ರೀತಿಯ ಸಾಲ ಸೌಲಭ್ಯಗಳು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿಯೇ ದೊರೆಯುವ ರೀತಿ ಕೆಲಸ ಮಾಡಲಾಗುವುದು ಎಂದು ಶಾಸಕ ಸಿ.ಎಸ್.ಪುಟ್ಟರಾಜು ಭರವಸೆ ನೀಡಿದರು.

ಪಾಂಡವಪುರ ತಾಲೂಕಿನ ಚಿನಕುರಳಿ ಗ್ರಾಮದಲ್ಲಿ ನಡೆದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸರ್ವ ಸದಸ್ಯರ 2021–22ನೇ ಸಾಲಿನ ವಾರ್ಷಿಕ ಮಹಾ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಚಿನಕುರಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವು ಮಾದರಿಯಾಗಿ ಕೆಲಸ ಮಾಡುತ್ತಿದೆ. ಸಂಘದ ವತಿಯಿಂದ ಸ್ವಂತ ಕಟ್ಟಡ ನಿರ್ಮಿಸಿ ಅದರಲ್ಲಿ ಹೊಸದಾಗಿ ರೈತರ ಸಹಕಾರಿ ಸೂಪರ್ ಮಾರುಕಟ್ಟೆ ಆರಂಭಿಸಿರುವುದೇ ಇದಕ್ಕೆ ಉದಾಹರಣೆಯಾಗಿದೆ. ಸಂಘದಿಂದ 83 ಲಕ್ಷ ರೂ. ವೆಚ್ಚದಡಿ, ಉಳಿಕೆ ಹಣವನ್ನು ಒಬ್ಬೊಬ್ಬ ಸದಸ್ಯರು ಒಂದೊಂದು ಜವಾಬ್ದಾರಿ ತೆಗೆದುಕೊಂಡು ಕಟ್ಟಡ ನಿರ್ಮಿಸಿ ಸಹಕಾರಿ ಸೂಪರ್ ಮಾರುಕಟ್ಟೆ ಆರಂಭಿಸುವ ಮೂಲಕ ರೈತರಿಗೆ ಅನುಕೂಲ ಮಾಡಿಕೊಟ್ಟಿರುವುದಕ್ಕೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಸಂಘದ ವತಿಯಿಂದ 1.16 ಕೋಟಿ ಸಾಲ ವಿತರಣೆ ಮಾಡಲಾಗಿದೆ. 1.27 ಕೋಟಿ ವ್ಯಾಪಾರ ವಹಿವಾಟು ನಡೆಸಿ 8.85 ಲಕ್ಷ ನಿವ್ವಳ ಲಾಭ ಗಳಿಸಿದ್ದಾರೆ. ಈಗಿನ ಹಾಗೂ ಆಡಳಿತ ಮಂಡಳಿ ಸದಸ್ಯರು ಕ್ರಿಯಾಶೀಲರಾಗಿ ಕೆಲಸ ಮಾಡುವ ಮೂಲಕ ರೈತರ ಬೆನ್ನೆಲುಬಾಗಿ ನಿಲ್ಲಬೇಕು ಎಂದರು.

ಬಳಿಕ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಕಟ್ಟಡದಲ್ಲಿ ಹೊಸದಾಗಿ ಆರಂಭಗೊಂಡ ರೈತರ ಸಹಕಾರಿ ಸೂಪರ್ ಮಾರುಕಟ್ಟೆಯನ್ನು ಶಾಸಕ ಸಿ.ಎಸ್.ಪುಟ್ಟರಾಜು ಉದ್ಘಾಟಿಸಿದರು. ಸಭೆಯಲ್ಲಿ ಜಿಪಂ ಮಾಜಿ ಸದಸ್ಯ ಸಿ.ಅಶೋಕ್, ತಾಪಂ ಮಾಜಿ ಸದಸ್ಯ ಸಿ.ಎಸ್.ಗೋಪಾಲಗೌಡ, ಲಾರಿ ಮಾಲೀಕರ ಸಂಘದ ಅಧ್ಯಕ್ಷ ಸಿ.ಶಿವಕುಮಾರ್, ಸಹಕಾರ ಸಂಘದ ಅಧ್ಯಕ್ಷ ಮೊಗ್ಗಣ್ಣೇಗೌಡ, ಉಪಾಧ್ಯಕ್ಷೆ ಪಾರ್ವತಮ್ಮ, ಟಿಎಪಿಸಿಎಂಎಸ್ ನಿರ್ದೇಶಕ ರಾಮಕೃಷ್ಣೇಗೌಡ, ಗ್ರಾಪಂ ಅಧ್ಯಕ್ಷ ಪಾಪಣ್ಣ, ಉಪಾಧ್ಯಕ್ಷೆ ಮಂಜುಳಾ ಮಹದೇವು, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಸಿ.ಪ್ರಕಾಶ್, ವಿಎಸ್‌ಎಸ್‌ಎನ್‌ಬಿ ನಿರ್ದೇಶಕರಾದ ಶ್ರೀನಿವಾಸ್, ಮಂಜುನಾಥ್, ಶಿವಣ್ಣ, ಚಂದ್ರು, ಮಹದೇವಪ್ಪ, ಭವ್ಯಾ, ಕುಮಾರ್, ಕಾರ್ಯದರ್ಶಿ ಕಾಂತ್‌ರಾಜ್, ಗ್ರಾಪಂ ಸದಸ್ಯರಾದ ಸಿ.ಎ.ಲೋಕೇಶ್, ಕೃಷ್ಣೇಗೌಡ, ಪರಮೇಶ್, ಮಾಜಿ ಅಧ್ಯಕ್ಷರಾದ ರಾಮೇಗೌಡ, ಕಾಳೇಗೌಡ, ಗ್ರಾಪಂ ಮಾಜಿ ಸದಸ್ಯ ಸಿ.ಡಿ.ಮಹದೇವು, ಡೇರಿ ಅಧ್ಯಕ್ಷ ಲೋಕೇಶ್ ಇದ್ದರು.

ನರೇಗಾ: 23.86 ಕೋಟಿ ರೂ. ಕೂಲಿ ಮೊತ್ತ ಪಾವತಿ

ಮಂಡ್ಯ ಸೆ.19– ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ಜಿಲ್ಲೆಗೆ ಸಂಬಂಧಿಸಿದಂತೆ 2022–23ನೇ ಸಾಲಿನಲ್ಲಿ 23,86,11,000 ರೂ. ಕೂಲಿ ಮೊತ್ತ ಈಗಾಗಲೇ ಪಾವತಿಸಲಾಗಿರುತ್ತದೆ ಹಾಗೂ ಕೂಲಿ ಮೊತ್ತ 78,79,000 ರೂ.ಗಳಿಗೆ ಎಫ್‌ಟಿಓ ಸೃಜಿಸಿ, ಪಾವತಿಗಾಗಿ ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ ಎಂದು ಜಿಪಂ ಉಪಕಾರ್ಯದರ್ಶಿ ತಿಳಿಸಿದ್ದಾರೆ. ಮಾರ್ಗಸೂಚಿಯನ್ವಯ ಕೆಲಸ ಕೋರಿ ಅರ್ಜಿ ಸಲ್ಲಿಸಿದ 15 ದಿನದೊಳಗಾಗಿ ಕೆಲಸವನ್ನು ಒದಗಿಸಲು ಗ್ರಾಮ ಅಭಿವೃದ್ಧಿ ಅಧಿಕಾರಿಗಳು ಕ್ರಮವಹಿಸುತ್ತಿದ್ದು, ಕಾರ್ಯನಿರ್ವಾಹಕ ಅಧಿಕಾರಿಗಳು ಮೇಲುಸ್ತುವಾರಿ ಮಾಡುತ್ತಿದ್ದಾರೆ. ಯೋಜನೆಯಡಿ ಕಾರ್ಯನಿರ್ವಹಿಸಿದ ಕಾಯಕ ಬಂಧುಗಳಿಗೆ ನೀಡಬೇಕಾದಂತಹ ಪ್ರೋತ್ಸಾಹಧನ ಪಾವತಿಸಲು ಗ್ರಾಪಂ ಕ್ರಮವಹಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಅರ್ಜಿ ಆಹ್ವಾನ

ಮಂಡ್ಯ, ಸೆ.19– ಪರಿಶಿಷ್ಟ ಜಾತಿ, ಪಂಗಡಗಳ ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತ ವರ್ಗಕ್ಕೆ ಸೇರಿದ 9000 ಅಭ್ಯರ್ಥಿಗಳಿಗೆ 2022–23ನೇ ಸಾಲಿಗೆ ಯುಪಿಎಸ್‌ಸಿ, ಕೆಎಎಸ್, ಗ್ರೂಪ್–ಸಿ, ಬ್ಯಾಂಕಿಂಗ್, ಎಸ್‌ಎಸ್‌ಸಿ, ಆರ್‌ಆರ್‌ಬಿ ಮತ್ತು ನ್ಯಾಯಾಂಗ ಸೇವಾ ಪರೀಕ್ಷೆಗಳ ಪೂರ್ವಭಾವಿ ತರಬೇತಿಗೆ ಆಯ್ಕೆ ಮಾಡುವ ಸಂಬಂಧ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಪದವಿ ಮುಕ್ತಾಯಗೊಳಿಸಿದ ಹಾಗೂ ಅಂತಿಮ ವರ್ಷದ ಪದವಿಯಲ್ಲಿ ವ್ಯಾಸಂಗ ಮಾಡುತ್ತಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ. ಮಾಹಿತಿಗಾಗಿ ಸಮಾಜ ಕಲ್ಯಾಣ ಇಲಾಖೆಯ ದೂ.ಸಂ. 08232–220772 ಅಥವಾ ವೆಬ್‌ಸೈಟ್ sw.kar.nic.in ಸಂಪರ್ಕಿಸಬಹುದು ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪರೀಕ್ಷೆ ಪ್ರಾರಂಭ

ಮಂಡ್ಯ, ಸೆ.19– ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾಲಯಲ್ಲಿ 2022–23ನೇ ಶೈಕ್ಷಣಿಕ ಸಾಲಿನ ಪರೀಕ್ಷೆಗಳು ಪ್ರಾರಂಭವಾಗಿದ್ದು, ಸದರಿ ಪರೀಕ್ಷೆಗಳು ಮಂಡ್ಯ ಕರಾಮುವಿ ಪ್ರಾದೇಶಿಕ ಕೇಂದ್ರ ನಂ11 ಎ, ಇ ಬ್ಲಾಕ್ ವಿವೇಕಾನಂದನಗರ ಬಡಾವಣೆ ಕೆರೆಯಂಗಳ (ಹೊಳಲು ಮೇಲುಕೋಟೆ ಮಾರ್ಗ) ದಲ್ಲಿ ನಡೆಯಲಿದೆ ಎಂದು ವಿದ್ಯಾರ್ಥಿಗಳಿಗೆ ಕರಾಮುವಿ ಪ್ರಾದೇಶಿಕ ಕೇಂದ್ರ ಪ್ರಾದೇಶಿಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಗ್ಗಟ್ಟಿನ ಆಡಳಿತ ಮಂಡಳಿಯಿಂದ ಸಹಕಾರ ಸಂಘಗಳ ಅಭಿವೃದ್ಧಿ



ಭಾರತೀನಗರ, ಸೆ.19– ಯಾವುದೇ ಸಹಕಾರ ಸಂಘಗಳು ಅಭಿವೃದ್ಧಿಯಾಗಬೇಕಾದರೆ ಆಡಳಿತ ಮಂಡಳಿಯ ಒಗ್ಗಟ್ಟು ಮತ್ತು ಗುಣಮಟ್ಟದಿಂದ ಮಾತ್ರ ಸಾಧ್ಯ ಎಂದು ಡಿಸಿಸಿ ಬ್ಯಾಂಕ್ ನಿರ್ದೇಶಕ ಪಿ.ಸಂದರ್ಶ ಹೇಳಿದರು.

ಇಲ್ಲಿಗೆ ಸಮೀಪದ ಬೊಪ್ಪಸಮುದ್ರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಸಹಕಾರ ಸಂಘಗಳಲ್ಲಿ ಆಡಳಿತ ಮಂಡಳಿಯ ಸದಸ್ಯರ ಒಗ್ಗಟ್ಟಿಲ್ಲದ ಕಾರಣ ಅಭಿವೃದ್ಧಿಗಳು ಕುಂಠಿತವಾಗುತ್ತಿವೆ. ಇದರಿಂದ ರೈತರಿಗೆ ಸಹಕಾರ ಸಂಘದಿಂದ ದೊರೆಯುವ ಸೌಲಭ್ಯಗಳು ಸಮರ್ಪಕವಾಗಿ ತಲುಪುತ್ತಿಲ್ಲ. ಗ್ರಾಮದ ಸಹಕಾರ ಸಂಘದ ಅಧ್ಯಕ್ಷರು ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅಭಿವೃದ್ಧಿಪಡಿಸುವಲ್ಲಿ ಮುಂದಾಗಿದ್ದಾರೆ. ಇನ್ನೂ ಹೆಚ್ಚಿನ ರೀತಿಯಲ್ಲಿ ಸಂಘವು ಅಭಿವೃದ್ಧಿಯಾಗಲಿ ಎಂದು ಆಶಿಸಿದರು.

ಸಂಘದ ಅಧ್ಯಕ್ಷ ಬಿ.ಹೆಚ್.ಶಿವರಾಜು ಮಾತನಾಡಿ, ಎಲ್ಲರ ಸಹಕಾರದಿಂದ ಸಂಘ ಅಭಿವೃದ್ಧಿಗೊಳಿಸಲು ಮುಂದಾಗಿದ್ದೇನೆ. 2021–22ನೇ ಸಾಲಿನಲ್ಲಿ 2.75ಲಕ್ಷ ರೂ.ಗಳು ನಿವ್ವಳ ಲಾಭ ಗಳಿಸಿದೆ ಎಂದರು.

ಇದೇ ವೇಳೆ ಮುಖ್ಯ ಕಾರ್ಯನಿರ್ವಹಣಾಧಿಕಾರಿ ವಿ.ಶಿವರಾಜು ವಾರ್ಷಿಕ ವರದಿ ಮಂಡಿಸಿದರು.

ಸಭೆಯಲ್ಲಿ ಗ್ರಾಮದ ಮುಖಂಡ ಬಿ.ಎಂ.ನಂಜೇಗೌಡ, ಸಂತೋಷ್, ಸುಬ್ಬಿನಿಂಗಯ್ಯ, ಕೆಂಡಗಯ್ಯ, ಕುಂಟಣ್ಣ, ಬಿ.ಕೆ. ಶ್ರೀಕಂಠೇಗೌಡ, ಎಸ್.ಲಿಂಗಯ್ಯ, ಪುಟ್ಟಸ್ವಾಮಿ, ಸಂಘದ ಉಪಾಧ್ಯಕ್ಷ ಬಿ.ಕೆ.ಅನಿಲ್‌ಕುಮಾರ್, ಬಿ.ಶ್ರೀಶಂಕರ, ಬಿ.ಸಿ.ಪುಟ್ಟಸ್ವಾಮಿ, ಬಿ.ಕೆ.ರಾಜು, ಬಿ.ಕೆ.ಜಯರಾಮು, ಬಿ.ಸಿ.ರವಿ, ಕೆ.ರಾಮು, ರತ್ನಮ್ಮ, ದುಂಡಮ್ಮ, ನಿರಂಜನ್, ಚರಣ್ ಕುಮಾರ್ ಸೇರಿದಂತೆ ಹಲವರಿದ್ದರು.

ಕಂದಾಯ ಇಲಾಖೆ ಗ್ರಾಮ ಸಹಾಯಕರ ಸಂಘದ ಅಧ್ಯಕ್ಷರ ಆಯ್ಕೆ

ಕೆ.ಆರ್.ಪೇಟೆ, ಸೆ.19– ತಾಲೂಕಿನ ಕಂದಾಯ ಇಲಾಖೆಯ ಗ್ರಾಮ ಸಹಾಯಕರ ಸಂಘದ ನೂತನ ಅಧ್ಯಕ್ಷರಾಗಿ ಕೆ.ಪಿ.ಮಂಜುನಾಥ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಈ ಹಿಂದಿನ ಅಧ್ಯಕ್ಷರಾಗಿದ್ದ ಬ್ರಹ್ಮರಾಜು ಅವರ ನಿಧನದ ಹಿನ್ನೆಲೆಯಲ್ಲಿ ತೆರವಾಗಿದ್ದ ಸ್ಥಾನಕ್ಕೆ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸಭೆ ನಡೆಸಿದ ಸಂಘದ ಪದಾಧಿಕಾರಿಗಳು ಕೆ.ಪಿ. ಮಂಜುನಾಥ್ ಅವರನ್ನು ತಾಲೂಕು ಗ್ರಾಮ ಸಹಾಯಕ ಸಂಘದ ನೂತನ ಅಧ್ಯಕ್ಷರನ್ನಾಗಿ ಅವಿರೋಧವಾಗಿ ಆಯ್ಕೆ ಮಾಡಿದರು. ಅವರನ್ನು ತಹಸೀಲ್ದಾರ್ ಎಂ.ವಿ.ರೂಪಾ, ಸಚಿವರಾದ ಡಾ.ನಾರಾಯಣಗೌಡರ ಆಪ್ತ ಸಹಾಯಕ ದಯಾನಂದ್, ಜಿಲ್ಲಾ ಗ್ರಾಮ ಲೆಕ್ಕಾಧಿಕಾರಿಗಳ ಸಂಘದ ಅಧ್ಯಕ್ಷ ಹರೀಶ್, ರಾಜಸ್ವ ನಿರೀಕ್ಷಕಿ ಚಂದ್ರಕಲಾ ಪ್ರಕಾಶ್, ತಾಲೂಕು ಗ್ರಾಮ ಸಹಾಯಕರ ಸಂಘದ ಗೌರವಾಧ್ಯಕ್ಷ ಚೆಲುವಯ್ಯ, ಉಪಾಧ್ಯಕ್ಷ ಬಿ.ಎಸ್. ನಂಜಪ್ಪ, ಪ್ರಧಾನ ಕಾರ್ಯದರ್ಶಿ ಹೆಚ್.ಎಸ್.ಮಧು, ಸಹ ಕಾರ್ಯದರ್ಶಿ ಶಿವಲಿಂಗಯ್ಯ, ಸಂಘಟನಾ ಕಾರ್ಯದರ್ಶಿ ಆರ್.ಕೆ.ಶಿವರಾಜು, ಖಜಾಂಚಿ ಚಲುವರಾಯಸ್ವಾಮಿ ಹಾಗೂ ಕಾನೂನು ಸಲಹೆಗಾರರಾಗಿ ಜೈಕುಮಾರ್ ಅವರು ಅಭಿನಂದಿಸಿದರು.



ಮೈಸೂರು ಮಿತ್ರ ಕೊಡಗು ವರದಿಗಾರರು: ಪ್ರಸಾದ್ ಸಂಪಿಗೆಕಟ್ಟೆ, ಕನ್ನಂಡ ದೊಡ್ಡಯ್ಯ(ಪಡೆಬೀರ) ವೃತ್ತ, ಸೋಮವಾರಪೇಟೆ ರಸ್ತೆ ಜಂಕ್ಷನ್, ಮಡಿಕೇರಿ. ಮೊ. 9731469871 E-mail: madikeri@mysurumithra.com

ರಸಗೊಬ್ಬರ ಸಮಸ್ಯೆ ಇತ್ಯರ್ಥಕ್ಕೆ ಡಿಸಿ ಸಭೆ



ಮಡಿಕೇರಿ, ಸೆ.19– ಕೊಡಗು ಜಿಲ್ಲೆಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಮತ್ತು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘಗಳಿಂದ ರೈತರಿಗೆ ರಸಗೊಬ್ಬರ, ಕ್ರಿಮಿನಾಶಕ, ಬಿತ್ತನೆ ಬೀಜ ಮಾರಾಟಕ್ಕೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿ ಡಾ.ಬಿ.ಸಿ. ಸತೀಶ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು.

ನಗರದ ಕೆಳಗಿನ ಕೊಡವ ಸಮಾಜದಲ್ಲಿ ನಡೆದ ಸಭೆಯಲ್ಲಿ ಡಿಸಿಸಿ ಬ್ಯಾಂಕ್ ಅಧ್ಯಕ್ಷರು, ವಿವಿಧ ಸಹಕಾರ ಸಂಘಗಳ ಅಧ್ಯಕ್ಷರು ಸುದೀರ್ಘವಾಗಿ ಚರ್ಚೆ ನಡೆಸಿದರು.

ಡಿಸಿಸಿ ಬ್ಯಾಂಕ್ ಅಧ್ಯಕ್ಷ ಬಾಂಡ್ ಗಣಪತಿ ಮಾತನಾಡಿ, ಜಿಲ್ಲೆಯಲ್ಲಿರುವ ಸಹಕಾರ ಸಂಘಗಳು ರೈತರಿಗೆ ರಸಗೊಬ್ಬರ ಮಾರಾಟ ಮಾಡುತ್ತಿದ್ದು, ಸೆ.8 ರಂದು ವಿರಾಜಪೇಟೆಯ ಸಹಾಯಕ ಕೃಷಿ ನಿರ್ದೇಶಕರ ಕಚೇರಿಯಿಂದ ಸಹಕಾರ ಸಂಘಗಳ ಮೂಲಕ ರೈತರಿಗೆ ಗೊಬ್ಬರ ಜೊತೆಯಲ್ಲಿ ಲಘು ಪೋಷಕಾಂಶಗಳನ್ನು ಜೋಡಿಸಿ ವಿತರಿಸುತ್ತಿದ್ದು, ಮುಂದಿನ ದಿನಗಳಲ್ಲಿ ಈ ಬಗ್ಗೆ ದೂರುಗಳು ಬಂದಲ್ಲಿ ರಸಗೊಬ್ಬರ ನಿಯಂತ್ರಣ ಆದೇಶ 1985ರಂತೆ ಕ್ರಮ ಕೈಗೊಳ್ಳುವುದಾಗಿ ಹಾಗೂ ಗೊಬ್ಬರ ಮಾರಾಟದ ಪರವಾನಗಿಯನ್ನು ರದ್ದುಪಡಿಸಿ ಕಾನೂನು ಕ್ರಮ ಕೈಗೊಳ್ಳುವುದಾಗಿಯೂ ಪತ್ರದಲ್ಲಿ ತಿಳಿಸಿದ್ದಾರೆ ಎಂದು ಅತೃಪ್ತಿ ವ್ಯಕ್ತಪಡಿಸಿದರು.

ಜಿಲ್ಲೆಯ ಸಹಕಾರ ಸಂಘಗಳಿಂದ ಲಘು ಪೋಷಕಾಂಶಗಳಿಗೆ ಬೇಡಿಕೆ ಇಲ್ಲದಿದ್ದರೂ ರಸಗೊಬ್ಬರ ಸರಬರಾಜು ಮಾಡುವ ವಿತರಕರು ಪೋಷಕಾಂಶಗಳನ್ನು ಗೊಬ್ಬರದ ಜೊತೆಯಲ್ಲಿ ಸೇರಿಸಿ ಕಳುಹಿಸುತ್ತಿರುವುದು ಎಲ್ಲರಿಗೂ ಮಾಹಿತಿ ಇದೆ. ಈ ಬಗ್ಗೆ ಇತ್ತೀಚಿಗೆ ಜಿಲ್ಲೆಯ ಉಸ್ತುವಾರಿ ಸಚಿವರು ಹಾಗೂ ಜಿಲ್ಲೆಯ ಶಾಸಕರ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ವಿಷಯವನ್ನು ಪ್ರಸ್ತಾಪಿಸಿದಾಗ ರೈತರ ಮನವೊಲಿಸಿ ಲಘು ಪೋಷಕಾಂಶಗಳನ್ನು ವಿತರಿಸುವಂತೆ ಜಂಟಿ ನಿರ್ದೇಶಕರು ಸಭೆಯಲ್ಲಿ ಸಲಹೆ ನೀಡಿರುತ್ತಾರೆ. ಗೊಬ್ಬರ ವಿತರಕ ಸಂಸ್ಥೆಯವರು 13 ಟನ್ ಎಂಒಪಿ ಗೊಬ್ಬರಕ್ಕೆ 2 ಟನ್ ಪಾಲಿ ಸಲ್ಫೇಟ್ ಹಾಗೂ 13 ಟನ್ ಯೂರಿಯಾದ ಜೊತೆಯಲ್ಲಿ 24 ಲೀಟರ್ ನ್ಯಾನೋ ಯೂರಿಯಾವನ್ನು ಜೋಡಿಸಿ ಕಳುಹಿಸುತ್ತಾರೆ ಎಂದು ಡಿಸಿಸಿ ಬ್ಯಾಂಕ್ ಅಧ್ಯಕ್ಷರು ದೂರಿದರು.

ರೈತರಿಗೆ ಲಘು ಪೋಷಕಾಂಶಗಳನ್ನು ವಿತರಿಸಬೇಕಾದ ಅನಿವಾರ್ಯತೆ ಸಹಕಾರ ಸಂಘಗಳಿಗೆ ಎದುರಾಗಿದೆ. ಈ ವಿಚಾರವು ಸಹಾಯಕ ಕೃಷಿ ನಿರ್ದೇಶಕರು ಹಾಗೂ ಜಂಟಿ ನಿರ್ದೇಶಕರ ಗಮನಕ್ಕೂ ಬಂದಿರುತ್ತದೆ. ಆದರೂ ಸಹ ಎಲ್ಲಾ ಸಹಕಾರ ಸಂಘಗಳಿಗೆ ರಸಗೊಬ್ಬರ ನಿಯಂತ್ರಣ ಆದೇಶ 1985 ರಂತೆ ಕ್ರಮ ಕೈಗೊಳ್ಳುವುದಾಗಿ ಹಾಗೂ ಗೊಬ್ಬರ ಮಾರಾಟದ ಪರವಾನಗಿಯನ್ನು ರದ್ದುಪಡಿಸಿ ಕಾನೂನು ಕ್ರಮ ಕೈಗೊಳ್ಳುವುದಾಗಿ ತಿಳಿಸಿರುವುದು ಸರಿಯಲ್ಲ ಎಂದರು.

ಈ ವಸ್ತುಸ್ಥಿತಿಯ ಹಿನ್ನೆಲೆಯಲ್ಲಿ ಮಳೆಗಾಲವು ಕೊನೆಗೊಳ್ಳುತ್ತಿದ್ದು, ರೈತರಿಗೆ ಸಕಾಲದಲ್ಲಿ ಗೊಬ್ಬರವನ್ನು ವಿತರಿಸಬೇಕಾದ ಅನಿವಾರ್ಯತೆ ಇದೆ. ಡಿಸಿಸಿ ಬ್ಯಾಂಕಿನ ಅಧ್ಯಕ್ಷರು, ಜಿಲ್ಲಾಧಿಕಾರಿಯವರು, ಜಿಲ್ಲೆಯ ಸಹಕಾರ ಸಂಘಗಳ ಅಧ್ಯಕ್ಷರುಗಳು, ಕೃಷಿ ಇಲಾಖೆಯ ಜಂಟಿ ನಿರ್ದೇಶಕರು, ತಾಲೂಕು ಸಹಾಯಕ ನಿರ್ದೇಶಕರು, ಜಿಲ್ಲೆಯ ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಗೊಬ್ಬರ ವಿತರಕರು ಸಭೆಯಲ್ಲಿ ಪಾಲ್ಗೊಂಡಿದ್ದರು. ವಿವಿಧ ಸಹಕಾರ ಸಂಘಗಳ ಅಧ್ಯಕ್ಷರು ಹಲವು ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲಿದರು.

ಬಳಿಕ ಮಾತನಾಡಿದ ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಶಬಾನಾ ಎಂ.ಷೇಕ್ ಅವರು ರಸಗೊಬ್ಬರ ಪೂರೈಕೆ ಸಂಬಂಧಿಸಿದಂತೆ ಜಿಲ್ಲೆಗೊಂದು ನೀತಿ ಮಾಡಿದರೆ ಒಳ್ಳೆಯದು. ಕೃಷಿಗೆ ಸಂಬಂಧಿಸಿದಂತೆ ಭತ್ತ ಮತ್ತು ಮುಸುಕಿನ ಜೋಳ ಕೃಷಿ ಮಂಡಳಿಗೆ ಪತ್ರ ಬರೆದು ರಸಗೊಬ್ಬರ ಬೇಡಿಕೆ ಬಗ್ಗೆ ಮಾಹಿತಿ ನೀಡಲಾಗುತ್ತದೆ. ಕೊಡಗು ಜಿಲ್ಲೆಗೆ ದರ ನಿಗದಿಯಾಗಿಲ್ಲ. ಈ ಬಗ್ಗೆ ಕೃಷಿ ಸಚಿವರ ಗಮನಕ್ಕೆ ತರಲಾಗಿದೆ ಎಂದರು.

ನಂತರ ಗೊಬ್ಬರ ವಿತರಕ ಸಂಸ್ಥೆಯವರು ಮಾತನಾಡಿ, ಕೊಡಗು ಜಿಲ್ಲೆಗೆ ಇನ್ನು ಮುಂದೆ ಲಘು ಪೋಷಕಾಂಶಗಳನ್ನು ಒತ್ತಾಯ ಪೂರ್ವಕವಾಗಿ ಸರಬರಾಜು ಮಾಡುವುದಿಲ್ಲ ಹಾಗೂ ಗೊಬ್ಬರದ ಜೊತೆಯಲ್ಲಿ ಲಿಂಕ್ ಮಾಡುವುದಿಲ್ಲ ಎಂದು ಸಭೆಗೆ ಆಶ್ವಾಸನೆ ನೀಡಿದರು.

ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಮಾತನಾಡಿ, ಸಹಕಾರ ಸಂಘಗಳ ಮೂಲಕ ರಸಗೊಬ್ಬರ ಮಾರುವವರ ಸಮಸ್ಯೆಗಳಿಗೆ ಸ್ಪಂದಿಸಲಾಗುವುದು. ತಮ್ಮ ಸಮಸ್ಯೆಗಳನ್ನು ಹಂತ ಹಂತವಾಗಿ ಪರಿಹರಿಸಲಾಗುವುದು ಎಂದರು.

ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷರಾದ ಹರೀಶ್ ಪೂವಯ್ಯ, ನಿರ್ದೇಶಕರಾದ ರಮೇಶ್, ರಘು ನಾಣಯ್ಯ, ಅರುಣ್ ಭೀಮಯ್ಯ, ಸಹಕಾರ ಸಂಘಗಳ ಉಪ ನಿಬಂಧಕರಾದ ಎಚ್.ಎನ್.ರಮೇಶ್, ಇತರರಿದ್ದರು.

ಆ್ಯಪಲ್ ಕಂಪನಿಯ ಚಾರ್ಜರ್ ನಕಲಿ ಮಾಡಿ 25 ಲಕ್ಷ ವಂಚನೆ

ಕೊರಿಯರ್ ಸಂಸ್ಥೆ ಮಾಜಿ ಉದ್ಯೋಗಿ ಸೇರಿ ಐವರ ಬಂಧನ



ಕುಶಾಲನಗರ, ಸೆ.19– ಪಾರ್ಸೆಲ್ ಮೂಲಕ ಕುಶಾಲನಗರದ ಮೊಬೈಲ್ ಅಂಗಡಿಗಳಿಗೆ ರವಾನಿಸಲ್ಪಟ್ಟ ಆ್ಯಪಲ್ ಕಂಪನಿಯ ಚಾರ್ಜರ್‌ಗಳನ್ನು ಬದಲಾಯಿಸಿ, ನಕಲಿ ಚಾರ್ಜರ್‌ಗಳನ್ನು ಕಂಪನಿಗೆ ಹಿಂದಿರುಗಿಸುವ ಮೂಲಕ 25 ಲಕ್ಷ ರೂ. ವಂಚನೆ ಎಸಗಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಖಾಸಗಿ ಕೊರಿಯರ್ ಸಂಸ್ಥೆಯ ಮಾಜಿ ಉದ್ಯೋಗಿ ಸೇರಿದಂತೆ ಐವರನ್ನು ಕುಶಾಲನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬೆಂಗಳೂರಿನ ಉಡಾನ್ ಡೆಲಿವರಿ ಲಿಮಿಟೆಡ್ ಮಾಜಿ ಉದ್ಯೋಗಿ ಸುರತ್ಕಲ್‌ನ ಹಿತೇಶ್ ರೈ, ಡೆಲಿವರಿ ಬಾಯ್‌ಗಳಾದ ಗುಡ್ಡೆ ಹೊಸೂರು ಸಮೀಪದ ಬೆಳ್ಳೂರಿನ ಎಸ್.ಆರ್.ಧರ್ಮು, ರಂಗಸಮುದ್ರದ ತೀರ್ಥೇಶ್ ರೈ, ಕುಶಾಲನಗರ ಆದಿಶಂಕರಾಚಾರ್ಯ ಬಡಾವಣೆಯ ಎಂಟಿ ಕೀರ್ತನ್, ಶಿರಂಗಾಲದ ಎಸ್.ಆರ್. ವಿನಯ್ ಬಂಧಿತರು. ಇವರಿಂದ 14.10 ಲಕ್ಷ ರೂ. ನಗದು, 73.50 ಸಾವಿರ ರೂ. ಮೌಲ್ಯದ ಆ್ಯಪಲ್ ಕಂಪನಿಯ ಅಸಲಿ ಚಾರ್ಜರ್‌ಗಳು, 1847 ನಕಲಿ ಚಾರ್ಜರ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

ವಿವರ: ಬೆಂಗಳೂರಿನ ಉಡಾನ್ ಡೆಲಿವರಿ ಲಿಮಿಟೆಡ್ ಸಂಸ್ಥೆಯು ವಿವಿಧ ಕಂಪನಿಗಳೊಂದಿಗೆ ಒಪ್ಪಂದ ಮಾಡಿಕೊಂಡು ಅದರ ಉತ್ಪನ್ನಗಳನ್ನು ವ್ಯಾಪಾರಸ್ಥರಿಗೆ ಹಾಗೂ ಗ್ರಾಹಕರಿಗೆ ರವಾನಿಸುತ್ತಿತ್ತು. ಅದರಂತೆ ಆ್ಯಪಲ್ ಕಂಪನಿಯ ಚಾರ್ಜರ್‌ಗಳನ್ನು ಕುಶಾಲನಗರದ ರವಿನಾಥ ಜಿ ಮೊಬೈಲ್ ಅಂಡ್ ಆಕ್ಸಸರೀಸ್, ವಿನಾಯಕ ಎಂಟರ್‌ಪ್ರೈಸಸ್ ಮತ್ತು ಕೃಷ್ಣ ಮೊಬೈಲ್ ಎಲೆಕ್ಟ್ರಾನಿಕ್ಸ್ ಅಂಡ್ ಹೋಂ ಅಪ್ಲೆಯನ್ಸ್ ಅಂಗಡಿಗಳಿಗೆ ಕಳೆದ 3 ತಿಂಗಳಿನಿಂದ ಹಾಸನದ ವೇರ್‌ಹೌಸ್‌ನಿಂದ ಪಾರ್ಸಲ್ ಮೂಲಕ ರವಾನಿಸಿತ್ತು.

ಆದರೆ 25 ಲಕ್ಷರೂ. ಮೌಲ್ಯದ ಚಾರ್ಜರ್‌ಗಳು ನಕಲಿ ಎಂದು ಕಂಪನಿಗೆ ಹಿಂದಿರುಗಿಸಲಾಗಿತ್ತು. ಈ ಸಂಬಂಧ ಉಡಾನ್ ಡೆಲಿವರಿ ಸಂಸ್ಥೆಯ ಸೆಕ್ಯೂರಿಟಿ ಮ್ಯಾನೇಜರ್ ಯಶವಂತ್ ಅವರು ಸೆಪ್ಟೆಂಬರ್ 4ರಂದು 3 ಮೊಬೈಲ್ ಅಂಗಡಿಗಳ ಮಾಲೀಕರು ಹಾಗೂ ಡೆಲಿವರಿ ಬಾಯ್‌ಗಳ ವಿರುದ್ಧ ಪೊಲೀಸರಿಗೆ ದೂರು ಸಲ್ಲಿಸಿದ್ದರು. ತನಿಖೆ ನಡೆಸಿದ ಕುಶಾಲನಗರ ಠಾಣೆ ಪೊಲೀಸರು ಡೆಲಿವರಿ ಸಂಸ್ಥೆಯ ಮಾಜಿ ನೌಕರ ಸೇರಿ ಐವರು ಡೆಲಿವರಿ ಬಾಯ್‌ಗಳನ್ನು ಬಂಧಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ ಎಲ್ಲಾ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ.

ಕಾರ್ಯಾಚರಣೆಯಲ್ಲಿ ಸೋಮವಾರಪೇಟೆ ಉಪವಿಭಾಗದ ಡಿವೈಎಸ್ಪಿ ಆರ್.ವಿ. ಗಂಗಾಧರಪ್ಪ, ಕುಶಾಲನಗರ ಸರ್ಕಲ್ ಇನ್ಸ್‌ಪೆಕ್ಟರ್ ಬಿ.ಜಿ.ಮಹೇಶ್, ಸಬ್‌ಇನ್ಸ್‌ಪೆಕ್ಟರ್ ಎಂ.ಡಿ.ಅಪ್ಪಾಜಿ, ಪ್ರೊಬೆಷನರಿ ಸಬ್‌ಇನ್ಸ್‌ಪೆಕ್ಟರ್ ಕಾಶೀನಾಥ ಬಗಲಿ, ಎಎಸ್‌ಐ ಗಣಪತಿ, ಸಿಬ್ಬಂದಿಗಳಾದ ಜಯಪ್ರಕಾಶ್, ಸಂದೀಪ್, ಅರುಣ್ ಕುಮಾರ್, ಮನೋಜ್ ಕುಮಾರ್, ಸಿದ್ದರಾಜು, ಸೌಮ್ಯ, ರಾಜೇಶ್, ಗಿರೀಶ್, ಪ್ರವೀಣ್ ಮತ್ತು ಯೋಗೇಶ್ ಭಾಗವಹಿಸಿ ದ್ದರು.

ಈ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ 'ಮೈಸೂರು ಮಿತ್ರ' ಸೆ.8ರ ಸಂಚಿಕೆಯಲ್ಲಿ **'ಆ್ಯಪಲ್ ಮೊಬೈಲ್ ಚಾರ್ಜರ್ ನಕಲಿ ಮಾಡಿ 25 ಲಕ್ಷ ರೂ. ವಂಚನೆ'** ಶೀರ್ಷಿಕೆಯಡಿ ವರದಿ ಪ್ರಕಟಿಸಿದ್ದನ್ನು ಸ್ಮರಿಸಬಹುದು.

ಕುಶಾಲನಗರದಲ್ಲಿ ಕೇರಳ ಸಮಾಜದಿಂದ ಸಾಮೂಹಿಕ ಓಣಂ ಆಚರಣೆ



ಕುಶಾಲನಗರ, ಸೆ.19–ಇಲ್ಲಿನ ಕೇರಳ ಸಮಾಜದ ವತಿಯಿಂದ ಸ್ಥಳೀಯ ಎಪಿಸಿಎಂಎಸ್ ಸಭಾಂಗಣದಲ್ಲಿ ಸಾಮೂಹಿಕ ಓಣಂ ಆಚರಿಸಲಾಯಿತು.

ಕುಶಾಲನಗರದ ಇಂದಿರಾ ಬಡಾವಣೆಯಲ್ಲಿರುವ ಕೇರಳ ಸಮಾಜದಿಂದ ಸಾಂಪ್ರದಾಯಿಕ ಉಡುಗೆಯೊಂದಿಗೆ ಮೆರವಣಿಗೆಯಲ್ಲಿ ಸಾಗಿದ ಸಮಾಜದ ಬಂಧುಗಳು ಮಹಾಬಲಿ ಚಕ್ರವರ್ತಿಯ ವೇಷಧಾರಿಯನ್ನು ಕರೆತಂದರು. ಬಳಿಕ ಕಾರ್ಯಕ್ರಮವನ್ನು ಉದ್ಘಾಟಿಸಿದ ಕೊಡಗು ಜಿಲ್ಲಾ ಹಿಂದೂ ಮಲೆಯಾಳಿ ಸಮಾಜದ ಅಧ್ಯಕ್ಷ ವಿ.ಎಂ. ವಿಜಯ್ ಮಾತನಾಡಿ, ಎಲ್ಲಾ ಜಾತಿ ಧರ್ಮಗಳಿಗೆ ಸೇರಿದ ಮಲೆಯಾಳಿ ಭಾಷಿಗರು ಮತ್ತಷ್ಟು ಸಂಘಟಿತರಾಗುವ ಮೂಲಕ ಸಾಮೂಹಿಕ ಓಣಂ ಸಾಂಪ್ರದಾಯಿಕ ಆಚರಣೆಯನ್ನು ಮುಂದಿನ ದಿನಗಳಲ್ಲಿ ಮತ್ತಷ್ಟು ಅಚ್ಚುಕಟ್ಟಾಗಿ ಆಚರಿಸಬೇಕಿದೆ ಎಂದರು.

ಮತ್ತೋರ್ವ ಅತಿಥಿ ಜಲಮಂಡಳಿ ಮಾಜಿ ಅಧ್ಯಕ್ಷೆ ಕೆ.ಪಿ.ಚಂದ್ರಕಲಾ ಮಾತನಾಡಿ, ಮಲೆಯಾಳಿ ಬಾಂಧವರು ಜಾತ್ಯತೀತವಾಗಿ ಕುಶಾಲನಗರದಲ್ಲಿ ಸಮಾಜವನ್ನು ಕಟ್ಟಿ ಬೆಳೆಸಿ ಪ್ರತೀ ವರ್ಷ ಓಣಂ ಹಬ್ಬವನ್ನು ಆಚರಿಸುತ್ತಿರುವುದು ಶ್ಲಾಘನೀಯ. ಸಕಲ ಧರ್ಮದಲ್ಲೂ ದೈವ ಒಬ್ಬನೇ ಎಂಬುದನ್ನು ಈ ಕೇರಳ ಸಮಾಜದ ಓಣಂ ಆಚರಣೆಯಲ್ಲಿ ತಿಳಿಯಬಹುದಾಗಿದೆ ಎಂದು ಹೇಳಿದರು.

ಕೇರಳ ಸಮಾಜದ ಅಧ್ಯಕ್ಷ ಕೆ.ಆರ್.ಶಿವಾನಂದನ್ ಅಧ್ಯಕ್ಷತೆ ವಹಿಸಿದ್ದರು. ಸಂಘದ ಉಪಾಧ್ಯಕ್ಷ ಕೆ.ಬಾಬು, ಪದಾಧಿಕಾರಿಗಳಾದ ಕೆ.ಜೆ.ರಾಬಿನ್, ಅಜಿತಧನರಾಜು, ಬಿ.ಸಿ.ಆನಂದ್, ಐ.ಡಿ.ರಾಯ್, ರವೀಂದ್ರನ್, ಎ.ಕೆ.ವೇಣು, ಎಂ.ಜಿ.ಪ್ರಕಾಶ್, ಬಾಲಕೃಷ್ಣನ್, ಸುಶೀಲ ಮೊದಲಾದವರಿದ್ದರು. ಸಮಾಜದ ಒಳಿತಿಗೆ ದುಡಿದ ಹಿರಿಯರಾದ ಕೆ.ಥಾಮಸ್, ಶಶಿಧರ್, ರಾಮಣ್ಣ ಪೂಜಾರಿ, ಕೆ.ಆರ್. ವಿಜಯನ್, ಯು.ಎಂ.ಲಕ್ಷ್ಮಣ್ ಅವರನ್ನು ಸಮಾಜದ ವತಿಯಿಂದ ಸನ್ಮಾನಿಸಲಾಯಿತು. ಶ್ರೀಜಾ ರಾಜೇಶ್ ಪ್ರಾರ್ಥಿಸಿದರು. ಕೆ.ರಾಜನ್ ಸ್ವಾಗತಿಸಿದರು. ಶ್ರೀಷಾ ನಿರೂಪಿಸಿದರು.

ಗೋಣಿಕೊಪ್ಪದಲ್ಲಿ ಪತ್ರಕರ್ತರ ದಸರಾ ಕ್ರೀಡಾಕೂಟ

ಗೋಣಿಕೊಪ್ಪ, ಸೆ.19– ಶ್ರೀ ಕಾವೇರಿ ದಸರಾ ಸಮಿತಿ, ಪೊನ್ನಂಪೇಟೆ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಸಹಯೋಗದಲ್ಲಿ ಸೋಮವಾರ ಸರ್ಕಾರಿ ಮಾದರಿ ಪ್ರಾಥಮಿಕ ಶಾಲಾ ಮೈದಾನದಲ್ಲಿ ಆಯೋಜಿಸಿದ್ದ ಪತ್ರಕರ್ತರ ದಸರಾ ಕ್ರೀಡಾಕೂಟದಲ್ಲಿ ಪತ್ರಕರ್ತರು ಪಾಲ್ಗೊಂಡು ಸಂಭ್ರಮಿಸಿದರು. ಹೊರಾಂಗಣ ಕ್ರೀಡೆಯಲ್ಲಿ ಖುಷಿ ಪಟ್ಟರು. ಮೂರು ವೈಯಕ್ತಿಕ ಬಹುಮಾನ ಪಡೆದ ಮಂಡೇಡ ಎಸ್.ಅಶೋಕ್ ಚಾಂಪಿಯನ್ ಆಗಿ ಹೊರ ಹೊಮ್ಮಿದರು.

ಫಲಿತಾಂಶ: ಭಾರದ ಗುಂಡು ಎಸೆತದಲ್ಲಿ ಮಚ್ಚಮಾಡ ಅನೀಶ್ ಮಾದಪ್ಪ(ಪ್ರ), ಸಣ್ಣುವಂಡ ಕಿಶೋರ್ ನಾಚಪ್ಪ(ದ್ವಿ), ಮನೋಜ್ ಕುಮಾರ್ (ತೃ), ತೆಂಗಿನ ಕಾಯಿಗೆ ಗುರಿ ಇಡುವ ಸ್ಪರ್ಧೆಯಲ್ಲಿ ವಿ.ವಿ.ಅರುಣ್ ಕುಮಾರ್ (ಪ್ರ), ಚಿಮ್ಮಣಮಾಡ ದರ್ಶನ್ ದೇವಯ್ಯ (ದ್ವಿ), ಮಂಡೇಡ ಅಶೋಕ್ (ತೃ), ಬೌಲ್ ಮಾಡಿ ಕಪ್ ಗೆಲ್ಲಿ ವಿಭಾಗದಲ್ಲಿ ಮಂಡೇಡ ಅಶೋಕ್(ಪ್ರ), ಎನ್. ಎನ್. ದಿನೇಶ್ (ದ್ವಿ), ಮನೋಜ್‌ಕುಮಾರ್ (ತೃ), ಗೋಣಿಚೀಲ ಓಟದಲ್ಲಿ ಮಂಡೇಡ ಅಶೋಕ್(ಪ್ರ), ಕೆ.ಬಿ.ಜಗದೀಶ್ ಜೋಡುಬೀಟಿ(ದ್ವಿ), ಸಿಂಗಿ ಸತೀಶ್ (ತೃ) ಬಹುಮಾನ ಪಡೆದರು. ಹಗ್ಗಜಗ್ಗಾಟದಲ್ಲಿ ಅರುಣ್ ಕುಮಾರ್ ನಾಯಕತ್ವದ ತಂಡ ಪ್ರಥಮ, ಸಣ್ಣುವಂಡ ಕಿಶೋರ್ ನಾಚಪ್ಪ ನಾಯಕತ್ವದ ತಂಡ ದ್ವಿತೀಯ ಸ್ಥಾನ ಪಡೆದುಕೊಂಡಿತು. ತೀರ್ಪುಗಾರರಾಗಿ ರಮಾನಂದ, ತಾಂತ್ರಿಕ ಸಲಹೆಗಾರರಾಗಿ ಕಳ್ಳಿಕಂಡ ನವೀನ್ ಪೊನ್ನಪ್ಪ ಕಾರ್ಯನಿರ್ವಹಿಸಿದರು.



ಕಾವೇರಿ ದಸರಾ ಸಮಿತಿ ಅಧ್ಯಕ್ಷ ಬಿ. ಎನ್. ಪ್ರಕಾಶ್ ಉದ್ಘಾಟಿಸಿ ಮಾತನಾಡಿ, ಪತ್ರಕರ್ತರು ವೃತ್ತಿಯ ಜಂಜಾಟದ ನಡುವೆ ಕ್ರೀಡೆಯಲ್ಲಿ ಭಾಗವಹಿಸಿರುವುದು ವಿಶೇಷತೆಯಾಗಿದೆ ಎಂದರು.

ಸ್ಥಳೀಯ ಗ್ರಾಪಂ ಅಧ್ಯಕ್ಷೆ ಚೈತ್ರ. ಬಿ. ಚೇತನ್, ಮುಖ್ಯಶಿಕ್ಷಕ ಎಚ್.ಕೆ. ಕುಮಾರ್, ಪೊನ್ನಂಪೇಟೆ ತಾಲೂಕು ಅಧ್ಯಕ್ಷ ಸಣ್ಣುವಂಡ ಕಿಶೋರ್ ನಾಚಪ್ಪ, ಕಾರ್ಯಕ್ರಮ ಸಂಚಾಲಕ ಮಂಡೇಡ ಎಸ್. ಅಶೋಕ್, ವಿರಾಜಪೇಟೆ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಮತ್ತಂ ಪ್ರದೀಪ್ ಬಹುಮಾನ ವಿತರಣೆ ಮಾಡಿದರು.

ಸಂಘದ ಸದಸ್ಯರಾದ ಕುಪ್ಪಂಡ ದತ್ತಾತ್ರಿ, ಡಿ. ನಾಗೇಶ್, ಎಚ್.ಕೆ. ಜಗದೀಶ್, ಎಂ. ಎಂ. ಚನ್ನನಾಯಕ ಇದ್ದರು.

ಪಟ್ಟಣ ಪಂಚಾಯಿತಿ ಸ್ಥಾಯಿ ಸಮಿತಿಗೆ ಚುನಾವಣೆ ನಡೆಸಲು ಹೈಕೋರ್ಟ್ ಆದೇಶ

ಪೊನ್ನಂಪೇಟೆ, ಸೆ.19– ತೀವ್ರ ವಿವಾದ ಸೃಷ್ಟಿಸಿದ ವಿರಾಜಪೇಟೆ ಪಟ್ಟಣ ಪಂಚಾಯಿತಿ ಸ್ಥಾಯಿ ಸಮಿತಿ ಅಧ್ಯಕ್ಷರ ಆಯ್ಕೆ ವಿಚಾರಕ್ಕೆ ಸಂಬಂಧಿಸಿದಂತೆ ಇದೀಗ ಹೈಕೋರ್ಟ್ ಆದೇಶ ಹೊರ ಬಿದ್ದಿದೆ. ಈ ಆದೇಶದನ್ವಯ ಮುಂದಿನ ತಿಂಗಳೊಳಗೆ ಪಟ್ಟಣ ಪಂಚಾಯಿತಿ ಸ್ಥಾಯಿ ಸಮಿತಿ ಅಧ್ಯಕ್ಷರ ಚುನಾವಣೆ ನಡೆಸುವುದು ಅನಿವಾರ್ಯವಾಗಿದೆ.



ಈ ಕುರಿತು ಹೈಕೋರ್ಟ್ ಹಿರಿಯ ವಕೀಲ ಎ.ಎಸ್.ಪೊನ್ನಣ್ಣ ಅವರ ಮೂಲಕ ಸಲ್ಲಿಕೆಯಾಗಿದ್ದ ರಿಟ್ ಅರ್ಜಿಯನ್ನು ಪುರಸ್ಕರಿಸಿ ವಿಚಾರಣೆ ನಡೆಸಿದ ಹೈಕೋರ್ಟ್ ಈ ಆದೇಶ ಹೊರಡಿಸಿದೆ. ಮುಂದಿನ ಒಂದು ತಿಂಗಳೊಳಗೆ ಸ್ಥಾಯಿ ಸಮಿತಿ ಚುನಾವಣೆ ನಡೆಸಿ ಪ್ರಕ್ರಿಯೆ ಪೂರ್ಣಗೊಳಿಸಬೇಕು ಎಂದು ಹೈಕೋರ್ಟ್ ಸೂಚನೆ ನೀಡಿದೆ. ಈ ಕುರಿತು ಪ್ರತಿಕ್ರಿಯಿಸಿರುವ ಹೈಕೋರ್ಟ್ ಹಿರಿಯ ವಕೀಲ ಎ.ಎಸ್. ಪೊನ್ನಣ್ಣ, ತಮ್ಮ ವಾದವನ್ನು ಆಲಿಸಿದ ನ್ಯಾಯಾಲಯ ಈ ಕುರಿತ ಸ್ಪಷ್ಟ ಆದೇಶ ನೀಡಿದೆ. ಇದರಿಂದ ಉದ್ದೇಶಪೂರ್ವಕವಾಗಿಯೇ ಮುಂದೂಡಲ್ಪಡುತ್ತಿದ್ದ ವಿರಾಜಪೇಟೆ ಪಟ್ಟಣ ಪಂಚಾಯಿತಿ ಸ್ಥಾಯಿ ಸಮಿತಿ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆಗೆ ಹಾದಿ ಸುಗಮಗೊಂಡಂತಾಗಿದೆ ಎಂದು ತಿಳಿಸಿದ್ದಾರೆ.

ಕುಶಾಲನಗರದಲ್ಲಿ ಇಂಡಿಯಾ ಸ್ವಚ್ಛತಾ ಲೀಗ್ ಕಾರ್ಯಕ್ರಮಕ್ಕೆ ಚಾಲನೆ



ಕುಶಾಲನಗರ, ಸೆ.19– ಇಲ್ಲಿನ ಪಟ್ಟಣ ಪಂಚಾಯಿತಿ ವತಿಯಿಂದ ವಿವಿಧ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಖಾಸಗಿ ಬಸ್ ನಿಲ್ದಾಣದ ಆವರಣದಲ್ಲಿ ಇಂಡಿಯಾ ಸ್ವಚ್ಛತಾ ಲೀಗ್ ಎಂಬ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಪಟ್ಟಣ ಪಂಚಾಯಿತಿ ಅಧ್ಯಕ್ಷ ಬಿ.ಜೈವರ್ಧನ್ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಪಾರಂಪರಿಕ ಕ್ಷೇತ್ರಗಳಲ್ಲಿ ಸ್ವಚ್ಛವಾಗಿಟ್ಟುಕೊಳ್ಳುವ ಯೋಜನೆಗೆ ಚಾಲನೆ ನೀಡಲಾಗಿದೆ. ಪ್ರತಿಯೊಬ್ಬರೂ ಕೂಡ ಪಂಚಾಯ್ತಿಯನ್ನು ಮಾತ್ರ ಅವಲಂಬಿಸದೆ ತಮ್ಮ ಜವಾಬ್ದಾರಿ ಮೆರೆಯಬೇಕಿದೆ ಎಂದು ಕರೆ ನೀಡಿದರು.

ಈ ಸಂದರ್ಭ ಪಪಂ ಉಪಾಧ್ಯಕ್ಷೆ ಸುರಯ್ಯಭಾನು, ಸದಸ್ಯರಾದ ಸುರೇಶ್, ವಿ.ಎಸ್.ಆನಂದ್ ಕುಮಾರ್,ದಿನೇಶ್,ರೂಪ ಉಮಾಶಂಕರ್, ಶೈಲಾಕೃಷ್ಣಪ್ಪಜಗದೀಶ್, ಜಯಲಕ್ಷ್ಮಿ, ಜಯಲಕ್ಷ್ಮಮ್ಮ, ಕೆ.ಜಿ.ಮನು,ಶಂಭುಲಿಂಗಪ್ಪ, ಮುಖ್ಯಾಧಿಕಾರಿ ಕೃಷ್ಣಪ್ರಸಾದ್, ಆರೋಗ್ಯ ನಿರೀಕ್ಷಕ ಉದಯಕುಮಾರ್, ವಿವಿಧ ಸಂಘಸಂಸ್ಥೆಗಳ ಪ್ರಮುಖರು, ಸ್ಥಳೀಯ ಸರ್ಕಾರಿ ಪಿಯು ಮತ್ತು ಕೆಬಿ ಕಾಲೇಜು ವಿದ್ಯಾರ್ಥಿಗಳು ಇದ್ದರು. ಇದೇ ಸಂದರ್ಭ ಸ್ವಯಂ ಸೇವಕರ ನೋಂದಣಿ ನಡೆಯಿತು. ಕುಶಾಲನಗರ ಕಾವೇರಿ ಸೇತುವೆ, ಸಾರಿಗೆ ಬಸ್ ನಿಲ್ದಾಣದಲ್ಲಿ ಸ್ವಚ್ಛತೆ ನಡೆಸಲಾಯಿತು.

ನಾಳೆ ಹರದಾಸ ಅಪ್ಪಚ್ಚಕವಿಯ ಜನ್ಮದಿನಾಚರಣೆ

ಮಡಿಕೇರಿ,ಸೆ.19– ಬೆಂಗಳೂರು ಕೊಡವ ಸಮಾಜದಲ್ಲಿ ಸೆ.21 ರಂದು ಹರದಾಸ ಅಪ್ಪಚ್ಚಕವಿಯ ಜನ್ಮದಿನವನ್ನು ಸಾಹಿತ್ಯ ದಿನವೆಂದು ಆಚರಣೆ ಮಾಡಲಾಗುವುದು.

"ಹರದಾಸ ಅಪ್ಪಚ್ಚಕವಿರ ಪುಟ್ಟನ ನಾಳ್" (ಸಾಹಿತ್ಯ ನಾಳ್) ಕಾರ್ಯಕ್ರಮದಲ್ಲಿ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಪ್ರಕಟಿತ ಡಾ.ಎಂ.ಪಿ. ರೇಖಾ ಅವರು ಬರೆದ "ಕೊಡವ ರಂಗಭೂಮಿ", ಐತಿಚಂಡ ರಮೇಶ್ ಉತ್ತಪ್ಪ ಬರೆದ "ಕೊಡವ ಸಂಸ್ಕೃತಿ ಮತ್ತು ಮಹಿಳೆ ಪಾತ್ರ ಹಾಗೂ ಪ್ರಭಾವ" (ಸಂಶೋಧನಾ ಕೃತಿ) ಮತ್ತು "ಕೊಡವಾಮೆ ಪೋತುವೊ ಎನ್ನನೆ?", ಚೊಟ್ಟೆಯಂಡಮಾಡ ಲಲಿತ ಕಾರ್ಯಪ್ಪ ಅವರು ಬರೆದ "ಲಲಿತ ಕವನ" ಹಾಗೂ ಬಬ್ಬೀರ ಎಂ.ಕಲ್ಪನ ಅವರು ಬರೆದ "ಕೊಡಗಿನ ಪಾರಂಪರಿಕ ಆಭರಣ ಹಾಗೂ ಶಸ್ತ್ರಾಸ್ತ್ರಗಳ ಹಿನ್ನೆಲೆ" (ಸಂಶೋಧನಾ ಕೃತಿ) ಪುಸ್ತಕಗಳು ಕಾರ್ಯಕ್ರಮದಲ್ಲಿ ಬಿಡುಗಡೆಗೊಳ್ಳಲಿದೆ. ಹಾಗೂ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಡಾ.ಅಮ್ಮಾಟಂಡ ಪಾರ್ವತಿ ಅಪ್ಪಯ್ಯ ಹಾಗೂ ಅಕಾಡೆಮಿಯ ಸರ್ವ ಸದಸ್ಯರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಬೆಂಗಳೂರು ಕೊಡವ ಸಮಾಜದ ಅಧ್ಯಕ್ಷರಾದ ಕರವಟ್ಟೀರ.ಟಿ.ಪೆಮ್ಮಯ್ಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾದ ಡಾ.ಅಮ್ಮಾಟಂಡ ಪಾರ್ವತಿ ಅಪ್ಪಯ್ಯ ಅವರು ತಿಳಿಸಿದ್ದಾರೆ.

ನಾಳೆ ವಿ.ಪೇಟೆಯಲ್ಲಿ ಬೃಹತ್ ಆರೋಗ್ಯ ಮೇಳ

ವಿರಾಜಪೇಟೆ, ಸೆ.19– ವಿರಾಜಪೇಟೆ ಕೊಡವ ಸಂಘ ಒಕ್ಕೂಟ, ಪಂಜರುಪೇಟೆ ಕೊಡವಕೇರಿ ಹಾಗೂ ವಿರಾಜಪೇಟೆ ಕೊಡವ ಸಮಾಜದ ಸಂಯುಕ್ತ ಆಶ್ರಯದಲ್ಲಿ ಸೆಪ್ಟೆಂಬರ್ 21 ರಂದು ವಿರಾಜಪೇಟೆ ಕೊಡವ ಸಮಾಜದ ಸಭಾಂಗಣದಲ್ಲಿ ಬೃಹತ್ ಆರೋಗ್ಯ ಮೇಳವನ್ನು ಆಯೋಜಿಸಲಾಗಿದೆ ಎಂದು ಕೊಡವ ಸಂಘ ಒಕ್ಕೂಟದ ಅಧ್ಯಕ್ಷ ಮೇಕೇರಿ ರವಿ ಪೆಮ್ಮಯ್ಯ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಒಕ್ಕೂಟ ಪ್ರಾರಂಭವಾಗಿ ಮೂರು ವರ್ಷಗಳಲ್ಲಿ ಕಳೆದ ಬಾರಿ ವಿರಾಜಪೇಟೆಯಲ್ಲಿರುವ 7 ಕೇರಿಗಳಲ್ಲಿರುವ ಕೊಡವ ಜನಾಂಗದವರಿಗೆ ಶಟಲ್ ಬ್ಯಾಡ್‌ಮಿಂಟನ್ ಪಂದ್ಯಾಟವನ್ನು ಆಯೋಜಿಸಲಾಗಿತ್ತು. ಈ ಬಾರಿ ಪಟ್ಟಣದ ಸಾರ್ವಜನಿಕರಿಗೆ ಅನೂಕೂಲವಾಗುವಂತೆ ಮೈಸೂರಿನ ಸುಯೋಗ್ ಆಸ್ಪತ್ರೆ, ವಿರಾಜಪೇಟೆಯ ದಂತ ಮಹಾವಿದ್ಯಾಲಯ, ಗೋಣಿಕೊಪ್ಪದ ಲೋಪಮುದ್ರ ಆಸ್ಪತ್ರೆಗಳ ಸಹಯೋಗದಲ್ಲಿ ನುರಿತ ತಜ್ಞ ವೈದ್ಯರಿಂದ ಸಾಮಾನ್ಯ ರೋಗ ತಪಾಸಣೆ, ಸ್ತ್ರೀರೋಗ ಮತ್ತು ಪ್ರಸೂತಿ, ಮೂಳೆ ಮತ್ತು ಕೀಲು ರೋಗ, ಮೂತ್ರರೋಗ, ಹೃದಯ ಸಂಬಂಧಿ ಕಾಯಿಲೆ, ಇ.ಸಿ.ಜಿ, ಎಕೋ, ದಂತ ರೋಗ ಪರೀಕ್ಷೆ, ಕಣ್ಣಿನ ತಪಾಸಣೆ, ಸಕ್ಕರೆ ಕಾಯಿಲೆಗಳಿಗೆ ಚಿಕಿತ್ಸೆ ನೀಡಲಾಗುತ್ತದೆ ಎಂದರು.

ಗೋಷ್ಠಿಯಲ್ಲಿ ಚೇದಂಡ ವಸಂತ್‌ಕುಮಾರ್, ನಿರ್ದೇಶಕರಾದ ಮಾದೇಯಂಡ ಸಂಪಿ ಪೂಣಚ್ಚ ಕಾಂಡಂಡ ರಶ್ಮಿ ಉಪಸ್ಥಿತರಿದ್ದರು.

ಸೆ.22 ರಂದು ವಾರ್ಷಿಕ ಮಹಾಸಭೆ



ಮಡಿಕೇರಿ, ಸೆ.19– ಕೊಡಗು ಕಾಫಿ ಬೆಳೆಗಾರರ ಸಹಕಾರ ಸಂಘ ನಿಯಮಿತದ 2021–22ನೇ ಸಾಲಿನ ವಾರ್ಷಿಕ ಮಹಾಸಭೆ ಸೆ.22 ರಂದು ನಡೆಯಲಿದೆ ಎಂದು ಸಂಘದ ಅಧ್ಯಕ್ಷ ಎಂ.ಬಿ.ದೇವಯ್ಯ ತಿಳಿಸಿದರು. ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ಕೆಳಗಿನ ಕೊಡವ ಸಮಾಜದಲ್ಲಿ ಬೆಳಗ್ಗೆ 11 ಗಂಟೆಗೆ ಸಂಘದ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಭೆ ನಡೆಯಲಿದ್ದು, ಸಂಘದ ಸದಸ್ಯರು ಸಭೆಗೆ ಹಾಜರಾಗುವಂತೆ ಮನವಿ ಮಾಡಿದರು.

ಸಂಘವು ಜಿಲ್ಲೆಯಲ್ಲಿ ಒಟ್ಟು 9073 ಸದಸ್ಯರನ್ನು ಹೊಂದಿದ್ದು, ಒಟ್ಟು ರೂ.1.28 ಕೋಟಿ ಹಾಗೂ ರಾಜ್ಯ ಸರ್ಕಾರದ 3 ಕೋಟಿ ಸೇರಿ ಒಟ್ಟು 4.32 ಕೋಟಿ ಪಾಲು ಬಂಡವಾಳವಿರುತ್ತದೆ. ಸಂಘ ಪ್ರಸಕ್ತ ಸಾಲಿನಲ್ಲಿ 14.71 ಲಕ್ಷ ರೂ. ಲಾಭ ಗಳಿಸಿದೆ ಎಂದರು. ಸಂಘಕ್ಕೆ ಸಾಕಷ್ಟು ಆಸ್ತಿಯಿದೆ. ಆದರೆ, ಹಣವಿಲ್ಲದೆ ನಿರ್ವಹಣೆ ಮಾಡಲು ಸಾಧ್ಯವಾಗುತ್ತಿಲ್ಲ. ಪ್ರಸಕ್ತ ಸಾಲಿನಲ್ಲಿ ಲಾಭಾಂಶ ಕಳೆದು 13.81 ಕೋಟಿ ನಷ್ಟದಲ್ಲಿ ಮುಂದುವರಿಯುತ್ತಿದೆ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಸಂಘದ ಉಪಾಧ್ಯಕ್ಷ ತಾಕೇರಿ ಪೊನ್ನಪ್ಪ, ವ್ಯವಸ್ಥಾಪಕ ಮುಕ್ಕಾಟಿರ ನಾಣಯ್ಯ, ನಿರ್ದೇಶಕರಾದ ಚಟ್ರಂಡ ಲೀಲಾ ಮೇದಪ್ಪ, ನಾಪಂಡ ರವಿ ಕಾಳಪ್ಪ ಹಾಗೂ ಪಾಸುರ ಕಾರ್ಯಪ್ಪ ಉಪಸ್ಥಿತರಿದ್ದರು.

ಅನುದಾನ ರಹಿತ ಆಡಳಿತ ಮಂಡಳಿಯ ವಾರ್ಷಿಕ ಸಭೆ

ಮಡಿಕೇರಿ, ಸೆ.19– ಕೊಡಗು ಜಿಲ್ಲಾ ಅನುದಾನ ರಹಿತ ಶಾಲೆಗಳ ಆಡಳಿತ ಮಂಡಳಿ ಸಂಸ್ಥೆ ವಾರ್ಷಿಕ ಮಹಾಸಭೆ ನಾಳೆ (ಸೆ.20) ನಡೆಯಲಿದೆ.

ಅಂದು ಬೆಳಗ್ಗೆ 10.30 ಗಂಟೆಗೆ ಸಂಸ್ಥೆಯ ಅಧ್ಯಕ್ಷ ಕೋಳೇರ ಝರು ಗಣಪತಿ ಅಧ್ಯಕ್ಷತೆಯಲ್ಲಿ ನಗರದ ಹೊಟೇಲ್ ವ್ಯಾಲಿ ವ್ಯೂ ಸಭಾಂಗಣದಲ್ಲಿ ಸಭೆ ಆಯೋಜಿಸಲಾಗಿದೆ ಎಂದು ಪ್ರಧಾನ ಕಾರ್ಯದರ್ಶಿ ಕೊಟ್ರಂಗಡ ತಿಮ್ಮಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಳೆಗೆ ಮನೆ ಗೋಡೆ ಕುಸಿತ



ಸೋಮವಾರಪೇಟೆ, ಸೆ.19– ಕೆಲವು ದಿನಗಳಿಂದ ಸುರಿದ ಭಾರೀ ಮಳೆಗೆ ವಾಸದ ಮನೆ ಕುಸಿದಿರುವ ಘಟನೆ ಸಮೀಪದ ಹೊಸತೋಟ ಗ್ರಾಮದಲ್ಲಿ ನಡೆದಿದೆ.

ಹೊಸತೋಟ ಗ್ರಾಮ ನಿವಾಸಿ ಕೂಲಿ ಕಾರ್ಮಿಕರಾಗಿರುವ ಖದೀಜ ಅವರ ವಾಸದ ಮನೆ ಕುಸಿದಿದ್ದು ಮನೆಯಲ್ಲಿ ಯಾರೂ ಇಲ್ಲದ್ದರಿಂದ ಪ್ರಾಣಾಪಾಯ ತಪ್ಪಿದೆ. ಸ್ಥಳಕ್ಕೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಬಾಲಕೃಷ್ಣ ರೈ, ಗ್ರಾಮ ಲೆಕ್ಕಿಗರಾದ ಶ್ವೇತಾ ಅವರುಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ನಿವೃತ್ತ ಶಿಕ್ಷಕ ಚಿರೋಟಿರ ತಮ್ಮಯ್ಯ ನಿಧನ

ನಾಪೋಕ್ಲು, ಸೆ.19-- ಪೇರೂರು ಗ್ರಾಮದ



ನಿವೃತ್ತ ಶಿಕ್ಷಕ ಚಿರೋಟಿರ ತಮ್ಮಯ್ಯ (90) ಸೋಮವಾರ ನಿಧನರಾಗಿದ್ದಾರೆ. ಮೃತರು ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದು, ಅಂತ್ಯಕ್ರಿಯೆ ಸೋಮವಾರ ಸ್ವಗ್ರಾಮದಲ್ಲಿ ನಡೆಯಿತು.

ಬಸವನಹಳ್ಳಿ ಲ್ಯಾಂಪ್ಸ್ ಸೊಸೈಟಿ ವಾರ್ಷಿಕ ಮಹಾಸಭೆ

ಸಮುದಾಯ ಭವನ, ಗೋದಾಮು ನಿರ್ಮಾಣಕ್ಕೆ ರೂ.1.20 ಕೋಟಿ ಅನುದಾನ ಕೋರಿ ಪ್ರಸ್ತಾವನೆ



ಕುಶಾಲನಗರ, ಸೆ.19– ಸಮೀಪದ ಬಸವನಹಳ್ಳಿಯಲ್ಲಿರುವ ಸೋಮವಾರಪೇಟೆ ತಾಲೂಕು ಗಿರಿಜನ ದೊಡ್ಡ ಪ್ರಮಾಣದ ವಿವಿಧೋದ್ದೇಶ ಸಹಕಾರ ಸಂಘದ 2021–22ನೇ ಸಾಲಿನ ವಾರ್ಷಿಕ ಮಹಾಸಭೆ ಕುಶಾಲನಗರ ಎಪಿಸಿಎಂಎಸ್‌ಸಿ ಸುವರ್ಣ ಮಹೋತ್ಸವ ಸಭಾಂಗಣದಲ್ಲಿ ನಡೆಯಿತು.

ಮಹಾಸಭೆಯ ಅಧ್ಯಕ್ಷತೆ ವಹಿಸಿದ್ದ ಸಂಘದ ಅಧ್ಯಕ್ಷ ಆರ್.ಕೆ. ಚಂದ್ರು ಮಾತನಾಡಿ, ಲ್ಯಾಂಪ್ಸ್ ಸೊಸೈಟಿ ಉನ್ನತೀಕರಣ ಹಾಗೂ ಸಮುದಾಯ ಭವನ ನಿರ್ಮಾಣಕ್ಕಾಗಿ ರೂ.50 ಲಕ್ಷ ಅನುದಾನ ಕೋರಿ ಐಟಿಡಿಪಿ ಇಲಾಖೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಹೇಳಿದರು. ರೂ.80 ಲಕ್ಷಗಳಲ್ಲಿ ಗೋದಾಮು ನಿರ್ಮಾಣದ ಉದ್ದೇಶದ ಅನುದಾನಕ್ಕೆ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಬೆಂಗಳೂರು ಪ್ರಸ್ತಾವನೆ ಸಲ್ಲಿಸಲಾಗಿದೆ. ಸಂಘದಲ್ಲಿ ಈಗಾಗಲೇ ರೂ.9.30 ಲಕ್ಷಗಳ ಅನುದಾನದಲ್ಲಿ ಹೊಲಿಗೆ ತರಬೇತಿ ಕೇಂದ್ರದ ಕಟ್ಟಡ, ರೂ.31 ಲಕ್ಷಗಳ ಅನುದಾನದಲ್ಲಿ 400 ಮೆ.ಟನ್ ಸಾಮರ್ಥ್ಯದ ಗೋದಾಮು ನಿರ್ಮಾಣ ಮಾಡ ಲಾಗಿದೆ. 31.29 ಲಕ್ಷ ರೂ. ಅನುದಾನದಲ್ಲಿ ಸೀಗೆಪುಡಿ ಘಟಕದ ಉನ್ನತೀಕರಣವನ್ನು ಮಾಡುವ ಯೋಜನೆ ಯನ್ನು ಹಮ್ಮಿಕೊಳ್ಳಲಾಗಿದೆ ಎಂದರು. ಸಂಘವು ಪ್ರಸಕ್ತ ಸಾಲಿನಲ್ಲಿ ರೂ.4.58 ಲಕ್ಷಗಳ ಲಾಭವನ್ನು ಹೊಂದಿದ್ದು, ಸುಮಾರು 57,000 ಕೆಜಿಯಷ್ಟು ಸೀಗೆಕಾಯಿ, ಮರದಪಾಚಿ ಮತ್ತು ಉತ್ತಮ ರೀತಿಯ ಜೇನು ಸಂಗ್ರಹಿಸಲಾಗಿದೆ. ಮುಂದಿನ ದಿನಗಳಲ್ಲೂ ಕೂಡ ಇದೇ ರೀತಿಯಲ್ಲಿ ಸಂಘವು ಅಭಿವೃದ್ಧಿ ಪಥದಲ್ಲಿ ಸಾಗುವುದು ಹಾಗೂ ಸಂಘದ ಮುಂಭಾಗದಲ್ಲಿ ಇರುವ 4 ಅಂಗಡಿ ಮಳಿಗೆಗಳನ್ನು, ಸಂಘದ ಹಿಂಭಾಗದ ಗೋದಾಮು ಹಾಗೂ ಮರಘಟಕ ವನ್ನು ಬಾಡಿಗೆ ನೀಡಲಾಗಿದೆ. ಇದರಿಂದ ಸಂಘದ ವರಮಾನವನ್ನು ಅಧಿಕಗೊಳಿಸಲು ಅನುಕೂಲವಾಗಿದೆ. ಉತ್ತಮ ಯೋಜನೆಗಳನ್ನು ಹಮ್ಮಿಕೊಂಡು ಉತ್ತಮ ಉದ್ಯೋಗ ಅವಕಾಶಗಳನ್ನು, ಸದಸ್ಯರಿಗೆ ಸರ್ಕಾರದ ಯೋಜನೆಗಳನ್ನು ನೇರವಾಗಿ ತಲುಪಿಸಲು ಸಹಕಾರಿಯಾಗುವಂತೆ ಯೋಜನೆಗಳನ್ನು ರೂಪಿಸಿ ಸದಸ್ಯರ ಶ್ರೇಯೋಭಿವೃದ್ಧಿಗೆ ಶ್ರಮಿಸುವುದಾಗಿ ಭರವಸೆ ನೀಡಿದರು.

ಮರದ ಪಾಚಿ ಸಂಗ್ರಹಣೆಯು ಕಷ್ಟಕರವಾಗಿರುವುದರಿಂದ ಪ್ರತಿ ಕೆಜಿಗೆ ರೂ.350 ನಿಗದಿ ಪಡಿಸಬೇಕು ಎಂದು ಸದಸ್ಯರು ಒತ್ತಾಯಿಸಿದರು. ಕೊಡ್ಲಿಪೇಟೆ, ಶನಿವಾರಸಂತೆ ಭಾಗದಿಂದಲೂ ಪಾಚಿ, ಸೀಗೆ, ಅಂಟುವಾಳಗಳನ್ನು ಸಂಗ್ರಹಣೆ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಸದಸ್ಯರು ಸಲಹೆ ನೀಡಿದರು.

ಸಂಘದಲ್ಲಿ ಸದಸ್ಯರ ಅನುಕೂಲಕ್ಕಾಗಿ ಮರಣ ನಿಧಿ ಸ್ಥಾಪಿಸಲು ತೀರ್ಮಾನಿಸಲಾಯಿತು.

2021–22ನೇ ಸಾಲಿನ ಆಡಳಿತ ಮಂಡಳಿ ವರದಿ, ಲೆಕ್ಕಪರಿಶೋಧನಾ ವರದಿಯನ್ನು ಸಿಪಿ ಹನಿಕುಮಾರ್ ಸಭೆಗೆ ಮಂಡಿಸಿದರು. 2022–23ನೇ ಸಾಲಿನ ಅಂದಾಜು ಆಯವ್ಯಯ ಪಟ್ಟಿಯನ್ನು ಮಂಡಿಸಿ ಅಂಗೀಕಾರ ಪಡೆಯಲಾಯಿತು. ಸಂಘದ ಉಪಾಧ್ಯಕ್ಷ ಬಿ.ಎನ್.ಮನು, ನಿರ್ದೇಶಕರಾದ ಎಸ್.ಎನ್.ರಾಜಾರಾವ್, ಸಿ.ಕೆ.ಉದಯ ಕುಮಾರ್, ಬಿ.ಎಂ.ಯಶೋಧ, ಬಿ.ಆರ್.ಸುರೇಶ್,ಅಣ್ಣಯ್ಯ, ಎಸ್.ಆರ್.ಕಮಲ, ಕಾವೇರಿ, ಬಿ.ಬಿ.ಮಹೇಶ್, ವಲಯ ಅರಣ್ಯಾಧಿಕಾರಿ, ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಕ.ರಾ.ಲ್ಯಾಂಪ್ಸ್ ಮಹಾಮಂಡಳಿ ನಿಯಮಿತ ಪ್ರತಿನಿಧಿ ಹಾಗೂ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಬಿ.ಜಿ.ಹನಿಕುಮಾರ್ ಉಪಸ್ಥಿತರಿದ್ದರು. ಮೊದಲಿಗೆ ಮೃತಪಟ್ಟ ಸದಸ್ಯರಿಗೆ ಮೌನಾಚರಣೆ ಮಾಡಲಾಯಿತು.

ಮೈಸೂರು ಮಿತ್ರ ವಿಳಾಸ: ನಂದಿನಿ ಗ್ರಾಫಿಕ್ಸ್, ಸಿ.ಹೆಚ್.ಆರ್ ಕಾಂಪ್ಲೆಕ್ಸ್, ಜೋಡಿ ರಸ್ತೆ, ಚಾಮರಾಜನಗರ-571313. ಫ್ಯಾಕ್ಸ್: 08226-222608, ಮೊ. 9242265657 E-mail: chamarajanagar@mysurumithra.com

ಚಾ.ನಗರದಲ್ಲಿ ಗಣಪತಿ ವಿಸರ್ಜನೆ ವೇಳೆ ಡಿಜೆ ತಡೆಯಲು ಹೋದ

ಪೊಲೀಸರ ಮೇಲೆ ಕಲ್ಲು ತೂರಾಟ; ಮೂವರಿಗೆ ಗಾಯ

15ಕ್ಕೂ ಹೆಚ್ಚು ಮಂದಿ ವಿರುದ್ಧ ಎಫ್‌ಐಆರ್, ಐವರ ಬಂಧನ



ಚಾಮರಾಜನಗರ, ಸೆ.19– ಗಣಪತಿ ಮೂರ್ತಿ ವಿಸರ್ಜನೆ ವೇಳೆ ಭದ್ರತೆಗೆ ನಿಯೋಜನೆಗೊಂಡಿದ್ದ ಪೊಲೀಸರ ಮೇಲೆ ಕಲ್ಲು ತೂರಾಟ ನಡೆಸಿರುವ ಘಟನೆ ಭಾನುವಾರ ರಾತ್ರಿ ಚಾಮರಾಜನಗರದಲ್ಲಿ ನಡೆದಿದ್ದು, ಸಬ್‌ಇನ್‌ಸ್ಪೆಕ್ಟರ್ ಸೇರಿ ಮೂವರು ಪೊಲೀಸರು ಗಾಯಗೊಂಡಿದ್ದಾರೆ. ಪ್ರಕರಣ ಸಂಬಂಧ ಐವರನ್ನು ಬಂಧಿಸಲಾಗಿದೆ.

ನಗರದ ಟೌನ್ ಠಾಣೆ ಸಬ್‌ಇನ್‌ಸ್ಪೆಕ್ಟರ್ ಮಹದೇವ್, ಎಎಸ್‌ಐ ಶಿವಕುಮಾರ್, ಜೀಪ್ ಚಾಲಕ ಬಸವರಾಜು ಗಾಯಗೊಂಡವರಾಗಿದ್ದು, ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಆರೋಪಿಗಳಾದ ಚೆನ್ನಿಗ, ಮಹೇಶ, ನಾಗೇಶ, ಮುರುಗೇಶ ಹಾಗೂ ರಮೇಶನನ್ನು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಪ್ರಮುಖ ಆರೋಪಿಗಳಾದ ನಾಗಶೆಟ್ಟಿ, ಮಹೇಂದ್ರ ತಲೆ ಮರೆಸಿಕೊಂಡಿದ್ದು, ಆರೋಪಿಗಳ ಪತ್ತೆಗೆ ಬಲೆ ಬೀಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆ ವಿವರ: ನಗರದ ಸಂತೇಮರಳ್ಳಿ ರಸ್ತೆಯಲ್ಲಿರುವ ಉಪ್ಪಾರ ಬೀದಿಯ ಮಂಟೇಸ್ವಾಮಿ ದೇವಸ್ಥಾನ ಆವರಣದ ಕೊಂಡ ಹಾಕುವ ಸ್ಥಳದಲ್ಲಿ ಗಣೇಶನ ಮೂರ್ತಿ ಪ್ರತಿಷ್ಠಾಪಿಸಲಾಗಿತ್ತು. ಭಾನುವಾರ ರಾತ್ರಿ ಮೂರ್ತಿಯ ವಿಸರ್ಜನಾ ಮಹೋತ್ಸವವನ್ನು ಸಂಘಟಕರು ಹಮ್ಮಿಕೊಂಡಿದ್ದರು. ಪಟ್ಟಣ ಠಾಣೆ ಸಬ್‌ಇನ್‌ಸ್ಪೆಕ್ಟರ್ ಮಹದೇವ್ ನೇತೃತ್ವದಲ್ಲಿ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿತ್ತು. ರಾತ್ರಿ 10.30ರ ನಂತರವೂ ಯುವಕರು ಧ್ವನಿವರ್ಧಕದಲ್ಲಿ ಜೋರಾಗಿ ಹಾಡು ಹಾಕಿ ನೃತ್ಯ ಮಾಡುತ್ತಿದ್ದರು ಎನ್ನಲಾಗಿದೆ. ಈ ವೇಳೆ ಪಿಎಸ್‌ಐ ಮಹದೇವ್ ಅವರು, ಸುಪ್ರೀಂ ಕೋರ್ಟ್ ಆದೇಶದನ್ವಯ ಜನನಿಬಿಡ ಪ್ರದೇಶದಲ್ಲಿ ರಾತ್ರಿ 10 ಗಂಟೆಯ ಬಳಿಕ ಧ್ವನಿವರ್ಧಕ ಬಳಸಬಾರದು. ಧ್ವನಿವರ್ಧಕ, ಡಿಜೆ ಬಳಸಲು ಅನುಮತಿ ನೀಡಿಲ್ಲ. ರಾತ್ರಿ 10 ಗಂಟೆಯಿಂದ ಬೆಳಗ್ಗೆ 6 ಗಂಟೆಯವರೆಗೆ ಧ್ವನಿವರ್ಧಕಗಳನ್ನು ನಿಷೇಧಿಸಲಾಗಿದೆ. ಡಿಜೆ ನಿಲ್ಲಿಸಿ ಎಂದು ಸಂಘಟಕರಿಗೆ ತಿಳಿಸಿದ್ದಾರೆ. ಇದಕ್ಕೆ ಕೆ.ಟಿ.ನಾಗಶೆಟ್ಟಿ ಎಂಬುವವರು ಆಕ್ಷೇಪ ವ್ಯಕ್ತಡಿಸಿದ್ದಾರೆ ಎನ್ನಲಾಗಿದೆ. ಇದೇ ವೇಳೆ ನಾಗಶೆಟ್ಟಿ ಅವರ ಪುತ್ರ ಮಹೇಂದ್ರ ಪೊಲೀಸರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ, ಪಿಎಸ್‌ಐ ಸುನೀಲ್ ಅವರ ಕರ್ತವ್ಯಕ್ಕೆ ಅಡ್ಡಿ ಪಡಿಸಿದ್ದಾನೆ ಎನ್ನಲಾಗಿದೆ. ಅಲ್ಲದೆ ಮಹೇಂದ್ರ ಕಲ್ಲಿನಿಂದ ಮಹದೇವ ಅವರ ತಲೆಗೆ ಹೊಡೆದು ಗಾಯಗೊಳಿಸಿದ್ದಾನೆ ಎಂದು ಘಟನೆ ಸಂಬಂಧ ಬಂದೋಬಸ್ತ್ ಕರ್ತವ್ಯದಲ್ಲಿದ್ದ ಎಎಸ್‌ಐ ಶಿವಶಂಕರ್ ಅವರು ಪಟ್ಟಣ ಠಾಣೆಗೆ ದೂರು ನೀಡಿದ್ದಾರೆ.

ಈ ವೇಳೆ ಸ್ಥಳದಲ್ಲಿಯೇ ಇದ್ದ ಚೆನ್ನಿಗ, ಅವರ ತಮ್ಮ ಮಹೇಶ, ನಾಗೇಶ, ಮುರುಗೇಶ, ರಮೇಶ ಸೇರಿದಂತೆ 10ರಿಂದ 15 ಮಂದಿ ಪೊಲೀಸರ ಮೇಲೆ ಕಲ್ಲು ತೂರಾಟ ನಡೆಸಿದರು. ಈ ಸಂದರ್ಭದಲ್ಲಿ ನನಗೆ ಹಾಗೂ ಜೀಪು ಚಾಲಕ ಬಸವರಾಜು ಅವರಿಗೆ ಗಾಯಗಳಾಗಿವೆ ಎಂದು ದೂರಿನಲ್ಲಿ ಶಿವಶಂಕರ್ ವಿವರಿಸಿದ್ದಾರೆ.

ಕರ್ತವ್ಯದ ಮೇಲಿದ್ದ ನಮಗೆ ಅವಾಚ್ಯ ಶಬ್ದಗಳಿಂದ ಬೈಯುತ್ತಾ, ಕಲ್ಲು ತೂರಾಟ ನಡೆಸಿ, ಗಾಯಗೊಳಿಸಿರುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ದೂರಿನಲ್ಲಿ ತಿಳಿಸಲಾಗಿದೆ ಈ ಸಂಬಂಧ 15ಕ್ಕೂ ಹೆಚ್ಚು ಜನರ ವಿರುದ್ಧ ಪ್ರಕರಣ ದಾಖಲಾಗಿಸಲಾಗಿದ್ದು, ಐವರನ್ನು ಬಂಧಿಸಲಾಗಿದೆ ಎಎಸ್‌ಐ ಶಿವಶಂಕರ್ ಹಾಗೂ ಬಸವರಾಜು ಕಾಲಿಗೆ ಗಾಯವಾಗಿದ್ದು, ಎಲ್ಲರೂ ಚೇತರಿಸಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಆರ್‌ಎಂಸಿ ಮಿಕ್ಸರ್ ಪ್ಲಾಂಟ್‌ನಲ್ಲಿ ದರೋಡೆ ನಡೆಸಿದ್ದ ಮೂವರ ಬಂಧನ



ಚಾಮರಾಜನಗರ, ಸೆ.19–ತಾಲೂಕಿನ ಮಾದಾಪುರ ಗ್ರಾಮದಲ್ಲಿ ಆರ್‌ಎಂಸಿ ಮಿಕ್ಸರ್ ಘಟಕಕ್ಕೆ ನುಗ್ಗಿ ಸೆಕ್ಯೂರಿಟಿಗೆ ಚಾಕು ತೋರಿಸಿ ಬೆದರಿಸಿ ದರೋಡೆ ಮಾಡಿದ್ದ ಪ್ರಕರಣವನ್ನು ಭೇದಿಸಿರುವ ನಗರದ ಪೂರ್ವ ಠಾಣೆ ಪೊಲೀಸರು ಮೂವರು ದರೋಡೆಕೋರರನ್ನು ಬಂಧಿಸಿದ್ದಾರೆ.

ಮೈಸೂರಿನವರಾದ ನದೀಂಖಾನ್ ಅಲಿಯಾಸ್ ನದೀಂ, ಸೈಯದ್ ತನ್ವೀರ್ ಅಲಿಯಾಸ್ ತನು ಹಾಗೂ ಸೈಯಾದ್ ಶಹಬಾಜ್ ಅಲಿಯಾಸ್ ಶಹಬಾಜ್ ಬಂಧಿತರಾಗಿದ್ದು, ಇವರಿಂದ 29 ಸಾವಿರ ರೂ. ಮೌಲ್ಯದ ಮೋಟಾರ್ ಹಾಗೂ ಕಬ್ಬಿಣದ ಪದಾರ್ಥಗಳು ಮತ್ತು 34 ಸಾವಿರ ನಗದು, ಹೋಂಡೈ ಕಾರು, ಟಾಟಾ ಏಸ್ ಮೆಗಾ ಗೂಡ್ಸ್ ವಾಹನ ವಶಪಡಿಸಿಕೊಳ್ಳಲಾಗಿದೆ. ದರೋಡೆಯಲ್ಲಿ ಭಾಗವಹಿಸಿದ್ದ ಇನ್ನು ಮೂವರಿಗಾಗಿ ಹುಡುಕಾಟ ನಡೆದಿದೆ ಎಂದು ಪೊಲೀಸ್ ಪ್ರಕಟಣೆ ತಿಳಿಸಿದೆ.

ವಿವರ: ತಾಲೂಕಿನ ಮಾದಾಪುರ ಗ್ರಾಮದಲ್ಲಿರುವ ಆರ್‌ಎಂಸಿ ಮಿಕ್ಸರ್ ಘಟಕದ ಮುಂದೆ ಆ.28ರಂದು ಮಧ್ಯರಾತ್ರಿ ಗೂಡ್ಸ್ ವಾಹನವೊಂದು ಬಂದು ನಿಂತಿದೆ. ಅದರಿಂದ ಇಳಿದ ಓರ್ವ ವ್ಯಕ್ತಿ ಮಿಕ್ಸರ್ ಘಟಕದ ಸೆಕ್ಯೂರಿಟಿ ಬಾಬು ರಾಜೇಂದ್ರ ಪ್ರಸಾದ್ ಬಳಿ ತಮ್ಮ ಗಾಡಿಯ ರೇಡಿಯೇಟರ್‌ಗೆ ನೀರು ಬೇಕು ಎಂದು ಕೇಳಿದ್ದಾನೆ. ರಾಜೇಂದ್ರ ಪ್ರಸಾದ್ ನೀರು ಕೊಡಲು ಮುಂದಾದಾಗ ಮತ್ತೋರ್ವ ಟವಲ್‌ನಿಂದ ಅವರ ಕತ್ತನ್ನು ಬಿಗಿದು ಹಿಡಿದುಕೊಂಡರೆ, ಮತ್ತೋರ್ವ ಚಾಕು ತೋರಿಸಿ ಬೆದರಿಕೆ ಹಾಕಿ ಅವರ ಮೊಬೈಲ್ ಹಾಗೂ ಘಟಕದ ಕೀಯನ್ನು ಕಸಿದುಕೊಂಡು ಸೆಕ್ಯೂರಿಟಿ ರೂಂನಲ್ಲಿ ಅವರನ್ನು ಕೂಡಿಹಾಕಿದ್ದಾರೆ.

ನಂತರ ಗೂಡ್ಸ್‌ವಾಹನದಲ್ಲಿ 4 ಹಳೆಯ ವೈಬ್ರೆಟಿಂಗ್ ಮೋಟಾರ್‌ಗಳು, 9 ಶೇಪ್ ಹ್ಯಾಂಗ್ಲರ್‌ಗಳು, 240 ಸಪೋರ್ಟಿಂಗ್ ರಾಡ್‌ಗಳು ಸೇರಿದಂತೆ 1.64 ಲಕ್ಷ ರೂ. ಮೌಲ್ಯದ ಪದಾರ್ಥಗಳನ್ನು ತುಂಬಿಕೊಂಡು ನಂತರ ರಾಜೇಂದ್ರ ಪ್ರಸಾದ್ ಅವರನ್ನು ರೂಂನಿಂದ ಹೊರಗೆ ಬಿಟ್ಟು ಈ ವಿಷಯವನ್ನು ಯಾರಿಗಾದರೂ ತಿಳಿಸಿದರೆ ಕೊಲೆ ಮಾಡುವುದಾಗಿ ಬೆದರಿಸಿ ಸಂತೇಮರಳ್ಳಿ ಕಡೆ ಹೋಗಿದ್ದಾರೆ. ಈ ಸಂಬಂಧ ರಾಜೇಂದ್ರ ಪ್ರಸಾದ್ ಆ.29ರಂದು ಬೆಳಗ್ಗೆ ಚಾಮರಾಜನಗರ ಪೂರ್ವ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು.

ಪ್ರಕರಣ ದಾಖಲಿಸಿಕೊಂಡ ಪೊಲೀಸರು ಎಎಸ್‌ಪಿ ಸುಂದರ್‌ರಾಜ ಮಾರ್ಗದರ್ಶನದಲ್ಲಿ ಡಿವೈಎಸ್‌ಪಿ ಪ್ರಿಯದರ್ಶಿನಿ ಈ ಸಾಣಿಕೊಪ್ಪ ನೇತೃತ್ವದಲ್ಲಿ ಚಾಮರಾಜನಗರ ಪೂರ್ವ ಠಾಣೆಯ ಇನ್ಸ್‌ಪೆಕ್ಟರ್ ಎಸ್. ಆನಂದ್, ಪಿಎಸ್‌ಐ ಸಿ.ಕೆಮಹೇಶ್, ಸಿಬ್ಬಂದಿಗಳಾದ ಪುಟ್ಟರಾಜು, ಬಸವಣ್ಣ, ಚಂದ್ರಶೇಖರ, ನಂದಕುಮಾರ, ಬಾಷಾ ಸಾಬ್ ಮುಲ್ಲಾ, ಅಶೋಕ ಮತ್ತು ಜಿಲ್ಲಾ ತಾಂತ್ರಿಕ ಘಟಕದ ಸಿಬ್ಬಂದಿ ವೆಂಕಟೇಶ ಮತ್ತು ಶಂಕರರಾಜು ಅವರನ್ನೊಳಗೊಂಡ ತಂಡ ಕಾರ್ಯಾಚರಣೆ ನಡೆಸಿ ಮೂವರನ್ನು ಬಂಧಿಸಿದೆ.

ಹನೂರಲ್ಲಿ ವಿಶ್ವಕರ್ಮ ಜಯಂತಿ



ಹನೂರು, ಸೆ.19– ವಿಶ್ವಕರ್ಮರ ಸಮುದಾಯ ಸಂಘಟಿತರಾಗಿ ತಮ್ಮ ಹಕ್ಕು ಪಡೆದುಕೊಳ್ಳಲು ಮುಂದಾಗಬೇಕು ಎಂದು ಶಾಸಕ ಆರ್.ನರೇಂದ್ರ ಸಲಹೆ ನೀಡಿದರು.

ವಿಶ್ವಕರ್ಮ ಜಯಂತಿ ಅಂಗವಾಗಿ ಪಟ್ಟಣದ ಆರ್.ಎಸ್.ದೊಡ್ಡಿಯಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ತಾಲೂಕು ಸಮಿತಿಯಿಂದ ಏರ್ಪಡಿಸಿದ್ದ ವಿಶ್ವಕರ್ಮರ ಭಾವಚಿತ್ರವನ್ನೊಳಗೊಂಡ ಅಶ್ವರೂಢ ವಾಹನಕ್ಕೆ ಪೂಜೆ ಸಲ್ಲಿಸಿ, ಮೆರವಣಿಗೆಗೆ ಚಾಲನೆ ನೀಡಿ ಅವರು ಮಾತನಾಡಿದರು. ಶಿಲ್ಪಕಲೆಯಿಂದ ಭಾರತವನ್ನು ಜಾಗತಿಕ ಮಟ್ಟದಲ್ಲಿ ಮನ್ನಣೆಗಳಿಸುವಂತೆ ಮಾಡಿದ ಕೀರ್ತಿ ವಿಶ್ವಕರ್ಮ ಸಮುದಾಯಕ್ಕೆ ಸಲ್ಲುತ್ತದೆ. ಇತ್ತೀಚಿಗೆ ವಿಶ್ವಕರ್ಮ ಸಮುದಾಯದವರು ಸಂಘಟಿತರಾಗಿರುವುದು ಸಂತಸ ತಂದಿದೆ ಎಂದರು.

ಮೆರವಣಿಗೆಗೆ ವಿವಿಧ ಕಲಾತಂಡಗಳು ಮೆರಗು ತಂದವು. ಪಟ್ಟಣದ ಆರ್.ಎಸ್. ದೊಡ್ಡಿಯಿಂದ ಹೊರಟ ಮೆರವಣಿಗೆ ಡಾ.ಬಿ.ಆರ್.ಅಂಬೇಡ್ಕರ್ ವೃತ್ತ ಹಾಗೂ ದಿ.ಹೆಚ್.ನಾಗಪ್ಪ ವೃತ್ತದ ಮೂಲಕ ಸಾಗಿ ಬಂಡಳ್ಳಿ ರಸ್ತೆ ಕ್ರಿಸ್ತರಾಜ ಶಾಲೆವರೆಗೆ ವಿವಿಧ ಕಲಾತಂಡಗಳೊಂದಿಗೆ ಸಾಗಿತು. ಈ ಸಂದರ್ಭದಲ್ಲಿ ವಿಶ್ವಕರ್ಮ ತಾಲೂಕು ಸಂಘದ ಅಧ್ಯಕ್ಷ ಮುತ್ತುರಾಜು, ಖಜಾಂಚಿ ಸಿದ್ದರಾಜು, ಸಮುದಾಯದ ಮುಖಂಡರಾದ ತಮ್ಮಯ್ಯಚಾರ್, ಶಿವಮೂರ್ತಿ, ಮುರುಗೇಶ್, ಕುಮಾರ ಹಾಗೂ ವಿವಿಧ ಗ್ರಾಮಗಳ ಮುಖಂಡರು, ಯಜಮಾನರು, ಯುವಕರು, ಮಹಿಳೆಯರಿದ್ದರು.

ಅ.1, ಬೇಗೂರಿಗೆ ಭಾರತ್ ಜೋಡೋ ಪಾದಯಾತ್ರೆ



ಬೇಗೂರು, ಸೆ.19–ರಾಹುಲ್‌ಗಾಂಧಿ ನೇತೃತ್ವದಲ್ಲಿ ನಡೆಯುತ್ತಿರುವ ಭಾರತ್ ಜೋಡೋ ಪಾದಯಾತ್ರೆ ಕರ್ನಾಟಕದಲ್ಲಿ ಗುಂಡ್ಲುಪೇಟೆ ಯಿಂದಲೇ ಪ್ರಾರಂಭವಾಗುತ್ತಿದ್ದು, ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಯುವ ಮುಖಂಡ ಹೆಚ್.ಎಂ.ಗಣೇಶ್‌ಪ್ರಸಾದ್ ಮನವಿ ಮಾಡಿದರು. ಗುಂಡ್ಲುಪೇಟೆ ತಾಲೂಕಿನ ಹಾಲಹಳ್ಳಿಯಲ್ಲಿ ನಡೆದ ಬೇಗೂರು ಹೋಬಳಿಯ ಜಿಪಂ ಮತ್ತು ಗ್ರಾಪಂ ವ್ಯಾಪ್ತಿಯ ಗ್ರಾಮಗಳ ಕಾಂಗ್ರೆಸ್ ಕಾರ್ಯಕರ್ತರ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಸೆ.30ರಂದು ಗುಂಡ್ಲುಪೇಟೆಗೆ ಅ.1ರಂದು ಬೇಗೂರಿಗೆ ಪಾದಯಾತ್ರೆ ಆಗಮಿಸಲಿದ್ದು, ಕಾರ್ಯ ಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಕೋರಿದರು.

ಈ ಸಂದರ್ಭದಲ್ಲಿ ಬೇಗೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಎಂ. ಮುನಿರಾಜು. ಚಾಮುಲ್ ಮಾಜಿ ಅಧ್ಯಕ್ಷ ಹಾಲಿ ಸದಸ್ಯ ಹೆಚ್.ಎಸ್. ನಂಜುಂಡಪ್ರಸಾದ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮತ್ತು ಐಕ್ಯತಾ ಯಾತ್ರೆಯ ಉಸ್ತುವಾರಿ ಬಸವರಾಜು, ನಿಟ್ರೆ ನಾಗರಾಜು, ಬೇಗೂರು ಪುಟ್ಟಣ್ಣ ಹೆಚ್.ಎನ್.ಬಸವರಾಜು, ಹೊರೆಯಾಲ ನೀಲಕಂಠಪ್ಪ, ಬೇಗೂರು ಗ್ರಾಪಂ ಉಪಾಧ್ಯಕ್ಷ ಕೆ.ಮಹದೇವಶಟ್ಟಿ, ಸದಸ್ಯರಾದ ಬೆಳಚಲವಾಡಿ ಮಹದೇವಸ್ವಾಮಿ, ಮನೀಶ್, ಕಮರಹಳ್ಳಿ ಕುಮಾರ್, ಸುರೇಶ್ ಸೇರಿದಂತೆ ಮತ್ತಿತರರಿದ್ದರು.

ಉಸಿರಾಟ ತೊಂದರೆ: ಪ್ರವಾಸಿಗ ಸಾವು

ಗುಂಡ್ಲುಪೇಟೆ, ಸೆ. 19–ಉಸಿರಾಟದ ತೊಂದರೆಯಿಂದ ಪ್ರವಾಸಿಗನೋರ್ವ ಮೃತಪಟ್ಟಿದ್ದು, ಗುಂಡ್ಲುಪೇಟೆ ಸರ್ಕಾರಿ ಆಸ್ಪತ್ರೆಯಲ್ಲಿ ಆಕ್ಸಿಜನ್ ಲಭ್ಯವಿಲ್ಲದ ಕಾರಣ ಈ ಸಾವು ಸಂಭವಿಸಿದೆ ಎಂದು ಆರೋಪಿಸಲಾಗಿದೆ.

ಚಿತ್ರದುರ್ಗ ಮೂಲದ ಅನಿಲ್ (32) ಮೃತಪಟ್ಟ ಪ್ರವಾಸಿಗನಾಗಿದ್ದು, ಈತ ಕುಟುಂಬ ಸಮೇತ ತಾಲೂಕಿನ ಹಿಮವದ್ ಗೋಪಾಲಸ್ವಾಮಿ ಬೆಟ್ಟಕ್ಕೆ ಆಗಮಿಸಿ, ದೇವರ ದರ್ಶನ ಪಡೆದ ನಂತರ ವಾಪಸ್ ಬರುವಾಗ ಉಸಿರಾಟದ ಸಮಸ್ಯೆ ಉಂಟಾಗಿದೆ. ತಕ್ಷಣ ಆಂಬುಲೆನ್ಸ್‌ನಲ್ಲಿ ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಕರೆತಲಾಯಿತು. ಆಸ್ಪತ್ರೆಯಲ್ಲಿ ಆಕ್ಸಿಜನ್ ಸಿಗದ ಕಾರಣ ವೈದ್ಯರು ಪ್ರಥಮ ಚಿಕಿತ್ಸೆ ನೀಡಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ಕಳುಹಿಸಲು ಪ್ರಯತ್ನಿಸುತ್ತಿದ್ದಾಗಲೇ ಅನಿಲ್ ಮೃತಪಟ್ಟರು. ಈ ಆಸ್ಪತ್ರೆಯಲ್ಲಿ ಆಕ್ಸಿಜನ್ ಸಿಗುತ್ತದೆ. ಜೀವ ಉಳಿಯುತ್ತದೆ ಎಂಬ ಆಸೆಯೊಂದಿಗೆ ಬಂದರೆ ಇಲ್ಲೇ ಜೀವ ಹೋಯಿತು ಎಂದು ಪತ್ನಿ ಲಕ್ಷ್ಮಿ ಹಾಗೂ ಕುಟುಂಬಸ್ಥರು ರೋಧಿಸಿದರು.

ಈ ಕುರಿತು ಆಸ್ಪತ್ರೆಯ ವೈದ್ಯಾಧಿಕಾರಿ ಡಾ.ಮಂಜುನಾಥ್ ಪ್ರತಿಕ್ರಿಯೆ ನೀಡಿ, ಆಸ್ಪತ್ರೆಯಲ್ಲಿ ಆಕ್ಸಿಜನ್ ಸಮಸ್ಯೆ ಆಗಿಲ್ಲ. ಮೃತ ಯುವಕನಿಗೆ ಆಕ್ಸಿಜನ್ ಕೊಟ್ಟು ಮೈಸೂರಿಗೆ ಕಳುಹಿಸುವ ಸಂದರ್ಭದಲ್ಲಿ ಕಾರ್ಡಿಯಕಾರೆಸ್ಟ್ ಆಯಿತು. ಮತ್ತೆ ಆತನನ್ನು ಆಸ್ಪತ್ರೆ ಒಳಗೆ ಕರೆತಂದು ಚಿಕಿತ್ಸೆ ನೀಡಿದರೂ ಪ್ರಯೋಜನ ಆಗಲಿಲ್ಲ ಎಂದು ತಿಳಿಸಿದರು.

ಬೈಕ್‌ಗೆ ಗೂಡ್ಸ್ ಆಟೋ ಡಿಕ್ಕಿ ಮಹಿಳೆ ಸೇರಿ ಇಬ್ಬರಿಗೆ ಗಾಯ

ಬೇಗೂರು, ಸೆ.19– ಗೂಡ್ಸ್ ಆಟೋ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಮಹಿಳೆ ಸೇರಿ ಇಬ್ಬರು ತೀವ್ರ ಗಾಯಗೊಂಡಿರುವ ಘಟನೆ ಗುಂಡ್ಲುಪೇಟೆ ತಾಲೂಕಿನ ಬೇಗೂರು ಸಮೀಪದ ಓಂಕಾರ ಅರಣ್ಯ ಇಲಾಖೆ ಕಚೇರಿ ಬಳಿ ಸೋಮವಾರ ನಡೆದಿದೆ.

ಬೈಕ್ ಸವಾರ ಹೆಚ್.ಡಿ.ಕೋಟೆ ತಾಲೂಕಿನ ಕಂದಲಿಕೆ ಗ್ರಾಮದ ವೀರಾಜನಾಯಕ ಹಾಗೂ ರತ್ನಮ್ಮ ಅವರು ತೀವ್ರವಾಗಿ ಗಾಯಗೊಂಡವರಾಗಿದ್ದು, ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ರವಾನಿಸಲಾಗಿದೆ. ಅಪಘಾತದ ಬಳಿಕ ಆಟೋ ಚಾಲಕ ಪರಾರಿಯಾಗಿದ್ದು, ಪ್ರಕರಣ ದಾಖಲಿಸಿಕೊಂಡಿರುವ ಬೇಗೂರು ಠಾಣಾ ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಕಾಂಗ್ರೆಸ್ ಪಾದಯಾತ್ರೆ ಯಶಸ್ಸಿಗೆ ಬಿಜೆಪಿ ಅಸೂಯೆ



ಚಾಮರಾಜನಗರ ಸೆ.19–ರಾಹುಲ್ ಗಾಂಧಿ ಅವರ ನೇತೃತ್ವದಲ್ಲಿ ನಡೆಯುತ್ತಿರುವ ಭಾರತ್ ಜೋಡೋ ಪಾದಯಾತ್ರೆಗೆ ನಾಗರಿಕರಿಂದ ಅಭೂತಪೂರ್ವ ಬೆಂಬಲ ವ್ಯಕ್ತವಾಗುತ್ತಿದ್ದು, ಇದನ್ನು ಸಹಿಸದ ಬಿಜೆಪಿ ಮುಖಂಡರು, ಅಸೂಯೆಯಿಂದ ಪಾದಯಾತ್ರೆಯನ್ನು ಟೀಕಿಸುತ್ತಿದ್ದಾರೆ ಎಂದು ಕಾಂಗ್ರೆಸ್ ಜಿಲ್ಲಾ ವಕ್ತಾರ ಕೆರೆಹಳ್ಳಿ ನವೀನ್ ಕಿಡಿಕಾರಿದರು.

ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾರತ್ ಜೋಡೋ ಪಾದಯಾತ್ರೆ ಯಶಸ್ವಿಯಾಗಿ ಸಾಗುತ್ತಿದೆ. ಇದೇ ತಿಂಗಳು 30ರಂದು ಜಿಲ್ಲೆಗೆ ಪಾದಯಾತ್ರೆ ಆಗಮಿಸಲಿದೆ. ಪಾದಯಾತ್ರೆಯಲ್ಲಿ ಪ್ರತಿದಿನ ಸಾವಿರಾರು ಜನರು ಪಾಲ್ಗೊಳ್ಳುತ್ತಿದ್ದಾರೆ. ಇದನ್ನು ಬಿಜೆಪಿ ಮುಖಂಡರು ಸಹಿಸದೆ ರಾಜಕೀಯ ದೃಷ್ಟಿಯಿಂದ ಕೀಳು ಮಟ್ಟದ ಮಾತುಗಳನ್ನಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಾಡಾ ಅಧ್ಯಕ್ಷ ನಿಜಗುಣರಾಜು ಅವರು, ಕಾಂಗ್ರೆಸ್‌ನದು ಭಾರತ್ ಜೋಡೋ ಪಾದಯಾತ್ರೆಅಲ್ಲ, ಅದೊಂದು ಕಾಂಗ್ರೆಸ್ ಜೋಡೋ ಯಾತ್ರೆ ಎಂದಿದ್ದಾರೆ. ಈ ಮಾತನ್ನು ಜನರು ಹೇಳಿದ್ದರೆ ನಾವು ಒಪ್ಪಿಕೊಳ್ಳುತ್ತಿದ್ದೆವು. ಆದರೆ ಬಿಜೆಪಿ ನಾಯಕ ಎನಿಸಿಕೊಂಡವರು ಹೇಳಿರುವುದು ಸರಿಯಲ್ಲ. ನಿಜಗುಣರಾಜು ಅವರ ಸರ್ಕಾರದ ಕೊಡುಗೆ ರಾಜ್ಯಕ್ಕೇನು? ಜಿಲ್ಲೆಗೇನು? ಎಂಬುದನ್ನು ಮೊದಲು ಬಹಿರಂಗಪಡಿಸಲಿ. ನೀವು ಕಾಡಾ ಅಧ್ಯಕ್ಷರಾದ ನಂತರ ಎಷ್ಟು ಅನುದಾನ ತಂದಿದ್ದೀರಿ? ಎಷ್ಟು ಸಭೆಗಳನ್ನು ನಡೆಸಿದದ್ದೀರಿ? ಮಳೆಹಾನಿಯಿಂದ ಅನಾಹುತಗಳಾಗಿವೆ. ಅದಕ್ಕೆ ತಾವು ಬಿಡುಗಡೆ ಮಾಡಿಸಿರುವ ಹಣ ಎಷ್ಟು? ಎಂಬುದನ್ನು ಮೊದಲು ಬಹಿರಂಗಗೊಳಿಸಿ? ನಂತರ ಕಾಂಗ್ರೆಸ್ ಅನ್ನು ಟೀಕೆ ಮಾಡಿ ಎಂದು ಕೆರೆಹಳ್ಳಿ ನವೀನ್, ನಿಜಗುಣರಾಜು ಅವರ ಟೀಕೆಗೆ ತಿರುಗೇಟು ನೀಡಿದರು.

ನಿಜಗುಣ ರಾಜು ಅವರಿಗೆ ಮಾಜಿ ಸಂಸದ ಆರ್.ಧ್ರುವನಾರಣ್ ಅವರನ್ನು ಟೀಕಿಸುವ ನೈತಿಕತೆ ಇಲ್ಲ. ಧ್ರುವನಾರಾಯಣ್ ಅವರ ಅಭಿವೃದ್ಧಿ ಕಾರ್ಯಗಳು ಜನತೆಗೆ ತಿಳಿದಿವೆ. ಸಮೀಕ್ಷೆಗಳಲ್ಲಿ ಸಹ ಅವರೊಬ್ಬ ಉತ್ತಮ ಸಂಸದ ಎಂದು ತಿಳಿಸಿವೆ. ತಮ್ಮ ಪಕ್ಷದ ನಾಯಕರನ್ನು ಓಲೈಸಿಕೊಳ್ಳಲು ನಿಜಗುಣರಾಜು ಅವರು ಟೀಕೆ ಮಾಡುತ್ತಿದ್ದಾರೆ ಎಂದರು.

ಜಿಪಂ ಮಾಜಿ ಸದಸ್ಯ ರಮೇಶ್, ಅಸಂಘಟಿತ ಕಾರ್ಮಿಕರ ಜಿಲ್ಲಾ ಅಧ್ಯಕ್ಷ ಎಂ.ದೇವರಾಜು, ಮಾಧ್ಯ ವಕ್ತಾರ ವಕೀಲ ಅರುಣ್‌ಕುಮಾರ್, ಮುಖಂಡ ಸೈಯದ್ ಸುದ್ದಿಗೋಷ್ಠಿಯಲ್ಲಿದ್ದರು.

ಕಿಲಗೆರೆಯಲ್ಲಿ ಸಿಸಿ ರಸ್ತೆ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ



ಗುಂಡ್ಲುಪೇಟೆ, ಸೆ.19–ತಾಲೂಕಿನ ಕಿಲಗೆರೆ ಗ್ರಾಮದಲ್ಲಿ 20 ಲಕ್ಷ ವೆಚ್ಚದ ಸಿಸಿ ರಸ್ತೆ ನಿರ್ಮಾಣ ಕಾಮಗಾರಿಗೆ ಶಾಸಕ ಸಿ.ಎಸ್.ನಿರಂಜನಕುಮಾರ್ ಭೂಮಿಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಅವರು, ಕೇವಲ ಮತಕ್ಕಾಗಿ ಕೆಲಸ ಮಾಡದೆ ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ಈ ಹಿಂದೆ ಆಡಳಿತದಲ್ಲಿದ್ದವರು ಮತ ನೀಡದ ಗ್ರಾಮಗಳ ಅಭಿವೃದ್ಧಿ ಕೈಬಿಟ್ಟಿದ್ದರು. ಆದರೆ ನಾವು ಯಾವುದೇ ತಾರತಮ್ಯವಿಲ್ಲದೆ ಎಲ್ಲಾ ಗ್ರಾಮಗಳನ್ನು ಸರಿಸಮನಾಗಿ ಪರಿಗಣಿಸಿ, ರಸ್ತೆ ಹಾಗೂ ಮೂಲ ಸೌಕರ್ಯ ಕಲ್ಪಿಸಲು ಶ್ರಮಿಸುತ್ತಿದ್ದೇವೆ ಎಂದರು.

ಈ ಸಂದರ್ಭದಲ್ಲಿ ಬನ್ನಿತಾಳಪುರ ಗ್ರಾಪಂ ಅಧ್ಯಕ್ಷೆ ತಾಯಮ್ಮಣ್ಣಿ, ಮಾಜಿ ಸದಸ್ಯ ಗೌರೀಶಂಕರ್, ತಾಪಂ ಮಾಜಿ ಸದಸ್ಯ ಸಿ.ಮಹದೇವಪ್ರಸಾದ್ ಸೇರಿದಂತೆ ಹಲವರಿದ್ದರು.

ಕಂದಹಳ್ಳಿ ಡೈರಿಗೆ 3 ಲಕ್ಷ ರೂ. ಲಾಭ



ಯಳಂದೂರು, ಸೆ.19–ತಾಲೂಕಿನ ಕಂದಹಳ್ಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘವು 2021–22ನೇ ಸಾಲಿನಲ್ಲಿ 3.05 ಲಕ್ಷ ರೂ.ಗಳ ನಿವ್ವಳ ಲಾಭ ಗಳಿಸಿದೆ ಎಂದು ಸಂಘದ ಕಾರ್ಯನಿರ್ವಾಹಣಾ ಅಧಿಕಾರಿ ಜೆ.ಮಹೇಶ್ ಮಾಹಿತಿ ನೀಡಿದರು.

ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಆವರಣದಲ್ಲಿ ನಡೆದ 2021–22 ಸರ್ವ ಸದಸ್ಯರ ವಾರ್ಷಿಕ ಮಹಾ ಸಭೆಯಲ್ಲಿ ಮಾತನಾಡಿದ ಅವರು, 2020–21ನೇ ಸಾಲಿನಲ್ಲಿ 130 ಹೈನುಗಾರರಿಗೆ 1.34 ಲಕ್ಷ ರೂ. ಬೋನಸ್ ವಿತರಿಸಲಾಗಿದೆ. ಪ್ರತಿಯೊಬ್ಬರೂ ಗುಣಮಟ್ಟದ ಹಾಲು ಹಾಕಬೇಕು. ಸಂಘದಿಂದ ರಾಸುಗಳು ಇರುವ 120 ಹೈನುಗಾರರಿಗೆ ತಲಾ 14 ಸಾವಿರ ರೂ. ಸಾಲ ಸೌಲಭ್ಯವನ್ನು ಬ್ಯಾಂಕ್ ಮೂಲಕ ವಿತರಿಸಲಾಗಿದೆ ಎಂದು ತಿಳಿಸಿದರು.

ಹಾಲು ಉತ್ಪಾದಕರ ಸಹಕಾರದ ಪ್ರಭಾರ ಅಧ್ಯಕ್ಷೆ ಚಿನ್ನಮ್ಮ, ನಿರ್ದೇಶಕರಾದ ಆರ್.ಮಹದೇವಶೆಟ್ಟಿ, ನಾಗರಾಜಶೆಟ್ಟಿ, ಮಹದೇವಶೆಟ್ಟಿ, ಬಸವಶೆಟ್ಟಿ, ಶಿವಯ್ಯಶೆಟ್ಟಿ, ನಂಜುಂಡಶೆಟ್ಟಿ, ಸಿದ್ದಶೆಟ್ಟಿ, ಮಹಾದೇವಮ್ಮ, ನಾಗಶೆಟ್ಟಿ, ರಂಗಸ್ವಾಮಿನಾಯಕ, ಆರ್.ಶಾಂತರಾಜು, ಜೆ.ಬಸವಣ್ಣ, ಹಾಲು ಪರಿವೀಕ್ಷಕ ಕೆ.ಎಂ.ಪ್ರಕಾಶ್, ಜವರಶೆಟ್ಟಿ ಸೇರಿದಂತೆ ಹಲವರಿದ್ದರು.

ಜಿಲ್ಲಾ ಕಸಾಪ ಉಪಾಧ್ಯಕ್ಷರಾಗಿ ರವಿಕುಮಾರ್



ಚಾಮರಾಜನಗರ, ಸೆ.19–ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನ ಜಿಲ್ಲಾ ಉಪಾಧ್ಯಕ್ಷರಾಗಿ ಮಾದಾಪುರ ರವಿಕುಮಾರ್ ಅವರನ್ನು ನೇಮಕ ಮಾಡಿ, ಕಸಾಪ ಜಿಲ್ಲಾ ಅಧ್ಯಕ್ಷ ಎಂ.ಶೈಲಕುಮಾರ್ ಆದೇಶ ಹೊರಡಿಸಿದ್ದಾರೆ.

ಕನ್ನಡ ಭಾಷೆ, ಸಾಹಿತ್ಯ, ಕಲೆ ಸಂಸ್ಕೃತಿ ಮತ್ತು ಜನಪದ ಸಂರಕ್ಷಣೆಗೆ ಶ್ರಮಿಸುವ ಆಶಯದಿಂದ ಕಸಾಪ ಕಾರ್ಯಕಾರಿ ಸಮಿತಿಯ ಅನುಮೋದನೆಯೊಂದಿಗೆ ತಮ್ಮನ್ನು ಜಿಲ್ಲಾ ಉಪಾಧ್ಯಕ್ಷರನಾಗಿ ನೇಮಿಸಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಕೊಳ್ಳೇಗಾಲದಲ್ಲಿ ಶಿಕ್ಷಕರ ದಿನಾಚರಣೆ

ಅಲ್ಪನನ್ನು ವಿಶ್ವಮಾನವನಾಗಿಸುವ ಶಕ್ತಿ ಶಿಕ್ಷಣಕ್ಕಿದೆ

ಶಾಸಕ ಎನ್.ಮಹೇಶ್ ಅಭಿಮತ



ಕೊಳ್ಳೇಗಾಲ, ಸೆ.19–ಅಲ್ಪ ಮಾನವನನ್ನು ವಿಶ್ವಮಾನವನಾಗಿಸುವ ಅಗಾಧ ಶಕ್ತಿ ಶಿಕ್ಷಣಕ್ಕಿದ್ದು, ಮಾತೆ ಸಾವಿತ್ರಿ ಭಾಯಿ ಪುಲೆ ಹೆಣ್ಣು ಮಕ್ಕಳ ಅಭ್ಯುದಯಕ್ಕೆ ಸ್ಪಂದಿಸಿದ ಮೊದಲ ಮಹಿಳಾ ಶಿಕ್ಷಕಿಯಾಗಿದ್ದಾರೆ. ಅವರ ಆದರ್ಶ ಗುಣಗಳನ್ನು ನಾವೆಲ್ಲರೂ ರೂಢಿಸಿಕೊಳ್ಳಬೇಕಿದೆ ಎಂದು ಶಾಸಕ ಎನ್.ಮಹೇಶ್ ಅಭಿಪ್ರಾಯಪಟ್ಟರು.

ನಗರದ ನ್ಯಾಷನಲ್ ಶಾಲಾ ಆವರಣದಲ್ಲಿ ಆಯೋಜಿಸಿದ್ದ ಶಿಕ್ಷಕರ ದಿನಾಚರಣೆ, ನಿವೃತ್ತ ಶಿಕ್ಷಕರಿಗೆ ಸನ್ಮಾನ, ಉತ್ತಮ ಶಿಕ್ಷಕರಿಗೆ ಪ್ರಶಸ್ತಿ ಪ್ರದಾನ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಶಿಕ್ಷಕರು ಮಕ್ಕಳಲ್ಲಿ ದೇವರನ್ನು ಕಾಣುತ್ತಾ ಅವರನ್ನೇ ದೇವರೆಂದು ಭಾವಿಸಿ ಅವರಿಗೆ ಶ್ರದ್ಧಾ ಭಕ್ತಿಯಿಂದ ಅಕ್ಷರ ಕಲಿಸುವ ಕೆಲಸ ಮಾಡುವ ಮೂಲಕ ತಮ್ಮ ಘನತೆ ಹೆಚ್ಚಿಸಿಕೊಳ್ಳಬೇಕು. ನಾನೆಂದು ಶಿಕ್ಷಕರ ಪರವಿದ್ದು, ಸದಾ ಕಾಲ ಅವರ ಸಮಸ್ಯೆಗೆ ನನ್ನ ಕೈಲಾದ ಪ್ರಯತ್ನ ಮಾಡುವೆ. ಶಿಕ್ಷಕರ ಸಮಸ್ಯೆಗಳ ಬಗ್ಗೆ ಅಧಿವೇಶನದಲ್ಲಿ ಧ್ವನಿ ಎತ್ತುವುದಲ್ಲದೆ, ಈ ಸಂಬಂಧ ಶಿಕ್ಷಣ ಸಚಿವರ ಜೊತೆಯೂ ಚರ್ಚಿಸುವೆ ಎಂದು ಭರವಸೆ ನೀಡಿದರು.

ಕಾರ್ಯಕ್ರಮ ಉದ್ಘಾಟಿಸಿದ ನಗರಸಭಾಧ್ಯಕ್ಷೆ ಸುಶೀಲ ಶಾಂತರಾಜು ಮಾತನಾಡಿದರು. ಈ ಸಂದರ್ಭದಲ್ಲಿ ಉತ್ತಮ ಶಿಕ್ಷಕರಿಗೆ ಪ್ರಶಸ್ತಿ ಪ್ರದಾನ, ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನೆ, ನಿವೃತ್ತ ಶಿಕ್ಷಕರನ್ನು ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಧ್ಯಕ್ಷ ಪ್ರಭುಸ್ವಾಮಿ, ಉಪಾಧ್ಯಕ್ಷೆ ಇಂದಿರಮ್ಮ, ಡಿವೈಎಸ್ಪಿ ನಾಗರಾಜು, ನಗರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಶಂಕರನಾರಾಯಣ ಗುಪ್ತ, ಪೌರಾಯುಕ್ತ ನಂಜುಂಡಸ್ವಾಮಿ, ಸದಸ್ಯರಾದ ಕವಿತಾ, ನಟರಾಜು, ಮಧುಚಂದ್ರ, ಸೆಲ್ವರಾಜು, ಸೋಮು, ಬಿಇಓ ಚಂದ್ರಪಾಟೀಲ್, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಜೋಸೆಫ್ ಅಲೆಕ್ಸಾಂಡರ್, ಪ್ರಾಥಮಿಕ ಶಿಕ್ಷಕರ ಸಂಘದ ಅಧ್ಯಕ್ಷ ನಂದೀಶ್, ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಅಕ್ಬರ್, ಕಾರ್ಯದರ್ಶಿ ಶಾಂತ ರಾಜು, ಜಿಲ್ಲಾ ಉಪಾಧ್ಯಕ್ಷ ಬುಕಾನಿ, ಸರ್ಕಾರಿ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಚಿಕ್ಕರಾಜು, ಅಕ್ಷರ ದಾಸೋಹದ ಅಧಿಕಾರಿ ರಂಗಸ್ವಾಮಿ, ಮುಖ್ಯಶಿಕ್ಷಕರ ಸಂಘದ ಅಧ್ಯಕ್ಷೆ ಮಂಜುಳಾ ಇನ್ನಿತರರಿದ್ದರು.

ವಿದ್ಯುತ್ ಖಾಸಗೀಕರಣ ವಿರೋಧಿಸಿ 25ಕ್ಕೆ ರೈತ ಮುಖಂಡರ ಅಧಿವೇಶನ

ಸೆ.26ಕ್ಕೆ ಕಬ್ಬು ಬೆಳೆಗಾರರ ವಿಧಾನ ಸೌಧ ಚಲೋ



ಚಾಮರಾಜನಗರ, ಸೆ.19–ವಿದ್ಯುತ್ ಖಾಸಗೀಕರಣ ನೀತಿ ವಿರೋಧಿಸಿ, ಕೃಷಿ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ನಿಲ್ಲಿಸುವ ಹುನ್ನಾರದ ವಿರುದ್ಧ ಸಂಘಟಿತ ಹೋರಾಟ ನಡೆಸಲು ಸಂಯುಕ್ತ ಕಿಸಾನ್ ಮೋರ್ಚಾದ ರಾಷ್ಟ್ರೀಯ ರೈತ ಮುಖಂಡರ ಅಧಿವೇಶನ ಬೆಂಗಳೂರಿನಲ್ಲಿ 25ರಂದು ನಡೆಯಲಿದೆ ಎಂದು ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ತಿಳಿಸಿದ್ದಾರೆ.

ಪ್ರಧಾನಿ ಮೋದಿ ಅವರು ಹುಸಿ ಭರವಸೆ ನೀಡುತ್ತಲೇ ಬರುತ್ತಿದ್ದಾರೆ. ಹೋರಾಟ ಮಾಡಿದ, ರೈತ ಮುಖಂಡರನ್ನು ಹೊರಗಿಟ್ಟು ಸಮಿತಿ ರಚಿಸಿ ನಾಟಕವಾಡುತ್ತಿದ್ದಾರೆ, ಆದ ಕಾರಣ ದೇಶಾದ್ಯಂತ ರೈತ ಚಳವಳಿಯನ್ನು ಮತ್ತಷ್ಟು ಪ್ರಬಲಗೊಳಿಸಲು ದಕ್ಷಿಣ ಭಾರತದ ಕೇಂದ್ರ ಸ್ಥಾನ ಬೆಂಗಳೂರಿನಲ್ಲಿ ಸಂಯುಕ್ತ ಕಿಸಾನ್ ಮೋರ್ಚಾ ರಾಷ್ಟ್ರೀಯ ರೈತ ಮುಖಂಡರ ಕಿಸಾನ್ ಅಧಿವೇಶನ ಸೆ.25ರಂದು ಬೆಂಗಳೂರಿನಲ್ಲಿ ಗಾಂಧಿವನದಲ್ಲಿ ನಡೆಯಲಿದೆ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಖಾತರಿ ಕಾನೂನು ಜಾರಿಗೆ ತರಬೇಕು. ಡಾ.ಸ್ವಾಮಿನಾಥನ್ ವರದಿಯಂತೆ ಬೆಂಬಲ ಬೆಲೆ ನಿಗದಿಯಾಗಬೇಕು. ಕೃಷಿ ಉತ್ಪನ್ನಗಳು ಹಾಗೂ ಉಪಕರಣಗಳ ಮೇಲಿನ ಜಿಎಸ್ಟಿ ರದ್ದುಪಡಿಸಬೇಕು ಎಂದು ಆಗ್ರಹಿಸಿದರು.

ದೇಶದ ಉದ್ಯಮಿಗಳ 10 ಲಕ್ಷ ಕೋಟಿ ರೂ. ಸಾಲ ಮನ್ನಾ ಮಾಡಿದ ರೀತಿಯಲ್ಲಿಯೇ ರೈತರ ಸಾಲ ಮನ್ನಾ ಮಾಡಬೇಕು. ಫಸಲ್ ಬೀಮಾ ಬೆಳೆವಿಮೆ ಯೋಜನೆಯಡಿ ರೈತರಿಗೆ ಟೋಪಿ ಹಾಕುವ ಮಾನದಂಡ ಬದಲಾಯಿಸಬೇಕು. ಧಾರವಾಡದ ಕಲಘಟಗಿಯಲ್ಲಿ 440 ರೂ. ವಿಮೆ ಕಟ್ಟಿದ್ದ ರೈತನಿಗೆ 160 ರೂ. ಮೆಕ್ಕೆ ಜೋಳದ ಪರಿಹಾರ ಬಂದಿದೆ. ಇದು ಅನ್ಯಾಯವಲ್ಲವೇ ಎಂದು ಪ್ರಶ್ನಿಸಿದರು.

ಸೆ. 26ಕ್ಕೆ ವಿಧಾನಸೌಧ ಚಲೋ: ಕಬ್ಬು ಬೆಳೆಗಾರ ರೈತರು ಹಾಗೂ ಕೃಷಿ ಪಂಪ್ ಸೆಟ್ ರೈತರಿಂದ 26ರಂದು ಬೆಂಗಳೂರಿನ ವಿಧಾನಸೌಧ ಚಲೋ ಹಮ್ಮಿಕೊಳ್ಳಲಾಗಿದೆ. ರಾಜ್ಯದ ನಾನಾ ಭಾಗಗಳಿಂದ ರೈತರು ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

2022ರ ವಿದ್ಯುತ್ ಕಾಯಿದೆ ಖಾಸಗೀಕರಣ ತಿದ್ದುಪಡಿ ಕೈಬಿಟ್ಟು, ಕೃಷಿ ಪಂಪ್ ಸೆಟ್‌ಗಳಿಗೆ ಮೀಟರ್ ಅಳವಡಿಸಿ ಉಚಿತ ವಿದ್ಯುತ್ ನಿಲ್ಲಿಸುವ ಹುನ್ನಾರ ನಿಲ್ಲಿಸಬೇಕು. ಈ ಭಾಗದ ಬಣ್ಣಾರಿ ಸಕ್ಕರೆ ಕಾರ್ಖಾನೆಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ಕಾನೂನು ಬಾಹಿರವಾಗಿ ಟನ್‌ಗೆ 2,500 ರೂ. ನೀಡಿ ವಂಚಿಸುತ್ತಿದ್ದಾರೆ. ಈ ಬಗ್ಗೆ ಕ್ರಮ ವಹಿಸಬೇಕು ಎಂದು ಒತ್ತಾಯಿಸಿದರು.

ರಾಜ್ಯದಲ್ಲಿ ಅಂದಾಜು 10 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮಳೆಯಿಂದ ಬೆಳೆ ಹಾನಿಯಾಗಿದೆ. ರೈತರಿಗೆ ಭಿಕ್ಷೆ ರೂಪದ ಪರಿಹಾರ ಬೇಡ. ನೈಜ ನಷ್ಟ ಪರಿಹಾರ ನೀಡಬೇಕು. ಅವೈಜ್ಞಾನಿಕವಾಗಿ ಸಣ್ಣಪುಟ್ಟ ಮೊತ್ತದ ಚೆಕ್ ನೀಡಿದರೆ ತಹಸೀಲ್ದಾರ್ ಕಚೇರಿ ಮುಂದೆ ಚೆಕ್ ಸುಡುವ ಚಳವಳಿ ನಡೆಸಬೇಕಾಗುತ್ತದೆ ಎಂದು ಇದೇ ವೇಳೆ ಎಚ್ಚರಿಸಿದರು. ಗೋಷ್ಠಿಯಲ್ಲಿ ಹಳ್ಳಿಕೆರೆ ಹುಂಡಿ ಭಾಗ್ಯರಾಜ್, ಮೂಕಳ್ಳಿ ಮಹದೇವಸ್ವಾಮಿ, ಶಿವಮೂರ್ತಿ, ಉಡಿಗಾಲ ಮಂಜುನಾಥ್, ಮಲೆಯೂರು ಹರ್ಷ, ಪ್ರಶಾಂತ್, ಮಹದೇವಸ್ವಾಮಿ ಹಾಜರಿದ್ದರು.

ಒಂದನೇ ಪುಟದಿಂದ

ಅದ್ಧೂರಿ ಮನೆ ಮನೆ ದಸರಾ

2 ಲಕ್ಷ ರೂ. ಅನುದಾನ ನೀಡಲಾ ಗುವುದು ಎಂದು ತಿಳಿಸಿದರು. ಜಂಬೂಸವಾರಿ ಸಾಗುವ ರಾಜಮಾರ್ಗ ದಲ್ಲಿ ಕೆ.ಆರ್.ವೃತ್ತದಿಂದ ಮಿಲೇನಿಯಂ ವೃತ್ತದವರೆಗೂ ಫುಟ್‌ಪಾತ್ ಅತಿಕ್ರಮಿಸಿ ಕೊಳ್ಳಲಾಗಿದೆ. ರೈಲ್ವೆ ನಿಲ್ದಾಣದ ಸಮೀಪ ಒಂದೆರಡು ಗೂಡಂಗಡಿಗಳಿಗೆ ಪರವಾನಗಿ ನೀಡಿರಬಹುದು. ಆದರೆ ಅಲ್ಲಿ 25–30 ಪೆಟ್ಟಿಗೆ ಅಂಗಡಿ ಗಳಿವೆ. ಫಾಸ್ಟ್‌ಫುಡ್ ಸೇರಿದಂತೆ ಎಲ್ಲಾ ರೀತಿಯ ವ್ಯಾಪಾರವನ್ನೂ ನಡೆಸುತ್ತಿದ್ದಾರೆ. ಅರಮನೆ ಸುತ್ತಲಿನ ಪರಿಸ್ಥಿತಿಯೂ ಇದಕ್ಕೆ ಹೊರತಾಗಿಲ್ಲ. ಹೀಗಿರುವಾಗ ದೇಶ–ವಿದೇಶಗಳಿಂದ ಪ್ರವಾಸಿಗರನ್ನು ಹೇಗೆ ಆಹ್ವಾನಿಸುತ್ತೀರಿ?. ಪ್ರವಾಸಿಗರು ಈ ಅವ್ಯವಸ್ಥೆಯನ್ನು ಕಂಡು ಮೈಸೂರಿನ ಬಗ್ಗೆ ಯಾವ ರೀತಿಯಲ್ಲಿ ಭಾವಿಸುತ್ತಾರೆ? ಎಂದು ಮಾಜಿ ಮೇಯರ್ ಅಯೂಬ್‌ಖಾನ್ ಪ್ರಶ್ನಿಸಿದರು. ಈ ಬಗ್ಗೆ ಸಭೆಯ ಕೊನೆಯಲ್ಲಿ ಪ್ರತಿಕ್ರಿಯಿಸಿದ ಮೇಯರ್ ಶಿವಕುಮಾರ್, ಆಯುಕ್ತರೊಂದಿಗೆ ಚರ್ಚೆ ಮಾಡಿ ಕೆ.ಆರ್.ವೃತ್ತದಿಂದ ಮಿಲೇನಿಯಂ ವೃತ್ತದವರೆಗೂ ಫುಟ್‌ಪಾತ್ ವ್ಯಾಪಾರ ಹಾಗೂ ಅತಿಕ್ರಮಣವನ್ನು ತೆರವುಗೊಳಿಸಲಾಗುವುದು ಎಂದು ಸ್ಪಷ್ಟಪಡಿಸಿದರು.

ಗುಂಡಿ ಮುಚ್ಚುತ್ತೇವೆ: ಶಾಸಕರ ಅನುದಾನ ಹಾಗೂ ಹಿಂದಿನ ಮೇಯರ್ ಅನುದಾನದಲ್ಲಿ ಹಲವು ರಸ್ತೆ ಕಾಮಗಾರಿ ಕೈಗೆತ್ತಿಕೊಂಡು ಕಾರ್ಯಾದೇಶವೂ ಆಗಿತ್ತು. ಆದರೆ ಮಳೆ ಅಡ್ಡಿಯಿಂದ ಕೆಲಸ ಪ್ರಾರಂಭಿಸಲು ಸಾಧ್ಯವಾಗಿರಲಿಲ್ಲ. ಈ ಸಂಬಂಧ ಕಳೆದ ವಾರ ಅಧಿಕಾರಿಗಳ ಸಭೆ ಕರೆದು ಚರ್ಚೆ ಮಾಡಿ ಹವಾಮಾನ ವರದಿ ಪ್ರಕಾರ ಒಂದು ವಾರ ಮಳೆ ಇಲ್ಲವೆಂದು ತಿಳಿದಿದ್ದರಿಂದ ತಕ್ಷಣ ಕೆಲಸ ಆರಂಭಿಸಲಾಯಿತು. ಇದಕ್ಕೆ ಹೊರತಾಗಿರುವ ರಸ್ತೆಗಳ ದುರಸ್ತಿ ಬಗ್ಗೆ ಸಮೀಕ್ಷೆ ಮಾಡಿ ಡಿಪಿಆರ್ ಸಿದ್ಧಪಡಿಸಿ ದಸರಾ ವೇಳೆಗೆ ಗುಂಡಿ ಮುಚ್ಚಲು ಕ್ರಮ ವಹಿಸುವುದಾಗಿ ಮೇಯರ್ ಭರವಸೆ ನೀಡಿದರು.

ತ್ಯಾಜ್ಯ ವಿಲೇವಾರಿ ಅಭಿಯಾನ: ದಸರಾ ಸಂದರ್ಭದಲ್ಲಿ ನಗರದಲ್ಲಿ ಕಟ್ಟಡ ತ್ಯಾಜ್ಯ (ಡೆಬ್ರೀಸ್) ತೆರವು ಮಾಡಲಾಗುತ್ತಿತ್ತು. ಅದರಂತೆ ಈ ಬಾರಿಯೂ ಎಲ್ಲಾ ವಾರ್ಡ್‌ಗಳಲ್ಲೂ ತ್ಯಾಜ್ಯ ಸ್ವಚ್ಛತಾ ಅಭಿಯಾನ(ಡೆಬ್ರೀಸ್ ಕ್ಲೀನಿಂಗ್ ಡ್ರೈವ್) ಆರಂಭಿಸಲಾಗುವುದು.

'ಗೋಲ್ಡ್ ಕಾರ್ಡ್' ಖಚಿತ: ಸಭೆಯಲ್ಲಿ ದಸರಾ ಪಾಸ್ ಬಗ್ಗೆ ಸುದೀರ್ಘ ಚರ್ಚೆಯಾಯಿತು. ಬಹುತೇಕ ಎಲ್ಲಾ ಸದಸ್ಯರೂ ಹಿಂದಿನ ವರ್ಷಗಳಲ್ಲಾದ ಗೊಂದಲವನ್ನು ಪಸ್ತಾಪಿಸಿ ಈ ಬಾರಿಯೂ ಅದು ಮರುಕಳಿಸದಂತೆ ಕ್ರಮ ವಹಿಸಬೇಕೆಂದು ಆಗ್ರಹಿಸಿದರು. ಸರಿಯಾದ ರೀತಿಯಲ್ಲಿ, ಸೂಕ್ತ ಸಮಯದೊಳಗೆ ಪಾಸ್ ನೀಡುವುದಾದರೆ ನೀಡಲಿ ಇಲ್ಲವಾದರೆ ಪಾಸ್ ಕೊಡುವುದೇ ಬೇಡ ಎಂದು ಅಭಿಪ್ರಾಯಿಸಿದರು. ಈ ಸಂಬಂಧ ಪ್ರತಿಕ್ರಿಯಿಸಿದ ಮೇಯರ್ ಶಿವಕುಮಾರ್, ಪಾಲಿಕೆಯ ಎಲ್ಲಾ ಸದಸ್ಯರಿಗೂ 'ದಸರಾ ಗೋಲ್ಡ್ ಕಾರ್ಡ್' ವ್ಯವಸ್ಥೆ ಮಾಡಿ ಎಲ್ಲಾ ಕಾರ್ಯಕ್ರಮಗಳಲ್ಲೂ ಭಾಗವಹಿಸಲು ಅವಕಾಶ ಮಾಡಿಕೊಡುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಈ ನಿಟ್ಟಿನಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾಧಿಕಾರಿಗಳ ಮೇಲೆ ಒತ್ತಡ ತರುತ್ತೇನೆ. ಒಟ್ಟಾರೆ ಹೋರಾಟ ಮಾಡಿಯಾದರೂ 'ಗೋಲ್ಡನ್ ಕಾರ್ಡ್' ಪಡೆಯುವುದಾಗಿ ಹೇಳಿದರು.

ಮೇಯರ್‌ಗೆ ಅಗೌರವ ಸಲ್ಲದು: ಮಾಜಿ ಮೇಯರ್ ಅಯೂಬ್ ಖಾನ್ ಮಾತನಾಡಿ, 2–3 ವರ್ಷಗಳಿಂದ ನಾಡಹಬ್ಬ ದಸರಾ ಯಾರೋ ಒಬ್ಬರ ಆಸೆ, ಅಭಿಲಾಷೆಯಂತೆ ನಡೆಯುತ್ತಿದೆ. ಒಂದಿಬ್ಬರ ಫ್ಯಾಮಿಲಿ ದಸರಾ ಆಗಿಬಿಟ್ಟಿದೆ. ಕಳೆದ ವರ್ಷ ಅರಮನೆ ವೇದಿಕೆಯಲ್ಲಿ ಮೇಯರ್‌ಗೆ ಆಸನ ಕಲ್ಪಿಸಿರಲಿಲ್ಲ. ಮೇಯರ್ ಗೌನ್ ಧರಿಸಿದ್ದ ಸುನಂದಾ ಪಾಲನೇತ್ರ ಅವರು ಹಿಂದಿನ ಸಾಲಿನಲ್ಲಿ ಕುಳಿತುಕೊಂಡಿದ್ದರು. ಅದು ಮೇಯರ್‌ಗೆ ಮಾತ್ರವಲ್ಲ, ಇಡೀ ಮೈಸೂರು ಜನತೆಗೆ ಅಪಮಾನವಾದಂತಾಯಿತು. ಇದು ಮುಂದುವರೆದರೆ ನಾವು ಸಹಿಸುವುದಿಲ್ಲ. ಮೈಸೂರಿನ ಪ್ರಥಮ ಪ್ರಜೆ ಮೇಯರ್ ಅವರನ್ನು ಗೌರವದಿಂದ ನಡೆಸಿಕೊಳ್ಳಬೇಕು ಎಂದು ಎಚ್ಚರಿಸಿದರು.

ಸದಸ್ಯೆ ಚಿಕಿತ್ಸೆಗೆ ನೆರವು

ಮುಂದಿನ ಕ್ರಮ ವಹಿಸಬೇಕಿದೆ. ಹಾಗಾಗಿ ಆಯುಕ್ತ ರೊಂದಿಗೆ ಚರ್ಚೆ ಮಾಡಿ ಅಶ್ವಿನಿ ಅವರ ಚಿಕಿತ್ಸೆಗೆ ತುರ್ತಾಗಿ ಆರ್ಥಿಕ ನೆರವು ನೀಡಲು ಕ್ರಮ ವಹಿಸಲಾಗುತ್ತದೆ. ಎಲ್ಲಾ ಸದಸ್ಯರಿಗೂ ಆರೋಗ್ಯ ವಿಮೆ ಅಥವಾ ಚಿಕಿತ್ಸಾ ವೆಚ್ಚ ಭರಿಸುವ ಬಗ್ಗೆ ಮುಂದಿನ ಕೌನ್ಸಿಲ್‌ನಲ್ಲಿ ಕಾರ್ಯಸೂಚಿ ಮಂಡಿಸಿ ನಿರ್ಣಯದೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ಭರವಸೆ ನೀಡಿದರು. ಈ ವಿಚಾರವಾಗಿ ಸದಸ್ಯ ಕೆ.ವಿ.ಶ್ರೀಧರ್ ಮಾತನಾಡಿ, ಅಶ್ವಿನಿ ಅವರ ಚಿಕಿತ್ಸಾ ವೆಚ್ಚಕ್ಕೆ ಕನಿಷ್ಠ 5 ಲಕ್ಷ ರೂ. ನೀಡಬೇಕೆಂದರು. ಶೋಭಾ ಸುನಿಲ್ ಮಾತನಾಡಿ, ಆಸ್ಪತ್ರೆಯಲ್ಲಿದ್ದ ಅಶ್ವಿನಿ ಅವರನ್ನು ವೀಲ್‌ಚೇರ್‌ನಲ್ಲಿ ಮೇಯರ್ ಚುನಾವಣೆಗೆ ಕರೆತರುವ ಅಗತ್ಯವಿತ್ತೇ? ಆ ಸ್ಥಿತಿಯಲ್ಲಿ ಅವರನ್ನು ನೋಡಿ ಕಣ್ಣೀರಾಕಿದ್ದೇವೆ ಎಂದರು. ಇದಕ್ಕೆ ಸ್ಪಷ್ಟನೆ ನೀಡಿದ ಮೇಯರ್, ವೈದ್ಯರ ಸಲಹೆ ಹಾಗೂ ಅನುಮತಿ ಮೇರೆಗೆ ಅವರನ್ನು ಕರೆತರಲಾಗಿತ್ತು ಎಂದು ಸ್ಪಷ್ಟಪಡಿಸಿದರು.

ಸಿದ್ಧರಿದ್ದರೆ ಇಲ್ಲಿರಿ ಇಲ್ಲ ಹೊರಟುಬಿಡಿ...

ಮೇಯರ್ ಶಿವಕುಮಾರ್, ಏರುಧ್ವನಿಯಲ್ಲೇ ನಿಮ್ಮ ಕರೆ ಸ್ವೀಕರಿಸದ, ಸಮಸ್ಯೆಗಳಿಗೆ ಸ್ಪಂದಿಸದ ಅಧಿಕಾರಿಗಳು ಯಾರೆಂದು ಕೇಳಿದರು. ಆಗ ಹಲವು ಸದಸ್ಯರು ಇಇ ಸಿಂಧು ಅವರ ಹೆಸರೇಳಿದರು. ತಕ್ಷಣ ಅವರನ್ನು ಪೀಠದೆದುರು ಕರೆಸಿ ಸ್ಪಷ್ಟನೆ ಕೊಡಿಸಿದ ಮೇಯರ್, ಇನ್ನು, ಇದು ಮರುಕಳಿಸಬಾರದು ಎಂದು ತಿಳುವಳಿಕೆ ನೀಡಿದರು. ಜನಪ್ರತಿನಿಧಿಗಳಿಗೆ ಸ್ಪಂದಿಸದ ಅಧಿಕಾರಿಗಳನ್ನು ರಿಲೀವ್ ಮಾಡುವ ಸಂಬಂಧ ಸರ್ಕಾರದ ಸುತ್ತೋಲೆಯೇ ಇದೆ ಎಂದು ಬಿ.ವಿ.ಮಂಜುನಾಥ್ ಸಭೆಯ ಗಮನಕ್ಕೆ ತಂದರು.

ಮಾತು ಮುಂದುವರೆಸಿದ ಮೇಯರ್, ಅಧಿಕಾರಿಗಳ ಈ ರೀತಿಯ ವರ್ತನೆಯನ್ನು ಯಾವುದೇ ಕಾರಣಕ್ಕೆ ಸಹಿಸುವುದಿಲ್ಲ. ಹೀಗೆ ತಾತ್ಸಾರದಿಂದ ನಡೆದುಕೊಳ್ಳುವ ಅಧಿಕಾರಿಗಳ ಅವಶ್ಯಕತೆ ಪಾಲಿಕೆಗಿಲ್ಲ. ಕಾರ್ಪೊರೇಟರ್‌ಗಳು ಸಾರ್ವಜನಿಕರೊಂದಿಗೆ ನೇರ ಸಂಪರ್ಕದಲ್ಲಿರುತ್ತೇವೆ. ಯಾವುದಾದರೂ ಸಮಸ್ಯೆ ಬಗ್ಗೆ ತಿಳಿಸಲು ಕರೆ ಮಾಡಿದಾಗ ಅಧಿಕಾರಿಗಳು ಪ್ರತಿಕ್ರಿಯಿಸದಿದ್ದರೆ ಸಾರ್ವಜನಿಕರಿಗೆ ಉತ್ತರ ನೀಡುವುದು ಹೇಗೆ?. ಸದಸ್ಯರು ಹಾಗೂ ಅಧಿಕಾರಿಗಳ ನಡುವೆ ಸಮನ್ವಯತೆ ಇಲ್ಲದಿದ್ದರೆ ಸಮಸ್ಯೆಗಳು ಪರಿಹಾರವಾಗುವುದೇ ಇಲ್ಲ ಎಂದು ಹೇಳಿದರು. ತಾತ್ಸಾರ ಮನೋಭಾವ ಬಿಟ್ಟುಬಿಡಿ. ಇದು ನಿರ್ವಹಣಾ ಸಂಸ್ಥೆ, 24 ಗಂಟೆಯೂ ಕಾರ್ಯ ನಿರ್ವಹಿಸಬೇಕಾಗುತ್ತದೆ. ಇದಕ್ಕೆ ಬದ್ಧರಾಗಿದ್ದವರು ಮಾತ್ರ ಇಲ್ಲಿರಿ. ಇದು ಸಾಧ್ಯವಿಲ್ಲ ಎನ್ನುವ ಮನಸ್ಥಿತಿಯುಳ್ಳವರು ಪಾಲಿಕೆಯಿಂದ ಇಂದೇ ಹೊರಟುಬಿಡಿ. ಆಯುಕ್ತರಾದಿಯಾಗಿ ಯಾವ ಅಧಿಕಾರಿಯನ್ನಾದರೂ ರಿಲೀವ್ ಮಾಡುವ ಅಧಿಕಾರ ಕೌನ್ಸಿಲ್‌ಗೆ ಇದೆ. ಸದಸ್ಯರ ಸಹಕಾರದಿಂದ ನಿಮ್ಮನ್ನು ರಿಲೀವ್ ಮಾಡುವವರೆಗೆ ಕಾಯಬೇಡಿ. ನಿಮ್ಮ ಕಾರ್ಯವೈಖರಿ ಬಗ್ಗೆ ಆಕ್ಷೇಪಣೆ ಮಾಡಿ ಸೇವೆಯಿಂದ ಬಿಡುಗಡೆ ಮಾಡಿದರೆ ವೃತ್ತಿ ಜೀವನಕ್ಕೆ ಕಪ್ಪುಚುಕ್ಕೆ ಯಾಗುತ್ತದೆ. ಈಗಿನಿಂದಲೇ ಅಧಿಕಾರಿಗಳು ಸದಸ್ಯರೊಂದಿಗೆ ಸಮನ್ವಯತೆಯಿಂದ ಕಾರ್ಯನಿರ್ವಹಿಸಿ, ಸಾರ್ವಜನಿಕರ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸಬೇಕು ಎಂದು ಎಚ್ಚರಿಕೆ ನೀಡಿದರು.

ಗ್ಯಾಸ್ ಪೈಪ್‌ಲೈನ್ ಚರ್ಚೆ: ದಸರಾ ವಿಶೇಷ ಕೌನ್ಸಿಲ್ ಸಭೆಯ 45 ನಿಮಿಷ ಗ್ಯಾಸ್ ಪೈಪ್‌ಲೈನ್ ವಿಚಾರಕ್ಕೆ ಬಲಿಯಾಯಿತು. ಹಿಂದಿನ ಕೌನ್ಸಿಲ್ ಸಭೆಯಲ್ಲಿ ಅಂದಿನ ಮೇಯರ್ ಸುನಂದಾ ಪಾಲನೇತ್ರ ಅವರು ಮನೆ ಮನೆಗೆ ಗ್ಯಾಸ್ ಪೈಪ್‌ಲೈನ್ ವಿಷಯದ ಬಗ್ಗೆ ಚರ್ಚೆಗೆ ಅವಕಾಶ ನೀಡದೆ ಕೈಗೊಂಡ ನಿರ್ಣಯ ಸಿಂಧುವೇ ಅಥವಾ ಅಸಿಂಧುವೇ? ಎಂದು ಮಾಜಿ ಮೇಯರ್ ಅಯೂಬ್ ಖಾನ್ ಪ್ರಶ್ನಿಸಿದರು. ಕೆ.ವಿ.ಶ್ರೀಧರ್, ಯೋಜನೆ ಸಂಬಂಧ ಸಮಗ್ರ ಮಾಹಿತಿ ಬೇಕಾಗುತ್ತದೆ. ಹಾಗಾಗಿ ಗ್ಯಾಸ್ ಪೈಪ್‌ಲೈನ್ ಕಾಮಗಾರಿ ಸ್ಥಗಿತಗೊಳಿಸಿ ಇಲ್ಲವೇ ಚರ್ಚೆಗೆ ಅವಕಾಶ ನೀಡಿ ಎಂದು ಪಟ್ಟು ಹಿಡಿದರು. ಆರಿಫ್ ಹುಸೇನ್, ಇದು ರೀಡ್ ಅಂಡ್ ರೆಕಾರ್ಡ್‌ಗೆ ಬರುತ್ತದೆ ಎಂದಿದ್ದೀರಿ, ಅದರಂತೆ ನಡೆಯಬೇಕು ಎಂದರು. ಶೋಬಾ ಸುನಿಲ್, ಸತ್ಯರಾಜ್, ಗೋಪಿ ಸೇರಿದಂತೆ ಹಲವು ಸದಸ್ಯರು ಧ್ವನಿಗೂಡಿಸಿದರು. ಬಿಜೆಪಿ ಸದಸ್ಯ ಎಂ.ಯು. ಸುಬ್ಬಯ್ಯ, ಹಿಂದಿನ ಮೇಯರ್ ನಿರ್ಣಯದ ಬಗ್ಗೆ ಈಗ ಚರ್ಚೆ ಮಾಡಲಾಗದು ಎಂದರು. ಇದು ದಸರಾ ವಿಶೇಷ ಸಭೆಯಾಗಿದ್ದು, ಇದಕ್ಕೆ ಸಂಬಂಧಪಟ್ಟಂತೆ ಮಾತ್ರ ಚರ್ಚೆ ಮಾಡೋಣ, ಮುಂದಿನ ಕೌನ್ಸಿಲ್‌ನ ಸಾಮಾನ್ಯ ವಿಷಯ ಅವಧಿಯಲ್ಲಿ ಗ್ಯಾಸ್‌ಪೈಪ್ ಲೈನ್ ವಿಚಾರ ಚರ್ಚಿಸಬಹುದು ಎಂದು ಮೇಯರ್ ಸಮಾಧಾನಪಡಿಸಿದರು.

ಬೆಳೆ ಹಾನಿಗೆ ತಿಂಗಳಲ್ಲೇ ಪರಿಹಾರ

ಮನೆಗಳು ಪೂರ್ಣ ಇಲ್ಲವೇ ಭಾಗಶ: ಹಾನಿಗೀಡಾಗಿವೆ ಎಂದರು. ಮಳೆಯಿಂದಾಗಿ ಅಪಾರ ಹಾನಿಯಾಗಿದ್ದರೂ ರಾಜ್ಯದ ಜಲಾಶಯಗಳಲ್ಲಿ 865 ಟಿಎಂಸಿಯಷ್ಟು ನೀರು ಸಂಗ್ರಹವಾಗಿದೆ ಎಂದ ಅವರು, ಇದೇ ರೀತಿ ಮಳೆಯಿಂದಾಗಿ ರಾಜ್ಯದಲ್ಲಿ ಅಂತರ್ಜಲದ ಪ್ರಮಾಣ ಶೇಕಡಾ ಎಂಭತ್ನಾಲ್ಕರಷ್ಟು ಹೆಚ್ಚಿದೆ ಎಂದರು.

ಇವತ್ತು ರಾಜ್ಯದ ನೂರಾ ತೊಂಭತ್ತು ತಾಲೂಕುಗಳಲ್ಲಿ ಅಂತರ್ಜಲದ ಪ್ರಮಾಣ ಗಣನೀಯ ಮಟ್ಟದಲ್ಲಿ ಏರಿಕೆಯಾಗಿದ್ದು, ಇದು ಕೂಡಾ ಒಂದು ದಾಖಲೆ ಎಂದರು.

ಪ್ರಧಾನಿ ನರೇಂದ್ರಮೋದಿ ಅವರ ಅಧಿಕಾರಾವಧಿಯಲ್ಲಿ ರಾಜ್ಯಕ್ಕೆ ಹನ್ನೊಂದು ಸಾವಿರ ಕೋಟಿ ರೂಪಾಯಿಗಳಿಗಿಂತ ಅಧಿಕ ಹಣ ಬಂದಿದ್ದು, ಅವರ ಹಿಂದಿದ್ದ ಮನಮೋಹನಸಿಂಗ್ ಅವರ ಅಧಿಕಾರಾವಧಿಯಲ್ಲಿ ಕೇವಲ ಮೂರು ಸಾವಿರ ಕೋಟಿ ರೂಪಾಯಿಗಳಷ್ಟು ಪರಿಹಾರ ಲಭ್ಯವಾಗಿತ್ತು ಎಂದರು. ಈ ಹಂತದಲ್ಲಿ ಕಂದಾಯ ಸಚಿವರ ಮಾತನ್ನು ವಿರೋಧಿಸಿದ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ, ಆಯಾ ಪ್ರಧಾನ ಮಂತ್ರಿಗಳು ಅವರ ಬಜೆಟ್‌ಗೆ ಅನುಗುಣವಾಗಿ ರಾಷ್ಟ್ರೀಯ ಪ್ರಕೃತಿ ವಿಕೋಪ ಪರಿಹಾರ ನಿಧಿಯನ್ನು ಬಿಡುಗಡೆ ಮಾಡುತಾರೆ ಎಂದರು.

ನೀವು ಹಲವು ವರ್ಷಗಳ ದಾಖಲೆ ಕೊಡುವ ಮೂಲಕ ಗೊಂದಲ ಸೃಷ್ಟಿಸುತ್ತಿದ್ದೀರಿ. ನಾವು ನಿಮಗೆ ಕೇಳುತ್ತಿರುವುದು 2022–23ನೇ ಸಾಲಿನಲ್ಲಿ ಮಳೆಯಿಂದಾದ ಹಾನಿ ಮತ್ತು ಅದಕ್ಕೆ ಸಂಬಂಧಿಸಿದಂತೆ ಎಷ್ಟು ಪರಿಹಾರ ಬಂದಿದೆ ಎಂದಷ್ಟೇ ಎಂದು ಹೇಳಿದರು. ಈ ವರ್ಷ ಮುಂಗಾರು ಪೂರ್ವ ಮತ್ತು ಮುಂಗಾರು ಅವಧಿಯಲ್ಲಿ ಮಳೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದಿಂದ 1012 ಕೋಟಿ ರೂಪಾಯಿ ಕೇಳಿದ್ದೀರಿ. ಆದರೆ ಅದರಲ್ಲಿ ಬಂದಿರುವ ಹಣವೆಷ್ಟು ಎಂದು ಪ್ರಶ್ನಿಸಿದರು.

ಈ ಬಾರಿಯ ಮಳೆಯಿಂದ ನಮಗೆ ಏಳು ಸಾವಿರ ಕೋಟಿ ರೂಪಾಯಿಗಳಿಗೂ ಅಧಿಕ ನಷ್ಟವಾಗಿದೆ. ಆದರೆ ಕೇಂದ್ರ ಸರ್ಕಾರದಿಂದ ಮಾರ್ಗಸೂಚಿಯನ್ವಯವೂ ಪರಿಹಾರ ಬಂದಿಲ್ಲ ಎಂದು ವಿವರಿಸಿದರು. ಪುನ: ಮಾತನಾಡಿದ ಕಂದಾಯ ಸಚಿವ ಆರ್.ಅಶೋಕ್, ಮಳೆಯಿಂದಾದ ಹಾನಿಯ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳು ಮತ್ತು ತಾವು ರಾಜ್ಯದ ಬಹುತೇಕ ಭಾಗಗಳಿಗೆ ಹೋಗಿ ಪರಿಶೀಲನೆ ಮಾಡಿದ್ದಲ್ಲದೆ, ತಕ್ಷಣ ಪರಿಹಾರದ ಕ್ರಮಗಳನ್ನು ಕೈಗೊಂಡಿರುವುದಾಗಿ ಸಮರ್ಥಿಸಿಕೊಂಡರು.

ಆರ್ಥಿಕತೆಯಲ್ಲಿ ನಮ್ಮನ್ನಾಳಿದವರ ಹಿಂದಿಕ್ಕಿದ ಭಾರತ

● ಪ್ರಧಾನಿ ಮೋದಿ ಸಾಧನೆ ಸಾದರಪಡಿಸಿದ ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ● ಆರ್ಥಿಕ ಪ್ರಗತಿಯಲ್ಲಿ ವಿಶ್ವದಲ್ಲಿ ಭಾರತ 5ನೇ ಸ್ಥಾನದಲ್ಲಿದ್ದರೆ ಇಂಗ್ಲೆಂಡ್ 6ನೇ ಸ್ಥಾನಕ್ಕೆ ಕುಸಿದಿದೆ ● ಶಾಸಕ ರಾಮದಾಸ್ ಆಯೋಜಿಸಿರುವ 'ಮೋದಿ ಯುಗ್ ಉತ್ಸವ'ದ ಬಗ್ಗೆ ಪ್ರಶಂಸೆ



ಮೈಸೂರು,ಸೆ.19(ಎಂಟಿವೈ)– ದೇಶದ ಪ್ರಧಾನಿಯಾಗಿ 8 ವರ್ಷದಿಂದ ಆಡಳಿತ ನಡೆಸುತ್ತಿರುವ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಭಾರತದ ಆರ್ಥಿಕತೆಯನ್ನು ವಿಶ್ವದಲ್ಲಿ ಐದನೇ ಸ್ಥಾನಕ್ಕೆ ಕೊಂಡೊಯ್ಯಲು ಪ್ರಾಮಾಣಿಕ ಸೇವೆ ಮಾಡುತ್ತಿದೆ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ತಿಳಿಸಿದ್ದಾರೆ.

ಮೈಸೂರಿನ ವಿದ್ಯಾರಣ್ಯಪುರಂನ ರಾಮಲಿಂಗೇಶ್ವರ ದೇವಾಲಯದ ಉದ್ಯಾನದಲ್ಲಿ ಶಾಸಕ ಎಸ್.ಎ. ರಾಮದಾಸ್ ನೇತೃತ್ವದಲ್ಲಿ ನಡೆಯುತ್ತಿರುವ 'ಮೋದಿ ಯುಗ್ ಉತ್ಸವ'ದ ಮೂರನೇ ದಿನದ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಖೇಲೋ ಇಂಡಿಯಾ ಯೋಜನೆಯಡಿ ಆರು ಕೋಟಿ ರೂ. ವೆಚ್ಚದಲ್ಲಿ ಕೆ.ಆರ್.ಕ್ಷೇತ್ರದ ಆರು ಕ್ರೀಡಾಂಗಣ ಅಭಿವೃದ್ಧಿಪಡಿಸುವ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ನಮ್ಮ ದೇಶವನ್ನು 300ಕ್ಕೂ ಅಧಿಕ ವರ್ಷ ಕಾಲ ಆಳಿದ ಬ್ರಿಟಿಷರನ್ನೇ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಬರೀ 8 ವರ್ಷದಲ್ಲೇ ಹಿಂದಿಕ್ಕಿದೆ. ಉತ್ತಮ ಆರ್ಥಿಕ ಸ್ಥಿತಿ ಹೊಂದಿರುವ ಇಂಗ್ಲೆಂಡ್ ಅನ್ನು ಭಾರತ ಹಿಂದಿಕ್ಕಿದೆ. ಭಾರತ 5ನೇ ಸ್ಥಾನದಲ್ಲಿದ್ದರೆ, ಇಂಗ್ಲೆಂಡ್ 6ನೇ ಸ್ಥಾನಕ್ಕೆ ಕುಸಿದಿದೆ. ಇದು ಸಾಮಾನ್ಯ ಸಂಗತಿಯಲ್ಲ. ಮುಂದಿನ 2–3 ವರ್ಷದಲ್ಲಿ ಭಾರತದ ಅರ್ಥ ವ್ಯವಸ್ಥೆ ವಿಶ್ವದ 2 ಅಥವಾ 3ನೇ ಸ್ಥಾನಕ್ಕೆ ಏರುವುದು ಖಚಿತ. ಈ ಸಾಧನೆ ಮಾಡಬೇಕಾದರೆ ಬದ್ಧತೆ, ಪ್ರಾಮಾಣಿಕತೆ ಅಗತ್ಯ. ಈ ಎರಡೂ ಗುಣವೂ ಪ್ರಧಾನಿ ಮೋದಿ ಅವರಲ್ಲಿರುವುದರಿಂದ ದೇಶದ ಖ್ಯಾತಿ ಇನ್ನಷ್ಟು ಉತ್ತುಂಗಕ್ಕೆ ಏರುತ್ತಿದೆ. ಆಷಾಢ ಭೂತಿ ರಾಜಕಾರಣಿಗಳನ್ನು ದೂರವಿಟ್ಟು ಬಡವರ ಪರವಾಗಿ ಮೋದಿಯವರು ಕೆಲಸ ಮಾಡುತ್ತಿದ್ದಾರೆ ಎಂದರು.

2014ರಲ್ಲಿ ಪ್ರಧಾನಿಯಾಗಿ ಆಯ್ಕೆಯಾದ ನರೇಂದ್ರ ಮೋದಿ 'ನನ್ನ ಈ ಸರ್ಕಾರ ಬಡವರಿಗೆ ಸಮರ್ಪಿತ ಸರ್ಕಾರ' ಎಂದು ಹೇಳಿದ್ದರು. ಅದರಂತೆ ಹೊಸ ಹೊಸ ಯೋಜನೆ ಘೋಷಣೆ ಮಾಡುತ್ತಾ ಬಂದಿದ್ದಾರೆ. ದೇಶದ ಬಡವರನ್ನು ಸಬಲೀಕರಣಗೊಳಿಸಲು ಕಾರ್ಯಕ್ರಮ ರೂಪಿಸಿದರು. ಯುಪಿಎ ಸರ್ಕಾರದ ಅವಧಿಯಲ್ಲಿದ್ದ ಶೇ.45ಕ್ಕಿಂತಲೂ ಹೆಚ್ಚಿನ ಬಡ ಜನರಿಗಾಗಿ ಗರೀಬಿ ಹಟಾವೋ ಯೋಜನೆ ಅನುಷ್ಠಾನಗೊಳಿಸಿದ ಮೋದಿ ಸರ್ಕಾರ, ದೇಶದ ರಕ್ಷಣೆಗೆ ಒತ್ತು ನೀಡುವುದಾಗಿ ಘೋಷಿಸಿದ್ದರು. ಅದರ ಪರಿಣಾಮವಾಗಿ ಇಂದು ಜನರ ಆರ್ಥಿಕ ಪರಿಸ್ಥಿತಿಯಲ್ಲಿ ಸುಧಾರಣೆಯಾಗುತ್ತಿದೆ. ಈ ಹಿಂದೆ ದೇಶದ ಮೇಲೆ ದಾಳಿ ನಿರಂತರವಾಗಿ ನಡೆಯುತ್ತಿತ್ತು. ಆದರೆ, ಇದೀಗ ಗಟ್ಟಿ ನಾಯಕತ್ವ ಪ್ರಧಾನಿ ಮೋದಿ ಇರುವುದನ್ನು ಕಂಡು ವೈರಿಗಳು ದೇಶದ ಸುದ್ದಿಗೆ ಬರಲು ಹಿಂದೇಟು ಹಾಕುತ್ತಿದ್ದಾರೆ. ಒಂದೆರಡು ಘಟನೆ ಹೊರತುಪಡಿಸಿದರೆ, ದೇಶದ ಮೇಲಾಗುತ್ತಿದ್ದ ದಾಳಿ ಸ್ಥಗಿತಗೊಂಡಿದೆ ಎಂದರು.

ರೈತರ ಹಿತಕಾಯುವ ನಿಟ್ಟಿನಲ್ಲಿ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆ ಜಾರಿಗೊಳಿಸಲಾಯಿತು. ಈ ಯೋಜನೆಯ ಸೌಲಭ್ಯ 13 ಕೋಟಿ ಜನರಿಗೆ ನೇರವಾಗಿ ತಲುಪಿಸುತ್ತಿದ್ದೇವೆ. ಕೆ.ಆರ್.ಕ್ಷೇತ್ರದ ಶಾಸಕ ಎಸ್.ಎ.ರಾಮದಾಸ್ ಗುರುತಿಸಿರುವ ಇ–ಶ್ರಮ್ ಯೋಜನೆ, 'ಒನ್ ಕಾರ್ಡ್ ಒನ್ ರೇಷನ್' ಯೋಜನೆ ಜಾರಿ ಮಾಡಿದ್ದೇವೆ. ಮೊದಲು ಮೈಸೂರಿನ ವ್ಯಕ್ತಿ ಬೆಂಗಳೂರಿನಲ್ಲಿ ಪಡಿತರ ಪಡೆಯಲು ಅಲ್ಲಿಯ ದಾಖಲೆ ನೀಡಬೇಕಿತ್ತು. ಆದರೆ ಈಗ ಯಾವುದೇ ಸ್ಥಳದಲ್ಲಿ ಆ ವ್ಯಕ್ತಿ ರೇಷನ್ ಪಡೆಯುವ ವ್ಯವಸ್ಥೆ ಜಾರಿಗೆ ತರಲಾಗಿದೆ. 'ಹರ್ ಘರ್, ನಲ್ ಜಲ್' ಯೋಜನೆಯಡಿ 11 ಕೋಟಿ ಕುಟುಂಬಗಳಿಗೆ ನಲ್ಲಿ ಮೂಲಕ ನೀರು ನೀಡಿದ್ದೇವೆ. ಈ ಹಿಂದೆ ಅನಿಲ ಯೋಜನೆ ಎಂದರೆ ಕೇವಲ ಶ್ರೀಮಂತರಿಗೆ ಎನ್ನುವಂತಾಗಿತ್ತು. ಆದರೆ, ಇಂದು 8 ಕೋಟಿ ಜನರಿಗೆ ಹೊಸದಾಗಿ ಅನಿಲ ಸಂಪರ್ಕ ನೀಡಿದ್ದೇವೆ ಎಂದು ತಿಳಿಸಿದರು.

ಉಚಿತ ವಿದ್ಯುತ್ ಸರಿಯಲ್ಲ: ಕೆಲ ರಾಜಕೀಯ ಪಕ್ಷಗಳು ಚುನಾವಣೆ ಸಮೀಪಿಸಿದರೆ, ಉಚಿತ ವಿದ್ಯುತ್ ನೀಡುವ ಕೂಗು ಎತ್ತುತ್ತಾರೆ. ಕೆಲವರನ್ನು ಕತ್ತಲೆಯಲ್ಲಿಟ್ಟು ಮತ್ತಷ್ಟು ಮಂದಿಗೆ ಉಚಿತ ವಿದ್ಯುತ್ ನೀಡುವುದು ಸರಿಯಲ್ಲ. ವಿದ್ಯುತ್ ಸರಬರಾಜು ಸಂಸ್ಥೆ ಅಧೋಗತಿಗೆ ಇಳಿದರೂ ಪರವಾಗಿಲ್ಲ ಉಚಿತ ವಿದ್ಯುತ್ ನೀಡಿ ಎನ್ನುವ ಮನಸ್ಥಿತಿಯನ್ನು ಖಂಡಿಸಬೇಕು. ಜನರನ್ನು ಸಬಲೀಕರಣ ಮಾಡುವ ನಿಟ್ಟಿನಲ್ಲಿ ನಾವು ಪ್ರಯತ್ನಿಸುತ್ತಿದ್ದರೆ, ವಿರೋಧ ಪಕ್ಷಗಳ ಉಚಿತ ವಿದ್ಯುತ್ ನೀಡುವ ಬಗ್ಗೆ ಮಾತನಾಡುತ್ತಾರೆ. ಆರ್ಥಿಕತೆ ಸಬಲವಾಗಲು ನಾವು ಗುಣಮಟ್ಟದ ವಿದ್ಯುತ್ ಅನ್ನು ಎಲ್ಲರಿಗೂ ನೀಡಬೇಕು. ಎಲ್‌ಇಡಿ ಬಲ್ಬ್ ನೀಡಿ ವಿದ್ಯುತ್ ಉಳಿತಾಯಕ್ಕೂ ಕ್ರಮ ಕೈಗೊಳ್ಳಲಾಗಿದೆ. ಇದರಿಂದ ಈ ಹಿಂದೆ 100 ರೂ. ವಿದ್ಯುತ್ ಬಿಲ್ ಪಾವತಿಸುತ್ತಿದ್ದವರು ಎಲ್‌ಇಡಿ ಬಳಕೆಯಿಂದ 50 ರೂ. ಪಾವತಿಸುವಂತಾಗಿದೆ ಎಂದರು.

ನಿರ್ಣಯ ಕೈಗೊಳ್ಳುವ ಸರ್ಕಾರ: ದೇಶದಲ್ಲಿ 40 ವರ್ಷದ ನಂತರ ನಿರ್ಣಯ ಕೈಗೊಳ್ಳುವ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ. ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಸರ್ಕಾರ ಹೊರತುಪಡಿಸಿದರೆ, ಬೇರೆ ಯಾವ ಸರ್ಕಾರವೂ ಸ್ವತಂತ್ರವಾಗಿ ಯಾವುದೇ ನಿರ್ಣಯ ಕೈಗೊಳ್ಳುತ್ತಿರಲಿಲ್ಲ. ಆದರೆ ಇದೀಗ ಮೋದಿ ಸರ್ಕಾರ ಸ್ವತಂತ್ರವಾಗಿ ನಿರ್ಣಯ ಕೈಗೊಳ್ಳುತ್ತಿದೆ ಎಂದರು.

ನಮ್ಮಲ್ಲಿ ಶೇ.93 ರಷ್ಟು ಅಸಂಘಟಿತ ಕಾರ್ಮಿಕರಿದ್ದಾರೆ. ಕಾರ್ಮಿಕರ ಹಿತ ಕಾಯುವ ನಿಟ್ಟಿನಲ್ಲಿ 29 ಕಾನೂನುಗಳಿವೆ. ಇದನ್ನು ವಿಂಗಡಿಸಿ ಕಾರ್ಮಿಕ ಸ್ನೇಹಿಯಾಗಿ ಕಾರ್ಮಿಕರ ವೇತನ ಸಮಸ್ಯೆ, ಕಾರ್ಮಿಕರ ಮೇಲಿನ ದಬ್ಬಾಳಿಕೆ ನಿಯಂತ್ರಿಸುವ ಒಂದು ಪ್ರಮುಖ ನಿರ್ಣಯವನ್ನು ಕೈಗೊಂಡಿದ್ದೇವೆ ಎಂದು ತಿಳಿಸಿದರು.

ಕ್ರಿಯಾಶೀಲ ಶಾಸಕ ರಾಮದಾಸ್: ರಾಜ್ಯ ಕಂಡ ಅತ್ಯಂತ ಕ್ರಿಯಾಶೀಲ ಶಾಸಕ ಎಸ್.ಎ.ರಾಮದಾಸ್ ಅವರಾಗಿದ್ದಾರೆ. ನರೇಂದ್ರ ಮೋದಿಯವರ ಜನ್ಮ ದಿನದ ಅಂಗವಾಗಿ ಮೈಸೂರು ನಗರದಲ್ಲಿ ಈ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ. ಕಟೌಟ್ ಹಾಕೋದು, ಕಟೌಟ್‌ಗೆ ಹಾಲು ಸುರಿಯೋದು, ಕೇಕ್ ಕಟ್ ಮಾಡುವುದರಿಂದ ಜನರಿಗೆ ಯಾವುದೇ ಅನುಕೂಲ ಆಗುವುದಿಲ್ಲ. ಹೀಗಾಗಿ ಮೋದಿಯವರ ಜನ್ಮ ದಿನದಿಂದ ದೀನ ದಯಾಳ್ ಜನ್ಮ ದಿನ, ಅ.2ರಂದು ಆಚರಿಸುವ ಮಹಾತ್ಮ ಗಾಂಧಿ ಜಯಂತಿವರೆಗೆ 'ಸೇವಾ ಪಾಕ್ಷಿಕ' ಕಾರ್ಯಕ್ರಮ ನಡೆಸುವಂತೆ ರಾಷ್ಟ್ರೀಯ ಅಧ್ಯಕ್ಷರು ಕರೆ ನೀಡಿದ್ದರು. ಅದರ ಭಾಗವಾಗಿ ಸೆ.17ರಂದು ದೇಶದಾದ್ಯಂತ ನಡೆದ ರಕ್ತದಾನ ಶಿಬಿರಕ್ಕೆ ರಕ್ತ ಸಂಗ್ರಹಣೆಯಲ್ಲಿ ಗಿನ್ನಿಸ್ ದಾಖಲೆಯಾಗುವ ರೀತಿಯಲ್ಲಿ ಜನಸ್ಪಂದನೆ ದೊರೆತಿದೆ. ಪಕ್ಷದ ಕಾರ್ಯಕರ್ತರಲ್ಲದವರು ಕಾರ್ಯಕ್ರಮ ಆಯೋಜಿಸಿದ್ದಾರೆ ಎಂದರು.

ಇದಕ್ಕೂ ಮುನ್ನ ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಅಧ್ಯಕ್ಷರಾದ ಸಚ್ಚಿದಾನಂದ ಮೂರ್ತಿ ಮಾತನಾಡಿದರು. ಶಾಸಕ ಎಸ್.ಎ. ರಾಮದಾಸ್ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಮೇಯರ್ ಶಿವಕುಮಾರ್, ಸಂಸದ ಪ್ರತಾಪಸಿಂಹ, ಉಪಮೇಯರ್ ಡಾ.ರೂಪ ಯೋಗೇಶ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ರಾಜ್ಯ ಬ್ರಾಹ್ಮಣ ಅಭಿವೃದ್ಧಿ ನಿಗಮ ಮಂಡಳಿಯ ನಿರ್ದೇಶಕ ಸಿ.ವಿ.ಗೋಪಿನಾಥ್, ಜಗದೀಶ್ ಹನಗುಂದ, ಎಂ.ಆರ್.ಬಾಲಕೃಷ್ಣ, ವತ್ಸಲಾ ನಾಗೇಶ್, ನಗರಾಧ್ಯಕ್ಷ ಶ್ರೀವತ್ಸ, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್, ಪಾಲಿಕೆ ಸದಸ್ಯ ಮಾ.ವಿ.ರಾಮಪ್ರಸಾದ್, ವ್ಯವಸ್ಥಾಪಕ ನಿರ್ದೇಶಕ ಟಿ.ಕೆ.ಮಂಜುನಾಥ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಟಿ.ಆರ್.ರೋಹಿತ್ ಗಂಗಾಧರ್, ತಹಸೀಲ್ದಾರ್ ಗಿರೀಶ್ ಇನ್ನಿತರರು ಉಪಸ್ಥಿತರಿದ್ದರು.

ನಾಳೆ 'ಕುಣಿಯೋಣು ಬಾರಾ' ಶಿಬಿರದ ಸಮಾರೋಪ

ಸಂಚಲನದಿಂದ ನಡೆದ ಉಚಿತ ರಂಗ, ಜಾನಪದ ನೃತ್ಯ ತರಬೇತಿ ಶಿಬಿರದಲ್ಲಿ 100ಕ್ಕೂ ಹೆಚ್ಚು ಮಕ್ಕಳು ಭಾಗಿ



ಮೈಸೂರು,ಸೆ.19(ಪಿಎಂ)– ಸಂಚಲನ ಮೈಸೂರು ವತಿಯಿಂದ ಮೈಸೂರು ತಾಲೂಕಿನ ಗುರೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮಕ್ಕಳಿಗಾಗಿ ಶಾಲೆ ಆವರಣದಲ್ಲಿ 'ಕುಣಿಯೋಣು ಬಾರಾ...' ಶೀರ್ಷಿಕೆಯಡಿ ಹಮ್ಮಿಕೊಂಡಿದ್ದ 50 ದಿನಗಳ ಮಕ್ಕಳ ರಂಗ ಮತ್ತು ಜಾನಪದ ನೃತ್ಯಗಳ ತರಬೇತಿ ಶಿಬಿರದ ಸಮಾರೋಪ ಸಮಾರಂಭವನ್ನು ಸೆ.21ರಂದು ಹಮ್ಮಿಕೊಳ್ಳಲಾಗಿದೆ ಎಂದು ಸಂಚಲನ ಮೈಸೂರು ಸಂಸ್ಥೆ ಅಧ್ಯಕ್ಷ ಹಾಗೂ ಶಿಬಿರದ ನಿರ್ದೇಶಕ ದೀಪಕ್ ಮೈಸೂರು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಲೆಯ ಆವರಣದಲ್ಲಿ ಆ.1ರಿಂದ ಶಿಬಿರ ನಡೆಯುತ್ತಿದ್ದು, ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ 100ಕ್ಕೂ ಹೆಚ್ಚು ಮಕ್ಕಳಿಗೆ ಶಿಬಿರದ ಮೂಲಕ ರಂಗ ತರಬೇತಿ ಹಾಗೂ ಜಾನಪದ ನೃತ್ಯದ ತರಬೇತಿ ನೀಡಲಾಗಿದೆ. ಸೆ.21ರಂದು ಇದೇ ಶಾಲಾ ಆವರಣದಲ್ಲಿ ಸಂಜೆ 6ಕ್ಕೆ ಸಮಾರೋಪ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ಮಾಜಿ ಸಚಿವರೂ ಆದ ಶಾಸಕ ಜಿ.ಟಿ.ದೇವೇಗೌಡ ವಹಿಸಲಿದ್ದು, ಜಿಪಂ ಮಾಜಿ ಅಧ್ಯಕ್ಷ ಮರೀಗೌಡ ಉದ್ಘಾಟನೆ ಮಾಡಲಿದ್ದಾರೆ. ಅತಿಥಿಗಳಾಗಿ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ, ಯು.ಎಸ್. ಶೇಖರ್, ಮಾಜಿ ಉಪಮೇಯರ್ ಸಿದ್ದರಾಜು, ಮೈಸೂರು ತಾಲೂಕು ಬಿಇಓ ಎನ್.ಎ. ಮಲ್ಲೇಶ್ವರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಸೇರಿದಂತೆ ಇನ್ನಿತರ ಗಣ್ಯರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಈ ಕಾರ್ಯಕ್ರಮದ ಬಳಿಕ ಶಿಬಿರದಲ್ಲಿ ತರಬೇತಿ ಪಡೆದ ಮಕ್ಕಳು ಡಾ.ನಿಂಗರಾಜು ಅವರ ಮಾರ್ಗದರ್ಶಿ ಹಾಗೂ ಆನಂದ ಅವರ ನಿರ್ದೇಶನದಲ್ಲಿ ಜಾನಪದ ನೃತ್ಯದ ಪ್ರದರ್ಶನ ನೀಡಲಿದ್ದಾರೆ. ಜೊತೆಗೆ ಇದೇ ಮಕ್ಕಳು 'ಬೆಟ್ಟದ ಇಲಿಗಳ ಕಥೆ' ಎಂಬ ನಾಟಕ ಪ್ರದರ್ಶನ ನೀಡಲಿದ್ದಾರೆ. ಉಚಿತವಾಗಿ ನಡೆಸಿದ ಶಿಬಿರ ಇದಾಗಿದೆ ಎಂದರು.

ಜಾನಪದ ಕಲಾವಿದ ಹಾಗೂ ಮೈಸೂರು ವಿವಿ ಸಂಜೆ ಕಾಲೇಜು ಅಧ್ಯಾಪಕ ಡಾ.ನಿಂಗರಾಜು ಮಾತನಾಡಿ, ಮಕ್ಕಳಿಗೆ ಜಾನಪದ ಕಲೆ ಮತ್ತು ನಾಟಕ ಕಲಿಸುವುದು ಸಾಮಾನ್ಯ ಸಂಗತಿಯಲ್ಲ. ಮಕ್ಕಳಿಗೆ ಜಾನಪದ ಕಲೆಗಳನ್ನು ಕಲಿಸುವ ಮೂಲಕ ನಮ್ಮ ಮಣ್ಣಿನ ಕಲೆಗಳನ್ನು ಉಳಿಸಿ ಬೆಳೆಸಬೇಕಿದೆ ಎಂದು ತಿಳಿಸಿದರು. ನಟರಾದ ಅಶ್ವತ್ಥ್, ಮನ್ವಿತ್, ಹಿರಿಯ ಕಲಾವಿದೆ ರಾಧಾ ನಾಯಕ್, ರಂಗ ನಿರ್ದೇಶಕ ಎಸ್.ಶ್ರೀಕಾಂತ್ ಗೋಷ್ಠಿಯಲ್ಲಿದ್ದರು.



ಮೈಸೂರಿನ ಹಿನಕಲ್ ನಿಂಗಮಣಿ ನೀಲಕಂಠಪ್ಪ ಕಲ್ಯಾಣ ಮಂಟಪದಲ್ಲಿ ನಡೆದ ಶ್ರೀ ಚಾಮುಂಡೇಶ್ವರಿ ವಿವಿಧೋದ್ದೇಶ ಸಹಕಾರ ಸಂಘದ 12ನೇ ವಾರ್ಷಿಕ ಮಹಾಸಭೆಯಲ್ಲಿ ಸಂಘದ ಸದಸ್ಯರ ತಲಾ ಐದು ಮಂದಿ ಪಿಯುಸಿ ಹಾಗೂ ಎಸ್‌ಎಸ್‌ಎಲ್‌ಸಿ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಮಾಡಲಾಯಿತು. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 625 ಅಂಕ ಪಡೆದು ಸಾಧನೆ ಮಾಡಿರುವ ಮರಿಮಲ್ಲಪ್ಪ ಶಾಲೆಯ ವಿದ್ಯಾರ್ಥಿನಿ, ಸಂಘದ ಸದಸ್ಯ ಕುಮಾರ್ ಪುತ್ರಿ ಚಾರುಕೀರ್ತಿ ಅವರನ್ನು ಪ್ರಶಂಶಿಸಲಾಯಿತು. ಸಂಘದ ಅಧ್ಯಕ್ಷ ಎನ್.ರಾಜ್‌ಕುಮಾರ್, ಉಪಾಧ್ಯಕ್ಷ ಕುಮಾರ್, ನಿರ್ದೇಶಕರಾದ ಬಿ.ಕೆ.ಮಂಜುನಾಥ್, ಪ್ರಸನ್ನ, ಗೋಪಾಲಗೌಡ, ಶ್ರೀನಿವಾಸ್, ಜಯರಾಮ್, ಮಹದೇವ್, ಪುಷ್ಪರಾಜ್, ಹರೀಶ್, ಗಣೇಶ್, ಪುಷ್ಪಲತಾ, ರಾಣಿ, ಕಾರ್ಯದರ್ಶಿ ದಿವ್ಯ ಇನ್ನಿತರರನ್ನು ಚಿತ್ರದಲ್ಲಿ ಕಾಣಬಹುದು.

ವ್ಯಕ್ತಿ ಆತ್ಮಹತ್ಯೆ

ಮೈಸೂರು, ಸೆ19(ಎಸ್‌ಪಿಎನ್)– ಅಪರಿಚಿತ ವ್ಯಕ್ತಿಯೊಬ್ಬ ರೈಲ್ವೆ ಬೋಗಿ ಯಲ್ಲಿ ಫ್ಯಾನಿಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದು ಮೈಸೂರು ರೈಲ್ವೆ ನಿಲ್ದಾಣದ ಪ್ಲಾಟ್ ಫಾರಂ ನಂ.5ರಲ್ಲಿ ನಿಂತಿದ್ದ ರೈಲ್ವೆ ಬೋಗಿಯಲ್ಲಿ ಶನಿವಾರ ಪತ್ತೆಯಾಗಿದೆ.

ರೈಲುಗಾಡಿ ಸಂಖ್ಯೆ 06234 ಕೋಚ್ ನಂ–134572ರಲ್ಲಿ ಸುಮಾರು 40–45 ವರ್ಷದ ಅಪರಿಚಿತ ವ್ಯಕ್ತಿ ರೈಲ್ವೆ ಬೋಗಿಯ ಫ್ಯಾನಿಗೆ ನೇಣುಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಸ್ಥಳ ಪರಿಶೀಲನೆ ನಡೆಸಿದ ರೈಲ್ವೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಕೆ.ಆರ್. ಆಸ್ಪತ್ರೆ ಶವಾಗಾರದಲ್ಲಿ ಮೃತದೇಹ ಇರಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ದೂ.ಸಂ:0821–2516579 ಅನ್ನು ಸಂಪರ್ಕಿಸಬಹುದು.

ಮೈಸೂರು ರೈಲ್ವೆ ವಿಭಾಗದಲ್ಲಿ 15 ದಿನಗಳ ಸ್ವಚ್ಛತಾ ಕಾರ್ಯಕ್ಕೆ ಚಾಲನೆ



ಮೈಸೂರು, ಸೆ19– ನೈರುತ್ಯ ರೈಲ್ವೆ ಮೈಸೂರು ವಿಭಾಗದಲ್ಲಿ ಹಮ್ಮಿಕೊಂಡಿರುವ 15 ದಿನಗಳ 'ಸ್ವಚ್ಛತಾ ಪಖ್ವಾಡ' ಅಭಿಯಾನದ ಅಂಗವಾಗಿ ಸ್ವಚ್ಛತಾ ಕಾರ್ಯ ನಡೆಸಲಾಯಿತು.

ಮೈಸೂರು ಮತ್ತು ದಾವಣಗೆರೆ ರೈಲ್ವೆ ನಿಲ್ದಾಣದ ಪ್ಲಾಟ್‌ಫಾರ್ಮ್‌ಗಳು, ಹಳಿಗಳು, ಡ್ರೈನ್‌ಗಳು ಮತ್ತು ಶೌಚಾಲಯಗಳಲ್ಲಿ ಯಾಂತ್ರೀಕೃತ ಸ್ವಚ್ಛತಾ ಅಭಿಯಾನವನ್ನು ಒಳಗೊಂಡಂತೆ ಮೈಸೂರು ವಿಭಾಗದ ಪ್ರಮುಖ ನಿಲ್ದಾಣಗಳಲ್ಲಿ ವಿವಿಧ ಸ್ವಚ್ಛತಾ ಸಂಬಂಧಿತ ಚಟುವಟಿಕೆಗಳನ್ನು ನಡೆಸಲಾಯಿತು.

ಇದೇ ವೇಳೆ ರೈಲ್ವೆ ಅಧಿಕಾರಿಗಳು ಸ್ವಚ್ಛತಾ ಬ್ಯಾನರ್ ಮತ್ತು ನಾಮಫಲಕಗಳನ್ನು ಹಿಡಿದು ಸ್ವಚ್ಛತಾ ಜಾಗೃತಿ ಮೂಡಿಸಿದರಲ್ಲದೆ, ಪ್ಲಾಸ್ಟಿಕ್ ಬಳಸದಂತೆ ಮನವಿ ಮಾಡಿದರು. ಪ್ಲಾಸ್ಟಿಕ್‌ಗೆ ಪರ್ಯಾಯಗಳನ್ನು ಆಯ್ಕೆ ಮಾಡಿಕೊಳ್ಳುವುದರ ಜೊತೆಗೆ ಪ್ಲಾಟ್‌ಫಾರ್ಮ್‌ಗಳು, ಟ್ರ್ಯಾಕ್‌ಗಳಲ್ಲಿ ಕಸ ಎಸೆಯುವುದು ಮತ್ತು ಉಗುಳದಂತೆ ತಿಳಿ ಹೇಳಲಾಯಿತು.

ಆಹಾರ ಮಳಿಗೆಗಳು, ಕ್ಯಾಂಟೀನ್‌ಗಳು ಮತ್ತು ರೈಲು ಬದಿಯ ವ್ಯಾಪಾರಿಗಳಿಗೆ ಪ್ಲಾಸ್ಟಿಕ್‌ನಿಂದಾಗುವ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಲಾಯಿತು. ಒಂದು ಬಾರಿ ಬಳಕೆಯಾದ ಪ್ಲಾಸ್ಟಿಕ್ ಅನ್ನು ಮತ್ತೆ ಬಳಸದಂತೆ ಎಚ್ಚರಿಸಲಾಯಿತು. ಅಲ್ಲದೆ ತ್ಯಾಜ್ಯವನ್ನು ಹಸಿಕಸ–ಒಣಕಸ ಎಂದು ಸರಿಯಾಗಿ ವಿಂಗಡಿಸುವುದನ್ನು ತಿಳಿದುಕೊಳ್ಳುವಂತೆ ಸಲಹೆ ನೀಡಲಾಯಿತು.

ಈ ವೇಳೆ ಮೈಸೂರು ವಿಭಾಗದ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ರಾಹುಲ್ ಅಗರ್ವಾಲ್ ಮಾತನಾಡಿ, ರೈಲ್ವೆಯು ಪರಿಸರ ಸ್ನೇಹಿಯಾದ ಬೃಹತ್ ಸಾರಿಗೆ ವಿಧಾನವಾಗಿದ್ದು, ಸ್ವಚ್ಛ ಮತ್ತು ಹಸಿರು ಪರಿಸರವನ್ನು ಉತ್ತೇಜಿಸುವಲ್ಲಿ ಯಾವಾಗಲೂ ಮುಂಚೂಣಿಯಲ್ಲಿದೆ ಎಂದು ತಿಳಿಸಿದರಲ್ಲದೆ, ಪ್ರಯಾಣಿಕರು ಕಸದ ತೊಟ್ಟಿಗಳನ್ನು ಬಳಸಲು ಮನವಿ ಮಾಡಿದರು.

ಕೈಗಾರಿಕಾ ಪ್ರವಾಸಕ್ಕೆ ಅರ್ಜಿ ಆಹ್ವಾನ

ಮೈಸೂರು, ಸೆ.19– ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ವತಿಯಿಂದ ಕೈಗಾರಿಕಾ ದಸರಾ ಅಂಗವಾಗಿ ಸೆಪ್ಟೆಂಬರ್ 29 ಮತ್ತು 30 ರಂದು ಮೈಸೂರು ನಗರದ ವಿವಿಧ ಕೈಗಾರಿಕೆಗಳಿಗೆ ಪ್ರವಾಸ ಕಾರ್ಯಕ್ರಮವನ್ನು ಏರ್ಪಡಿಸಲಾಗಿದ್ದು, ಕೈಗಾರಿಕಾ ಘಟಕಗಳಿಗೆ ಭೇಟಿ ನೀಡಿ ಮಾಹಿತಿ ಪಡೆಯಲು ಇಚ್ಛಿಸುವ ವಿದ್ಯಾರ್ಥಿಗಳು, ಉದ್ದಿಮೆದಾರರು, ಸಾರ್ವಜನಿಕರು ನಿಗದಿತ ನಮೂನೆ ಅರ್ಜಿಯನ್ನು ಸೆಪ್ಟೆಂಬರ್ 20ರ ಒಳಗೆ ಜಿಲ್ಲಾ ಕೈಗಾರಿಕಾ ಕೇಂದ್ರ, ನ್ಯೂ ಸಯ್ಯಾಜಿ ರಾವ್ ರಸ್ತೆ, ಸಿಟಿಐ ಕಟ್ಟಡ ಮೈಸೂರು, ಇಲ್ಲಿಗೆ ನೀಡಲು ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಷ್ಣು ಸ್ಮರಣೆಗಾಗಿ ವಿಷ್ಣು ಅಭಿನಯದ ಚಿತ್ರಗೀತೆಗಳ ಗಾಯನ ಕಾರ್ಯಕ್ರಮ

ನಟ ವಿಷ್ಣುವರ್ಧನ್ ಸ್ಮರಣೆಗಾಗಿ ಉದ್ಯಾನಕ್ಕೆ ನಾಮಕರಣ

ಮೇಯರ್ ಶಿವಕುಮಾರ್ ಭರವಸೆ



ಮೈಸೂರು, ಸೆ.19ಆರ್‌ಕೆಬಿ)– ನಟ ವಿಷ್ಣುವರ್ಧನ್ ಹೆಸರನ್ನು ಉದ್ಯಾನವನಕ್ಕೆ ನಾಮಕರಣ ಮಾಡಲು ಸೂಕ್ತ ಕ್ರಮ ಕೈಗೊಳ್ಳುವುದಾಗಿ ಮೈಸೂರು ಮೇಯರ್ ಶಿವಕುಮಾರ್ ಭರವಸೆ ನೀಡಿದರು.

ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಗಾನ ವೈದ್ಯಲೋಕ ಸಂಸ್ಥೆಯ ಆಶ್ರಯದಲ್ಲಿ ನಡೆದ ನಟ ಡಾ.ವಿಷ್ಣುವರ್ಧನ್ ಅವರ 72ನೇ ಜನ್ಮದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ವಿಷ್ಣುವರ್ಧನ್ ಅಭಿನಯದ ಗೀತ ಗಾಯನ ಕಾರ್ಯಕ್ರಮ 'ಎಂದು ಮರೆಯದ ಹಾಡು' ಉದ್ಘಾಟನೆ ನೆರವೇರಿಸಿ ಮಾತನಾಡಿದರು.

ವಿಷ್ಣುವರ್ಧನ್ ಕನ್ನಡ ಚಿತ್ರರಂಗ ಕಂಡ ಮೇರು ಪ್ರತಿಭೆ. ಮೈಸೂರಿನವರೇ ಎಂಬುದು ಹೆಮ್ಮೆಪಡಬೇಕಾದ ಸಂಗತಿ. ಅವರ ನೆನಪಿಗಾಗಿ ವೈದ್ಯ ಗಾಯಕರಿಂದ ಗೀತ ಗಾಯನ ಕಾರ್ಯಕ್ರಮ ನಡೆಯುತ್ತಿರುವುದು ಸಂತೋಷದ ವಿಚಾರ. ದಿನನಿತ್ಯದ ಬದುಕಿನಲ್ಲಿ ಸದಾ ಒತ್ತಡದಲ್ಲೇ ಕಾರ್ಯ ನಿರ್ವಹಿಸುವ ವೈದ್ಯರು ಬಿಡುವಿನ ವೇಳೆಯಲ್ಲಿ ಸಂಗೀತದ ಕಡೆಯೂ ಆಸಕ್ತಿ ಬೆಳೆಸಿಕೊಂಡಿರುವುದು ಮೈಸೂರಿನ ಗಾನ ವೈದ್ಯ ಲೋಕಕ್ಕೆ ಮಾದರಿಯಾಗಿದೆ ಎಂದರು.

ಮುಖ್ಯ ಅತಿಥಿಯಾಗಿದ್ದ ನಗರಪಾಲಿಕೆ ಮಾಜಿ ಸದಸ್ಯ ಹಾಗೂ ಚಲನಚಿತ್ರ ವಾಣಿಜ್ಯ ಮಂಡಳಿಯ ನಿರ್ದೇಶಕ ಎಂ.ಡಿ.ಪಾರ್ಥಸಾರಥಿ ಮಾತನಾಡಿ, ಮೈಸೂರಿನ ಹೆಚ್.ಡಿ.ಕೋಟೆ ಉದ್ಬೂರು ಗೇಟ್ ಬಳಿ ವಿಷ್ಣು ಸ್ಮಾರಕ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ಇಲ್ಲಿ ವಿಷ್ಣು ಅವರ ಜೀವನ ಪಯಣದ ಸಮಗ್ರ ಚಿತ್ರಣ ನೋಡುಗರಿಗೆ ದೊರಕಲಿದೆ. ವಿಷ್ಣು ಅವರ ಸಾಧನೆಗೆ ಇನ್ನಷ್ಟು ಪುರಸ್ಕಾರಗಳು ಬರಬೇಕಿತ್ತು ಅದು ಅವರ ಜೀವಿತಾವಧಿಯಲ್ಲಿ ಸಾಧ್ಯವಾಗಲಿಲ್ಲ. ಆ ನೋವು ಇನ್ನೂ ವಿಷ್ಣು ಅಭಿಮಾನಿಗಳನ್ನು ಕಾಡುತ್ತಿದೆ ಎಂದು ಬೇಸರದಿಂದ ನುಡಿದರು.

ಹಿರಿಯ ರಂಗ ಕಲಾವಿದ ವೈ.ಎಂ.ಪುಟ್ಟಣ್ಣಯ್ಯ, ವಿಷ್ಣುವರ್ಧನ್ ಅವರ ಪೂರ್ವಜರು ಹಾಗೂ ತಾವು ವಿಷ್ಣುವರ್ಧನ್ ಅವರ ಬಾಲ್ಯದ ದಿನಗಳನ್ನು ಸ್ಮರಿಸಿಕೊಂಡರು.

ಕಾರ್ಯಕ್ರಮದಲ್ಲಿ ವಿಷ್ಣುವರ್ಧನ್ ಅಭಿನಯದ 'ಶಾರದೇ ದಯ ತೋರಿದೆ' 'ಮಾಮರವೆಲ್ಲೋ ಕೋಗಿಲೆಯೆಲ್ಲೋ..', 'ಈ ಹೃದಯ ಹಾಡುತಿದೆ', 'ಆಸೆಗಳೇ ಹಕ್ಕಿಗಳಾಗಿ', 'ಒಲುವೆ ಸಿರಿಯ ಕಂಡು', 'ಕರ್ನಾಟಕದ ಇತಿಹಾಸದಲಿ', 'ಬಣ್ಣ ನನ್ನ ಒಲವಿನ ಬಣ್ಣ' ಇನ್ನಿತರೆ ಗೀತೆಗಳನ್ನು ಗಾಯಕ ವೈ.ಡಿ.ರಾಜಣ್ಣ, ಡಾ.ಟಿ.ರವಿಕುಮಾರ್, ಡಾ.ಎ.ಎಸ್.ಪೂರ್ಣಿಮಾ, ಡಾ.ಪಿ.ಚಂದ್ರಶೇಖರ್, ಡಾ.ಸುರೇಂದ್ರನ್, ಡಾ.ಶ್ಯಾಮಪ್ರಸಾದ್, ಡಾ.ಶಿವಕುಮಾರ್ ಶ್ರೀಲತಾ ಮನೋಹರ್, ಸಿ.ಎಸ್. ವಾಣಿ ಇನ್ನಿತರರು ಪ್ರಸ್ತುತಪಡಿಸಿ, ರಂಜಿಸಿದರು.

ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಿದ್ದರು. ಗಾನ ವೈದ್ಯಲೋಕ ಸಂಸ್ಥೆಯ ಗೌರವಾಧ್ಯಕ್ಷ ಡಾ.ವೈ.ಡಿ.ರಾಜಣ್ಣ, ಸಂಸ್ಥೆಯ ಅಧ್ಯಕ್ಷ ಡಾ.ಟಿ. ರವಿಕುಮಾರ್, ಚಲನಚಿತ್ರ ವಿಮರ್ಶಕ ಎಡೆಯೂರು ಸಮೀಉಲ್ಲಾ, ಎ.ಜಿ.ದೇವರಾಜು, ಪದ್ಮಾ, ಹೆಚ್.ಎಂ. ವಿಜಯಕುಮಾರ್ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರು ದಸರಾ ಮಹೋತ್ಸವ-2022



ಸಾಂಸ್ಕೃತಿಕ ಕಲಾ ವೈಭವ, ದೈವ ಶಕ್ತಿ

ಆರಾಧನೆಗೆ ಮೀಸಲಾದ 'ಯುವ ಸಂಭ್ರಮ'

ಅರಮನೆ ವೇದಿಕೆಯ ಸಾಂಸ್ಕೃತಿಕ ಕಾರ್ಯಕ್ರಮಗಳು

ಮೈಸೂರು, ಸೆ.19- ಮೈಸೂರು ದಸರಾ ಪ್ರಯುಕ್ತ ಅರಮನೆ ವೇದಿಕೆಯಲ್ಲಿ ಸೆ.26 ರಿಂದ ಅ.3 ರವರೆಗೆ ಪ್ರತಿದಿನ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಸೆ.26– 5:30 ರಿಂದ 6:00 ಗಂಟೆಯವರೆಗೆ ನಾದಸ್ವರ ಯದುನಾಥ್ ಮತ್ತು ಗುರುರಾಜ್ ತಂಡದವರಿಂದ ವೀರಭದ್ರ ಕುಣಿತ- ಕಿರಾಳು ಮಹೇಶ ಮತ್ತು ತಂಡದವರಿಂದ, ಸಂಜೆ 6 ಗಂಟೆಗೆ ಮುಖ್ಯಮಂತ್ರಿ ಬಸವರಾಜ ಎಸ್. ಬೊಮ್ಮಾಯಿ ಅವರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆ ಹಾಗೂ ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿ ಪ್ರಧಾನ ಸಮಾರಂಭ,. ಸಂಜೆ 7 ರಿಂದ 8 ಗಂಟೆವರೆಗೆ ಅಮೃತ ಭಾರತಿಗೆ ಕನ್ನಡ ದಾರತಿ ಸಪ್ತಸ್ವರ ಆರ್ಟ್ಸ್ ಮತ್ತು ಕ್ರಿಯೇಷನ್ ಬೆಂಗಳೂರು ಅವರಿಂದ ನೃತ್ಯರೂಪಕ, ಸಂಜೆ 8 ರಿಂದ 9:30 ವರೆಗೆ ಹೆಚ್.ಆರ್. ಲೀಲಾವತಿ ಅವರಿಂದ ಸುಗಮ ಸಂಗೀತ.

ಸೆ. 27– ಸಂಜೆ 5:30 ರಿಂದ 6:00 ಕಂಸಾಳೆ ಮಹೇಶ್ ಮತ್ತು ತಂಡ ಅವರಿಂದ ಕಂಸಾಳೆ, 6 ರಿಂದ 7 ಇಂದೂ ನಾಗರಾಜು ಮತ್ತು ಲಕ್ಷ್ಮೀನಾಗರಾಜು ತಂಡದಿಂದ ಭಕ್ತಿ ಸಂಗೀತ, 7 ರಿಂದ 8 ಲಯಾಭಿನಯ ಕಲ್ಚರಲ್ ಫೌಂಡೇಷನ್‌ರಿಂದ ನೃತ್ಯರೂಪಕ-ಲಲಿತಾರ್ಣವ ಹಾಗೂ 8 ರಿಂದ 9:30 ವಿದ್ವಾನ್ ಸಂದೀಪ್ ನಾರಾಯಣ್‌ರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ.

ಸೆ. 28– ಸಂಜೆ 5:30 ರಿಂದ 6:00 ಗಂಟೆಯವರೆಗೆ ಕರ್ನಾಟಕ ಕಲಾಶ್ರೀ ವಿದ್ವಾನ್ ಸಿ.ರಾಮದಾಸ್ ಬೆಂಗಳೂರು ಅವರಿಂದ ಹಾರ್ಮೋನಿಯಂ, ಸಂಜೆ 6 ರಿಂದ 7 ಪಂಡಿತ ಗಣಪತಿ ಭಟ್ ಹಾಸಣಗಿ ಯಲ್ಲಾಪುರ ಅವರಿಂದ ದಾಸರ ಪದ, ಸಂಜೆ 7 ಗಂಟೆಯಿಂದ 8 ಕರ್ನಾಟಕ ಕಲಾ ಸತ್ಯನಾರಾಯಣರಾಜು ಮತ್ತು ತಂಡದವರಿಂದ ಭರತನಾಟ್ಯ, ಸಂಜೆ 8 ರಿಂದ 9:30 ಗಂಟೆವರೆಗೆ ಉಸ್ತಾದ್ ಫಜಲ್ ಖುರೇಷಿ ಮುಂಬೈ ಅವರಿಂದ ತಬಲ ವಾದನ.

ಸೆ. 29– ಸಂಜೆ 5:30 ರಿಂದ 6 ರವರೆಗೆ ಕರ್ನಾಟಿಕ್ ಮತ್ತು ಇಂಗ್ಲಿಷ್ ಬ್ಯಾಂಡ್ ಪೊಲೀಸ್ ಬ್ಯಾಂಡ್, ಸಂಜೆ 6 ರಿಂದ 7 ಗಂಟೆಯವರೆಗೆ ಪಂಡಿತ್ ವೆಂಕಟೇಶ್ ಕುಮಾರ್ ಧಾರವಾಡ ವಚನ ಗಾಯನ, ಸಂಜೆ 7 ರಿಂದ 8 ರವರೆಗೆ ಮಧುಲಿತ ಮಹೋಪಾತ್ರ ಮತ್ತು ತಂಡದವರಿಂದ ಓಡಿಸ್ಸಿ ನೃತ್ಯ, ಸಂಜೆ 8 ರಿಂದ 9.30 ಗಂಟೆಯವರೆಗೂ ಚಕ್ರ ಫೋನಿಕ್ಸ್ ತಂಡ ಬೆಂಗಳೂರು, ವಿಶ್ವ ಸಂಗೀತ (ಕರ್ನಾಟಕ ವಾದ್ಯ ಸಂಗೀತಗಳ ಸಮ್ಮಿಲನ).

ಸೆ. 30– ಸಂಜೆ 5:30 ರಿಂದ 6 ಗಂಟೆಯವರೆಗೆ ಜ್ಞಾನ ಮೂರ್ತಿ ಮತ್ತು ತಂಡದವರಿಂದ ಭಕ್ತಿ ಸಂಗೀತ, ಸಂಜೆ 6 ರಿಂದ 7 ಗಂಟೆಯವರೆಗೆ ಡಾ. ಸುಕನ್ಯಾ ಪ್ರಭಾಕರ್ ಮತ್ತು ತಂಡ ವಾದ್ಯಗಳಲ್ಲಿ ಒಡೆಯರ ಕೃತಿಗಳು, ಸಂಜೆ 7 ರಿಂದ 8 ಗಂಟೆಯವರೆಗೂ ಕರ್ನಾಟಕ ಕಲಾಶ್ರೀ ರೂಪ ರಾಜೇಶ ಮತ್ತು ತಂಡ ಬೆಂಗಳೂರು ಕುಚುಪುಡಿ ನೃತ್ಯ, ಸಂಜೆ 8 ರಿಂದ 9.30 ಗಂಟೆಯವರೆಗೂ ವಿಧೂಷಿ ಕೌಶಿಕಿ ಚಕ್ರವರ್ತಿ ಕಲ್ಕತ್ತಾ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ.

ಅಕ್ಟೋಬರ್ 1– ಸಂಜೆ 5.30ರಿಂದ 6 ರವರೆಗೆ ಪನ್ನಗ ವಿಜಯಕುಮಾರ್, ವೇದವ್ಯಾಸ ಸೇವಾ ಟ್ರಸ್ಟ್ ಅವರಿಂದ ಜಾನಪದ ಗಾಯನ, ಸಂಜೆ 6 ರಿಂದ 7 ಗಂಟೆಯವರೆಗೆ ಟಿ.ಎಸ್.ನಾಗಭರಣ, ಬೆನಕ ತಂಡ ಬೆಂಗಳೂರು ಅವರಿಂದ ರಂಗಗೀತೆಗಳು, ಸಂಜೆ 7 ರಿಂದ 8 ಗಂಟೆಯವರೆಗೂ ಪೊಲೀಸ್ ಬ್ಯಾಂಡ್ ಮಾಸ್ ಬ್ಯಾಂಡ್, ಸಂಜೆ 8 ರಿಂದ 9.30 ಗಂಟೆಯವರೆಗೂ ಮನೋ ಮ್ಯೂಸಿಕ್ ಲೈನ್ಸ್, ಬೆಂಗಳೂರು ಸಿತಾರ್ ಸಿಂಫೋನಿ.

ಅ. 2– ಬೆಳಗ್ಗೆ 6 ರಿಂದ ಸಂಜೆ 6 ರವರೆಗೆ ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ, ಸಂಜೆ 6 ರಿಂದ 7 ಗಂಟೆಯವರೆಗೆ ಕಂಬದ ರಂಗಯ್ಯ ನೇತೃತ್ವದಲ್ಲಿ ವಿವಿಧ ಕಲಾವಿದರಿಂದ ಜನಪದ ಸಂಗೀತ, ಸಂಜೆ 7 ರಿಂದ 8 ಗಂಟೆಯವರೆಗೂ ಕಿರುತೆರೆ ಕಲಾವಿದರಾದ ರೂಪಿಕ ಮತ್ತು ವಂದನ ಸಾರಥ್ಯದಲ್ಲಿ ನೃತ್ಯರೂಪಕ ನವಶಕ್ತಿ ವೈಭವ, ಸಂಜೆ 8 ರಿಂದ 9.30 ಗಂಟೆಯವರೆಗೂ ಮನೋಜ್ ವಶಿಷ್ಠ ಮತ್ತು ಅರುಂಧತಿ ವಶಿಷ್ಠ ತಂಡದವರಿಂದ ಸಂಗೀತ ವೈವಿಧ್ಯ.

ಅ. 3– ಸಂಜೆ 5:30 ರಿಂದ 6 ಗಂಟೆಯವರೆಗೆ ವಿಶೇಷ ವಿಕಲಚೇತನ ಕಲಾವಿದರಿಂದ ಕಾರ್ಯಕ್ರಮ, ಸಂಜೆ 6 ರಿಂದ 7 ಗಂಟೆಯವರೆಗೆ ಗಡುಬಗೆರೆ ಮುನಿರಾಜು ಅವರಿಂದ ಜನಪದ ಸಂಗೀತ, ಸಂಜೆ 7 ರಿಂದ 8 ಗಂಟೆಯವರೆಗೂ ಸ್ಥಳೀಯ ಕಲಾವಿದರಿಂದ ಪಾರಂಪರಿಕ ನೃತ್ಯ ಸಮ್ಮಿಲನ, ಸಂಜೆ 8 ರಿಂದ 9.30 ಗಂಟೆಯವರೆಗೂ ಭಜನ್ ಸಾಮ್ರಾಟ್ ಪದ್ಮಶ್ರೀ ಅನುಪ್ ಜಲೋಟ ಮುಂಬೈ ಅವರಿಂದ ಗಜಲ್ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಮೈಸೂರು, ಸೆ.19(ಎಂಕೆ)– ಕಣ್ಣಿಗೆ ಕುಕ್ಕುವ ಬೆಳಕಿನ ಚಿತ್ತಾರದ ನಡುವೆ ಸಾಂಸ್ಕೃತಿಕ ಕಲಾ ವೈಭವ, ದೈವ ಶಕ್ತಿಯ ಆರಾಧನೆ ನೋಡುಗರನ್ನು ಮೂಕ ವಿಸ್ಮಿತರನ್ನಾಗಿಸಿತು.

ಮಾನಸಗಂಗೋತ್ರಿ ಬಯಲು ರಂಗಮಂದಿರದಲ್ಲಿ ನಡೆಯುತ್ತಿರುವ ನಾಡಹಬ್ಬ ಮೈಸೂರು ದಸರಾ ಮಹೋತ್ಸವದ 'ಯುವ ಸಂಭ್ರಮ'ದಲ್ಲಿ ವಿಷ್ಣು ದಶಾವತಾರ, ಶಿವಾರಾಧನೆ, ವಿಘ್ನ ನಿವಾರಕನ ಸ್ಮರಣೆ, ತಾಯಿ ಚಾಮುಂಡಿಯ ವೀರಾವೇಶದ ನೃತ್ಯ ವೈಭವ ಮೈ ನವಿರೇಳಿಸುವಂತಿತ್ತು.

ಮೈಸೂರಿನ ಜೆಎಸ್‌ಎಸ್ ಸಹನಾ ವಿಶೇಷ ಶಿಕ್ಷಣ ಶಾಲೆಯ ಮಕ್ಕಳು ವಿಷ್ಣುವಿನ ದಶಾವತಾರದ ದರ್ಶನ ಮಾಡಿಸಿದರೆ, ಮಹಾಜನ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು ಮಹಿಷಾಸುರ ಮರ್ದಿನಿ ಚಾಮುಂಡೇಶ್ವರಿಯ ವೀರಾವೇಶ ಅವತಾರ ಸೃಷ್ಟಿಸಿದರು. ಶ್ರೀರಂಗಪಟ್ಟಣ ಅರಕೆರೆ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ವಿದ್ಯಾರ್ಥಿಗಳು ಶಿವಾರಾಧನೆ ಹಾಗೂ ನಂಜನಗೂಡಿನ ಸರ್ಕಾರಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು ವಿಘ್ನ ನಿವಾರಕನನ್ನು ಸ್ಮರಿಸುವ ಮೂಲಕ ಭಕ್ತಿ ಸುಧೆ ಹರಿಸಿದರು.

ಪಾಂಡವಪುರ ವಿಜಯ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳು ಅಮೋಘ ನೃತ್ಯ ಪ್ರದರ್ಶನ ಹಾಗೂ ಅಭಿನಯದ ಮೂಲಕ 'ರಾಮಾಯಣ' ಮಹಾಕಾವ್ಯವನ್ನು ವೇದಿಕೆಯ ಮೇಲೆ ತೆರೆದಿಟ್ಟರು. ಸೀತಾ ಅಪಹರಣ, ಮಾರುತಿ ವಿಜಯ, ರಾಮ-ರಾವಣ ಯುದ್ಧದ ಸಾಹಸಮಯ ಸನ್ನಿವೇಶಗಳನ್ನು ವರ್ಣರಂಜಿತ ಬೆಳಕಿನ ನಡುವೆ ಅಮೋಘವಾಗಿ ಪ್ರಸ್ತುತಪಡಿಸಿದರು.

ಜಾನಪದ ಸೊಗಡು: 'ಚೆಲ್ಲಿದರು ಮಲ್ಲಿಗೆಯಾ ಬಾನಾಸುರೇರಿ ಮ್ಯಾಲೆ' ಜಾನಪದ ಹಾಡಿಗೆ ಹೆಜ್ಜೆ ಹಾಕುತ್ತಾ ವೇದಿಕೆಗೆ ಆಗಮಿಸಿದ ಒಂಟಿಕೊಪ್ಪಲು ಸರ್ಕಾರಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು, ಮಲೈ ಮಹದೇಶ್ವರನಿಗೆ ಜೈಕಾರ ಘೋಷಣೆ ಮೊಳಗಿಸಿದರು. 'ಚನ್ನಪ್ಪ ಚನ್ನಗೌಡ ಕುಂಬಾರ ಮಾಡಿದ ಕೊಡನವ್ವೆ' ಹಾಡಿಗೆ ನೃತ್ಯದ ಮೂಲಕ ರಂಗಮಂದಿರದಲ್ಲಿ ಜಾನಪದ ಸೊಗಡನ್ನು ಪಸರಿಸಿದ ಕೃಷ್ಣರಾಜಪೇಟೆ ಬೂಕನಕೆರೆ ಸರ್ಕಾರಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು, ಕಂಸಾಳೆ, ಪೂಜಾ ಕುಣಿತ, ಡೊಳ್ಳು ಕುಣಿತ ಪ್ರದರ್ಶನ ನೀಡಿದರು. ಬಳಿಕ ಯಕ್ಷಗಾನ, ಹುಲಿ ಕುಣಿತ, ಕಂಬಳ, ಭೂತದ ಕೋಲ ಮತ್ತು ಕಂಗೀಲು ನೃತ್ಯ ಪ್ರದರ್ಶನ ನೀಡಿದ ಮೈಸೂರಿನ ಕುಮಾರ ಬೀಡು ದ ಅರ್ಚಿಡ್ಸ್ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು, ತುಳುನಾಡಿನ ಸಾಂಸ್ಕೃತಿಕ ಕಲೆಗಳನ್ನು ಅನಾವರಣಗೊಳಿಸುವ ಮೂಲಕ ಅಪಾರ ಮೆಚ್ಚುಗೆಗೆ ಪಾತ್ರರಾದರು. ಹಾಗೆಯೇ ಸರಸ್ವತಿಪುರಂನ ಜ್ಞಾನೋದಯ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳ ಭರತ ನಾಟ್ಯ, ಯುವ ಸಮೂಹವನ್ನು ನಿಬ್ಬೆರಗಾಗಿಸಿತು.

ಮೊಬೈಲ್ ಅನಾಹುತ: ಓದುವ ವಯಸ್ಸಿನಲ್ಲಿ ಪುಸ್ತಕ ಬಿಟ್ಟು ಮೊಬೈಲ್ ಹಿಡಿದರೆ, ಎದುರಾಗುವ ಅಪಾಯಗಳನ್ನು ಪ್ರಸ್ತುತ ದೈನಂದಿನ ಶೈಲಿಯಲ್ಲಿಯೇ ಅತ್ಯಾಕರ್ಷಕ ನೃತ್ಯ ಸಂಯೋಜನೆ ಮೂಲಕ ಪ್ರಸ್ತುತಪಡಿಸಿದ ಮೈಸೂರು ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ವಿದ್ಯಾರ್ಥಿನಿಯರು ಜಾಗೃತಿ ಮೂಡಿಸಿದರು. ಅತಿಯಾದ ಸಾಮಾಜಿಕ ಜಾಲತಾಣಗಳ ಬಳಕೆ ಕಡೆಗೆ ಸಾವು ತರಬಲ್ಲದು ಎಂಬುದನ್ನು ಅರ್ಥವತ್ತಾಗಿ ತಿಳಿಸಿಕೊಟ್ಟರು. ನಂತರ ತಿಲಕ್‌ನಗರದ ಕಿವುಡ ಮಕ್ಕಳ ಸರ್ಕಾರಿ ಪಾಠಶಾಲೆ ವಿದ್ಯಾರ್ಥಿಗಳು, ಚುರುಕಾದ ನೃತ್ಯಾಭಿನಯದ ಮೂಲಕ ದೇಶಭಕ್ತಿ ಸಾರಿದರು.

ಜಾನಪದ ನೃತ್ಯಕ್ಕೆ ಮಾರುಹೋದ ಯುವಸಮೂಹ



ಮಹಾಜನ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು 'ಮಹಿಷಾಸುರ ಮರ್ದಿನಿ' ನೃತ್ಯ ಪ್ರದರ್ಶನ



ನೃತ್ಯದ ಮೂಲಕ 'ವಿಘ್ನ ನಿವಾರಕ'ನನ್ನು ಸ್ಮರಿಸಿದ ನಂಜನಗೂಡಿನ ಸರ್ಕಾರಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು




'ಸಾಮಾಜಿಕ ಜಾಲತಾಣ'ಗಳ ಕುರಿತು ಮೈಸೂರು ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು(ಸ್ವಾಯತ್ತ) ವಿದ್ಯಾರ್ಥಿನಿಯರ ನೃತ್ಯ ರೂಪಕ

ಯುವ ಸಮೂಹವನ್ನು ರಂಜಿಸಿದ ನಟ ಶರಣ್...



'ಯುವ ಸಂಭ್ರಮ'ಕ್ಕೆ ಬೆಳ್ಳಿ ತೆರೆಯ ಮೆರಗು ನೀಡಿದ ಚಲನಚಿತ್ರ ನಟ ಶರಣ್, ನಟಿ ನಿಶ್ವಿಕಾ ನಾಯ್ಡು ಹೆಜ್ಜೆ ಹಾಕಿ ಅಭಿಮಾನಿಗಳನ್ನು ರಂಜಿಸಿದರು. ಬಿಡುಗಡೆಗೆ ಸಿದ್ಧವಾಗಿರುವ ತಮ್ಮ 'ಗುರು ಶಿಷ್ಯರು' ಚಿತ್ರದ ಹಾಡು ಹಾಡಿ, ನೃತ್ಯದ ಮೂಲಕ ಯುವ ಸಮೂಹದ ಮನ ಗೆದ್ದರು. ಇದೇ ವೇಳೆ ಚಿತ್ರದ ಟೀಸರ್ ಪ್ರದರ್ಶಿಸಲಾಯಿತು. ನಂತರ ಮಾತನಾಡಿದ ನಟ ಶರಣ್, ಮೈಸೂರು ಎಂದರೆ ನಮ್ಮ ಹೆಮ್ಮೆ, ಮೈಸೂರು ದಸರಾ ಎಂದರೆ ನಮ್ಮ ಗರ್ವ. ಮೈಸೂರು ದಸರಾ ಮೈಸೂರಿಗಷ್ಟೇ ಅಲ್ಲ ಇಡೀ ನಾಡಿಗೆ ಹಬ್ಬವಾಗಿದೆ ಎಂದರು.

'ಯುವ ಸಂಭ್ರಮ'ಕ್ಕೆ ಬಂದಿರುವ ಯುವ ಸಮೂಹಕ್ಕೆ ಕಿವಿ ಮಾತು ಹೇಳಿದ ಶರಣ್, ಕಾಲೇಜು ದಿನಗಳು ಎಂದಿಗೂ ಮರೆಯಲಾಗದ ಗೋಲ್ಡನ್ ಡೇಸ್ ಆದರೆ ಸಂಭ್ರಮದ ಜೊತೆಗೆ ಸಾಧನೆಯತ್ತಲೂ ಗಮನಹರಿಸುವುದು ಮುಖ್ಯ. ಗುರುವಿಗೆ ಗುಲಾಮನಾದರೆ ಸಾಧನೆ ಸಾಧ್ಯ ಎಂದರು. ಡಾ.ಪುನೀತ್ ರಾಜ್‌ಕುಮಾರ್ ಕುರಿತು ಮಾತನಾಡಿ, 'ಅಪ್ಪು' ಅವರ ಸಾಂಗತ್ಯ ದೊರೆತದ್ದೆ ನನ್ನ ಭಾಗ್ಯ. ಎಂದಿಗೂ ಮರೆಯಲಾಗದ ವ್ಯಕ್ತಿತ್ವ ಅವರದು ಎಂದು ಸ್ಮರಿಸಿದರು.



ಮೈಸೂರು ಅರಮನೆಗೆ 5 ದಿನಗಳಲ್ಲಿ ನಿರ್ಬಂಧ

ದಸರಾ ಮಹೋತ್ಸವದ ಪ್ರಯುಕ್ತ ಮೈಸೂರು ರಾಜಮನೆತನದವರು ಅರಮನೆಯಲ್ಲಿ 'ಧಾರ್ಮಿಕ ಪೂಜಾ ಕೈಂಕರ್ಯ' ನೆರವೇರಿಸುವ ದಿನಗಳಲ್ಲಿ ಕೆಲ ಗಂಟೆಗಳ ಕಾಲ ಸಾರ್ವಜನಿಕರು ಹಾಗೂ ಪ್ರವಾಸಿಗರಿಗೆ ಅರಮನೆ ಪ್ರವೇಶ ನಿರ್ಬಂಧಿಸಲಾಗಿದೆ ಎಂದು ಅರಮನೆ ಮಂಡಳಿ ಪ್ರಕಟಣೆ ತಿಳಿಸಿದೆ.



ದಿನಾಂಕ	ಸಮಯ	ಧಾರ್ಮಿಕ ಕಾರ್ಯ
ಸೆ.20	ಬೆ.10– ಮ.1	ಸಿಂಹಾಸನ ಜೋಡಣೆ
ಸೆ.26	ಬೆ.10– ಮ.1.30	ಖಾಸಗಿ ದರ್ಬಾರ್–ಪೂಜೆ
ಅ.4	ಬೆ.10– ಮ.2	ಆಯುಧ ಪೂಜೆ
ಅ.5	ಸಂಪೂರ್ಣ ದಿನ	ವಿಜಯ ದಶಮಿ
ಅ.20	ಬೆ.10– ಮ.1	ಸಿಂಹಾಸನ ವಿಸರ್ಜನೆ

ಬೆಳಕಿನಲ್ಲಿ ಮೂಡಿದ 'ಸ್ಫೂರ್ತಿ ರತ್ನ'....

ಮೈಸೂರು ದಸರಾ ದೀಪಾಲಂಕಾರ ಸಿದ್ದತೆ ಜೋರಾಗಿ ಸಾಗಿದ್ದು, ಖ್ಯಾತ ನಟ ಡಾ.ಪುನೀತ್ ರಾಜ್‌ಕುಮಾರ್ ಅವರ 'ಸ್ಫೂರ್ತಿ ರತ್ನ' ದೀಪಾಲಂಕಾರ ನೋಡುಗರ ಕಣ್ಮನ ಸೆಳೆಯುತ್ತಿದೆ. ಮೈಸೂರು ವಿವಿ ಮಾನಸ ಗಂಗೋತ್ರಿಯ ಮೌಲ್ಯ ಮಾಪನ ವಿಭಾಗದ ಸಮೀಪದಲ್ಲಿರುವ ತಿಪ್ಪೆಸ್ವಾಮಿ ವೃತ್ತದಲ್ಲಿ ಪುನೀತ್ ರಾಜ್‌ಕುಮಾರ್ ಅವರ ದೀಪಾಲಂಕಾರದ ಚಿತ್ರಣ ಆಕರ್ಷಕವಾಗಿದೆ. ಕರ್ನಾಟಕ ಭೂಪಟದೊಳಗೆ ಪುನೀತ್ ರಾಜ್‌ಕುಮಾರ್ ಹಾಗೂ ಅವರ ಹೆಗಲ ಮೇಲೆ ಪಾರಿವಾಳ ಕುಳಿತಿರುವ ಮಾದರಿಯಲ್ಲಿ ದೀಪಾಲಂಕಾರ ಮಾಡಲಾಗಿದ್ದು, 'ಸ್ಫೂರ್ತಿ ರತ್ನ', 'ಕರ್ನಾಟಕದ ಯುವ ರತ್ನ' ಎಂದು ಅಲಂಕರಿಸಲಾಗಿದೆ.



ಸೆ.30ರಿಂದ 3 ದಿನ ರೈತ ದಸರಾ

ರೈತರಿಗೆ ಕ್ರೀಡಾಕೂಟ, ಹಾಲು ಕರೆಯುವ ಸ್ಪರ್ಧೆ, ಶ್ವಾನವೂ ಸೇರಿದಂತೆ ಮುದ್ದುಪ್ರಾಣಿಗಳ ಪ್ರದರ್ಶನ



ನಾರಾಯಣಗೌಡ

ಮೈಸೂರು, ಸೆ.19(ಆರ್‌ಕೆಬಿ)– ಮೈಸೂರು ದಸರಾ ಮಹೋತ್ಸವದ ಸಂದರ್ಭದಲ್ಲಿ ಮೂರು ದಿನಗಳ ರೈತ ದಸರಾ ಸೆ.30ರಂದು ಆರಂಭವಾಗಲಿದ್ದು, ರೈತ ದಸರಾ ಕ್ರೀಡಾಕೂಟ, ಗ್ರಾಮೀಣ ಕ್ರೀಡಾಕೂಟ, ರಾಜ್ಯ ಮಟ್ಟದ ಹಾಲು ಕರೆಯುವ ಸ್ಪರ್ಧೆ, ಶ್ವಾನ ಮತ್ತು ಮುದ್ದು ಪ್ರಾಣಿಗಳ ಪ್ರದರ್ಶನ ಮತ್ತು ಸ್ಪರ್ಧೆ ಆಯೋಜಿಸಲಾಗಿದೆ ಎಂದು ರೈತ ದಸರಾ ಉಪ ಸಮಿತಿಯ ಉಪ ವಿಶೇಷಾಧಿಕಾರಿಯೂ ಆದ ಜಿಪಂ ಉಪಕಾರ್ಯದರ್ಶಿ ಡಾ.ಕೃಷ್ಣರಾಜು ತಿಳಿಸಿದರು.

ಮೈಸೂರು ಜಿಪಂ ಡಿ.ದೇವರಾಜ ಅರಸು ಸಭಾಂಗಣದಲ್ಲಿ ಈ ಕುರಿತ ಕಾರ್ಯಕ್ರಮದ ವಿವರಗಳನ್ನು ಪ್ರಕಟಿಸಿದ ಅವರು, 30ರಂದು ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಜೆ.ಕೆ.ಮೈದಾನದವರೆಗೆ ವಿವಿಧ ಜಾನಪದ ಕಲಾ ತಂಡಗಳ ಸಹಿತ ಎತ್ತಿನ ಬಂಡಿಗಳ ಮೆರವಣಿಗೆ, ಜೆ.ಕೆ.ಮೈದಾನದಲ್ಲಿ ಕೃಷಿ ವಸ್ತು ಪ್ರದರ್ಶನ, ರೈತರೊಂದಿಗೆ ವಿಚಾರ ವಿನಿಮಯ ನಡೆಯಲಿದೆ.

ಅ.1ರಂದು ಪುರುಷರಿಗೆ ವರುಣಾದಲ್ಲಿ ಕೆಸರು ಗದ್ದೆ ಓಟ, ಜೆ.ಕೆ.ಮೈದಾನದಲ್ಲಿ ಗೋಣಿ ಚೀಲದ ಒಳಗೆ ಕಾಲಿಟ್ಟು ಓಡುವುದು, ಗೊಬ್ಬರದ ಮೂಟೆ ಹೊತ್ತು ಓಡುವುದು, ಮೂರು ಕಾಲಿನ ಓಟ ಸ್ಪರ್ಧೆ ಹಾಗೂ ಮಹಿಳೆಯರಿಗೆ ವರುಣಾದಲ್ಲಿ ಕೆಸರುಗದ್ದೆ ಓಟ, ಜೆ.ಕೆ.ಮೈದಾನದಲ್ಲಿ ಗೋಣಿ ಚೀಲದ ಒಳಗೆ ಕಾಲಿಟ್ಟು ಓಡುವುದು, ನೀರಿನ ಬಿಂದಿಗೆ ಹೊತ್ತು ಓಡುವ ಸ್ಪರ್ಧೆ, ಒಂಟಿ ಕಾಲಿನ ಓಟ ಸ್ಪರ್ಧೆಗಳು ಮತ್ತು ಜೆ.ಕೆ.ಮೈದಾನದಲ್ಲಿ ರಾಜ್ಯ ಮಟ್ಟದ ಹಾಲು ಕರೆಯುವ ಸ್ಪರ್ಧೆಗಳು ನಡೆಯಲಿವೆ.

ಅ.2ರಂದು ಮಹಾರಾಜ ಕಾಲೇಜು ಹಾಕಿ ಮೈದಾನದಲ್ಲಿ ಶ್ವಾನ ಮತ್ತು ಮುದ್ದುಪ್ರಾಣಿಗಳ ಪ್ರದರ್ಶನ ಏರ್ಪಡಿಸಿದೆ. ಎಲ್ಲಾ ಸ್ಪರ್ಧೆಗಳಿಗೂ ಬಹುಮಾನಗಳಿರುತ್ತವೆ ಎಂದು ಹೇಳಿದರು.

ಸೆ.30ರಂದು ಬೆಳಗ್ಗೆ 9.30ಕ್ಕೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಕೃಷಿ ಸಚಿವ ಬಿ.ಸಿ.ಪಾಟೀಲ್ ರೈತ ದಸರಾ ಎತ್ತಿನ ಬಂಡಿಗಳ ಮೆರವಣಿಗೆಗೆ ಚಾಲನೆ ನೀಡಲಿದ್ದಾರೆ. ಬೆಳಗ್ಗೆ 10.30ಕ್ಕೆ ಜೆ.ಕೆ.ಮೈದಾನದಲ್ಲಿ ಕೃಷಿ ವಸ್ತು ಪ್ರದರ್ಶನವನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಉದ್ಘಾಟಿಸಲಿದ್ದಾರೆ. ಕೃಷಿ ವಸ್ತು ಪ್ರದರ್ಶನದಲ್ಲಿ ಕೃಷಿ ಹಾಗೂ ಪಶುಪಾಲನಾ ಇಲಾಖೆ ಸೇರಿದಂತೆ 45 ಮಳಿಗೆಗಳು ಹಾಗೂ ಮತ್ಸ್ಯ ಮೇಳದಲ್ಲಿ ನಾನಾ ಜಾತಿಯ ಅಲಂಕಾರಿಕ ಮೀನುಗಳ ಪ್ರದರ್ಶನ ಇರುತ್ತದೆ ಎಂದರು.


ರೈತರಿಗೆ ಸನ್ಮಾನ: ಜಿಲ್ಲೆಯ ಎಲ್ಲಾ ತಾಲೂಕುಗಳ 7 ಇಲಾಖೆಗಳಿಂದ ಐದು ಮಂದಿ ಪ್ರಗತಿಪರ ರೈತರಿಗೆ ಸನ್ಮಾನ, ಇದೇ ವೇಳೆ ಈ ಸಾಲಿನ ಕೃಷಿ ಪಂಡಿತ ಪ್ರಶಸ್ತಿ ವಿಜೇತರು ಸೇರಿದಂತೆ ನಾಲ್ಕು ಮಂದಿ ಹಾಗೂ ವಿಜ್ಞಾನಿಗಳು, ರೈತರಿಗೆ ಸನ್ಮಾನಿಸಲಾಗುವುದು ಎಂದು ತಿಳಿಸಿದರು.

ಬೆಳಗ್ಗೆ 11ಕ್ಕೆ ಎಂಎಂಸಿ ಅಲುಮ್ನಿ ಅಸೋಸಿಯೇಷನ್ ಸಭಾಂಗಣದಲ್ಲಿ ರೈತರು, ಮಹಿಳೆಯರು, ವಿಜ್ಞಾನಿಗಳು, ಯುವ ರೈತರು ಮತ್ತು ಅತ್ಯುತ್ತಮ ವಿಸ್ತರಣಾ ಕಾರ್ಯಕರ್ತರಿಗೆ ಸನ್ಮಾನ ಕಾರ್ಯಕ್ರಮವನ್ನು ಕೃಷಿ ಸಚಿವ ಬಿ.ಸಿ.ಪಾಟೀಲ್ ಉದ್ಘಾಟಿಸುವರು. ನಂತರ ಸಮಗ್ರ ಕೃಷಿ ಪದ್ಧತಿಯಿಂದ ಸ್ವಾವಲಂಬಿ ಕೃಷಿ ಹಾಗೂ ಕೃಷಿಯಲ್ಲಿ ಖುಷಿ ಕಂಡ 3 ರೈತ ದಂಪತಿ ತಮ್ಮ ಕೃಷಿ ಅನುಭವ ಹಂಚಿಕೊಳ್ಳಲಿದ್ದಾರೆ ಎಂದು ತಿಳಿಸಿದರು.

ಅ.1ರಂದು ಬೆಳಗ್ಗೆ 9 ಗಂಟೆಗೆ ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಕೆ.ಸಿ.ನಾರಾಯಣ ಗೌಡ ರೈತ ದಸರಾ ಕ್ರೀಡಾಕೂಟ, ಗ್ರಾಮೀಣ ಕ್ರೀಡಾ ಕೂಟಕ್ಕೆ ಚಾಲನೆ ನೀಡುವರು ಎಂದರು.



ರೈತ ದಸರಾ ಉಪವಿಶೇಷಾಧಿಕಾರಿಯೂ ಆಗಿರುವ ಜಿಪಂ ಉಪ ಕಾರ್ಯದರ್ಶಿ ಡಾ.ಕೃಷ್ಣರಾಜು (ಮೂರನೇಯವರು) ರೈತ ದಸರಾ ಕಾರ್ಯಕ್ರಮ ಪೋಸ್ಟರ್ ಬಿಡುಗಡೆ ಮಾಡಿದರು. ಚಿತ್ರದಲ್ಲಿ ಎಡದಿಂದ ಬಲಕ್ಕೆ ಮೈಸೂರು ಉಪ ಕೃಷಿ ನಿರ್ದೇಶಕ ಕೆ.ರಾಜು, ಪಶು ಸಂಗೋಪನಾ ಇಲಾಖೆ ಉಪನಿರ್ದೇಶಕ ಡಾ.ಷಡಕ್ಷರಿ, ರೈತದಸರಾ ಕಾರ್ಯಾಧ್ಯಕ್ಷರಾದ ಜಂಟಿ ಕೃಷಿ ನಿರ್ದೇಶಕ ಡಾ.ಬಿ.ಎಸ್.ಚಂದ್ರಶೇಖರ್, ಹುಣಸೂರು ಉಪಕೃಷಿ ನಿರ್ದೇಶಕ ಧನಂಜಯ ಅವರನ್ನು ಕಾಣಬಹುದು.



ಅ.1ರಂದು ರಾಜ್ಯ ಮಟ್ಟದ ಹಾಲು ಕರೆಯುವ ಸ್ಪರ್ಧೆ



ವಿ.ಚವ್ಹಾಣ್

ದಸರಾದ ಪ್ರಮುಖ ಸ್ಪರ್ಧೆಗಳಲ್ಲಿ ಒಂದಾದ ರಾಜ್ಯ ಮಟ್ಟದ ಹಾಲು ಕರೆಯುವ ಸ್ಪರ್ಧೆಗೆ ಅ.1ರಂದು ಬೆಳಗ್ಗೆ 11 ಗಂಟೆಗೆ ಪಶು ಸಂಗೋಪನಾ ಸಚಿವ ಪ್ರಭು ವಿ.ಚವ್ಹಾಣ್ ಚಾಲನೆ ನೀಡಲಿದ್ದಾರೆ. ಅಂದು ಹಾಲು ಕರೆಯುವ ಸ್ಪರ್ಧೆಯ ವಿಜೇತರಿಗೆ ಕ್ರಮವಾಗಿ 50, 40, 30 ಮತ್ತು 20 ಸಾವಿರ ರೂ. ಬಹುಮಾನ ಹಾಗೂ ಟ್ರೋಫಿ ನೀಡಲಾಗುವುದು.. ಸ್ಪರ್ಧೆಯಲ್ಲಿ ರಾಜ್ಯದ ವಿವಿಧೆಡೆಯಿಂದ ಹಸುಗಳು ಭಾಗವಹಿಸಲಿವೆ. ಈ ಸ್ಪರ್ಧೆಗೆ ಹೆಸರು ನೋಂದಾಯಿಸುವವರು ಸೆ.29ರ ಸಂಜೆಯೊಳಗೆ ಮುಖ್ಯ ಪಶುವೈದ್ಯಾಧಿಕಾರಿ ಡಾ.ಗೋಪಿನಾಥ್, ಮೊ.9448350216 ಸಂಪರ್ಕಿಸಬಹುದು ಎಂದು ತಿಳಿಸಿದರು.

ಅ.2ರಂದು ಶ್ವಾನ, ಮುದ್ದು ಪ್ರಾಣಿಗಳ ಪ್ರದರ್ಶನ: ಅ.2ರಂದು ಮೈಸೂರಿನ ಮಹಾರಾಜ ಕಾಲೇಜು ಹಾಕಿ ಮೈದಾನದಲ್ಲಿ ನಡೆಯಲಿರುವ ಶ್ವಾನ ಮತ್ತು ಮುದ್ದು ಪ್ರಾಣಿಗಳ ಪ್ರದರ್ಶನದಲ್ಲಿ ಭಾಗವಹಿಸುವ ಶ್ವಾನ ಮತ್ತು ಮುದ್ದು ಪ್ರಾಣಿಗಳ ಮಾಲೀಕರು ಸೆ.30ರ ಸಂಜೆ 4 ಗಂಟೆಯೊಳಗೆ ತಮ್ಮ ಹತ್ತಿರದ ಪಶು ಆಸ್ಪತ್ರೆ ಅಥವಾ ಕ್ಲಿನಿಕ್‌ಗಳಲ್ಲಿ ನೋಂದಾಯಿಸಿಕೊಳ್ಳಬಹುದು. ಸ್ಥಳದಲ್ಲಿ ನೋಂದಣಿ ಮಾಡಿಕೊಳ್ಳುವ ಸೌಲಭ್ಯ ಇರುವುದಿಲ್ಲ. ಸಾಕು ಪ್ರಾಣಿಗಳ ಮಾಲೀಕರು ಸ್ಪರ್ಧೆಯ ದಿನ ಶ್ವಾನ ಮತ್ತು ಮುದ್ದುಪ್ರಾಣಿಗಳಿಗೆ ನೀರು, ಆಹಾರದ ಪಾತ್ರೆಗಳನ್ನು ಜೊತೆಗೆ ತರಬೇಕು. ಬೇರೆ ಸ್ಪರ್ಧಿಗಳಿಗೆ ಮತ್ತು ಸಾರ್ವಜನಿಕರಿಗೆ ತೊಂದರೆಯಾಗದ ರೀತಿಯಲ್ಲಿ ತಮ್ಮ ಮುದ್ದು ಪ್ರಾಣಿಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವುದು ಮುಖ್ಯ ಎಂದು ತಿಳಿಸಿದರು.

ಮುದ್ದು ಪ್ರಾಣಿಗಳ ಸ್ಪರ್ಧೆಯಲ್ಲಿ ಎಲ್ಲಾ ಜಾತಿಯ ಶ್ವಾನಗಳು, ಪಕ್ಷಿಗಳು, ಗಣಪತಿ ಸಚ್ಚಿದಾನಂದ ಆಶ್ರಮದ ಪಕ್ಷಿಗಳು, ವಿವಿಧ ರೀತಿಯ ಮೀನುಗಳು ಇರುತ್ತವೆ. ಶ್ವಾನ ಪ್ರದರ್ಶನದಲ್ಲಿ ಎಲ್ಲಾ ಜಾತಿಯ ಶ್ವಾನಗಳಿಗೂ ಪ್ರತ್ಯೇಕವಾಗಿ ಮೊದಲ ಎರಡು ಬಹುಮಾನಗಳಿರುತ್ತವೆ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ರೈತದಸರಾ ಸಮಿತಿಯ ಕಾರ್ಯಾಧ್ಯಕ್ಷ ಡಾ.ಬಿ.ಎಸ್.ಚಂದ್ರಶೇಖರ್, ಪಶುಸಂಗೋಪನಾ ಇಲಾಖೆಯ ಉಪ ನಿರ್ದೇಶಕ ಡಾ.ಷಡಕ್ಷರಿ, ಮೈಸೂರು ಉಪಕೃಷಿ ನಿರ್ದೇಶಕ ಕೆ.ರಾಜು, ಹುಣಸೂರು ಉಪಕೃಷಿ ನಿರ್ದೇಶಕ ಧನಂಜಯ, ಮೈಸೂರು ಗೋಪಾಲಕರ ಸಂಘದ ಮುಖಂಡರೂ ಆಗಿರುವ ಮಾಜಿ ಮೇಯರ್ ಡಿ.ನಾಗಭೂಷಣ್, ದಿನೇಶ್, ಮಹದೇವ್ ಇನ್ನಿತರರು ಉಪಸ್ಥಿತರಿದ್ದರು.




"ಸ್ಪರ್ಧೆಗೆ ಬೆಂಗಳೂರು, ಕೋಲಾರ, ಚಿಂತಾಮಣಿ, ಮೈಸೂರು ಸೇರಿದಂತೆ ನಾನಾ ಕಡೆಗಳಿಂದ ಗೋಪಾಲಕರು ಭಾಗವಹಿಸುತ್ತಿದ್ದು, ಹಸುಗಳಿಗೆ ಯಾವುದೇ ತೊಂದರೆ ಆಗದ ರೀತಿಯಲ್ಲಿ ಶೆಡ್, ಕುಡಿಯುವ ನೀರು, ಹಸಿ ಮತ್ತು ಒಣಹುಲ್ಲು ವ್ಯವಸ್ಥೆ ಮಾಡಬೇಕು. ಗೋಪಾಲಕರಿಗೆ ಟೀ ಶರ್ಟ್, ಕ್ಯಾಪ್ ಹಾಗೂ ಹಸುಗಳ ಆರೋಗ್ಯದ ಹಿತದೃಷ್ಟಿಯಿಂದ ಉತ್ತಮ ವೈದ್ಯರು ಸ್ಥಳದಲ್ಲಿರುವಂತೆ ವ್ಯವಸ್ಥೆ ಮಾಡಬೇಕು.

– ಡಿ.ನಾಗಭೂಷಣ್, ಅಧ್ಯಕ್ಷ, ಗೋಪಾಲಕರ ಸಂಘ.

ಬೂದನೂರಲ್ಲಿ ಒಂಟಿ ಸಲಗ ದಾಂಧಲೆ; ಮನೆಗಳು ಧ್ವಂಸ: ಇಬ್ಬರು ಸ್ವಲ್ಪದರಲ್ಲಿ ಪಾರು



ರೊಚ್ಚಿಗೆದ್ದ ಗ್ರಾಮಸ್ಥರಿಂದ ಅರಣ್ಯ ಇಲಾಖೆ ಸಿಬ್ಬಂದಿ ಜೊತೆ ಮಾತಿನ ಚಕಮಕಿ; ಬಂದೂಕು ಜಖಂ



ಹೆಚ್.ಡಿ.ಕೋಟೆ, ಸೆ.19– ಆಹಾರ ಹುಡುಕುತ್ತಾ ಕಾಡಿನಿಂದ ಗ್ರಾಮಕ್ಕೆ ನುಗ್ಗಿದ ಒಂಟಿ ಸಲಗ ಗ್ರಾಮಸ್ಥರಲ್ಲಿ ಆತಂಕ ಉಂಟು ಮಾಡಿದ ಪ್ರಸಂಗ ಸೋಮವಾರ ಬೆಳಗ್ಗೆ ತಾಲೂಕಿನ ಬೂದನೂರು ಗ್ರಾಮದಲ್ಲಿ ನಡೆದಿದೆ.

ನಾಗರಹೊಳೆ ಅಭಯಾರಣ್ಯದಿಂದ ಆಹಾರ ಅರಸಿ ಬಂದ ಒಂಟಿ ಸಲಗ ಬೂದನೂರು ಗ್ರಾಮಕ್ಕೆ ನುಗ್ಗಿತ್ತು. ಆನೆ ಕಂಡು ಗ್ರಾಮಸ್ಥರು ಗಾಬರಿಯಿಂದ ಕಲ್ಲು ತೂರಿ ಓಡಿಸಲು ಪ್ರಯತ್ನಿಸಿದರು. ಇದರಿಂದ ರೊಚ್ಚಿಗೆದ್ದ ಸಲಗ ಗ್ರಾಮದ ಬೀದಿಗಳಲ್ಲಿ ದಾಂಧಲೆ ನಡೆಸಿ ಜನತೆಯಲ್ಲಿ ಭೀತಿ ಮೂಡಿಸಿತು. ಅಲ್ಲದೇ ಈ ವೇಳೆ ಸಲಗ 3 ಮನೆಗಳನ್ನು ಧ್ವಂಸಗೊಳಿಸಿ, ಎತ್ತಿನಗಾಡಿ ಪುಡಿಗಟ್ಟಿದ್ದು, ರೈತರು ತಮ್ಮ ಜಮೀನಿನಲ್ಲಿ ಬೆಳೆದಿದ್ದ ರಾಗಿ, ಜೋಳ, ಹತ್ತಿ ಸೇರಿದಂತೆ ಇನ್ನಿತರ ಬೆಳೆಗಳನ್ನು ನಾಶಗೊಳಿಸಿದೆ.

ಗ್ರಾಮದ ಬೀದಿ ಬೀದಿಗಳಲ್ಲಿ ಘೀಳಿಡುತ್ತಾ ಓಡಾಡುತ್ತಿದ್ದ ಒಂಟಿ ಸಲಗದ ಎದುರಿಗೆ ಬಂದ ಮಹಿಳೆಯೊಬ್ಬರು ಕ್ಷಣ ಮಾತ್ರದಲ್ಲಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಅಲ್ಲದೇ ತನ್ನ ಮನೆ ಧ್ವಂಸ ಮಾಡಲು ಮುಂದಾದ ಆನೆ ಓಡಿಸಲು ಹೋದ ವ್ಯಕ್ತಿಯೂ ಸ್ವಲ್ಪದರಲ್ಲಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಈ ವೇಳೆ ಗಾಬರಿಗೊಂಡ ಗ್ರಾಮಸ್ಥರು, ಒಂಟಿ ಸಲಗ ದಾಂಧಲೆ ನಡೆಸುತ್ತಿರುವ ವಿಚಾರವನ್ನು ಅರಣ್ಯ ಇಲಾಖೆ ಅಧಿಕಾರಿಗಳಿಗೆ ತಿಳಿಸಿದ್ದಾರೆ. ಸ್ಥಳಕ್ಕಾಗಮಿಸಿದ ವೀರನಹೊಸಳ್ಳಿ ಎಸಿಎಫ್ ದಯಾನಂದ್, ಆರ್‌ಎಫ್‌ಓ ನಮನ ನಾಯಕ ಹಾಗೂ ಅರಣ್ಯ ಸಿಬ್ಬಂದಿ, ಗ್ರಾಮಸ್ಥರು ಗ್ರಾಮದಲ್ಲಿ ಅಡ್ಡಾಡುತ್ತಿದ್ದ ಸಲಗವನ್ನು ಪಟಾಕಿ ಸಿಡಿಸಿ, ಕಾಡಿಗೆ ಓಡಿಸಿದ್ದಾರೆ.

ಗ್ರಾಮಸ್ಥರ ಆಕ್ರೋಶ: ಇಂದು ಮುಂಜಾನೆಯಿಂದ ಗ್ರಾಮದಲ್ಲಿ ಒಂಟಿ ಸಲಗ ದಾಂಧಲೆ ನಡೆಸುತ್ತಿದ್ದರೂ, ತಡವಾಗಿ ಬಂದ ಅರಣ್ಯ ಇಲಾಖೆ ಅಧಿಕಾರಿಗಳೊಂದಿಗೆ ಗ್ರಾಮಸ್ಥರು ಮಾತಿನ ಚಕಮಕಿ ನಡೆಸಿದರು. ಅಲ್ಲದೇ ಆಕ್ರೋಶ ವ್ಯಕ್ತಪಡಿಸಿ, ಅವರ ಬಳಿ ಇದ್ದ ಬಂದೂಕು ಜಖಂಗೊಳಿಸಿದ್ದಾರೆ.

> ಈ ಭಾಗದಲ್ಲಿ ಆನೆಗಳನ್ನು ಓಡಿಸಲು ಸಿಬ್ಬಂದಿ ನೇಮಕ ಮಾಡಲಾಗಿದೆ. ನಮ್ಮ ಸಿಬ್ಬಂದಿ ಆನೆ ಓಡಿಸಲು ಸತತ ಪ್ರಯತ್ನಪಟ್ಟಿದ್ದಾರೆ. ಆದರೂ ಆನೆ ಬೂದನೂರು ಗ್ರಾಮಕ್ಕೆ ನುಗ್ಗಿ ದಾಂಧಲೆ ನಡೆಸಿದ್ದು, ಯಾವುದೇ ಪ್ರಾಣಾಪಾಯವಾಗದ ರೀತಿ ಆನೆಯನ್ನು ಕಾಡಿಗೆ ಅಟ್ಟಿದ್ದೇವೆ. ಆನೆಯಿಂದ ಮೂರು ಮನೆಗಳಿಗೆ ಹಾನಿಯಾಗಿದ್ದು, ಪರಿಹಾರ ನೀಡಲು ಕ್ರಮ ಕೈಗೊಳ್ಳಲಾಗುವುದು.
>
> –ನಮನ ನಾಯಕ್, ಆರ್‌ಎಫ್‌ಓ ವೀರನಹೊಸಳ್ಳಿ

> ಇಲ್ಲಿನ ಚಕ್ಕೋಡನಹಳ್ಳಿ ಗ್ರಾಪಂ ವ್ಯಾಪ್ತಿಯ ಕಾಡಂಚಿನ ಗ್ರಾಮಗಳಲ್ಲಿ ರೈತರು ವ್ಯವಸಾಯವನ್ನೇ ನಂಬಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಆಗಾಗ್ಗೆ ಆನೆಗಳು ಗ್ರಾಮಕ್ಕೆ ಬರುತ್ತಿದ್ದು, ಆನೆ ಹಾವಳಿ ತಪ್ಪಿಸಲು ರೈಲ್ವೆ ಕಂಬಿ ಬ್ಯಾರಿಕೇಡ್ ಅಳವಡಿಸುವಂತೆ ಅರಣ್ಯ ಇಲಾಖೆಗೆ ಹಲವು ಬಾರಿ ಮನವಿ ಮಾಡಲಾಗಿದೆ. ಅಲ್ಲದೇ ಗ್ರಾಮದಲ್ಲಿ ನಡೆದ ಜಿಲ್ಲಾಧಿಕಾರಿಗಳ ನಡೆ ಹಳ್ಳಿ ಕಡೆ ಕಾರ್ಯಕ್ರಮದಲ್ಲೂ ಈ ಬಗ್ಗೆ ಮನವಿ ಸಲ್ಲಿಸಲಾಗಿತ್ತು. ಆದರೂ ಯಾವುದೇ ಪ್ರಯೋಜನವಾಗಿಲ್ಲ ಅರಣ್ಯ ಇಲಾಖೆ ಅಧಿಕಾರಿಗಳು ನಮ್ಮ ಮನವಿಗೆ ಸ್ಪಂದಿಸುತ್ತಿಲ್ಲ.
>
> – ಬಸವರಾಜಪ್ಪ, ಬೂದನೂರು ಗ್ರಾಮದ ಮುಖಂಡ.

ಗುಣಮಟ್ಟದ ಹಾಲು ಪೂರೈಸಲು ಮನವಿ



ನಂಜನಗೂಡು, ಸೆ.19– ಹಾಲು ಉತ್ಪಾದಕರು ಗುಣಮಟ್ಟದ ಹಾಲು ಪೂರೈಕೆ ಮಾಡುವ ಮೂಲಕ ಸಂಘ ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಸಹಕರಿಸಬೇಕು ಎಂದು ಜಿಪಂ ಮಾಜಿ ಸದಸ್ಯ ಚಿಕ್ಕರಂಗನಾಯಕ ಮನವಿ ಮಾಡಿದರು.

ತಾಲೂಕಿನ ಹರತಲೆ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ 2021–22ನೇ ಸಾಲಿನ ಸರ್ವ ಸದಸ್ಯರ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ಬಹುತೇಕ ಗ್ರಾಮೀಣ ರೈತರು ಹೈನುಗಾರಿಕೆಯನ್ನೇ ಅವಲಂಬಿಸಿ ಜೀವನ ನಡೆಸುತ್ತಿದ್ದಾರೆ. ಕೆಲ ರೈತರು ದೊಡ್ಡ ಮಟ್ಟದಲ್ಲಿ ಹೈನೋದ್ಯಮ ನಡೆಸುವ ಮೂಲಕ ಆರ್ಥಿಕವಾಗಿ ಸಬಲರಾಗಿದ್ದಾರೆ. ಇಲ್ಲಿ ಸರಪಳಿ ರೀತಿ ವಹಿವಾಟು ನಡೆಯುವುದರಿಂದ ಗುಣಮಟ್ಟವೇ ಈ ಉದ್ಯಮದ ಆಧಾರ ಸ್ತಂಭ ಎಂದರು. ಈ ವೇಳೆ ಸಂಘದ ಅಧ್ಯಕ್ಷ ಹೆಚ್.ಸಿ. ಕೆಂಪಣ್ಣ, ಮಾದನಾಯಕ, ಎಸ್.ಪುಟ್ಟಸ್ವಾಮಿ, ಲಕ್ಷ್ಮಣೇಗೌಡ, ಹೆಚ್.ಎಂ.ಪ್ರಕಾಶ್, ದೊಡ್ಡಯ್ಯ, ಭಾಗ್ಯ, ಯಶೋಧ, ಮಹಾದೇವ ನಾಯಕ, ಕೆಂಪಶೆಟ್ಟಿ, ಧರ್ಮ, ಹೆಚ್.ಜಿ. ಗೋವಿಂದರಾಜು, ಗ್ರಾಪಂ ಅಧ್ಯಕ್ಷೆ ರತ್ನಮ್ಮ, ಸದಸ್ಯ ಕಾಂತರಾಜು, ನಾಗರಾಜ್, ಹಾಲು ಪರೀಕ್ಷಕ ನಂಜನಾಯಕ ಸೇರಿದಂತೆ ಸದಸ್ಯರಿದ್ದರು.

ಷೇರುದಾರರು, ಸಿಬ್ಬಂದಿ ಸಹಕಾರದಿಂದ ಸಂಘಗಳ ಅಭಿವೃದ್ಧಿ



ತಿ.ನರಸೀಪುರ, ಸೆ.19– ಷೇರುದಾರರು ಹಾಗೂ ಸಿಬ್ಬಂದಿ ವರ್ಗದವರ ಸಹಕಾರದಿಂದ ಸಹಕಾರ ಸಂಘಗಳ ಅಭಿವೃದ್ಧಿ ಸಾಧ್ಯ ಎಂದು ಮೈಮುಲ್ ವಿಸ್ತರಣಾಧಿಕಾರಿ ಆರ್.ಪ್ರಮೋದ್ ತಿಳಿಸಿದರು.

ತಾಲೂಕಿನ ಕೋಣಗಹಳ್ಳಿಯಲ್ಲಿ ನಡೆದ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ 2021–22ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ಯಾವುದೇ ಒಂದು ಸಹಕಾರ ಸಂಘದ ಅಭಿವೃದ್ಧಿಗೆ ಸದಸ್ಯರು, ಆಡಳಿತ ಮಂಡಳಿ ಸಹಕಾರ ಬಹುಮುಖ್ಯ. ಅಧಿಕಾರಿ ವರ್ಗ ಸಲಹೆ ಕೊಡಬಹುದಷ್ಟೆ, ಆದರೆ ಅದನ್ನು ಅನುಷ್ಠಾನಗೊಳಿಸುವುದು ಸ್ಥಳೀಯ ಆಡಳಿತ ಮಂಡಳಿ ಜವಾಬ್ದಾರಿ ಎಂದರು.

ವಾರ್ಷಿಕ ವರದಿ ಮಂಡಿಸಿ ಮಾತನಾಡಿದ ಸಿಇಓ ರಶ್ಮಿ ಸಂಘ ಪ್ರಸಕ್ತ ಸಾಲಿನಲ್ಲಿ 60,248 ಸಾವಿರ ರೂ. ನಿವ್ವಳ ಲಾಭಾಂಶಗಳಿಸಿದೆ. 3118746 ರೂ. ಮೌಲ್ಯದ ಹಾಲನ್ನು ಉತ್ಪಾದಕರಿಂದ ಖರೀದಿಸಿದೆ. ಎಂಸಿಡಿಸಿಸಿ ಬ್ಯಾಂಕ್‌ನಲ್ಲಿ 3 ಲಕ್ಷ ರೂ. ಠೇವಣಿ ಇಡಲಾಗಿದ್ದು, ಖಾತೆಯಲ್ಲಿ 1.20 ಲಕ್ಷ ರೂ. ಬಾಕಿ ಇದೆ. ಬೋನಸ್ ಹಣವನ್ನು ವಿಜಯದಶಮಿಗೆ ವಿತರಿಸಲಾಗುವುದು ಎಂದರು. ಸಂಘದ ಅಧ್ಯಕ್ಷೆ ಜಯಮ್ಮ, ಉಪಾಧ್ಯಕ್ಷೆ ಗಿರಿಜಮ್ಮ, ನಿರ್ದೇಶಕರಾದ ಭಾಗ್ಯಮ್ಮ, ಲಕ್ಷ್ಮಿ, ಮಂಜುಳ, ರತ್ನಮ್ಮ, ನಂಜಮ್ಮಣಿ, ಶಿವಮ್ಮ ಶೈಲಜ, ಮುಖಂಡರಾದ ಆನಂದಮೂರ್ತಿ, ಮಹದೇವಸ್ವಾಮಿ, ಬಸವರಾಜಪ್ಪ, ಸಂಗಪ್ಪ, ಪರಶಿವಮೂರ್ತಿ, ಲೋಕೇಶ್, ಶಿವಕುಮಾರ್, ಹಾಲು ಪರೀಕ್ಷಕಿ ಲೀಲಾವತಿ ಸೇರಿದಂತೆ ಮತ್ತಿತರರಿದ್ದರು.

ಸೆ.24, ವಾರ್ಷಿಕ ಮಹಾಸಭೆ

ಮಲ್ಕುಂಡಿ, ಸೆ.19– ನಂಜನಗೂಡು ತಾಲೂಕಿನ ಕೂಡ್ಲಾಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2021–22ನೇ ಸಾಲಿನ ವಾರ್ಷಿಕ ಮಹಾಸಭೆ ಸೆ.24ರಂದು ಸಂಘದ ಕಚೇರಿಯಲ್ಲಿ ಅಧ್ಯಕ್ಷ ಮಾರಶೆಟ್ಟಿ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಸುತ್ತಮುತ್ತಲಿನ ರೈತರು ಸಭೆಯಲ್ಲಿ ಭಾಗವಹಿಸಬೇಕು ಎಂದು ಸಿಇಓ ಮಹೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹುಣಸೂರು ಟಿಎಪಿಸಿಎಂಎಸ್‌ಗೆ 14.42 ಲಕ್ಷ ಲಾಭ

ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷ ಜಿ.ಡಿ.ಹರೀಶ್‌ಗೌಡ ಸಂತಸ



ಹುಣಸೂರು, ಸೆ.19– ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ(ಟಿಎಪಿಸಿಎಂಎಸ್) 2021–22ನೇ ಸಾಲಿನಲ್ಲಿ 1,67,95,106 ರೂ. ವಹಿವಾಟು ನಡೆಸಿದ್ದು, 14,42,082 ರೂ. ಲಾಭ ಗಳಿಸಿದೆ ಎಂದು ರಾಜ್ಯ ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷ ಹಾಗೂ ಎಂಸಿಡಿಸಿಸಿ ಬ್ಯಾಂಕ್ ಜಿ.ಡಿ.ಹರೀಶ್‌ಗೌಡ ಸಂತಸ ವ್ಯಕ್ತಪಡಿಸಿದರು.

ಪಟ್ಟಣದ ಪರಸಯ್ಯನವರ ಧರ್ಮ ಛತ್ರದಲ್ಲಿ ಏರ್ಪಡಿಸಿದ್ದ ಸಂಘದ 2021–22ನೇ ಸಾಲಿನ ವಾರ್ಷಿಕ ಸರ್ವ ಸದಸ್ಯರ ಸಭೆಯನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಮುಂದಿನ ದಿನಗಳಲ್ಲಿ ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ಹಳೆ ಕಟ್ಟಡ ಕೆಡವಿ 1.8 ಕೋಟಿ ರೂ. ವೆಚ್ಚದಲ್ಲಿ ನೂತನ ಮಳಿಗೆ ನಿರ್ಮಿಸಲಾಗುವುದು. ಬಳಿಕ ನೂತನ ಕಟ್ಟಡದಲ್ಲಿ ರೈತರಿಗೆ ಅಗತ್ಯ ವಸ್ತುಗಳ ಮಾರಾಟ ಮಾಡಲು ಕ್ರಮ ವಹಿಸಲಾಗುವುದು ಎಂದರು. ನಗರದಲ್ಲಿ ರೈತಭವನ ನಿರ್ಮಾಣ ಮಾಡಲು ಉದ್ದೇಶಿಸಲಾಗಿದ್ದು, ಇದಕ್ಕೆ ಸುಮಾರು 3 ಕೋಟಿ ರೂ. ಅನುದಾನ ಬೇಕಿದೆ. ಇದನ್ನು ಒದಗಿಸಲು ಎಲ್ಲಾ ರೀತಿಯಲ್ಲೂ ಪ್ರಯತ್ನಿಸಲಾಗುವುದು. ಇದಕ್ಕೆ ಸದಸ್ಯರು ಸಹಕಾರ ನೀಡಬೇಕು ಎಂದು ಮನವಿ ಮಾಡಿದರು. 2021–22ನೇ ಸಾಲಿನ ವಾರ್ಷಿಕ ವರದಿಯನ್ನು ಪ್ರಭಾರ ಕಾರ್ಯದರ್ಶಿ ಹೇಮಲತಾ ಮಂಡಿಸಿದರು. ಸಂಘದ ಅಧ್ಯಕ್ಷ ಎ.ಸಿ.ಕೆಂಪೇಗೌಡ ಅಧ್ಯಕ್ಷತೆ ವಹಿಸಿದ್ದರು. ಸಭೆಯಲ್ಲಿ ಉಪಾಧ್ಯಕ್ಷ ನಾಗರಾಜು, ನಿರ್ದೇಶಕರಾದ ಹೆಚ್.ಟಿ.ಬಾಬು, ಬಸವಲಿಂಗಯ್ಯ, ಶ್ರೀಗೌಡ, ರಮೇಶ್, ಹೆಚ್.ಎನ್. ಚಂದ್ರ ಶೇಖರ್, ಹೆಚ್.ಪ್ರೇಮಕುಮಾರ್, ಜಿ.ಎನ್.ವೆಂಕಟೇಶ್, ಹೆಚ್.ಆರ್.ಸುಜಾತ, ಗೋವಿಂದೇಗೌಡ, ನಾಗಪ್ರಸಾದ್, ಸಹಕಾರ ಸಂಘದ ನಿಬಂಧಕ ಪ್ರಕಾಶ್‌ರಾವ್, ನೌಕರರಾದ ಹೇಮಲತಾ, ಎಚ್.ಎನ್.ರವಿಕುಮಾರ್, ಸುದರ್ಶನ್, ವೆಂಕಟೇಶ್, ಹೆಚ್.ಪಿ. ಮಧು, ರಾಘವೇಂದ್ರ ಇತರರು ಹಾಜರಿದ್ದರು.

ಹಳೆಕೆಂಪಯ್ಯನಹುಂಡಿಯಲ್ಲಿ ವಿಶ್ವಕರ್ಮ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಈ ವೇಳೆ ತಿ.ನರಸೀಪುರ ತಾಲೂಕು ವಿಶ್ವಕರ್ಮ ಸಮಾಜದ ಅಧ್ಯಕ್ಷ ಸಿದ್ದರಾಜು, ಮುಖಂಡರಾದ ಕೆಂಪಚಾರಿ, ರವಿಚಾರಿ, ಜೆ.ಶಿವಕುಮಾರ್ ವಿಶ್ವಕರ್ಮ, ರಥಶೆಟ್ಟಿ, ಲೋಕೇಶ್‌ಚಾರಿ, ಗುಂಡಪ್ಪಸ್ವಾಮಿ, ಭೀಮಾಚಾರಿ, ತಮ್ಮಚಾರಿ, ಗಿರೀಶ್, ಸೋಮಚಾರಿ, ಸಿದ್ದಪ್ಪಾಜಿ, ಜಯರಾಮಾಚಾರಿ, ಜಗದೀಶ್, ವೆಂಕಟೇಶ್, ನಾಗಾಚಾರಿ, ಪಾಪಚಾರಿ, ನಟರಾಜು, ಮಂಜು ಇದ್ದಾರೆ.



ಚಿದರವಳ್ಳಿ ಪಿಎಸಿಎಸ್‌ಗೆ 4,03,086 ಲಕ್ಷ ನಿವ್ವಳ ಲಾಭ



ತಿ.ನರಸೀಪುರ, ಸೆ.19– ತಾಲೂಕಿನ ಚಿದರವಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಸರ್ವ ಸದಸ್ಯರ ಸಹಕಾರದಿಂದ ಯಶಸ್ವಿಯಾಗಿ ಮುನ್ನಡೆಯುತ್ತಿದ್ದು, ಪ್ರಸಕ್ತ ಸಾಲಿನಲ್ಲಿ 4,03,086 ಲಕ್ಷ ರೂ. ನಿವ್ವಳ ಲಾಭ ಗಳಿಸಿದೆ ಎಂದು ಸಂಘದ ಅಧ್ಯಕ್ಷ ಚಿದರವಳ್ಳಿ ಕೆಂಪೇಗೌಡ ತಿಳಿಸಿದರು.

ಸಂಘದ ಆವರಣದಲ್ಲಿ ನಡೆದ 2021–22ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಂಘದ ಸಹಕಾರಿಗಳು ಸಕಾಲಕ್ಕೆ ಸಾಲ ಮರುಪಾವತಿ ಮಾಡುತ್ತಿರುವುದರಿಂದ ಸಂಘ ಲಾಭದಲ್ಲಿದೆ. ಸಾಲ ಮರು ಪಾವತಿ ಮಾಡಿದಲ್ಲಿ ಇನ್ನೂ ಹೆಚ್ಚಿನ ಸಾಲ ಪಡೆದು ರೈತರು ಅಭಿವೃದ್ಧಿ ಹೊಂದಲು ಸಂಘ ಅವಕಾಶ ಕಲ್ಪಿಸಲಿದೆ. ಸಂಘಕ್ಕೆ ನೂತನ ಕಟ್ಟಡ ನಿರ್ಮಾಣ ಮಾಡುವ ವಿಚಾರ ಪ್ರಕ್ರಿಯೆಯಲ್ಲಿದ್ದು ಮುಂದಿನ ವಾರ್ಷಿಕ ಮಹಾಸಭೆ ವೇಳೆಗೆ ನೂತನ ಕಟ್ಟಡ ಸಿದ್ಧಗೊಳಿಸಲು ಚಿಂತನೆ ನಡೆದಿದೆ ಎಂದರು. ಜಿಲ್ಲಾ ಬ್ಯಾಂಕ್ ಪ್ರತಿನಿಧಿ ರಾಜಪ್ಪ ಮಾತನಾಡಿ, ಸಾಲ ಪಡೆದ ರೈತರು ಸುಸ್ತಿದಾರರಾಗದೇ ಕಾಲಕಾಲಕ್ಕೆ ಸಾಲ ಮತ್ತು ಬಡ್ಡಿ ಪಾವತಿಸಿ ಸಂಘದಿಂದ ದೊರಕುವ ಹೆಚ್ಚಿನ ಸಾಲ ಸೌಲಭ್ಯ ಪಡೆಯುವಂತೆ ತಿಳಿಸಿದರು.

ಸಿಇಓ ಸಿ.ಪಿ.ರಾಜೇಂದ್ರ ಪ್ರಸಾದ್ ವಾರ್ಷಿಕ ವರದಿ ಮಂಡಿಸಿದರು. ಉಪಾಧ್ಯಕ್ಷ ನಾಗರಾಜ ಅರಸ್, ನಿರ್ದೇಶಕರಾದ ಸಿ.ಡಿ.ಜಗದೀಶ್‌ಗೌಡ, ಎನ್.ನಾಗರಾಜು, ಎಂ.ಗಿರಿಗೌಡ, ನಾಗರಾಜು, ಸಿದ್ದು, ಆರ್.ಜಿ.ಶಿವಮೂರ್ತಿ, ನಂಜುಂಡಯ್ಯ, ಲಲಿತಮ್ಮ, ಸುನಂದ, ಮಹದೇವಮ್ಮ, ಗುಮಾಸ್ತ ಮಲ್ಲೇಶ್ ಕುಮಾರ್ ಸೇರಿದಂತೆ ಗ್ರಾಮಸ್ಥರು, ಷೇರುದಾರರು ಭಾಗವಹಿಸಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1 ಮರ್ದಿನಿ (ಕ): ಬೆ.10.45ಕ್ಕೆ, ಲಕ್ಕಿಮ್ಯಾನ್ (ಕ): ಮ.1ಕ್ಕೆ, ಸಂ.4ಕ್ಕೆ, ಸಂ.6.55ಕ್ಕೆ, ರಾ.9.55.

ಸ್ಕ್ರೀನ್ 2 ಮಾನ್ಸೂನ್ ರಾಗ (ಕ): ಬೆ.10.20ಕ್ಕೆ, ಸಂ.4.20ಕ್ಕೆ, ರಾ.7.15ಕ್ಕೆ, ರಿಯಾ (ಕ): ಮ.1.35ಕ್ಕೆ, ನೇನು ಮೀಕು ಭಾಗ ಕಾವಾಲ್ಸಿನವಾಡಿನಿ (ತೆ): ರಾ.10ಕ್ಕೆ.

ಸ್ಕ್ರೀನ್ 3 ವೇರ್ ದಿ ಕ್ರಾಡಾಡ್ಸ್ ಸಿಂಗ್ (ಇಂ): ಬೆ.10.55ಕ್ಕೆ, ರಾ.10ಕ್ಕೆ, ಸಿನಮ್ (ತ): ಮ.1.30ಕ್ಕೆ, ವೆಂದು ತನಿಂದದು ಕಾಡು (ತ): ಮ.3.55ಕ್ಕೆ, ಆ ಅಮ್ಮಾಯಿ ಗುರಿಂಚಿ ಮೀಕು ಚೆಪ್ಪಾಲಿ (ತೆ): ರಾ.7.10ಕ್ಕೆ.

ಸ್ಕ್ರೀನ್ 4 ಬ್ರಹ್ಮಾಸ್ತ್ರ (3ಡಿ) (ಹಿಂ): ಬೆ.9.55ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10.05ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1 ಬ್ರಹ್ಮಾಸ್ತ್ರ (3ಡಿ)(ಹಿಂ): ಬೆ.10.50ಕ್ಕೆ, ಮ.2.20ಕ್ಕೆ, ಸಂ.5.50ಕ್ಕೆ, ರಾ.9.20ಕ್ಕೆ.

ಸ್ಕ್ರೀನ್ 2 ಲಕ್ಕಿಮ್ಯಾನ್ (ಕ): ಬೆ.10.25ಕ್ಕೆ, ಶಾಕಿನಿ ಡಾಕಿನಿ (ತೆ): ಮ.1.35ಕ್ಕೆ, ಮಾನ್ಸೂನ್‌ರಾಗ (ಕ): ಸಂ.4.10ಕ್ಕೆ, ಆ ಅಮ್ಮಾಯಿ ಗುರಿಂಚಿ ಮೀಕು ಚೆಪ್ಪಾಲಿ (ತೆ): ರಾ.7ಕ್ಕೆ, ವೆಂದು ತನಿಂದದು ಕಾಡು (ತ): ರಾ.10ಕ್ಕೆ.

ಸ್ಕ್ರೀನ್ 3 ಮಾನ್ಸೂನ್ ರಾಗ (ಕ): ಬೆ.10.10ಕ್ಕೆ, ರಾ.10.10ಕ್ಕೆ, ಲಕ್ಕಿಮ್ಯಾನ್ (ಕ): ಮ.1ಕ್ಕೆ, ರಾ.7ಕ್ಕೆ, ಪಂಪ ಪಂಚಳ್ಳಿ ಪರಶಿವಮೂರ್ತಿ (ಕ): ಸಂ.4.10ಕ್ಕೆ,

ಸ್ಕ್ರೀನ್ 4 ಕಪಾಲ (ಕ): ಬೆ10.45ಕ್ಕೆ, ಮಾನ್ಸೂನ್ ರಾಗ (ಕ): ಮ.1.30ಕ್ಕೆ, ವೆಂದು ತನಿಂದದು ಕಾಡು (ತ): ಸಂ.4.20ಕ್ಕೆ, ಮರ್ದಿನಿ (ಕ): ರಾ.7.50ಕ್ಕೆ, ಬ್ರಹ್ಮಾಸ್ತ್ರ (3ಡಿ)(ಹಿಂ): ರಾ10.20ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1 ಮರ್ದಿನಿ (ಕ): ಬೆ.10.45ಕ್ಕೆ, ಸಂ.4.30ಕ್ಕೆ, ಲಕ್ಕಿಮ್ಯಾನ್ (ಕ): ಮ.1.30ಕ್ಕೆ, ಮಾನ್ಸೂನ್ ರಾಗ (ಕ): ರಾ.7.45ಕ್ಕೆ.

ಸ್ಕ್ರೀನ್ 2 ಕಪಾಲ (ಕ): ಬೆ.10.30ಕ್ಕೆ, ಮಾನ್ಸೂನ್ ರಾಗ (ಕ): ಮ.1ಕ್ಕೆ, ಸಂ.4ಕ್ಕೆ, ವೆಂದು ತನಿಂದದು ಕಾಡು (ತ): ಸಂ.6.45ಕ್ಕೆ

ಸ್ಕ್ರೀನ್ 3 ಮಾನ್ಸೂನ್ ರಾಗ (ಕ): ಬೆ.10.30ಕ್ಕೆ, ರಾ.9.15ಕ್ಕೆ, ಬ್ರಹ್ಮಾಸ್ತ್ರ (3ಡಿ)(ಹಿಂ): ಮ.1.15ಕ್ಕೆ, ಬ್ರಹ್ಮಾಸ್ತ್ರ (3ಡಿ)(ಕ): ಸಂ.4.30ಕ್ಕೆ.

ಸ್ಕ್ರೀನ್ 4 ಲಕ್ಕಿಮ್ಯಾನ್ (ಕ): ಬೆ.10.30ಕ್ಕೆ, ಸಂ.4.50ಕ್ಕೆ, ವೆಂದು ತನಿಂದದು ಕಾಡು (ತ): ಮ.1.30ಕ್ಕೆ, ಪಂಪ (ಕ): ರಾ.9ಕ್ಕೆ,

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಲಕ್ಕಿಮ್ಯಾನ್ (ಕ): ಬೆ.9ಕ್ಕೆ, ಮ.12.15ಕ್ಕೆ, ಮ.3.30ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಬ್ರಹ್ಮಾಸ್ತ್ರ (ಕ): ಮ.2.55ಕ್ಕೆ, ಗಾಳಿಪಟ–2 (ಕ): ಮ.3.25ಕ್ಕೆ, ನಾನ್ ರೌಡಿ (ಕ): ಮ.11.45ಕ್ಕೆ, ಬ್ರಹ್ಮಾಸ್ತ್ರ (3ಡಿ) (ಹಿಂ): ಬೆ.8.30ಕ್ಕೆ, ಬೆ.11ಕ್ಕೆ, ಮ.12ಕ್ಕೆ, ಮ.2.30ಕ್ಕೆ, ಮ.3.30ಕ್ಕೆ, ಸಂ.6ಕ್ಕೆ, ರಾ.7ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ, ಬ್ರಹ್ಮಾಸ್ತ್ರ (2ಡಿ) (ಹಿಂ): ಬೆ.11.30ಕ್ಕೆ, ಮ.3ಕ್ಕೆ, ರಾ.9.15ಕ್ಕೆ, ಕ್ಯಾಪ್ಟನ್ (ತ): ಮ.12.10ಕ್ಕೆ, ಸಂ.6.35ಕ್ಕೆ, ಒಕೇ ಒಕ ಜೀವಿತಂ (ತೆ): ಸಂ.6.30ಕ್ಕೆ, ರಾ.9.45ಕ್ಕೆ, ಪಥೋಪಥಂ ನೋಟಂಡು (ಮ): ಸಂ.6.25ಕ್ಕೆ, ಒರು ತೆಕ್ಕ (ಮ): ರಾ.9.45ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಸಿನಮ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಲಕ್ಕಿಮ್ಯಾನ್ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕೋಬ್ರಾ (ತ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮರ್ದಿನಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮರ್ದಿನಿ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ವೆಂದು ತನಿಂದದು ಕಾಡು (ತ)	4 ಪ್ರದರ್ಶನಗಳು
ಸಂಗಂ	
ಮಾನ್ಸೂನ್ ರಾಗ (ಕ)	4 ಪ್ರದರ್ಶನಗಳು
ಲಿಡೋ	
ಪಂಪ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸಿನಮ್ (ತ)	4 ಪ್ರದರ್ಶನಗಳು
ಪ್ರಭಾ	
ಗಾಳಿಪಟ–2 (ಕ)	4 ಪ್ರದರ್ಶನಗಳು



ಬನ್ನೂರು ಸಮೀಪದ ಎನ್‌ಸಿಆರ್ ಇಂಟರ್‌ನ್ಯಾಷನಲ್ ಶಾಲೆ ವಿದ್ಯಾರ್ಥಿಗಳು ಹೋಬಳಿ ಮಟ್ಟದ ಪ್ರೌಢಶಾಲೆಗಳ ಕಲೋತ್ಸವ ಕಾರ್ಯಕ್ರಮದಲ್ಲಿ ಸಮಗ್ರ ಪ್ರಶಸ್ತಿ ಪಡೆದಿದ್ದಾರೆ. ವಿದ್ಯಾರ್ಥಿಗಳನ್ನು ಕಾರ್ಯದರ್ಶಿ ಟಿ.ಸಿ.ರಾಜೇಶ್ ಅಭಿನಂದಿಸಿದರು. ಮುಖ್ಯಶಿಕ್ಷಕಿ ಸೇರಿದಂತೆ ಶಿಕ್ಷಕ ವೃಂದ ಇದ್ದರು.

ನಾಗರಹೊಳೆ ರಾಷ್ಟ್ರೀಯ ಉದ್ಯಾನವನದಂಚಿನ ಪ್ರದೇಶದಲ್ಲಿ

ಚುರುಕುಗೊಂಡ ಕೃಷಿ ಚಟುವಟಿಕೆ



- ಹನಗೋಡು ಹೋಬಳಿ ವ್ಯಾಪ್ತಿಯಲ್ಲಿ 7500 ಹೆಕ್ಟೇರ್‌ನಲ್ಲಿ ಭತ್ತ ಬಿತ್ತನೆ
- ಶೇ.95 ರಷ್ಟು ಭತ್ತ ನಾಟಿ ಕಾರ್ಯ ಪೂರ್ಣ

● ದೀಪು ಹನಗೋಡು

ಹನಗೋಡು, ಸೆ.19– ನಾಗರಹೊಳೆ ರಾಷ್ಟ್ರೀಯ ಉದ್ಯಾನವನದಂಚಿನ ಪ್ರದೇಶದಲ್ಲಿ ವ್ಯಾಪಕ ಮಳೆಯಾಗಿದ್ದು, ಕೃಷಿ ಚಟುವಟಿಕೆಗಳು ಚುರುಕುಗೊಂಡಿದೆ. ಮುಂಗಾರು ಹಂಗಾಮಿನಲ್ಲಿ ವಾಡಿಕೆಗಿಂತಲೂ ಹೆಚ್ಚಿನ ಮಳೆಯಾಗಿದ್ದು, ಅನ್ನದಾತನ ಮೊಗದಲ್ಲಿ ಮಂದಹಾಸ ಮೂಡಿಸಿದೆ. ಎಲ್ಲೆಡೆ ಭತ್ತ ಬಿತ್ತನೆ ಕಾರ್ಯ ಮುಗಿದು ಭತ್ತ ನಾಟಿ ಕಾರ್ಯವೂ ಪ್ರಾರಂಭಗೊಂಡಿದೆ.

ಈಗಾಗಲೇ ಹುಣಸೂರು ತಾಲೂಕಿನಲ್ಲಿ ಶೇ.95 ರಷ್ಟು ಭತ್ತ ನಾಟಿ ಕಾರ್ಯ ಮುಗಿದಿದ್ದು, ರೈತರು ಉತ್ತಮ ಬೆಳೆ ನಿರೀಕ್ಷೆಯಲ್ಲಿದ್ದಾರೆ. ಹನಗೋಡು ಅಣೆಕಟ್ಟೆ ಹಾಗೂ ಹಾರಂಗಿ ನಾಲೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿದ ಪರಿಣಾಮ ಬಹುತೇಕ ಎಲ್ಲಾ ಕೆರೆಗಳು ಭರ್ತಿಯಾಗಿದ್ದು, ಹನಗೋಡು ಹೋಬಳಿ 1400, ಬಿಳಿಕೆರೆ ಹೋಬಳಿ 1500, ಕಸಬಾ 2500, ಗಾವಡಗೆರೆ ಹೋಬಳಿ 1900 ಸೇರಿದಂತೆ ಒಟ್ಟು 7500 ಹೆಕ್ಟರ್ ಪ್ರದೇಶದಲ್ಲಿ ಭತ್ತದ ಕೃಷಿ ಮಾಡಲಾಗಿದೆ ಎಂದು ಹುಣಸೂರು ಕೃಷಿ ಸಹಾಯಕ ನಿರ್ದೇಶಕ ವೆಂಕಟೇಶ್ 'ಮೈಸೂರು ಮಿತ್ರ'ನೊಂದಿಗೆ ಮಾಹಿತಿ ಹಂಚಿಕೊಂಡಿದ್ದಾರೆ.

> ದೇಶಕ್ಕೆ ಅನ್ನ ನೀಡುವ ರೈತರು ಕೆಲವು ಕಡೆ ಭೂಮಿ ಪಾಳು ಬಿಟ್ಟಿದ್ದಾರೆ. ಸರ್ಕಾರ ಭತ್ತಕ್ಕೆ ನೀಡುವ ಬೆಂಬಲ ಬೆಲೆ ಅತ್ಯಂತ ಕಡಿಮೆಯಾಗಿದ್ದು, ಭತ್ತದ ನಾಟಿಗೆ ತಗಲುವ ವೆಚ್ಚದಿಂದ ಹಿಡಿದು ಕಟಾವು ಹಂತವರೆಗೆ ತಗುಲುವ ವೆಚ್ಚ ಜಾಸ್ತಿಯಾಗಿದೆ. ಇದರಿಂದ ರೈತರು ಆದಾಯಕ್ಕಿಂತ ನಷ್ಟ ಹೆಚ್ಚು ಅನುಭವಿಸುತ್ತಿದ್ದಾರೆ. ಹೀಗಾಗಿ ಸರ್ಕಾರ ಅಗತ್ಯವಿರುವ ಬಿತ್ತನೆ ಬೀಜದ ರಸ ಗೊಬ್ಬರಗಳನ್ನು ರಿಯಾಯಿತಿ ದರದಲ್ಲಿ ನೀಡಬೇಕು. ಬೆಂಬಲ ಬೆಲೆ ಯೋಜನೆಯಡಿ ಭತ್ತಕ್ಕೆ ಪ್ರಸ್ತುತ 2040 ರೂ. ನಿಗದಿ ಮಾಡಿದ್ದು, ಇದನ್ನು ಕನಿಷ್ಟ 3500 ರೂ.ಗಳಿಗೆ ಹೆಚ್ಚಿಸಬೇಕು.
>
> - ಮುದಗನೂರು ಸುಭಾಷ್, ದೊಡ್ಡಹೆಜ್ಜೂರು ಗ್ರಾಪಂ ಅಧ್ಯಕ್ಷ

ವಿವಿಧ ಭತ್ತ ತಳಿಗಳತ್ತ ಒಲವು: ಜುಲೈ ಮತ್ತು ಆಗಸ್ಟ್‌ನಲ್ಲಿ ವ್ಯಾಪಕ ಮಳೆಯಾದ ಹಿನ್ನಲೆಯಲ್ಲಿ ಕರೆ ಕಟ್ಟೆ ಭರ್ತಿಯಾಗಿ ಈ ಭಾಗದಲ್ಲಿ ಅಂತರ್ಜಲ ಮಟ್ಟ ಹೆಚ್ಚಳವಾಗಿದ್ದು, ರೈತಾಪಿ ವರ್ಗ ವಿವಿಧ ಭತ್ತದ ತಳಿಗಳ ನಾಟಿ ಮಾಡುವತ್ತ ಒಲವು ತೋರಿದ್ದಾರೆ. ಈಗಾಗಲೇ ಸಣ್ಣಮಧು, ವಿಎನ್‌ಆರ್, ಬಿಆರ್, 1001, ಐಆರ್ 64, ತನು ಹಾಗೂ ಇನ್ನಿತರ ಭತ್ತದ ತಳಿಗಳ ನಾಟಿ ಮಾಡಿದ್ದಾರೆ.

ಇಲ್ಲಿನ ನೇರಳಕುಪ್ಪೆ ದೊಡ್ಡಹೆಜ್ಜೂರು, ಕಿರಂಗೂರು, ಹೆಗ್ಗಂದೂರು ಗ್ರಾಪಂ ವ್ಯಾಪ್ತಿಯಲ್ಲಿ ಭತ್ತ ನಾಟಿ ಕಾರ್ಯ ಮುಗಿದಿದೆ. ಆದರೆ ಇತ್ತೀಚೆಗೆ ಸುರಿದ ಭಾರೀ ಮಳೆಯಿಂದ ಮುಂಚಿತವಾಗಿ ನಾಟಿ ಮಾಡಿದ ಭತ್ತದ ಬೆಳೆ ಕೊಚ್ಚಿ ಹೋಗಿವೆ ಎಂದು ಹಿಂಡುಗುಡ್ಲು ರೈತ ಅಜ್ಜೇಗೌಡ ತಿಳಿಸಿದ್ದಾರೆ.

ಚಿಟ್ಟಾರೆ ಹೋಬಳಿ ವ್ಯಾಪ್ತಿಯಲ್ಲಿ ಪ್ರಸಕ್ತ ಸಾಲಿನಲ್ಲಿ ಉತ್ತಮ ಮಳೆಯಾಗಿದ್ದು, ಕೃಷಿ ಚಟುವಟಿಕೆ ಬಿರುಸುಗೊಂಡಿದೆ. ಅನ್ನದಾತರು ಉತ್ತಮ ಫಸಲಿನ ನಿರೀಕ್ಷೆಯಲ್ಲಿದ್ದಾರೆ. ಇವರಿಗೆ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಕಾಲಕಾಲಕ್ಕೆ ಗೊಬ್ಬರ ಮತ್ತು ಸಲಹೆ ನೀಡುವ ಮೂಲಕ ನೆರವಾಗಬೇಕಿದೆ.

ಎಡತೊರೆ ಗೃಹ ನಿರ್ಮಾಣ ಸಂಘಕ್ಕೆ 6.14 ಲಕ್ಷ ಲಾಭ

ಸಂಘದ ಅಧ್ಯಕ್ಷ ವೈ.ಆರ್.ಪ್ರಕಾಶ್ ಮಾಹಿತಿ



ಕೆ.ಆರ್.ನಗರ ಸೆ.19– ಪ್ರಸಕ್ತ ಸಾಲಿನಲ್ಲಿ ಸಂಘವು 1.73 ಕೋಟಿ ರೂ. ಸಾಲ ನೀಡಿದ್ದು, 6.14 ಲಕ್ಷ ರೂ. ನಿವ್ವಳ ಲಾಭ ಗಳಿಸಿದೆ ಎಂದು ಎಡತೊರೆ ಗೃಹ ನಿರ್ಮಾಣ ಸಹಕಾರಿ ಸಂಘದ ಅಧ್ಯಕ್ಷ ವೈ.ಆರ್.ಪ್ರಕಾಶ್ ತಿಳಿಸಿದರು.

ಪಟ್ಟಣದ ಶಿವಾನುಭವ ಮಂಟಪದಲ್ಲಿ ನಡೆದ ಎಡತೊರೆ ಗೃಹ ನಿರ್ಮಾಣ ಸಹಕಾರ ಸಂಘದ 96ನೇ ವರ್ಷದ ವಾರ್ಷಿಕ ವರದಿ ಹಾಗೂ 2021–2022ನೇ ಸಾಲಿನ ವಾರ್ಷಿಕ ಮಹಾಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ನಿಮ್ಮೆಲ್ಲರ ಸಹಕಾರದಿಂದ ಸಂಘ ಪ್ರಗತಿ ಕಾಣುತ್ತಿದೆ ಎಂದರು.

844 ಮಂದಿ ಷೇರುದಾರರನ್ನು ಹೊಂದಿರುವ ನಮ್ಮ ಸಂಘ ಈ ಸಾಲಿನಲ್ಲಿ 17.48 ಲಕ್ಷ ಷೇರು ಬಂಡವಾಳ ಹೊಂದಿದ್ದು, 93.41 ಲಕ್ಷ ಆಪದ್ಧನ ಮತ್ತು ಇತರೆ ನಿಧಿಗಳನ್ನು ಹೊಂದಿದೆ. 38.30 ಲಕ್ಷ ಠೇವಣಿ, 3.16 ಲಕ್ಷ ಹೂಡಿಕೆ ಮಾಡಿ ಬ್ಯಾಂಕು ತನ್ನ ವ್ಯವಹಾರ ವೃದ್ಧಿಸಿಕೊಂಡಿದೆ ಎಂದರು.

ಹಾಲಿ ಷೇರು ಮೌಲ್ಯ 500 ರೂ.ಗಳಿದ್ದು ಇದನ್ನು 1000 ರೂ.ಗಳಿಗೆ ಹೆಚ್ಚಿಸಿ ಸಂಘದ ದುಡಿಯುವ ಬಂಡವಾಳ ಹೆಚ್ಚಿಸಿಕೊಳ್ಳಲಾಗುವುದು. ಸಂಘದ ಸದಸ್ಯರು ನಿಧನದ ನಂತರ ಸಂಬಂಧಪಟ್ಟವರು ದಾಖಲೆಗಳನ್ನು ನೀಡಿ ಮೃತರ ಹೆಸರಿನಲ್ಲಿರುವ ಷೇರು ಮೌಲ್ಯ ಮತ್ತು ಡಿವಿಡೆಂಟ್ ಹಣ ಪಡೆದುಕೊಳ್ಳುವುದು. ಮೃತಷೇರು ಸದಸ್ಯರ ಮರಣೋತ್ತರ ನಿಧಿ ಹಣವನ್ನು ನಿಧನವಾದ 30 ದಿನಗಳೊಳಗೆ ಪಡೆದುಕೊಳ್ಳುವಂತೆ ಮನವಿ ಮಾಡಿದರು.

ಸಂಘದ ವ್ಯವಹಾರವನ್ನು ಕಂಪ್ಯೂಟರೀಕರಣಗೊಳಿಸಲಾಗಿದ್ದು ಸದಸ್ಯರು ತಮ್ಮ ಇತ್ತೀಚಿನ ಅಂಚೆ ವಿಳಾಸ ಹಾಗೂ ಮೊಬೈಲ್ ಮತ್ತು ಆಧಾರ್ ನಂಬರ್ ನೀಡಿ. ಅಲ್ಲದೇ ನಿಮಗೆ ಬಂದಿರುವ ಷೇರು ಡಿವಿಡೆಂಟ್ ಹಣವನ್ನು ಮೂರು ವರ್ಷಗಳೊಳಗಾಗಿ ಪಡೆಯದೇ ಇದ್ದಲ್ಲಿ ಬೈಲಾ ರೀತಿ ರಸರ್ವ್‌ಫಂಡ್ ಖಾತೆಗೆ ವರ್ಗಾಯಿಸಲಾಗುತ್ತದೆ. ಸಾಲ ಪಡೆಯುವುದು ನಿಮ್ಮ ಹಕ್ಕು, ಸಕಾಲದಲ್ಲಿ ಮರುಪಾವತಿ ಮಾಡುವುದು ನಿಮ್ಮ ಜವಾಬ್ದಾರಿ ಎಂದರು.

ಸಭೆಗೆ ಸಂಘದ ಸಂಪೂರ್ಣ ವಹಿವಾಟು ಮತ್ತು ಇತರೆ ಕಾರ್ಯ ಚಟುವಟಿಕೆಗಳ ಬಗ್ಗೆ ಸಿಇಓ ಬಿ.ಡಿ.ರೇಣುಕಾಪ್ರಸನ್ನ ತಿಳಿಸಿದರು. ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ಷೇರುದಾರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಈ ವೇಳೆ ಬ್ಯಾಂಕ್ ಉಪಾಧ್ಯಕ್ಷ ಮೋಹನ್ ರಾವ್, ನಿರ್ದೇಶಕರಾದ ಕೆ.ಎಸ್.ಚಿಕ್ಕ ವೀರಪ್ಪ, ಎನ್.ಎಂ.ಪ್ರಕಾಶ್, ಕೆ.ಸಿ.ನಾಗರಾಜು, ಸುಭಾಷ್, ಕೆ.ಎಲ್.ರಾಜೇಶ್, ಸಿ.ಎಂ.ಶಶಿಕಲಾ ಇನ್ನಿತರರಿದ್ದರು.

ಕೃಷ್ಣೇಗೌಡ ನಿಧನ



ಹಿರೀಕ್ಯಾತನಹಳ್ಳಿ, ಸೆ.19– ಗ್ರಾಮದ ನಿವಾಸಿ ಹಾಲು ಉತ್ಪಾದಕರ ಸಹಕಾರ ಸಂಘದ ಮಾಜಿ ನಿರ್ದೇಶಕ ಹೆಚ್.ಆರ್. ಕೃಷ್ಣೇಗೌಡ (ಸಣ್ಣತಮ್ಮಣ್ಣ) (67) ಸೋಮವಾರ ಬೆಳಗ್ಗೆ 10 ಗಂಟೆಗೆ ನಿಧನರಾದರು. ಇವರು ಪತ್ನಿ ಲೀಲಾವತಿ, ನಿವೃತ್ತ ಯೋಧ ಶಶಿಕುಮಾರ್, ತೋಟಗಾರಿಕೆ ಇಲಾಖೆ ನೌಕರ ಶರತ್ ಕುಮಾರ್ ಸೇರಿದಂತೆ ಮೂವರು ಪುತ್ರರು, ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ 5 ಗಂಟೆಗೆ ಮೃತರ ತೋಟದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಡಾ.ಬಿ.ವಿ.ಕಾರಂತರು, ಡಾ.ಎಸ್.ಎಲ್.ಭೈರಪ್ಪರಂತಹವರು ಗುರುಗಳಾಗಿ ಎಲ್ಲರಿಗೂ ಸಿಗುವುದು ಕಷ್ಟ... ಕಷ್ಟ...

● ರಂಗ ಕಲಾವಿದ ಅರುಣ್ ಸಾಗರ್ ಸ್ಪಷ್ಟನುಡಿ ● ರಂಗಾಯಣದಲ್ಲಿ ಭಾರತೀಯ ರಂಗಸಂಗೀತೋತ್ಸವಕ್ಕೆ ಚಾಲನೆ ● ಈಗಿನ ವಿದ್ಯಾರ್ಥಿಗಳಿಗೆ ಬದುಕು ರೂಪಿಸುವ ಗುರು ಸಿಗುವುದು ತುಂಬಾನೇ ಕಷ್ಟ ● ಬಿ.ವಿ.ಕಾರಂತರು ಶಬ್ದವನ್ನು ಮೀರಿದವರು; ಸಂಗೀತದ ಮೂಲಕ ಸದ್ದು ಮಾಡಿದವರು



ಮೈಸೂರು ರಂಗಾಯಣ ಆವರಣದ ಭೂಮಿಗೀತಾದಲ್ಲಿ ಡಾ.ಬಿ.ವಿ.ಕಾರಂತರ ಜನ್ಮ ದಿನಾಚರಣೆ ಅಂಗವಾಗಿ ಸೋಮವಾರದಿಂದ ಸೆ.23ವರೆಗೆ 4 ದಿನಗಳ ಕಾಲ ನಡೆಯುವ 'ಭಾರತೀಯ ರಂಗ ಸಂಗೀತೋತ್ಸವ' ಕಾರ್ಯಕ್ರಮದಲ್ಲಿ ಡಾ.ಬಿ.ವಿ.ಕಾರಂತರ ಭಾವಚಿತ್ರಕ್ಕೆ ರಂಗಭೂಮಿ ಕಲಾವಿದ ಅರುಣ್ ಸಾಗರ್ ಪುಷ್ಪಾರ್ಚನೆ ಮಾಡಿ ಚಾಲನೆ ನೀಡಿದರು.

ಮೈಸೂರು, ಸೆ.19(ಎಸ್‌ಪಿಎನ್)– ಇಂದಿನ ವಿದ್ಯಾರ್ಥಿಗಳಿಗೆ ಮುಂದಿನ ಬದುಕನ್ನು ರೂಪಿಸುವ ಗುರುಗಳು ಸಿಗುವುದು ಕಷ್ಟ. ಅದರಲ್ಲೂ ಡಾ.ಬಿ.ವಿ.ಕಾರಂತರಂತಹ, ಖ್ಯಾತ ಸಾಹಿತಿ ಡಾ.ಎಸ್.ಎಲ್.ಭೈರಪ್ಪರಂತಹ ಗುರುಗಳು ಎಲ್ಲರಿಗೂ ಸಿಗುವುದು ಇನ್ನೂ ಕಷ್ಟ ಎಂದು ರಂಗ ಭೂಮಿ ಕಲಾವಿದ ಅರುಣ್ ಸಾಗರ್ ಅಭಿಪ್ರಾಯಪಟ್ಟರು.

ಮೈಸೂರು ರಂಗಾಯಣ ಆವರಣದ ಭೂಮಿಗೀತಾದಲ್ಲಿ ಡಾ.ಬಿ.ವಿ.ಕಾರಂತರ ಜನ್ಮ ದಿನಾಚರಣೆ ಅಂಗವಾಗಿ ಸೋಮವಾರದಿಂದ ಸೆ.23ವರೆಗೆ 4 ದಿನಗಳ ಕಾಲ ನಡೆಯುವ 'ಭಾರತೀಯ ರಂಗ ಸಂಗೀತೋತ್ಸವ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಶಬ್ದಕ್ಕೆ ಸಾವಿಲ್ಲ. ಆದರೆ, ಕಾರಂತರು ಶಬ್ದವನ್ನು ಮೀರಿದವರು. ಅವರು ಸದಾ ಮೌನಿಯಾಗಿದ್ದರೂ ಸಂಗೀತದ ಮೂಲಕ ಸದ್ದು ಮಾಡುತ್ತಿದ್ದರು. ಇದು ಮನಸ್ಥಿತಿ ಸಾಧಕರಿಗೆ ಮಾತ್ರ ಸಾಧ್ಯ. ಹಾಗಾಗಿ ಕಾರಂತರು ರಂಗಭೂಮಿ ಇತಿಹಾಸದಲ್ಲಿ ದೊಡ್ಡ ಇತಿಹಾಸ ನಿರ್ಮಾಣ ಮಾಡಿ ಹೋಗಿದ್ದಾರೆ. ಅವರ ಸಾಧನೆಯನ್ನು ಇಂದಿನ ಪೀಳಿಗೆಗೆ ತಿಳಿಸುವ ಕೆಲಸದಲ್ಲಿ ರಂಗಾಯಣ ಮುಂದಾಗಿರುವುದು ಸ್ವಾಗತಾರ್ಹ ಎಂದರು.

ಮೈಸೂರಿನಲ್ಲಿ ರಂಗಾಯಣ ಆರಂಭವಾದಾಗ ಕಲಾಮಂದಿರವನ್ನು ಉಪಯೋಗಿಸಿಕೊಳ್ಳುವಂತೆ ಅಂದಿನ ಸರ್ಕಾರ ಕಾರಂತರಲ್ಲಿ ಮನವಿ ಮಾಡಿತ್ತು. ಆದರೆ, ಕಲಾಮಂದಿರದ ಕೆಳಗಿದ್ದ, ಯಾರಿಗೂ ಬೇಡವಾದ, ಮಳೆ ಬಂದಾಗ ಸದಾ ನೀರು ತುಂಬಿ ಕೊಚ್ಚೆ ಗುಂಡಿಯಾಗಿರುತ್ತಿದ್ದ ಈ ಜಾಗ(ಈಗಿನ ಭೂಮಿಗೀತಾ ರಂಗಮಂದಿರ ಜಾಗವನ್ನು)ವನ್ನು ಆರಿಸಿಕೊಂಡರು. ನಂತರ ಅಲ್ಲಿಂದ ಶುರುವಾದ ನನ್ನ ರಂಗಭೂಮಿ ಪಯಣ ಇಲ್ಲಿಯವರೆಗೂ ತಿರುಗಿ ನೋಡಿಲ್ಲ ಎಂದರು.

ಭಾರತೀಯ ಪರಂಪರೆಯಲ್ಲಿ ಪ್ರತಿಯೊಬ್ಬರೂ ಸಂಗೀತದ ಭಾಗವಾಗಿ ಜೀವನ ರೂಪಿಸಿಕೊಂಡಿರುತ್ತಾರೆ. ಅದು ದೇವರ ಪೂಜೆ ಸಂದರ್ಭ ಸೇರಿದಂತೆ ಇತರೆ ಸಂದರ್ಭದಲ್ಲಿ ಸಂಗೀತವನ್ನು ಅಳವಡಿಸಿಕೊಂಡಿರುತ್ತಾರೆ.ಕಾರಂತರು ನಮ್ಮ ಜೊತೆ ಇದ್ದಾಗ ಸದಾ ಹೇಳುತ್ತಿದ್ದ ಒಂದು ಮಾತು 'ನೀನು ಉಸಿರಾ(ಗಾಳಿ) ಗಂಧ್ಯ' ಎನ್ನುತ್ತಿದ್ದರು. ಅಂದರೆ, ಬೇರೆಯವರಿಗೆ ಗಾಳಿಯಾಗು. ಗಾಳಿಯನ್ನು ಯಾರೂ ಎಲ್ಲಿಯೂ ಹಿಡಿದಿಡಲು ಸಾಧ್ಯವಿಲ್ಲ. ಅದೇ ಸಾಧನೆಯೂ ಗಾಳಿಯಂತೆ ಹಿಡಿದಿಡಲು ಸಾಧ್ಯವಿಲ್ಲ ಎಂದು ತಿಳಿಸಿದರು.

ಕಾರಂತರು ತಮ್ಮ ಜೀವಿತಾವಧಿಯಲ್ಲಿ ಸದಾ ಮೌನದಲ್ಲಿರುತ್ತಿದ್ದರು. ಆ ಧ್ಯಾನ ಸ್ಥಿತಿಯಲ್ಲೇ ಪದ್ಯಗಳಿಗೆ ರಾಗ ಸಂಯೋಜನೆ ಮಾಡುತ್ತಿದ್ದರು. ಒಟ್ಟಿನಲ್ಲಿ ರಂಗಭೂಮಿಯಲ್ಲಿ ನದಿಯಾಗಿ ಬೆಳೆದರು. ನದಿ ಹರಿಯುವ ಸ್ಥಳವೆಲ್ಲಾ ಹಸಿರಾದಂತೆ, ಅವರು ನಡೆದಾಡಿದ ಜಾಗವೆಲ್ಲಾ ರಂಗಭೂಮಿಯಾಗಿ, ಸಾಧಕರ ಜೀವನದಿಯಾಗಿ ಮಾರ್ಪಾಡಾಗುತ್ತಿತ್ತು ಎಂಬುದಕ್ಕೆ ರಂಗಾಯಣದಲ್ಲಿ ಕಾರಂತರಿದ್ದಾಗ ಘಟಿಸಿದ ಕೆಲ ಘಟನೆಗಳೇ ಸಾಕ್ಷಿ ಎಂದರು.

ರಂಗಾಯಣಕ್ಕೆ ಆರಂಭದಲ್ಲಿ 24 ಜನ ಕಲಾವಿದರನ್ನು ಆಯ್ಕೆ ಮಾಡಲಾಗಿತ್ತು. ಆದರಲ್ಲಿ ನಾನೂ ಒಬ್ಬನಾಗಿದ್ದೆ. ನಮಗೆ ಆರಂಭದಲ್ಲಿ ಕಾರಂತರು ನಾಟಕದಲ್ಲಿ ಪಾತ್ರ ಮಾಡಲು ಬಿಡದೇ 'ಪ್ರಯೋಗ ರಂಗ' ಹೆಸರಿನಡಿ ಅನೇಕ ರಂಗವಿದ್ಯೆಗಳನ್ನು ಕಲಿಸಿಕೊಟ್ಟರು.

ಜೊತೆಜೊತೆಗೆ ವನರಂಗ, ರಂಗಾಯಣ ನಿರ್ಮಾಣಕ್ಕೆ ಒತ್ತು ನೀಡಿದರು. ರಾಮಜನ್ಮ ಭೂಮಿಗೆ ಇಟ್ಟಿಗೆ ಹೊರುವ ಮೊದಲೇ ವನರಂಗ ನಿರ್ಮಾಣಕ್ಕೆ ಇಟ್ಟಿಗೆ ಒತ್ತ ಪ್ರಸಂಗವನ್ನು ವಿವರಿಸಿದರು.

ಆರಂಭದಲ್ಲಿ ನಮಗೆ ಕೀರ್ತಿನಾಥ ಕುರ್ತಕೋಟಿ ಅವರು ಕುಮಾರವ್ಯಾಸನ ಪದ್ಯಗಳನ್ನು ಹೇಳಿ ಕೊಡುತ್ತಿದ್ದರು. ಯೋಗಣ್ಣ, ಚೀನಿ ಮಾಸ್ಟರ್ ನಮಗೆ ಸಂಗೀತ, ವಾದ್ಯಗಳನ್ನು ನುಡಿಸುವ ಬಗ್ಗೆ ಹೇಳಿ ಕೊಡುತ್ತಿದ್ದರು. ಒಟ್ಟಿನಲ್ಲಿ 24 ಜನ ಕಲಾವಿದರಿಗೆ ದಿನದ 24 ಗಂಟೆಯೂ ರಂಗಾಯಣ ಆವರಣವೇ ಎಲ್ಲವೂ ಆಗಿತ್ತು ಎಂದು ತಮ್ಮ ರಂಗಾಯಣ ಆರಂಭದ ದಿನಗಳನ್ನು ನೆನೆದರಲ್ಲದೆ, ಕಲಾವಿದನಾಗಿ ಡಾ.ಎಸ್.ಎಲ್.ಭೈರಪ್ಪನವರ ಕಾದಂಬರಿಗಳನ್ನು ಓದಿ, ಕಲಿತಿದ್ದು ಬಹಳ ಎಂದರು. ಕಾರ್ಯಕ್ರಮದ ಮಧ್ಯದಲ್ಲಿ ಶಿಶುಗೀತೆಗೆ ಸಭಿಕರಿಂದಲೇ ವಿವಿಧ ಕಲ್ಲು, ಮರದ ತುಂಡುಗಳಿಂದ ಲಯಬದ್ಧ ವಾದ್ಯ ನುಡಿಸಿ ಎಲ್ಲರ ಮೆಚ್ಚುಗೆ ಪಾತ್ರರಾದರು.

ಈ ವೇಳೆ ಮುಂಬೈನ ಹಿರಿಯ ರಂಗಕರ್ಮಿ ಆಮೋದ್ ಭಟ್, ಡಾ.ಬಿ.ವಿ.ಕಾರಂತರ ಕುರಿತು ಮಾತನಾಡಿದರು. ಹಿರಿಯ ಸಾಹಿತಿಗಳಾದ ಡಾ.ಎಸ್.ಎಲ್.ಭೈರಪ್ಪ, ಡಾ. ಪ್ರಧಾನ್ ಗುರುದತ್ ಸೇರಿದಂತೆ ಸಾಹಿತಿಗಳು ಸಭಿಕರ ಸಾಲಿನಲ್ಲಿ ಕುಳಿತು ಕಾರ್ಯಕ್ರಮ ವೀಕ್ಷಣೆ ಮಾಡಿದರು. ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ, ರಂಗಕರ್ಮಿ ರಾಜಶೇಖರ್ ಕದಂಬ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೈಸೂರು ವಿಭಾಗದ ಪ್ರಾದೇಶಿಕ ನಿರ್ದೇಶಕ ಮಲ್ಲಿಕಾರ್ಜುನ ಸ್ವಾಮಿ, ರಂಗಾಯಣ ಉಪ ನಿರ್ದೇಶಕಿ ನಿರ್ಮಲ ಮಠಪತಿ, ಭಾರತೀಯ ರಂಗವಿದ್ಯಾಲಯದ ಶಿಕ್ಷಕ ಅಮಿತ್ ಜೆ.ರೆಡ್ಡಿ ಉಪಸ್ಥಿತರಿದ್ದರು.


ಈ ವೇಳೆ ರಂಗಾಯಣದಲ್ಲಿ ಪ್ರದರ್ಶನಗೊಂಡ ಹಳೆಯ ನಾಟಕಗಳ ಭಾವಚಿತ್ರ ಪ್ರದರ್ಶನ ಏರ್ಪಡಿಸಲಾಗಿತ್ತು. ಕಾರ್ಯಕ್ರಮ ನಂತರ ಮುಂಬೈನ ಹಿರಿಯ ಕಲಾವಿದ ಆಮೋದ್ ಭಟ್ ಅವರ ತಂಡದಿಂದ ರಂಗಸಂಗೀತ ಕಾರ್ಯಕ್ರಮ ನಡೆಸಿ ಕೊಟ್ಟರು. ಸೆ.20ರಂದು ಹಿರಿಯ ಸಂಗೀತ ನಿರ್ದೇಶಕ ಶ್ರೀನಿವಾಸ್ ಭಟ್ ಅವರ ತಂಡದಿಂದ ರಂಗಸಂಗೀತ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ.



ರಂಗಭೂಮಿಗೆ ಕಾರಂತರ ಕೊಡುಗೆ ಶಬ್ದದಿಂದ ವರ್ಣಿಸಲಾಗದು

ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಭಾವುಕ ನುಡಿ

ಮೈಸೂರು, ಸೆ.19–ಹಿರಿಯ ರಂಗಕರ್ಮಿ ಡಾ.ಬಿ.ವಿ.ಕಾರಂತರು ರಂಗಭೂಮಿಗೆ ನೀಡಿರುವ ಕೊಡುಗೆಯನ್ನು ಯಾವ ಶಬ್ದದಿಂದ ವರ್ಣಿಸಿದರೂ ಸಾಲದು ಎಂದು ರಂಗಾಯಣ ನಿರ್ದೇಶಕ ಅಡ್ಡಂಡ.ಸಿ.ಕಾರ್ಯಪ್ಪ ಅಭಿಪ್ರಾಯಪಟ್ಟರು.



ಕಾರಂತರ ಜೀವಿತಾವಧಿಯಲ್ಲಿ ಇಲ್ಲಿನ ಕಲಾವಿದರಾದ ಹುಲಿಗೆಪ್ಪ ಕಟ್ಟಿಮನಿ, ಬಸವರಾಜು, ಮೈಮ್ ರಮೇಶ್ ಜೊತೆಯಲ್ಲಿ ನಮ್ಮ ಮನೆಗೆ ಬಂದಿದ್ದರು. ಆ ಸಮಯದಲ್ಲಿ ನಾನು ಮತ್ತು ನನ್ನ ಹೆಂಡತಿ ಅನಿತಾ ಮಾತುಕತೆ ನಡೆಸಿದ ಸಂದರ್ಭವನ್ನು ನೆನೆದು ಭಾವುಕರಾದರು.

ಮುಂದೊಂದು ದಿನ ಅವರೇ ಕಟ್ಟಿದ ರಂಗಾಯಣಕ್ಕೆ ನಿರ್ದೇಶಕನಾಗಿ ಬರುತ್ತೇನೆಂದು ನಾನೆಂದೂ ಊಹಿಸಿರಲಿಲ್ಲ. ಆದರೆ, ರಾಜ್ಯ ಸರ್ಕಾರ 2020ರಲ್ಲಿ ನಿರ್ದೇಶಕರನ್ನಾಗಿ ಆಯ್ಕೆ ಮಾಡಿದಾಗ ಆ ಆಹ್ವಾನವನ್ನು ಸಂತೋಷದಿಂದ ಸ್ವೀಕರಿಸಿ, ಇಲ್ಲಿಗೆ ಬಂದ ಮೊದಲ ದಿನದಿಂದ ರಂಗಭೂಮಿ ಏಳಿಗೆಗೆ ಕೆಲಸ ಮಾಡಲು ಶುರು ಮಾಡಿದೆ. ನನ್ನ ಮನಸ್ಸಿನಲ್ಲಿದ್ದ ಕಾರಂತರು ಮತ್ತು ಎಸ್.ಎಲ್.ಭೈರಪ್ಪನವರಿಗಾಗಿ ಏನಾದರೂ ಮಾಡಬೇಕೆಂಬ ಹಂಬಲದಿಂದ ನನ್ನ ಕೆಲಸವನ್ನು ಆರಂಭಿಸಿದೆ ಎಂದರು.

ಕಾರಂತರ ಸಾಧನೆಯನ್ನು ಯಾವ ಶಬ್ದಗಳಿಂದ ವರ್ಣಿಸಿದರೂ ಸಾಲದು. ರಂಗ ಸಂಗೀತಕ್ಕೆ ಅವರು ನೀಡಿರುವ ಕೊಡುಗೆ ಅಪಾರ. ಇದನ್ನು ಅರಿತು ರಂಗಾಯಣದ ವತಿಯಿಂದ ಕಾರಂತರ ನೆನಪಿಗಾಗಿ ಶಿಲ್ಪವನ, ಪುತ್ಥಳಿ, ಭಾರತೀಯ ಸಂಗೀತೋತ್ಸವ ಕಾರ್ಯಕ್ರಮವನ್ನು ರೂಪಿಸಿ ಶಾಶ್ವತವಾಗಿ ನೆನಪು ಮಾಡಿಕೊಳ್ಳುವ ಪ್ರಯತ್ನ ಇದಾಗಿದೆ ಎಂದರಲ್ಲದೆ, ನಾನು ಯಾರಿಗೂ ಹೆದರುವುದಿಲ್ಲ. ಆನೆ ನಡೆದಿದ್ದೆ ಹಾದಿ ಎಂಬಂತೆ ಸಾಗುವವನು ನಾನು. ಈ ಹಾದಿಯಲ್ಲಿ ಸುಳ್ಳು ಕಪಟವಿರುವುದಿಲ್ಲ. ನನ್ನ ಕಾಯಕದಿಂದ ತೃಪ್ತಿ ಕಾಣುತ್ತೇನೆ ಎಂದು ತಿಳಿಸಿದರು.

ಕಾರಂತರು ಹುಟ್ಟಿದ ದಿನವನ್ನು 'ಭಾರತೀಯ ರಂಗ ಸಂಗೀತೋತ್ಸವ' ದಿನವೆಂದು ಘೋಷಣೆ ಮಾಡಿ, ಅದಕ್ಕೆ ಪೂರಕವಾದ ಕಾರ್ಯಕ್ರಮಗಳನ್ನು ರೂಪಿಸಿ, ಕಾರಂತರಿಗೆ ನಾವೇನು ಮಾಡಿದ್ದೇವು ಎಂಬ ಮನಸಾಕ್ಷಿಗೆ ಈ ಕಾರ್ಯಕ್ರಮ ಉದಾಹರಣೆಯಾಗಬಹುದು ಎಂದರು.

ಸೆ.25, ಶ್ರೀಕಾವೇರಿ ಕೊಡವ ಅಸೋಸಿಯೇಷನ್ ಪೂರ್ವ ವಾರ್ಷಿಕ ಸಭೆ

ಮೈಸೂರು, ಸೆ.19– ಶ್ರೀಕಾವೇರಿ ಕೊಡವ ಅಸೋಸಿಯೇಷನ್ ಮೈಸೂರು ಪೂರ್ವ ವಾರ್ಷಿಕ ಮಹಾಸಭೆ ಸೆ.25ರಂದು ಬೆಳಗ್ಗೆ 10 ಗಂಟೆಗೆ ಮೈಸೂರಿನ ಸಾತಗಳ್ಳಿ ವಿದ್ಯಾಶಂಕರ ಬಡಾವಣೆಯಲ್ಲಿರುವ ಸಂಘದ ಕಟ್ಟಡದಲ್ಲಿ ನಡೆಯಲಿದೆ. ಸಭೆಯ ಅಧ್ಯಕ್ಷತೆಯನ್ನು ಅಸೋಸಿಯೇಷನ್ ಅಧ್ಯಕ್ಷ ಪುಲ್ಲಿಯಂಡ ಎಸ್.ದೇವಯ್ಯ ವಹಿಸಲಿದ್ದಾರೆ ಎಂದು ಗೌರವ ಕಾರ್ಯದರ್ಶಿ ಕಡೇಮಾಡ ಎಂ.ಬೆಳ್ಳಪ್ಪ ತಿಳಿಸಿದ್ದಾರೆ.

PUBLIC NOTICE

Exb: 26/D
Adv. Jitendra Lela

IN THE COURT OF MOTOR ACCIDENT CLAIMS TRIBUNAL RAIGAD AT ALIBAG

MACP No. 73/2017
Next date: 1-10-2022

Gangadhar Timana Gauda - Applicant
V/s
Syed Abdul Raheman Nazir & others -Opponent

To,
OPPONENT No. 1
Syed Abdul Raheman Nazir, R/o House No. 1481, Makan Mohalla, Hunsur, Karnataka.

Take notice that the applicant Gangadhar Gauda has filed Claim No. 73/2017 against you in the court of MACT, Raigad at Alibag and various attempt were made to serve summons to you. But in spite of that the summons was not served upon you.

And hence this public notice is published and it is hereby informed to you to appear before the Hon'ble Court of MACT, Raigad at Alibag on 1-10-2022 at 10.30 am personally or through your Advocate. In default the further orders will be pass against you and you will be responsible for the consequences thereof.

This notice is given under my signature and seal on 25-8-2022.

Sd/- Superintendent
MACT Raigad at Alibag

Sd/- Jr. Clark
MACT - Raigad at Alibag.

ಸಾರ್ವಜನಿಕ ಪ್ರಕಟಣೆ

ಎಂ.ವಿ. ರಮೇಶ, ಬಿ.ಕಾಂ., ಎಂ.ಎಸ್.ಡಬ್ಲ್ಯೂ., ಎಲ್.ಎಲ್.ಬಿ., ವಕೀಲರು, ನಂ. 329/2 ಸಿ.ಹೆಚ್. 5/2, ಡಿ. ಸುಬ್ಬಯ್ಯ ರಸ್ತೆ, ಚಾಮರಾಜ ಮೊಹಲ್ಲಾ, ಮೈಸೂರು–04, ಆದ ನಾನು, ನನ್ನ ಕಕ್ಷಿದಾರರಾದ, "ಮೆ॥ ಭೂ ವರಹಾ ಎನ್‌ಕ್ಲೇವ್" ನೋಂದಾಯಿತ ಪಾಲುದಾರಿಕಾ ಸಂಸ್ಥೆಯ ಕಚೇರಿ ನಂ. 338/289/1, ಸೋಮ್‌ಪುರ ಬಸಪ್ಪ ಆಸ್ಪತ್ರೆ ಎದುರು, 16ನೇ ಕ್ರಾಸ್, ಬನ್ನೂರು ಮುಖ್ಯ ರಸ್ತೆ, ಮೈಸೂರು–570 029. ಇವರು, ಮೈಸೂರು ತಾಲ್ಲೂಕು, ವರುಣಾ ಹೋಬಳಿ, ವಾಜಮಂಗಲ ಗ್ರಾಮದ ಸರ್ವೆ ನಂ. 90/02 ಇದರ ವಿಸ್ತೀರ್ಣ 28 ಗುಂಟೆ ಖುಷ್ಕಿ ಜಮೀನು, ಸರ್ವೆ ನಂ. 90/3, ಇದರ ವಿಸ್ತೀರ್ಣ 28 ಗುಂಟೆ ಜಮೀನು ಹಾಗೂ ಸರ್ವೆ ನಂ. 90/4, ಇದರ ವಿಸ್ತೀರ್ಣ 0.29 ಗುಂಟೆ ಜಮೀನು ಕ್ರಮವಾಗಿ ಶ್ರೀ ರಂಗಸ್ವಾಮಿ ಬಿನ್ ಲೇಟ್ ಹುಚ್ಚಯ್ಯ, ಶ್ರೀ ದಾಸಯ್ಯ ಬಿನ್ ಲೇಟ್ ಹುಚ್ಚಯ್ಯ ಹಾಗೂ ಶ್ರೀ ಜವರಯ್ಯ ಬಿನ್ ಲೇಟ್ ಹುಚ್ಚಯ್ಯ ಅವರ ಹೆಸರಿನಲ್ಲಿದ್ದು, ಸದರಿ ಜಮೀನುಗಳನ್ನು ನನ್ನ ಮೇಲ್ಕಂಡ ಕಕ್ಷಿದಾರರು ಖರೀದಿಸಿ, ಕ್ರಯಪತ್ರವನ್ನು ಮೇಲ್ಕಂಡ ಪಾರ್ಟಿದಾರರು ಮತ್ತು ಅವರ ಕುಟುಂಬದಾರರಿಂದ ಬರೆಸಿಕೊಳ್ಳಲು ಇಚ್ಛಿಸಿರುವುದರಿಂದ ಮೇಲ್ಕಂಡ ಸ್ವತ್ತಿನ ಬಗ್ಗೆ, ಯಾರಿಂದಾದರೂ ಯಾವುದೇ ವಿಧವಾದ ತಂಟೆ, ತಕರಾರು ಇದ್ದಲ್ಲಿ, ದೂರಿನ ಬಗ್ಗೆ, ತಮ್ಮಲ್ಲಿರುವ ದಾಖಲಾತಿಗಳ ಸಹಿತ ಈ ಪ್ರಕಟಣೆಯ ದಿನಾಂಕದಿಂದ 07 ದಿನಗಳ ಒಳಗೆ, ನಮ್ಮ ಕಕ್ಷಿದಾರರ ವಿಳಾಸಕ್ಕೆ ಅಥವಾ ನನ್ನ ವಿಳಾಸಕ್ಕೆ ಖುದ್ದು ಬಂದು ಲಿಖಿತವಾಗಿ ದೂರನ್ನು ಸಲ್ಲಿಸತಕ್ಕದ್ದು, ಇಲ್ಲವಾದಲ್ಲಿ ಯಾವುದೇ ವಿಧವಾದ ತಕರಾರು ಇಲ್ಲವೆಂದು ಪರಿಗಣಿಸಿ ನೋಂದಣಿಮಾಡಿಸಿಕೊಳ್ಳಲು ನನ್ನ ಕಕ್ಷಿದಾರರು ಇಚ್ಛಿಸಿರುತ್ತಾರೆ.

Sd/- Ramesha M.V., B.Com., M.S.W., LL.B. Roll No. KAR/2792/04. Sudha G.V., B.A., LL.B. Roll No. KAR/2795/04, Advocates & Notary #329/2, CH-5/2, D. Subbaiah Road, Behind Maharaja Hotel, Chamaraja Mohalla, Mysuru-24
Mob: 9480118990, 9964480416
Date: 19.09.2022

ಸಾರ್ವಜನಿಕ ನೋಟಿಸ್

ಈ ಮೂಲಕ ತಿಳಿಸುವುದೇನೆಂದರೆ ಮೂಲತಃ ಶ್ರೀ ಜೆ ಮಹದೇವ ರವರಿಗೆ ಸಿ ಐ ಟಿ ಬಿ ಟ್ರಸ್ಟ್ ಬೋರ್ಡ್ ವತಿಯಿಂದ ದಿನಾಂಕ 29–03–1972 ರಂದು ನೀಡಿರುವ ಮಂಜುರಾತಿ ಪತ್ರ ಮತ್ತು ಸ್ವಾಧೀನ ಪತ್ರ ಎಂಬ ಎರಡು ದಾಖಲಾತಿಗಳು ಈ ಹಿಂದೆ ಜೆರಾಕ್ಸ್ ಮಾಡಿಸಿಕೊಂಡು ಬರುವಾಗ ಕಳೆದು ಹೋಗಿರುತ್ತದೆ ಎಷ್ಟೇ ಹುಡುಕಿದರೂ ಸಿಗದಿದ್ದ ಕಾರಣ ದಿನಾಂಕ 23–08–2022 ರಂದು ಜಯಲಕ್ಷ್ಮೀಪುರಂ ಪೋಲೀಸ್ ಠಾಣೆಯಲ್ಲಿ ಸ್ವತ್ತಿನ ಈಗಿನ ಮಾಲೀಕರಾದ ಶ್ರೀ. ಟಿ ಪಿ ಮುಂಕದ ಆದ ನಾನು ಪಿರ್ಯಾದು ನೀಡಿರುತ್ತೇನೆ, ಸದರಿ ಮಂಜುರಾತಿ ಪತ್ರ ಮತ್ತು ಸ್ವಾಧೀನ ಪತ್ರ ಗಳು ಯಾರಿಗಾದರೂ ಸಿಕ್ಕಿದರೆ ಕೊಡಲೇ ಮೊಬೈಲ್ ನಂ. 99165 93999 ಗೆ ಕರೆ ಮಾಡಿ

ಮೈಸೂರು ಐಟಿ ಪಾರ್ಕ್ ಗೃಹ ನಿರ್ಮಾಣ ಸಹಕಾರ ಸಂಘ(ನಿ), ಸರಸ್ವತಿಪುರಂ, ಮೈಸೂರು

ಆಹ್ವಾನ ಪತ್ರಿಕೆ

ಸಂಘದ 2021–22ನೇ ಸಾಲಿನ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯನ್ನು ದಿನಾಂಕ . 24.09.2022ರ ಶನಿವಾರ ಬೆಳಿಗ್ಗೆ 11.30 ಗಂಟೆಗೆ ಸಂಘದ ಅಧ್ಯಕ್ಷರಾದ ಶ್ರೀ ಎಸ್.ರಾಘವೇಂದ್ರರವರ ಅಧ್ಯಕ್ಷತೆಯಲ್ಲಿ Video conference / Virtual Meeting / Zoom Meeting ಮೂಲಕ (ಕೋವಿಡ್ –19 ಸಾಂಕ್ರಾಮಿಕ ರೋಗದ ಕಾರಣ, ಸರ್ಕಾರದ ಆದೇಶದಂತೆ) ಏರ್ಪಡಿಸಲಾಗಿದ್ದು, ಈ ಸಂಬಂಧ ಎಲ್ಲಾ ಅರ್ಹ ಸದಸ್ಯರುಗಳಿಗೂ ಆಹ್ವಾನ ಪತ್ರಿಕೆಯನ್ನು ಈಗಾಗಲೇ ಅಂಚೆ ಮೂಲಕ ರವಾನಿಸಲಾಗಿದೆ.
ಸದರಿ ಆಹ್ವಾನ ಪತ್ರಿಕೆಯನ್ನು ತಲುಪದೆ ಇರುವ ಸದಸ್ಯರು ಇದನ್ನೇ ಆಹ್ವಾನ ಪತ್ರಿಕೆ ಎಂದು ಭಾವಿಸಿ ಮಹಾಸಭೆಯಲ್ಲಿ ಭಾಗವಹಿಸಲು ಕೋರಲಾಗಿದೆ.

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
ಸಹಿ/ಕಾರ್ಯದರ್ಶಿ

(ಸೂಚನೆ : Meeting ID ಮತ್ತು Passcode ಅನ್ನು ಸದಸ್ಯರು ಸಂಘದ ಕಛೇರಿಯಿಂದ ಪಡೆಯಬೇಕಾಗಿ ಕೋರಿದೆ)

ಪುರಸಭಾ ಕಾರ್ಯಾಲಯ, ಪಿರಿಯಾಪಟ್ಟಣ
ಪುರಸಭೆ, ಪಿರಿಯಾಪಟ್ಟಣ, ಮೈಸೂರು ಜಿಲ್ಲೆ – 571107
ದೂರವಾಣಿ (ಕ): 08223–273036 ಇಮೇಲ್:itstaff_ulb_periyapatna@yahoo.com

ಸಂಖ್ಯೆ:ಪುಕಾಪಿ/ಆ.ಶಾ/ಸಿ.ಆರ್/05/2022–23 ದಿನಾಂಕ:17.09.2022

ಟೆಂಡರ್ ಪ್ರಕಟಣೆ

ಪಿರಿಯಾಪಟ್ಟಣ ಪುರಸಭೆ ವ್ಯಾಪ್ತಿಯಲ್ಲಿ ಆರೋಗ್ಯ, ಶಾಖೆಗೆ ಸಂಬಂಧಿಸಿದಂತೆ ಈ ಕೆಳಕಂಡ ಸೇವೆ/ಕಾರ್ಯಗಳಿಗೆ ಆಸಕ್ತ ಹಾಗೂ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ.

ಕ್ರ ಸಂ	ವಿವರ	ಅಂದಾಜು ಮೊತ್ತ (ಲಕ್ಷಗಳಲ್ಲಿ)
1.	ಪಿರಿಯಾಪಟ್ಟಣ ಪುರಸಭೆಯ ಆರೋಗ್ಯ ಶಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರು ಸಹಾಯಕರು ಹಾಗೂ ಡ್ರೈವರ್‌ಗಳಿಗೆ ಬೆಳಗಿನ ಉಪಹಾರ ಪೂರೈಕೆ ಮಾಡುವ ಸೇವೆ.	4.85

ಮೇಲ್ಕಂಡ ಸೇವೆ/ಕಾರ್ಯಗಳಲ್ಲಿ ಆಸಕ್ತಿಯುಳ್ಳವರು ಇ.ಎಂ.ಡಿ ಘೋಷಣಾ ಪತ್ರ ಹಾಗೂ ಟೆಂಡರ್ ಫಾರಂ ಪಡೆದು ಮುಖ್ಯಾಧಿಕಾರಿ, ಪುರಸಭೆ ಪಿರಿಯಾಪಟ್ಟಣರವರ ಹೆಸರಿನಲ್ಲಿ ಟೆಂಡರ್ ಷರತ್ತಿಗೊಳಪಟ್ಟು ಟೆಂಡರ್ ಸಲ್ಲಿಸಬಹುದಾಗಿದೆ. ಟೆಂಡರ್ ಫಾರಂಗಾಗಿ **ದಿನಾಂಕ: 30.09.2022ರ ಸಂಜೆ 4.00 ಗಂಟೆ ಒಳಗೆ** 500+ ತೆರಿಗೆ ಪಾವತಿಸಿ ಟೆಂಡರ್ ಪುಸ್ತಕ ಪಡೆಯಬಹುದಾಗಿದೆ. ಟೆಂಡರ್ ಸಲ್ಲಿಸುವ **ದಿನಾಂಕ: 01.10.2022 ರ ಸಂಜೆ 4.00 ಗಂಟೆಯೊಳಗೆ,** ಟೆಂಡರ್ ತೆರೆಯುವ **ದಿನಾಂಕ: 02.10.2022 ರ ಬೆಳಿಗ್ಗೆ 11.00 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ ಪುರಸಭೆಯ ಆರೋಗ್ಯ ವಿಭಾಗಕ್ಕೆ ಸಂಪರ್ಕಿಸಬಹುದಾಗಿದೆ.

(ಶ್ರೀ. ಕೆ. ಮಹೇಶ್) ಅಧ್ಯಕ್ಷರು, ಪುರಸಭೆ, ಪಿರಿಯಾಪಟ್ಟಣ
ಸಹಿ/–(ಶ್ರೀಮತಿ ಆಶಾ ಪಿ.ಕೆ.) ಉಪಾಧ್ಯಕ್ಷರು, ಪುರಸಭೆ, ಪಿರಿಯಾಪಟ್ಟಣ
ಸಹಿ/– (ಶ್ರೀ ಪಿ.ಸಿ. ಕೃಷ್ಣ) ಸ್ಥಾಯಿ ಸಮಿತಿ ಅಧ್ಯಕ್ಷರು, ಪುರಸಭೆ, ಪಿರಿಯಾಪಟ್ಟಣ
ಸಹಿ/–(ಶ್ರೀ ಮಹೇಂದ್ರ, ಬಿ) ಮುಖ್ಯಾಧಿಕಾರಿ, ಪುರಸಭೆ, ಪಿರಿಯಾಪಟ್ಟಣ

DIPR/MYS/KAVITA/498/2022-23